ವಿಶ್ವವಾಣಿ
ವಿಶ್ವಾಸವೇ ವಿಶ್ವ

ದಾರಿದೀಪೋಕ್ತಿ
ನೀವು ಸೋಲಲಿ ಎಂದು ಕೆಲವರು ಕಾಯುತ್ತಾ ಇರುತ್ತಾರೆ. ಇನ್ನು ಕೆಲವರು ನೀವು ಕೈಚೆಲ್ಲಿ, ಸೋತೆ ಎಂದು ಹೇಳಲಿ ಎಂದು ಕಾಯುತ್ತಿರುತ್ತಾರೆ. ಅಂಥವರು ಜೀವನವಿಡೀ ಕಾಯುವಂತೆ ಮಾಡುವುದು ನಿಮ್ಮ ಉದ್ದೇಶವಾಗಬೇಕು.

ವಕ್ರತುಂಡೋಕ್ತಿ
ಹೋಟೆಲಿಗೆ ಹೋಗಿ ಸೂಪ್ ಆರ್ಡರ್ ಮಾಡಿದಾಗ, ರಂಬೆಯೇನಾದರೂ ಕಂಡರೆ, ಆ ಹೋಟೆಲಿನ ಬ್ರ್ಯಾಂಚ್ ಎಲ್ಲೆಡೆಯೂ ಇದೆ ಎಂದರ್ಥ.

ಮೋದಿ ಜತೆ ಮಲೇಷಿಯಾ ಪ್ರಧಾನಿ ಭೇಟಿ

ಪ್ರಧಾನಿ ಮೋದಿ ದೆಹಲಿಯಲ್ಲಿ ಮಂಗಳವಾರ ಮಲೇಷಿಯಾ ಪ್ರಧಾನಿ ಅನ್ವರ್ ಇಬ್ರಾಹಿಂ ಅವರೊಂದಿಗೆ ದ್ವಿಪಕ್ಷೀಯ ಬಾಂಧವ್ಯ ಬಲವರ್ಧನೆಗೆ ಮಾತುಕತೆ ನಡೆಸಿದರು. ಇಬ್ರಾಹಿಂ ಪ್ರಧಾನಿಯಾದ ನಂತರ ಭಾರತಕ್ಕೆ ನೀಡಿದ ಮೊದಲ ಭೇಟಿ ಇದಾಗಿದೆ.

ದೋಷಾರೋಪ ಪಟ್ಟಿ ಸಲ್ಲಿಸಲು ಅನುಮತಿ ಕೋರಿ ರಾಜ್ಯಪಾಲರಿಗೆ ಎಸ್ಐಟಿ ಪತ್ರ

ಎಚ್‌ಡಿಕೆಗೂ ಪ್ರಾಸಿಕ್ಯೂಷನ್ ಸಂಕಟ

ಅಡಕತ್ತರಿಯಲ್ಲಿ ಸಿಲುಕಿದ ಥಾವರ್‌ಚಂದ್ ಗೆಹ್ಲೋಟ್, ರಾಜಭವನಕ್ಕೆ ಉಭಯಸಂಕಟ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿ ವಾರ ಕಳೆಯುವ ಮೊದಲೇ, ಗಣಿ ಗುತ್ತಿಗೆ ಪ್ರಕರಣದಲ್ಲಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸಲು ಅನುಮತಿ ನೀಡುವಂತೆ ಎಸ್ಐಟಿ ಮನವಿ ಮಾಡಿರುವುದು ರಾಜ್ಯಪಾಲರನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಖಾಸಗಿ ದೂರನ್ನು ಮುಂದಿಟ್ಟುಕೊಂಡು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದಾರೆ. ಇದೀಗ ಅಸ್ತಿತ್ವದಲ್ಲಿರದ ಕಂಪನಿಗೆ ಗಣಿಗಾರಿಕೆಗೆ ಅನುಮತಿ ನೀಡಿದ ಆರೋಪದಲ್ಲಿ ಕುಮಾರಸ್ವಾಮಿ ವಿರುದ್ಧ ಪ್ರಾಸಿಕ್ಯೂಷನ್‌ಗೆ ವಿಶೇಷ ತನಿಖಾ ತಂಡ ಮನವಿ ಸಲ್ಲಿಸಿದೆ. ಎಚ್‌ಡಿಕೆ ಪ್ರಕರಣದಲ್ಲಿ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡದಿದ್ದರೆ, ಸಿಎಂ ವಿರುದ್ಧ ತರಾತುರಿಯಲ್ಲಿ ನೀಡಿದ್ದು ಏಕೆ ಎನ್ನುವ ಪ್ರಶ್ನೆ ಉದ್ಭವಿಸಲಿದೆ. ಆದ್ದರಿಂದ ಇದೀಗ ಅನಿವಾರ್ಯವಾಗಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವ ಇಕ್ಕಟ್ಟಿಗೆ ರಾಜ್ಯಪಾಲರು ಸಿಲುಕಿದ್ದಾರೆ ಎನ್ನಲಾಗುತ್ತಿದೆ. ಒಂದು ವೇಳೆ ಕೇಂದ್ರ ಸಚಿವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದರೆ, ಸಿದ್ದು ರಾಜೀನಾಮೆಗೆ ಒತ್ತಾಯ ಕೇಳಿಬಂದಂತೆ ಎಚ್‌ಡಿಕೆ ರಾಜೀನಾಮೆಗೂ ಆಗ್ರಹ ಕೇಳಿಬರಲಿದೆ. ಈ ಮೂಲಕ ಬಿಜೆಪಿ-ಜೆಡಿಎಸ್ ದೋಸ್ತಿ ಪಕ್ಷಗಳನ್ನು ಒಂದೇ ಹಗ್ಗದಲ್ಲಿ ಕಟ್ಟಿಹಾಕಲು ರಾಜ್ಯ ಸರಕಾರ ಮುಂದಾಗಿದೆ.

- ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದಂತೆ ಕುಮಾರಸ್ವಾಮಿಗೂ ನೀಡುವ ಅನಿವಾರ್ಯತೆ
- ಅನುಮತಿ ನೀಡದಿದ್ದರೆ, ಮುಂದೆ ನ್ಯಾಯಾಲಯದಲ್ಲಿ ಇದನ್ನೇ ಕಾಂಗ್ರೆಸ್ ಪ್ರಶ್ನಿಸುವ ಸಾಧ್ಯತೆ
- ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದರೆ, ಎಚ್.ಡಿ. ಕುಮಾರಸ್ವಾಮಿಗೆ ರಾಜೀನಾಮೆ ನೀಡುವ ಒತ್ತಡ ಖಚಿತ
- ರಾಜಕೀಯವಾಗಿ ಎನ್‌ಡಿಎಗೆ ಚೆಕ್‌ಮೇಟ್ ನೀಡಿದ ಎಸ್ಐಟಿ ಚಾರ್ಜ್‌ಶೀಟ್ ಸಲ್ಲಿಕೆ ಮನವಿ

2007ರಲ್ಲಿ ಮುಖ್ಯಮಂತ್ರಿಯಾಗಿದ್ದ ಕುಮಾರಸ್ವಾಮಿ ಅವರು ಗಣಿ ಮತ್ತು ಖನಿಜ ನಿಯಮ ಉಲ್ಲಂಘಿಸಿ ಸಾಯಿ ವೆಂಕಟೇಶ್ವರ ಮಿನರಲ್ಸ್ ಕಂಪನಿಗೆ 550 ಎಕರೆ ವಿಸ್ತೀರ್ಣದ ಗಣಿ ಗುತ್ತಿಗೆ ಮಂಜೂರು ಮಾಡಿದ್ದಾರೆ ಎಂಬ ಆರೋಪವಿದ್ದು, ಇದಕ್ಕೆ ಸಂಬಂಧಿಸಿದಂತೆ ಎಸ್ಐಆರ್ ದಾಖಲಿಸಲು ಅನುಮತಿ ನೀಡುವಂತೆ ಎಸ್ಐಟಿ ರಾಜ್ಯಪಾಲರಿಗೆ ಪತ್ರ ಬರೆದಿದೆ. ಈ ಸಂಬಂಧ ವರ್ಷದ ಹಿಂದೆಯೇ ಎಸ್ಐಟಿ ಮನವಿ ಮಾಡಿತ್ತು. ಇದೀಗ ಎರಡನೇ ಬಾರಿಗೆ ಚಾರ್ಜ್‌ಶೀಟ್ ಸಲ್ಲಿಸಲು ಅಭಿಯೋಜನೆಗೆ ಅನುಮತಿ ಕೇಳಲಾಗುತ್ತಿದೆ. ಈಗಾಗಲೇ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ರಾಜ್ಯಪಾಲರು, ಕುಮಾರಸ್ವಾಮಿ ಪ್ರಕರಣದಲ್ಲಿ ನೀಡದಿದ್ದರೆ, ಕೇಂದ್ರ ಸರಕಾರ ಹಾಗೂ ರಾಜ್ಯಪಾಲರು 'ದ್ವೇಷದ ರಾಜಕೀಯ' ಮಾಡುತ್ತಿದ್ದಾರೆ. ಬಿಜೆಪಿಯ ವಿರೋಧಿಗಳನ್ನು ಕಟ್ಟಿಹಾಕಲು ರಾಜಭವನವನ್ನು ಬಳಸಿಕೊಳ್ಳುತ್ತಿದ್ದಾರೆ ಎನ್ನುವ ಅಸ್ತ್ರವನ್ನು ಕಾಂಗ್ರೆಸ್ ಪ್ರಯೋಗಿಸುವ ಸಾಧ್ಯತೆಯಿದೆ.

ಅನುಮತಿಗೆ ಕಾಂಗ್ರೆಸ್ ಒತ್ತಡ

ಎಸ್ಐಟಿ ಎಚ್‌ಡಿಕೆ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿದ ಬೆನ್ನಲ್ಲೇ, ಕಾಂಗ್ರೆಸ್ ನಾಯಕರು ಅಭಿಯೋಜನೆಗೆ ಅನುಮತಿ ನೀಡುವಂತೆ ರಾಜ್ಯಪಾಲರನ್ನು ಆಗ್ರಹಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಖಾಸಗಿ ವ್ಯಕ್ತಿಗಳು ಸಲ್ಲಿಸಿದ ಪ್ರಾಸಿಕ್ಯೂಷನ್‌ಗೆ ವಾರದಲ್ಲಿ ಅನುಮತಿ ನೀಡಲಾಗಿದೆ. ಇದೇ ರೀತಿ ಕುಮಾರಸ್ವಾಮಿ ವಿರುದ್ಧ ತನಿಖಾ ಸಂಸ್ಥೆ ಆರೋಪ ಪಟ್ಟಿಗೆ ಕೇಳಿರುವ ಅನುಮತಿಯನ್ನು ನೀಡಬೇಕು ಎಂಬುದು ಒತ್ತಾಯ.

ಮೈತ್ರಿಕೂಟಕ್ಕೆ ಬಹುದೊಡ್ಡ ಹಿನ್ನಡೆ: ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಪಾದಯಾತ್ರೆ ನಡೆಸಿ, ಪ್ರತಿಭಟನೆ ನಡೆಸಿದ್ದ ಬಿಜೆಪಿ-ಜೆಡಿಎಸ್ ಮೈತ್ರಿಕೂಟಕ್ಕೆ ಎಸ್ಐಟಿಯ ಈ ನಡೆ ತೀವ್ರ ಹಿನ್ನಡೆಯಾಗಿದೆ. ಬಿಜೆಪಿಗೆ ಕುಮಾರಸ್ವಾಮಿ ಪರ ನಿಲ್ಲುವುದು ಅನಿವಾರ್ಯವಾಗಿದ್ದು, ಇಲ್ಲದಿದ್ದರೆ ಮೈತ್ರಿಯಲ್ಲಿ ಬಿರುಕು ಮೂಡುವ ಸಾಧ್ಯತೆ ಇದೆ. ಇದೇ ವಿಷಯ ಬಯಸಿರುವ ಕಾಂಗ್ರೆಸ್ ಹೋರಾಟ ನಡೆಸುವುದು ಖಚಿತವಾಗಿದೆ. ಈ ಪ್ರಕರಣದಲ್ಲಿ ಯಾವ ನಡೆ ಅನುಸರಿಸಬೇಕು ಎನ್ನುವ ಗೊಂದಲಕ್ಕೆ ಬಿಜೆಪಿ ಬಿದ್ದಿದೆ ಎನ್ನಲಾಗಿದೆ.

ನ್ಯಾಯಾಲಯದಲ್ಲಿಯೂ ಹೋರಾಟ?: ಮೂಲಗಳ ಪ್ರಕಾರ ಕುಮಾರಸ್ವಾಮಿ ವಿರುದ್ಧದ ಈ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ಒಪ್ಪಿಗೆ ನೀಡುವ ಸಾಧ್ಯತೆ ಕಡಿಮೆ. ಒಂದು ವೇಳೆ 29ರೊಳಗೆ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡದಿದ್ದರೆ, ಹೈಕೋರ್ಟ್‌ನಲ್ಲಿ ವಿಚಾರಣೆ ವೇಳೆ ಕುಮಾರಸ್ವಾಮಿ ಪ್ರಕರಣ ತೋರಿಸಿ, ಸಿದ್ದರಾಮಯ್ಯ ವಿರುದ್ಧ ಅಭಿಯೋಜನೆಗೆ 15 ದಿನದಲ್ಲಿ ಅವಕಾಶ ನೀಡಿರುವ ರಾಜ್ಯಪಾಲರು, ಕುಮಾರಸ್ವಾಮಿ ವಿರುದ್ಧ ಪ್ರಕರಣದಲ್ಲಿ ವರ್ಷ ಕಳೆದರೂ ಏಕೆ ನೀಡುತ್ತಿಲ್ಲ? ಜೆಡಿಎಸ್ ಬಿಜೆಪಿಯ ಮೈತ್ರಿಯ ಭಾಗ ಎನ್ನುವ ಕಾರಣಕ್ಕೆ ಕುಮಾರಸ್ವಾಮಿ ಪ್ರಕರಣ ದಲ್ಲಿ ವಿಳಂಬನೀತಿಯನ್ನು ರಾಜ್ಯಪಾಲರು ತೋರಿಸುತ್ತಿದ್ದಾರೆ.

→ 4

ಲ್ಯಾಟರಲ್ ಎಂಟ್ರಿ ಜಾಹೀರಾತು ವಾಪಸ್

ಎಂಟ್ರಿ ಮೊದಲೇ ಎಕ್ಸಿಟ್

ದೆಹಲಿ: ಕೇಂದ್ರ ಸರ್ಕಾರದ ಆಯಕಟ್ಟಿನ ಹುದ್ದೆಗಳಿಗೆ 'ಲ್ಯಾಟರಲ್ ಎಂಟ್ರಿ' ಮೂಲಕ ನೇರ ನೇಮಕಾತಿ ಮಾಡಿಕೊಳ್ಳಲು ಹೊರಡಿಸಿದ್ದ ಜಾಹೀರಾತನ್ನು ಕೇಂದ್ರ ಸರಕಾರ ಹಿಂಪಡೆದಿದೆ. 'ಲ್ಯಾಟರಲ್ ಎಂಟ್ರಿ' ಮೂಲಕ ಕೇಂದ್ರ ಸರಕಾರ ಮೀಸಲಾತಿ ನಿಯಮವನ್ನು ಧಿಕ್ಕರಿಸಲು ಹೊರಟಿದೆ ಎಂಬ ಪ್ರತಿಪಕ್ಷಗಳ ಆರೋಪಕ್ಕೆ ಮಣಿದ ಸರಕಾರ, ಪ್ರಧಾನಿ ನರೇಂದ್ರ ಮೋದಿ ಅವರ ಸೂಚನೆಯಂತೆ ಜಾಹೀರಾತು ರದ್ದುಗೊಳಿಸಲು ಕೇಂದ್ರ ಲೋಕಸೇವಾ ಆಯೋಗಕ್ಕೆ ಸೂಚಿಸಿದೆ.

ಕೇಂದ್ರ ಸಿಬ್ಬಂದಿ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಅವರು ಮಂಗಳವಾರ ಯುಪಿಎಸ್‌ಸಿ ಅಧ್ಯಕ್ಷೆ ಪ್ರೀತಿ ಸುದನ್ ಅವರಿಗೆ ಪತ್ರ ಬರೆದು ಜಾಹೀರಾತನ್ನು ರದ್ದುಗೊಳಿಸಲು ಸೂಚಿಸಿದ್ದಾರೆ.

- 45 ಜಂಟಿ ಕಾರ್ಯದರ್ಶಿ, ನಿರ್ದೇಶಕರು ಮತ್ತು ಉಪ ಕಾರ್ಯದರ್ಶಿಗಳ ನೇರ ನೇಮಕ ಆದೇಶ ರದ್ದು
- ಮೀಸಲು ಉಲ್ಲಂಘನೆ ಆರೋಪ: ಮೋದಿ ಮಧ್ಯಪ್ರವೇಶ
- ಪ್ರತಿಪಕ್ಷಗಳ ಧ್ವನಿಗೆ ಸಿಕ್ಕ ಜಯ: ರಾಹುಲ್

ಟಿಟಿಡಿ ಅಧ್ಯಕ್ಷರಾಗಿ ಬಿ.ಆರ್.ನಾಯ್ಡು

ತಿರುಪತಿ: ತಿರುಪತಿ- ತಿರುಮಲ ದೇವಸ್ಥಂ ಬೋರ್ಡ್ ನೂತನ ಅಧ್ಯಕ್ಷರಾಗಿ ಟಿವಿ 5 ವಾಹಿನಿಯ ಮಾಲೀಕ ಬಿ. ಆರ್. ನಾಯ್ಡು ಅವರನ್ನು ನೇಮಿಸಲಾಗಿದೆ. ಜಗನ್‌ಮೋಹನ್ ಸರಕಾರ ಕಳೆದ ವಿಧಾನ ಸಭೆ ಚುನಾವಣೆಯಲ್ಲಿ ಸೋತ ಬಳಿಕ ಟಿಡಿಡಿ ಅಧ್ಯಕ್ಷ ಸ್ಥಾನಕ್ಕೆ ಭೂಮನ ಕರುಣಾಕರ್ ರೆಡ್ಡಿ ರಾಜೀನಾಮೆ ನೀಡಿದ್ದರು. ಬಿ. ಆರ್. ನಾಯ್ಡು ಜೊತೆಗೆ ಮಾಜಿ ಕೇಂದ್ರ ಸಚಿವ ಅಶೋಕ್ ಗಜಪತಿ ರಾಜು, ನೆಲ್ಲೂರು ಸಂಸದ ವೇಮಿರೆಡ್ಡಿ ಪ್ರಭಾಕರ ರೆಡ್ಡಿ ಹೆಸರು ಅಧ್ಯಕ್ಷ ಸ್ಥಾನಕ್ಕೆ ಕೇಳಿ ಬಂದಿದ್ದವು.

ವೈದ್ಯೆಯರ ಸುರಕ್ಷತೆಗೆ ಸುಪ್ರೀಂ ಮಾರ್ಗಸೂಚಿ

ದೆಹಲಿ: ಕೋಲ್ಕತ್ತಾದ ಯುವ ವೈದ್ಯೆಯ ಅತ್ಯಾಚಾರ-ಕೊಲೆ ಪ್ರಕರಣ ಸ್ವಯಂ ಪ್ರೇರಿತವಾಗಿ ವಿಚಾರಣೆಗೆತ್ತಿಕೊಂಡಿರುವ ಸುಪ್ರೀಂಕೋರ್ಟ್ ದೇಶದಲ್ಲಿ ವೈದ್ಯೆಯರ ಸುರಕ್ಷತೆ ಮತ್ತು ಇತರ ಸಮಸ್ಯೆಗಳನ್ನು ಪರಿಶೀಲಿಸಿ ವರದಿ ನೀಡಲು ಕಾರ್ಯಪಡೆ ರಚಿಸಿದೆ. ಸರ್ಜನ್ ವೈಸ್ ಅಡ್ಮಿರಲ್ ಆರತಿ ಸರಿನ್, ಏಷ್ಯನ್ ಇನ್‌ಸ್ಟಿಟ್ಯೂಟ್ ಆಫ್ ನ್ಯಾಷನಲ್ ಗ್ಯಾಸ್ಟ್ರೋಲಜಿಯ ವ್ಯವಸ್ಥಾಪಕ ನಿರ್ದೇಶಕ ಡಾ. ನಾಗೇಶ್ವರ ರೆಡ್ಡಿ ನೇತೃತ್ವದ ಸಮಿತಿ ಲಿಂಗ ಆಧಾರಿತ ಹಿಂಸಾಚಾರ, ಇಂಟರ್ನಿಗಳು, ನಿವಾಸಿ, ಅನಿವಾಸಿ ವೈದ್ಯರಿಗೆ ಕೆಲಸದ ಸ್ಥಳದಲ್ಲಿ ಗೌರವ ಮತ್ತು ಸುರಕ್ಷತೆ ಒದಗಿಸಲು ಕ್ರಿಯಾ ಯೋಜನೆಸಿದ್ಧಪಡಿಸಲಿದೆ.

ಎಲೆಕ್ಟ್ರಾನಿಕ್ ಸಿಟಿಗೆ ಅರಸು ಹೆಸರು

ಬೆಂಗಳೂರು: ಬೆಂಗಳೂರಿನ ಬಹುತೇಕ ಐಟಿ ಕಂಪನಿಗಳ ನೆಲೆಯಾಗಿರುವ ಎಲೆಕ್ಟ್ರಾನಿಕ್ ಸಿಟಿಗೆ ಹಿಂದುಳಿದ ವರ್ಗಗಳ ಹರಿಕಾರ ದೇವರಾಜ ಅರಸು ಅವರ ಹೆಸರನ್ನು ನಾಮಕರಣ ಮಾಡಲು ನಿರ್ಧರಿಸಿದೆ. ವಿಧಾನಸೌಧದಲ್ಲಿ ಮಂಗಳವಾರ ಅರಸು ಅವರ 109ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ , ಎಲೆಕ್ಟ್ರಾನಿಕ್ ಸಿಟಿಯ ಹೆಸರು ಬದಲಾವಣೆ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಘೋಷಿಸಿದ್ದಾರೆ.ಅಲ್ಲದೆ, ಅರಸು ಅವರಿಗೆ ಮರಣೋತ್ತರವಾಗಿ ಭಾರತರತ್ನ ಪುರಸ್ಕಾರ ನೀಡುವಂತೆ ಕೇಂದ್ರಕ್ಕೆ ಶಿಫಾರಸು ಮಾಡುವುದಾಗಿ ಸಿಎಂ ತಿಳಿಸಿದ್ದಾರೆ.

ದರ್ಶನ್‌ಗೆ ಮತ್ತೆ ನಿರಾಸೆ ಮನೆಯೂಟಕ್ಕೆ ನಕಾರ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಆರೋಪಿ ನಟ ದರ್ಶನ್‌ಗೆ ಮನೆಯೂಟಕ್ಕೆ ಕೋರಿದ್ದ ಮನವಿಯನ್ನು ತಿರಸ್ಕರಿಸಿರುವುದಾಗಿ ಸರಕಾರ ಹೈಕೋರ್ಟ್‌ಗೆ ತಿಳಿಸಿದೆ. ಮನೆಯೂಟ, ಹಾಸಿಗೆ ಮತ್ತು ಪುಸ್ತಕ ಒದಗಿಸಲು ನಿರ್ದೇಶನ ನೀಡುವಂತೆ ಕೋರಿದ್ದ ಅರ್ಜಿಯನ್ನು ವಿಚಾರಣಾಧೀನ ನ್ಯಾಯಾಲಯ ತಿರಸ್ಕರಿಸಿದ್ದನ್ನು ಪ್ರಶ್ನಿಸಿ ನಟ ದರ್ಶನ್ ಸಲ್ಲಿಸಿದ್ದ ಅರ್ಜಿಯನ್ನು ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ಮನವಿ ತಿರಸ್ಕರಿಸಲಾಗಿದೆ ಎಂದು ಸರಕಾರ ತಿಳಿಸಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಮಧ್ಯಪ್ರದೇಶದಲ್ಲಿದೆ ದರೋಡೆ, ಸುಲಿಗೆ ಕಲಿಸುವ 'ಕಳ್ಳರಿಗೊಂದು ಶಾಲೆ'

ಸಮಾಚಾರ ಸಣ್ಣದಲ್ಲ

ಚಾಕುವಿನಿಂದ ಹಲ್ಲೆ : ಮೂವರ ಬಂಧನ

ಬೆಂಗಳೂರು: ಕ್ಷುಲ್ಲಕ ಕಾರಣಕ್ಕೆ ಯುವಕನೊಬ್ಬನನ್ನು ಅಟ್ಟಾಡಿಸಿ ಚಾಕುವಿನಿಂದ ಹಲ್ಲೆ ನಡೆಸಿದ ಘಟನೆ ಹೆಬ್ಬಾಳದ ಎಸ್ಎಸ್‌ವಿ ರಸ್ತೆಯಲ್ಲಿ ನಡೆದಿದೆ. ಹಲ್ಲೆ ನಡೆಸಿದ ಮದನ್, ನಿತಿನ್ ಹಾಗೂ ಪ್ರಕಾಶ್ ಎಂಬವರನ್ನು ಬಂಧಿಸಿ ಪೊಲೀಸರು ವಿಚಾರಣೆ ನಡೆಸಿದ್ದಾರೆ. ಹಲ್ಲೆಗೊಳಗಾದ ಯುವಕನನ್ನು ವಿಕ್ರಮ್ ಎಂದು ಗುರುತಿಸಲಾಗಿದೆ. ಟ್ರಾಫಿಕ್‌ನಲ್ಲಿ ವಾಹನ ಚಲಾಯಿಸುವಾಗ ಬೈಕ್ ತಾಗಿದೆ ಎಂದು ಕಿಡಿಗೇಡಿಗಳು ವಿಕ್ರಮ್ ಬಳಿ ಗಲಾಟೆ ಮಾಡಿದ್ದಾರೆ. ಬಳಿಕ ಬೈಕ್‌ನಲ್ಲಿ ತೆರಳುತ್ತಿದ್ದ ಆತನನ್ನು ಹಿಂಬಾಲಿಸಿ ರಸ್ತೆಯಲ್ಲಿ ಅಟ್ಟಾಡಿಸಿ ಚಾಕುವಿನಿಂದ ಹಲ್ಲೆ ನಡೆಸಿದ್ದಾರೆ. ಗಾಯಗೊಂಡ ಯುವಕನಿಗೆ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ. ಈ ಸಂಬಂಧ ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಫುಡ್ ಡೆಲಿವರಿ ಬಾಯ್‌ಗೆ ಹಿಗ್ಗಾಮುಗ್ಗಾ ಥಳಿತ

ಬೆಂಗಳೂರು: ಜಯನಗರದ ಸೌತ್ ಎಂಡ್ ಸರ್ಕಲ್ ಸಮೀಪ ಮಂಗಳವಾರ ಬೆಳಗ್ಗೆ 9 ಗಂಟೆ ಸುಮಾರಿಗೆ ಫುಡ್ ಡೆಲಿವರಿ ಬಾಯ್‌ಗೆ ನಾಲ್ಕೈದು ಮಂದಿ ಹಿಗ್ಗಾಮುಗ್ಗಾ ಥಳಿಸಿದ್ದಾರೆ. ಸೌತ್ ಎಂಡ್ ಸರ್ಕಲ್ ಸಿಗ್ನಲ್ ಬಳಿಯೇ ಮನಸೋ ಇಚ್ಛೆ ಹಲ್ಲೆ ಮಾಡಿದ್ದು, ಯಾವ ಕಾರಣಕ್ಕೆ ಗಲಾಟೆ ನಡೆದಿದೆ ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲ. ಇನ್ನೂ ಘಟನೆ ಸಂಬಂಧ ಇದುವರೆಗೂ ಯಾವುದೇ ದೂರು ದಾಖಲಾಗಿಲ್ಲ.

ಸಾಂವಿಧಾನಿಕ ಹುದ್ದೆಯಲ್ಲಿರುವವರ ವಿರುದ್ಧ ಏಕವಚನ ಪ್ರಯೋಗ | ಸಚಿವರು ಸೇರಿದಂತೆ ಹಲವರ ವಿರುದ್ಧ ದೂರು ದಾಖಲು

ಬಿಜೆಪಿಯಿಂದ ಸಚಿವರ ವಿರುದ್ಧ ದೂರು

ರಾಜ್ಯಪಾಲರ ವಿರುದ್ಧ ಏಕವಚನದಲ್ಲಿ ವಾಗ್ದಾಳಿ ನಡೆಸಿರುವ ಕಾಂಗ್ರೆಸ್ ನಾಯಕರ ವಿರುದ್ಧ ಬಿಜೆಪಿ ಮುಖಂಡರ ನಿಯೋಗ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರನ್ನು ಭೇಟಿ ಮಾಡಿ ದೂರು ನೀಡಿದರು.

ಬೆಂಗಳೂರು: ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಅಭಿಯೋಜನೆಗೆ ನೀಡಿದ್ದನ್ನು ಖಂಡಿಸಿ ಕಾಂಗ್ರೆಸ್ ನಡೆಸಿದ ಪ್ರತಿಭಟನೆಯಲ್ಲಿ ರಾಜ್ಯಪಾಲರ ವಿರುದ್ಧ ಏಕವಚನದಲ್ಲಿ ವಾಗ್ದಾಳಿ ನಡೆಸಿರುವ ಕೈ ನಾಯಕರ ವಿರುದ್ಧ ಕ್ರಮವಹಿಸಿ ಎಂದು ಆಗ್ರಹಿಸಿ ಬಿಜೆಪಿ ನಿಯೋಗ ದೂರು ನೀಡಿದೆ.

ರಾಜ್ಯಪಾಲರ ವಿರುದ್ಧ ಅವಹೇಳನಕಾರಿ ಹೇಳಿಕೆಗಳನ್ನು ನೀಡಿ, ಅವಾಚ್ಯ ಶಬ್ದಗಳಿಂದ ನಿಂದಿಸಿರುವ ಸಚಿವ ಕೃಷ್ಣಬೈರೇಗೌಡ, ದಿನೇಶ್‌ಗುಂಡೂರಾವ್, ಜಮೀರ್ ಅಹ್ಮದ್, ಶಾಸಕ ನಂಜೇಗೌಡ ಹಾಗೂ ವಿಧಾನಪರಿಷತ್ ಸದಸ್ಯ ಐವಾನ್ ಡಿಸೋಜ ಹಾಗೂ ಇತರ ಕಾಂಗ್ರೆಸ್ ಮುಖಂಡರುಗಳನ್ನು ಜಾತಿನಿಂದನೆ ಮತ್ತು ಗುಂಡಾಕಾಯಿದೆಯಲ್ಲಿ ಬಂಧಿಸಬೇಕು ಎಂದು ಆಗ್ರಹಿಸಿದ್ದಾರೆ. ಮಾಜಿ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ, ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ನೇತೃತ್ವದ ಬಿಜೆಪಿ ಮುಖಂಡರ ನಿಯೋಗ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರನ್ನು ಭೇಟಿ ಮಾಡಿ ದೂರು ನೀಡಿದರು.

'ಬಾಂಗ್ಲಾದೇಶದ ಪ್ರಧಾನಮಂತ್ರಿ ಶೇಖ್ ಹಸೀನಾ ಅವರಿಗೆ ಬಂದ ಸ್ಥಿತಿಯೇ ರಾಜ್ಯಪಾಲರಿಗೂ ಬರುತ್ತದೆ. ಕಾಂಗ್ರೆಸ್ಸಿಗರು ರಾಜ್ಯಭವನಕ್ಕೆ ನುಗ್ಗಿ ರಾಜ್ಯಪಾಲರನ್ನು ಓಡಿಸುವ ಕೆಲಸ ಮಾಡುತ್ತೇವೆ' ಎನ್ನುವ ಪ್ರಚೋದನಕಾರಿ ಹೇಳಿಕೆ ನೀಡಿರುವ ವಿಧಾನಪರಿಷತ್ ಸದಸ್ಯ ಐವಾನ್ ಡಿಸೋಜ, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟರೆ ಇದಕ್ಕೆ ರಾಜ್ಯಪಾಲರೇ ಕಾರಣ ಎಂಬ ಹೇಳಿಕೆ ನೀಡಿರುವ ಸಚಿವ ಜಮೀರ್ ಅಹ್ಮದ್ ಹೇಳಿದ್ದಾರೆ. ರಾಜ್ಯಪಾಲರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿರುವ ಸಚಿವ ಕೃಷ್ಣಬೈರೇಗೌಡ, ದಿನೇಶ್ ಗುಂಡೂರಾವ್, ಶಾಸಕ ನಂಜೇಗೌಡ ಹಾಗೂ ಅನೇಕ ಕಾಂಗ್ರೆಸ್ ಮುಖಂಡರ ವಿರುದ್ಧ ಜಾತಿ ನಿಂದನೆ ಹಾಗೂ ಗುಂಡಾಕಾಯಿದೆಯಲ್ಲಿ ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಮನವಿ ಸಲ್ಲಿಸಿದ್ದಾರೆ.

ಘನತೆ ಅರಿಯದೇ ಟೀಕೆ: ಸಾಂವಿಧಾನಿಕ ಹುದ್ದೆಯಲ್ಲಿರುವ ರಾಜ್ಯಪಾಲರ ಹುದ್ದೆಯ ಘನತೆಯನ್ನು ಅರಿಯದೇ ಕಾಂಗ್ರೆಸ್ ನಾಯಕರು ಅವರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡುವ ಜತೆಗೆ ಹಾದಿ ಬೀದಿಯಲ್ಲಿ ಅವರ ಪ್ರತಿಕೃತಿ ಸುಡುವಂತಹ ಹೀನ ಕೃತ್ಯಕ್ಕೆ ಇಳಿದಿದ್ದಾರೆ. ಇವರುಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಪರಿಶಿಷ್ಟ ಜಾತಿಗೆ ಸೇರಿದ ರಾಜ್ಯಪಾಲರ ಬಗ್ಗೆ ಸಾರ್ವಜನಿಕವಾಗಿ ಅವಹೇಳನಕಾರಿ ಹೇಳಿಕೆಗಳನ್ನು ನೀಡುತ್ತಿರುವ ಕಾಂಗ್ರೆಸ್ ನಾಯಕರ ವಿರುದ್ಧ ಜಾತಿನಿಂದನೆ ಪ್ರಕರಣಗಳನ್ನು ದಾಖಲಿಸಬೇಕಿದೆ. ಇಂತಹ ಹೇಳಿಕೆಗಳು ಸಂವಿಧಾನಕ್ಕೆ ಮತ್ತು ಪರಿಶಿಷ್ಟ ಜನಾಂಗಕ್ಕೆ ಮಾಡಿದ ಅಪಮಾನ. ಈ ಹೇಳಿಕೆಗಳು ಅತ್ಯಂತ ಸೂಕ್ಷ್ಮವಾಗಿದ್ದು, ಸಮಾಜವನ್ನು ಪ್ರಚೋದಿಸುವ ಹೇಳಿಕೆಗಳಾಗಿವೆ. ಹಾಗಾಗಿ ಇಂತಹ ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲಿಸಬೇಕು. ಇದುವರೆಗೂ ಒಂದೂ ಪ್ರಕರಣವನ್ನು ದಾಖಲಿಸದಿರುವುದು ಸರಿಯಲ್ಲ ಎಂದು ಬಿಜೆಪಿ ನಿಯೋಗ ದೂರಿನಲ್ಲಿ ಅಸಮಾಧಾನ ಹೊರ ಹಾಕಿದೆ.

> **ಕಾಂಗ್ರೆಸ್ಸಿನದು ಸರಕಾರಿ ಪ್ರೇರೇಪಿತ ಪ್ರತಿಭಟನೆ. ಅಧಿಕಾರ ದುರುಪಯೋಗ ಮಾಡಿಕೊಂಡು ರಾಜ್ಯಪಾಲರಿಗೆ ಅವಮಾನ ಮಾಡುವಂತೆ ನಡೆದುಕೊಂಡಿದ್ದಾರೆ. ಪ್ರತಿಭಟನೆ ನಡೆಸುವ ವೇಳೆ ಮಾನ್ಯ ರಾಜ್ಯಪಾಲರ ಫೋಟೊಗೆ ಚಪ್ಪಲಿಯಿಂದ ಹೊಡೆಯುವುದಲ್ಲದೇ, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ರಾಜಭವನಕ್ಕೆ ನುಗ್ಗಿ ರಾಜ್ಯಪಾಲರನ್ನು ಓಡಿಸುವುದಾಗಿ ತಿಳಿಸಿದ್ದು ಐವಾನ್ ಡಿಸೋಜ ಹೇಳಿದ್ದಾರೆ. ಅವರಿಗೆ ಪಾಕ್ ಉಗ್ರರ ನಂಟಿದೆಯೇ ಎಂಬ ಸಂಶಯ ಬರುತ್ತಿದೆ.**
>
> **-ಗೋವಿಂದ ಕಾರಜೋಳ** ಸಂಸದ

ಜಮೀರ್ ಅಹ್ಮದ್‌ರನ್ನು ಬಂಧಿಸಿ: ಸಿಮೆಂಟ್ ಮಂಜುನಾಥ್

ಸಚಿವ ಜಮೀರ್ ಅಹ್ಮದ್ ವಿರುದ್ಧ ಕ್ರಮಕೈಗೊಳ್ಳುವಂತೆ ಬಿಜೆಪಿ ಎಸ್.ಸಿ. ಮೋರ್ಚಾ ರಾಜ್ಯಾಧ್ಯಕ್ಷ ಸಿಮೆಂಟ್ ಮಂಜುನಾಥ್ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದರು.

ಬೆಂಗಳೂರು: ರಾಜ್ಯಪಾಲರಿಗೆ ಧಮ್ಕಿ ಹಾಕುವ ಕೆಲಸವನ್ನು ಸಚಿವ ಜಮೀರ್ ಅಹ್ಮದ್ ಮಾಡಿದ್ದಾರೆ ಎಂದು ಬಿಜೆಪಿ ಎಸ್.ಸಿ. ಮೋರ್ಚಾ ರಾಜ್ಯಾಧ್ಯಕ್ಷ ಸಿಮೆಂಟ್ ಮಂಜುನಾಥ್ ಆಕ್ಷೇಪಿಸಿದ್ದಾರೆ.

ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ ಬಳಿಕ ಮಾತನಾಡಿದ ಅವರು, ಆಡಳಿತ ಪಕ್ಷವಾದ ಕಾಂಗ್ರೆಸ್ಸಿನವರು ಫ್ರೀಡಂ ಪಾರ್ಕಿನಲ್ಲಿ ಪ್ರತಿಭಟನೆ ಮಾಡಲು ಅವರಿಗೆ ನಾಚಿಕೆ ಆಗುವುದಿಲ್ಲವೇ? ರಾಜ್ಯಪಾಲರದು ಸಾಂವಿಧಾನಿಕ ಹುದ್ದೆ. ಮೂರು ಜನ ಕೊಟ್ಟ ದೂರಿನ ಹಿನ್ನೆಲೆಯಲ್ಲಿ ಕಾನೂನು ತಜ್ಞರ ಸಲಹೆ ಪಡೆದು ತನಿಖೆ ಮಾಡಲು ಅವರು ಅವಕಾಶ ಕೊಟ್ಟಿದ್ದಾರೆ. ರಾಜ್ಯಪಾಲರ ಭಿತ್ತಿಪತ್ರಕ್ಕೆ ಚಪ್ಪಲಿಯಲ್ಲಿ ಹೊಡೆದ ಇವರು ಸಂವಿಧಾನಕ್ಕೆ ಗೌರವ ಕೊಡುತ್ತಾರಾ ಎಂದು ಪ್ರಶ್ನಿಸಿದರು.

ಕಾನೂನು ಸುವ್ಯವಸ್ಥೆ ಹದಗೆಟ್ಟರೆ ರಾಜ್ಯಪಾಲರೇ ಕಾರಣ ಎಂದು ಜಮೀರ್ ಅಹ್ಮದ್ ಹೇಳಿದ್ದು, ಅವರ ವಿರುದ್ಧ ದೂರು ಕೊಡಲಾಗಿದೆ. ಅವರನ್ನು ಕೂಡಲೇ ಬಂಧಿಸಬೇಕು ಎಂದು ಮನವಿ ಮಾಡಲಾಗಿದೆ ಎಂದರು.

ವಿಧಾನಪರಿಷತ್ ಸದಸ್ಯ ಪ್ರತಾಪಸಿಂಹ ನಾಯಕ್ ಮಾತನಾಡಿ, ಕಾಂಗ್ರೆಸ್ ಪಕ್ಷದ ನಾಯಕರ ಹೇಳಿಕೆಗಳನ್ನು ಗಮನಿಸಿದರೆ ಅವರು ಅರಾಜಕತೆಯನ್ನು ಸೃಷ್ಟಿಸುವ ಹುನ್ನಾರದಲ್ಲಿ ಇದ್ದಂತಿದೆ ಎಂದು ಆಕ್ಷೇಪಿಸಿದರು. ಕೇಂದ್ರದ ಮಾಜಿ ಸಚಿವ ಸಲ್ಮಾನ್ ಖುರ್ಷಿದ್ ಅವರು ಇದೇ ಮಾದರಿಯ ಹೇಳಿಕೆ ನೀಡಿದ್ದರು. ಈಗ ಕರ್ನಾಟಕದಲ್ಲಿ ಎಲ್ಲ ಕಾಂಗ್ರೆಸ್ ನಾಯಕರು ಇದೇ ಮಾತನ್ನು ಆಡುತ್ತಿದ್ದಾರೆ ಎಂದು ಟೀಕಿಸಿದರು.

THIS IS A PUBLIC ANNOUNCEMENT FOR INFORMATION PURPOSES ONLY AND IS NOT A PROSPECTUS ANNOUNCEMENT AND DOES NOT CONSTITUTE AN INVITATION OR OFFER TO ACQUIRE, PURCHASE OR SUBSCRIBE TO SECURITIES UNDER THE SECURITIES AND EXCHANGE BOARD OF INDIA (ISSUE OF CAPITAL AND DISCLOSURE REQUIREMENTS) REGULATIONS, 2018, AS AMENDED ("SEBI ICDR REGULATIONS"). NOT FOR RELEASE, PUBLICATION OR DISTRIBUTION DIRECTLY OR INDIRECTLY, OUTSIDE INDIA.

PUBLIC ANNOUNCEMENT

(Please scan this QR Code to view the DRHP)

UNIMECH
Engineering Efficiency and Quality

UNIMECH AEROSPACE AND MANUFACTURING LIMITED

Our Company was originally incorporated as *"Unimech Aerospace and Manufacturing Private Limited"* under the provisions of the Companies Act, 2013 pursuant to a certificate of incorporation dated August 12, 2016, issued by the Central Registration Centre, for and on behalf of the Jurisdictional Registrar of Companies, Karnataka at Bangalore (**"RoC"**). The name of our Company was subsequently changed to *"Unimech Aerospace and Manufacturing Limited"*, upon conversion of our Company from a private limited to a public limited company, pursuant to a board resolution dated February 14, 2024, and a shareholders' resolution dated March 4, 2024. A fresh certificate of incorporation dated June 21, 2024, was issued by the RoC. For further details of change in name and Registered Office of our Company, please refer to the section titled ***"History and Certain Corporate Matters – Brief history of our Company"*** and ***"History and Certain Corporate Matters – Changes in the Registered Office of our Company"*** on page 208 of the draft red herring prospectus dated August 19, 2024 ("**DRHP**") filed with Securities and Exchange Board of India ("**SEBI**").

Registered and Corporate Office: 538, 539, 542 & 543, 7th Main of Peenya IV Phase Industrial Area, Yeshwanthpur Hobli, Bangalore North Taluk - 560058, Bangalore, Karnataka, India.
Telephone: 080-4204 6782; **Contact Person:** Krishnappayya Desai, Company Secretary and Compliance Officer; **E-mail:** investorrelations@unimechaerospace.com; **Website:** www.unimechaerospace.com
Corporate Identity Number: U30305KA2016PLC095712

OUR PROMOTERS: ANIL KUMAR P, RAMAKRISHNA KAMOJHALA, MANI P, RAJANIKANTH BALARAMAN, PREETHAM S V

INITIAL PUBLIC OFFER OF UP TO [●] EQUITY SHARES OF FACE VALUE OF ₹ 5 EACH ("EQUITY SHARES") OF UNIMECH AEROSPACE AND MANUFACTURING LIMITED (OUR "COMPANY" OR THE "COMPANY" OR THE "ISSUER") FOR CASH AT A PRICE OF ₹ [●] PER EQUITY SHARE (INCLUDING A PREMIUM OF ₹[●] PER EQUITY SHARE) (THE "OFFER PRICE") AGGREGATING UP TO ₹ 5,000.00 MILLION (THE "OFFER") COMPRISING A FRESH ISSUE OF UP TO [●] EQUITY SHARES OF FACE VALUE OF ₹5 EACH BY OUR COMPANY AGGREGATING UP TO ₹ 2,500.00 MILLION (THE "FRESH ISSUE") AND AN OFFER FOR SALE OF UP TO [●] EQUITY SHARES OF FACE VALUE OF ₹5 EACH AGGREGATING UP TO ₹ 2,500.00 MILLION (THE "OFFER FOR SALE"), COMPRISING UP TO [●] EQUITY SHARES OF FACE VALUE OF ₹5 EACH AGGREGATING UP TO ₹ 450.00 MILLION BY RAMAKRISHNA KAMAJHOLA, UP TO [●] EQUITY SHARES OF FACE VALUE OF ₹5 EACH AGGREGATING UP TO ₹ 450.00 MILLION BY MANI P, UP TO [●] EQUITY SHARES OF FACE VALUE OF ₹5 EACH AGGREGATING UP TO ₹ 450.00 MILLION BY RAJANIKANTH BALARAMAN, UP TO [●] EQUITY SHARES OF FACE VALUE OF ₹5 EACH AGGREGATING UP TO ₹ 300.00 MILLION BY PREETHAM S V AND UP TO [●] EQUITY SHARES OF FACE VALUE OF ₹5 EACH AGGREGATING UP TO ₹ 850.00 MILLION BY RASMI ANIL KUMAR (REFERRED TO AS THE "SELLING SHAREHOLDERS" AND SUCH EQUITY SHARES OFFERED BY THE SELLING SHAREHOLDERS, THE "OFFERED SHARES"). THE OFFER INCLUDES A RESERVATION OF UP TO [●] EQUITY SHARES OF FACE VALUE OF ₹5 EACH, AGGREGATING UP TO ₹[•] MILLION, FOR SUBSCRIPTION BY ELIGIBLE EMPLOYEES NOT EXCEEDING 5% OF OUR POST-OFFER PAID-UP EQUITY SHARE CAPITAL (THE "EMPLOYEE RESERVATION PORTION"). THE OFFER LESS THE EMPLOYEE RESERVATION PORTION IS HEREINAFTER REFERRED TO AS THE "NET OFFER". THE OFFER AND THE NET OFFER SHALL CONSTITUTE [•]% AND [•]%, RESPECTIVELY, OF THE FULLY DILUTED POST-OFFER PAID-UP EQUITY SHARE CAPITAL OF OUR COMPANY.

THE FACE VALUE OF THE EQUITY SHARE IS ₹ 5 EACH AND THE OFFER PRICE IS [●] TIMES THE FACE VALUE OF EQUITY SHARE. THE EMPLOYEE DISCOUNT (IF ANY)PRICE BAND AND THE MINIMUM BID LOT WILL BE DETERMINED BY OUR COMPANY IN CONSULTATION WITH THE BOOK RUNNING LEAD MANAGERS (THE "BRLMs") AND WILL BE ADVERTISED IN ALL EDITIONS OF THE [●] (A WIDELY CIRCULATED ENGLISH NATIONAL NEWSPAPER), ALL EDITIONS OF [●] (A WIDELY CIRCULATED HINDI NATIONAL NEWSPAPER) AND [●] EDITION OF [●] (A WIDELY CIRCULATED KANNADA NATIONAL NEWSPAPER, KANNADA BEING THE REGIONAL LANGUAGE OF KARNATAKA, WHERE OUR REGISTERED AND CORPORATE OFFICE IS LOCATED) AT LEAST TWO WORKING DAYS PRIOR TO THE BID/OFFER OPENING DATE AND SHALL BE MADE AVAILABLE TO BSE LIMITED ("BSE") AND NATIONAL STOCK EXCHANGE OF INDIA LIMITED ("NSE" AND TOGETHER WITH BSE, THE "STOCK EXCHANGES") FOR UPLOADING ON THEIR RESPECTIVE WEBSITES IN ACCORDANCE WITH THE SEBI ICDR REGULATIONS.

In case of any revision in the Price Band, the Bid/Offer Period will be extended by at least three additional Working Days after such revision of the Price Band, subject to the Bid/Offer Period not exceeding a total of 10 Working Days. In cases of force majeure, banking strike or similar unforeseen circumstances, our Company may, in consultation with the Book Running Lead Managers, for reasons to be recorded in writing, extend the Bid/Offer Period for a minimum of one Working Day, subject to the Bid/Offer Period not exceeding 10 Working Days. Any revision in the Price Band and the revised Bid/Offer Period, if applicable, will be widely disseminated by notification to the Stock Exchanges, by issuing a public notice, and also by indicating the change on the respective websites of the Book Running Lead Managers and at the terminals of the other members of the Syndicate and by intimation to the other Designated Intermediaries and the Sponsor Bank(s), as applicable.

The Offer is being made in terms of Rule 19(2)(b) of the Securities Contracts (Regulation) Rules, 1957, as amended (the **"SCRR"**), read with Regulation 31 of the SEBI ICDR Regulations. The Offer is being made through the Book Building Process in accordance with Regulation 6(1) of the SEBI ICDR Regulations, wherein not more than 50% of the Net Offer shall be available for allocation on a proportionate basis to Qualified Institutional Buyers (**"QIBs"**) (the **"QIB Portion"**), provided that our Company, in consultation with the BRLMs, may allocate up to 60% of the QIB Portion to Anchor Investors on a discretionary basis by our Company, in consultation with the BRLMs, in accordance with the SEBI ICDR Regulations (the **"Anchor Investor Portion"**), of which one-third shall be reserved for domestic Mutual Funds, subject to valid Bids being received from the domestic Mutual Funds at or above the price at which allocation is made to Anchor Investors (**"Anchor Investor Allocation Price"**). In the event of under-subscription or non-allocation in the Anchor Investor Portion, the balance Equity Shares shall be added to the QIB Portion (other than the Anchor Investor Portion) (the **"Net QIB Portion"**). Further, 5% of the Net QIB Portion shall be available for allocation on a proportionate basis to Mutual Funds only, subject to valid Bids being received at or above the Offer Price, and the remainder of the Net QIB Portion shall be available for allocation on a proportionate basis to all QIBs, including Mutual Funds, subject to valid Bids being received at or above the Offer Price. However, if the aggregate demand from Mutual Funds is less than 5% of the Net QIB Portion, the balance Equity Shares available for allocation in the Mutual Fund Portion will be added to the remaining Net QIB Portion for proportionate allocation to all QIBs. Further, not less than 15% of the Net Offer shall be available for allocation on a proportionate basis to Non-Institutional Bidders (**"Non-Institutional Portion"**), in accordance with the SEBI ICDR Regulations, of which one-third of the Non-Institutional Portion shall be available for allocation to Bidders with an application size of more than ₹ 0.20 million and up to ₹ 1.00 million and two-thirds of the Non-Institutional Portion shall be available for allocation to Bidders with an application size of more than ₹ 1.00 million and under-subscription in either of these two sub-categories of the Non-Institutional Portion may be allocated to Bidders in the other sub-category of the Non-Institutional Portion in accordance with the SEBI ICDR Regulations, subject to valid Bids being received at or above the Offer Price. Further, not less than 35% of the Net Offer shall be available for allocation to Retail Individual Portion (**"Retail Portion"**), in accordance with the SEBI ICDR Regulations, subject to valid Bids being received from them at or above the Offer Price. Further, Equity Shares will be allocated on a proportionate basis to Eligible Employees applying under the Employee Reservation Portion, subject to valid Bids being received from them at or above the Offer Price. All Bidders (except Anchor Investors) shall mandatorily participate in the Offer only through the Application Supported by Blocked Amount (**"ASBA"**) process and shall provide details of their respective bank account (including UPI ID (defined hereinafter) in case of UPI Bidders (defined hereinafter) in which the Bid Amount will be blocked by the Self Certified Syndicate Banks (**"SCSBs"**) or by the Sponsor Bank(s) or pursuant to the UPI Mechanism, as the case may be. Anchor Investors are not permitted to participate in the Anchor Investor Portion through the ASBA process. For details, see *"Offer Procedure"* on page 356 of the DRHP.

This public announcement is made in compliance with the provisions of Regulation 26(2) of the SEBI ICDR Regulations to inform the public that our Company is proposing to undertake, subject to applicable statutory and regulatory requirements, receipt of requisite approvals, market conditions and other considerations, an initial public offer of its Equity Shares pursuant to the Offer and has filed the DRHP dated August 19, 2024 with SEBI and thereafter with BSE and NSE.

Pursuant to Regulation 26(1) of the SEBI ICDR Regulations, the DRHP filed with SEBI shall be made available to the public for comments, if any, for period of at least 21 days, from the date of filing by hosting it on the website of SEBI at www.sebi.gov.in, on the websites of the Stock Exchanges i.e., BSE at www.bseindia.com, NSE at www.nseindia.com where the equity shares are proposed to be listed, the websites of the BRLMs, i.e. Anand Rathi Advisors Limited at www.anandrathiib.com and Equirus Capital Private Limited at www.equirus.com and the website of our Company at www.unimechaerospace.com. Our Company hereby invites the public to give their comments on the DRHP filed with SEBI with respect to disclosures made in the DRHP. The members of public are requested to send a copy of their comments to SEBI, to the Company Secretary and Compliance Officer of our Company and/or the BRLMs at their respective addresses mentioned herein below. All comments must be received by SEBI and/or our Company and/or the BRLMs and/or the Company Secretary and Compliance Officer of our Company at their respective addresses mentioned herein below in relation to the Offer on or before 5:00 p.m. on the 21st day from the aforesaid date of filing the DRHP with SEBI.

Investments in equity and equity-related securities involve a degree of risk and investors should not invest any funds in the Offer unless they can afford to take the risk of losing their entire investment. Investors are advised to read the risk factors carefully before taking an investment decision in the Offer. For taking an investment decision, investors must rely on their own examination of our Company and the Offer, including the risks involved. The Equity Shares in the Offer have not been recommended or approved by the SEBI, nor does SEBI guarantee the accuracy or adequacy of the contents of the DRHP. Specific attention of the investors is invited to *"Risk Factors"* on page 28 of the DRHP.

Any decision to invest in the Equity Shares described in the DRHP may only be made after the red herring prospectus (**"Red Herring Prospectus"**) has been filed with the RoC and must be made solely on the basis of such Red Herring Prospectus as there may be material changes in the Red Herring Prospectus from the DRHP.

The Equity Shares, when offered, through the Red Herring Prospectus, are proposed to be listed on the main board of the BSE and NSE.

For details of the main objects of the Company as contained in its Memorandum of Association, see "*History and Certain Corporate Matters*" on page 208 of the DRHP.

The liability of the members of the Company is limited. For details of the share capital, capital structure of the Company and the names of the signatories to the Memorandum of Association and the number of shares subscribed by them see "*Capital Structure*" on page 87 of the DRHP.

BOOK RUNNING LEAD MANAGERS		REGISTRAR TO THE OFFER
ANANDRATHI INVESTMENT BANKING	equirus	KFINTECH EXPERIENCE TRANSFORMATION
Anand Rathi Advisors Limited 11th Floor, Times Tower, Kamla Mills Compound, Senapati Bapat Marg, Lower Parel, Mumbai 400 013, Maharashtra, India **Telephone:** +91 22 4047 7120 **E-mail:** ipo.unimech@rathi.com **Investor Grievance E-mail:** grievance.ecm@rathi.com **Website:** www.anandrathiib.com **Contact Person:** Arpan Tandon **SEBI Registration No.:** INM000010478	**Equirus Capital Private Limited** 1201, C Wing, Marathon Futurex, N.M. Joshi Marg, Lower Parel Mumbai 400 013, Maharashtra, India **Telephone:** +91 22 4332 0736 **E-mail:** unimech.ipo@equirus.com **Website:** www.equirus.com **Investor grievance e-mail:** investorsgrievance@equirus.com **Contact person:** Malay Shah / Subah Hindaria **SEBI registration no.:** INM000011286	**KFin Technologies Limited** Selenium, Tower B, Plot No. 31 and 32, Gachibowli, Financial District Nanakramguda, Serilingampally Hyderabad 500 032 Telangana, India **Telephone:** +91 40 6716 2222 **E-mail:** uaml.ipo@kfintech.com **Investor Grievance e-mail:** einward.ris@kfintech.com **Website:** www.kfintech.com **Contact Person:** M. Murali Krishna **SEBI Registration No.:** INR000000221

All capitalized terms used herein and not specifically defined shall have the same meaning as ascribed to them in the DRHP.

For **UNIMECH AEROSPACE AND MANUFACTURING LIMITED**
On behalf of the Board of Directors
Sd/-
Krishnappayya Desai
Company Secretary and Compliance Officer

Place : Bangalore
Date : August 20, 2024

UNIMECH AEROSPACE AND MANUFACTURING LIMITED is proposing, subject to applicable statutory and regulatory requirements, receipt of requisite approvals, market conditions and other considerations, to undertake an initial public offer of its Equity Shares and has filed the DRHP dated August 19, 2024 with SEBI and the Stock Exchanges. The DRHP shall be available on the website of SEBI at www.sebi.gov.in, on the websites of the Stock Exchanges i.e., BSE at www.bseindia.com, NSE at www.nseindia.com, the websites of the BRLMs, i.e. Anand Rathi Advisors Limited at www.anandrathiib.com and Equirus Capital Private Limited at www.equirus.com and on the website of our Company at www.unimechaerospace.com. Potential investors should note that investment in equity shares involves a high degree of risk and for details relating to such risk, see the section titled "*Risk Factors*" on page 28 of the DRHP. Potential investors should not rely on the DRHP filed with SEBI for making any investment decision.

The Equity Shares offered in the Offer have not been and will not be registered under the U.S. Securities Act of 1933, as amended (**"Securities Act"**) or any state securities laws in the United States, and unless so registered, may not be offered or sold within the United States, except pursuant to an exemption from, or in a transaction not subject to, the registration requirements of the Securities Act and in accordance with any applicable U.S. state securities laws. Accordingly, the Equity Shares are being offered and sold outside the United States in 'offshore transactions' in reliance on Regulation S under the Securities Act and the applicable laws of the jurisdictions where such offers and sales are made. The Equity Shares have not been and will not be registered, listed or otherwise qualified in any other jurisdiction outside India and may not be offered or sold, and Bids may not be made by persons in any such jurisdiction, except in compliance with the applicable laws of such jurisdiction.

CONCEPT

ಮನೆಯೂಟ ಕೋರಿ ದರ್ಶನ್ ಮನವಿ: ಸೆಪ್ಟೆಂಬರ್ 5ರವರೆಗೆ ಜೈಲೂಟವೇ ಗತಿ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಎರಡನೇ ಆರೋಪಿಯಾಗಿರುವ ನಟ ದರ್ಶನ್ ಅವರಿಗೆ ಮನೆ ಊಟಕ್ಕೆ ಕೋರಿದ್ದ ಮನವಿಯನ್ನು ತಿರಸ್ಕರಿಸಿರುವುದಾಗಿ ಸರಕಾರ ಹೈಕೋರ್ಟ್‌ಗೆ ತಿಳಿಸಿದೆ.

ಮನೆ ಊಟ, ಹಾಸಿಗೆ ಮತ್ತು ಪುಸ್ತಕಗಳನ್ನು ಒದಗಿಸಲು ಜೈಲು ಅಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಕೋರಿದ್ದ ಅರ್ಜಿ ವಿಚಾರಣಾಧೀನ ನ್ಯಾಯಾಲಯ ತಿರಸ್ಕರಿಸಿದ್ದನ್ನು ಪ್ರಶ್ನಿಸಿ ನಟ ದರ್ಶನ್ ಸಲ್ಲಿಸಿದ್ದ ಅರ್ಜಿಯನ್ನು ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಹಾಜರಿದ್ದ ವಿಶೇಷ ಸರಕಾರಿ ಅಭಿಯೋಜಕರಾದ ಬೆಳ್ಳಿಯಪ್ಪ ಅವರು, ದರ್ಶನ್ ಅವರ ಊಟ, ಹಾಸಿಗೆ ಪುಸ್ತಕಗಳನ್ನು ಕೊಡಿಸುವ ಸಂಬಂಧ ಸಲ್ಲಿಸಿದ್ದ ಮನವಿಯನ್ನು ಆ. 14ರಂದು ಪರಿಶೀಲನೆ ನಡೆಸಿ ತಿರಸ್ಕರಿಸಲಾಗಿದೆ. ಅದೇ ದಿನ ಈ ಅಂಶವನ್ನು ಅರ್ಜಿದಾರರ ಗಮನಕ್ಕೂ ತರಲಾಗಿದೆ ಎಂದು ವಿವರಿಸಿದರು.

> ### ಸರಕಾರದ ಆದೇಶದಲ್ಲೇನಿದೆ?
>
> **ದರ್ಶನ್ ಅವರಿಗೆ ಫುಡ್ ಪಾಯಿಸನ್ ಸಮಸ್ಯೆ ಆಗಿಲ್ಲ. ಅವರಿಗೆ ಮೂಳೆ ಮತ್ತು ವೈರಲ್ ಜ್ವರಕ್ಕಾಗಿ ಚಿಕಿತ್ಸೆ ನೀಡಲಾಗಿದೆ. ಇದನ್ನು ಹೊರತುಪಡಿಸಿ ದೊಡ್ಡ ರೀತಿಯ ಸಮಸ್ಯೆಗಳು ಇಲ್ಲ. ವೈದ್ಯರು ಔಷಧಿ ಮತ್ತು ಪೌಷ್ಟಿಕ ಆಹಾರಕ್ಕೆ ತಿಳಿಸಿದ್ದಾರೆ. ಬೆನ್ನು ನೋವು ಮತ್ತು ಮುಂಗೈಗಳಿಗೆ ಚಿಕಿತ್ಸೆ ಸೂಕ್ತ ವೈದ್ಯಕೀಯ ಸೌಲಭ್ಯಗಳನ್ನು ನೀಡಲಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.**

ಇದಕ್ಕೆ ದರ್ಶನ್ ಪರ ಹಾಜರಿದ್ದ ವಕೀಲರಾದ ಸಂಜೀವಿನಿ ಪ್ರಭುಲಿಂಗ ನಾವದಗಿ, ಮನೆ ಊಟ ತಿರಸ್ಕರಿಸಿರುವ ಆದೇಶದ ಪ್ರತಿ ಈವರೆಗೂ ನಮಗೆ ತಲುಪಿಲ್ಲ. ಆದೇಶ ಅಧ್ಯಯನ ಮಾಡಿ ಅದಕ್ಕೆ ಪ್ರತಿಕ್ರಿಯೆ ಸಲ್ಲಿಸಬೇಕಾಗಿದೆ. ಈ ನಿಟ್ಟಿನಲ್ಲಿ ಕಾಲಾವಕಾಶ ನೀಡಬೇಕು ಎಂದು ಮನವಿ ಮಾಡಿದರು. ಈ ಅಂಶ ದಾಖಲಿಸಿಕೊಂಡ ನ್ಯಾಯಪೀಠ, ವಿಚಾರಣೆಯನ್ನು ಸೆ. 5ಕ್ಕೆ ಮುಂದೂಡಿತು.

ಹೀಲಿಯಂ ಗ್ಯಾಸ್ ಬಳಸಿ ಟೆಕ್ಕಿ ಆತ್ಮಹತ್ಯೆ

ಬೆಂಗಳೂರು: ರಾಜಧಾನಿಯಲ್ಲಿ 22 ವರ್ಷದ ಟೆಕ್ಕಿಯೊಬ್ಬ ಹೀಲಿಯಂ ಗ್ಯಾಸ್ ಬಳಸಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಸಾಫ್ಟ್‌ವೇರ್ ಕಂಪನಿಯ ಉದ್ಯೋಗಿಯಾಗಿರುವ ಈತ, ಬಲೂನ್‌ಗೆ ತುಂಬಲು ಬಳಸುವ ಹೀಲಿಯಂ ಗ್ಯಾಸ್ ಮೂಲಕ ಜೀವ ತೆಗೆದುಕೊಂಡಿದ್ದಾನೆ. ಹಾಸನ ಜಿಲ್ಲೆ ಸಕಲೇಶಪುರ ಮೂಲದ 22 ವರ್ಷದ ಯಾಜ್ಞಿಕ್ ಮೃತಪಟ್ಟ ಟೆಕ್ಕಿ. ಎಲೆಕ್ಟ್ರಾನಿಕ್ ಸಿಟಿಯಲ್ಲಿ ಘಟನೆ ನಡೆದಿದೆ. ಕಳೆದ ಕೆಲವು ತಿಂಗಳುಗಳಿಂದ ವರ್ಕ್ ಫ್ರಂ ಹೋಂನಲ್ಲಿದ್ದ ಟೆಕ್ಕಿ ಯಾಜ್ಞಿಕ್, ಎಂಟೆಕ್ ಎಕ್ಸಾಂ ಬರೆಯುವ ಸಲುವಾಗಿ ಬೆಂಗಳೂರಿಗೆ ಬಂದಿದ್ದ. ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯ ನೀಲಾದ್ರಿ ನಗರದ ಹೋಟೆಲ್‌ನಲ್ಲಿ ಆಗಸ್ಟ್ 16ರಂದು ರೂಂ ಬುಕ್ ಮಾಡಿದ್ದ. ಸೋಮವಾರ ದೊಡ್ಡ ಬ್ಯಾಗ್ ತೆಗೆದುಕೊಂಡು ಪೀಣ್ಯ ಕಡೆ ತೆರಳಿದ್ದಾನೆ. ಪೀಣ್ಯದಲ್ಲಿ ಹೀಲಿಯಂ ಗ್ಯಾಸ್ ಖರೀದಿ ಮಾಡಿ ಲಾಡ್ಜ್‌ಗೆ ತಂದಿದ್ದಾನೆ. ಕಳೆದ ರಾತ್ರಿ ಲಾಡ್ಜ್‌ನಲ್ಲಿ ಕೋಣೆಯಲ್ಲಿ ಪ್ಲಾಸ್ಟಿಕ್ ಕವರ್‌ಗೆ ಹೀಲಿಯಂ ಗ್ಯಾಸ್ ತುಂಬಿಸಿದ್ದಾನೆ. ಕವರ್ ಮೂಲಕ ಹೀಲಿಯಂ ಗ್ಯಾಸ್ ಇನ್ಹೇಲ್ ಮಾಡಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಘಟನಾ ಸ್ಥಳಕ್ಕೆ ಎಲೆಕ್ಟ್ರಾನಿಕ್ ಸಿಟಿ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದ್ದು, ಯಾಜ್ಞಿಕ್ ಮೃತದೇಹವನ್ನು ಸೇಂಟ್ ಜಾನ್ ಆಸ್ಪತ್ರೆಗೆ ರವಾನಿಸಲಾಯಿತು.

ವೈದ್ಯರನ್ನು ಕಚ್ಚಿ, ನರ್ಸ್‌ಗಳ ಮೇಲೆ ಹಲ್ಲೆ

ಬೆಂಗಳೂರು: ಮಾದಕವಸ್ತುವಿನ ನಶೆಯಲ್ಲಿದ್ದ ವ್ಯಕ್ತಿಯೊಬ್ಬ ವೈದ್ಯರಿಗೆ ಕಚ್ಚಿ, ನರ್ಸ್‌ಗಳ ಮೇಲೆ ಹಲ್ಲೆ ಮಾಡಿರುವ ಘಟನೆ ಎಲೆಕ್ಟ್ರಾನಿಕ್ ಸಿಟಿಯ ಬೆಟ್ಟದಾಸನಪುರದ ಸಾಯಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ನಡೆದಿದೆ. ಸದ್ಯ ಇದರಿಂದ ಆಸ್ಪತ್ರೆ ಆಡಳಿತ ಮಂಡಳಿ ಆತಂಕ ವ್ಯಕ್ತಪಡಿಸಿದೆ.

ಡ್ರಗ್ಸ್ ನಶೆಯಲ್ಲಿದ್ದ ವ್ಯಕ್ತಿಯು ರಸ್ತೆಗಳಲ್ಲಿ ಸಿಕ್ಕ ಸಿಕ್ಕವರ ಮೇಲೆ ಚೇಷ್ಟೆ ಮಾಡುತ್ತಿದ್ದನು. ಹೀಗಾಗಿ ಸಾರ್ವಜನಿಕರು ವ್ಯಕ್ತಿಗೆ ಥಳಿಸಿ ಬೆಟ್ಟದಾಸನಪುರದ ಸಾಯಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು. ಆದರೆ ಆಸ್ಪತ್ರೆಗೆ ಬಂದ ಮೇಲೆ ಆಸಾಮಿಯು ಏಕಾಏಕಿ ಡಾಕ್ಟರ್‌ಗಳ ಮೇಲೆ ಹಲ್ಲೆ ಮಾಡಿದ್ದಲ್ಲದೇ ಅವರಿಗೆ ಕಚ್ಚಲು ಹೋಗಿದ್ದಾನೆ. ನರ್ಸ್‌ಗಳ ಮೇಲೂ ಹಲ್ಲೆ ಮಾಡಿದ್ದಾನೆ. ಇದರಿಂದ ಆತಂಕಗೊಂಡ ವೈದ್ಯರು ತಕ್ಷಣ ಮಾಹಿತಿಯನ್ನು ಪೊಲೀಸರಿಗೆ ತಿಳಿಸಿದ್ದಾರೆ. ಕೂಡಲೇ ಸ್ಥಳಕ್ಕೆ ಆಗಮಿಸಿದ ಎಲೆಕ್ಟ್ರಾನಿಕ್ ಸಿಟಿ ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದುಕೊಂಡಿದ್ದು ಮಾದಕವಸ್ತು ತೆಗೆದುಕೊಂಡಿರುವ ಕುರಿತು ವಿಚಾರಣೆ ನಡೆಸುತ್ತಿದ್ದಾರೆ.

ಯುವಕನಿಗೆ ಪ್ರಜ್ಞೆ ತಪ್ಪಿಸಿ ಮರ್ಮಾಂಗ ಕತ್ತರಿಸಿದ ಮಂಗಳಮುಖಿಯರು!

ಬೆಂಗಳೂರು: ಟೀ ಅಂಗಡಿಯಲ್ಲಿ ಕೆಲಸ ಮಾಡಿ ಜೀವನ ನಡೆಸುತ್ತಿದ್ದಾತನನ್ನು ಲಿಂಗ ಪರಿವರ್ತನೆ ಮಾಡಿ ಭಿಕ್ಷಾಟನೆಗೆ ಒತ್ತಾಯಿಸಿದ ಘಟನೆ ಫ್ರೇಜರ್ ಟೌನ್‌ನಲ್ಲಿ ನಡೆದಿದೆ.

ಚಿತ್ರಾ, ಪ್ರೀತಿ, ಕಾಜಲ್, ಅಶ್ವಿನಿ, ಮುಗಿಲಿ ಎನ್ನುವ ಐದು ಮಂದಿ ವಿರುದ್ಧ ಕಸೀಪಾ ಅಲಿಯಾಸ್ ಮೊಹಮ್ಮದ್ ಅಬೂಬಕ್ಕರ್ ಸೇಠ್ ಅವರು ಪುಲಿಕೇಶಿ ನಗರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಬಲವಂತವಾಗಿ ಇಂಜೆಕ್ಷನ್ ಕೊಟ್ಟು ಮಂಗಳಮುಖಿಯರು ಗಂಡು ಹುಡುಗನನ್ನು ಲಿಂಗ ಪರಿವರ್ತನೆ ಮಾಡಿದ್ದಾರೆ. ಅಕ್ರಮವಾಗಿ ಲಿಂಗ ಪರಿವರ್ತನೆ, ಅಶ್ಲೀಲ ಫೋಟೊ ತೆಗೆದುಕೊಂಡು ಬ್ಲ್ಯಾಕ್‌ಮೇಲ್ ಮಾಡಿದ್ದಲ್ಲದೆ ಮನಬಂದಂತೆ ಥಳಿಸಿ ಚಿತ್ರ ಹಿಂಸೆ ಕೊಟ್ಟಿದ್ದಾರೆ. ಭಿಕ್ಷಾಟನೆ ಮಾಡುವಂತೆ ದೈಹಿಕ ಹಲ್ಲೆ, ಮಾನಸಿಕ ಹಿಂಸೆ ನೀಡಿ ನಾಲ್ವರು ಮಂಗಳಮುಖಿಯರು ಹುಡುಗನ ಲಿಂಗ ಪರಿವರ್ತನೆ ಮಾಡಿದ್ದು, ಗಂಡಸಾಗಿ ಭಿಕ್ಷಾಟನೆ ಮಾಡಿದರೆ ದಿನಕ್ಕೆ ಒಂದು ಸಾವಿರ ಸಂಪಾದನೆ ಮಾಡುತ್ತಾರೆ. ಇನ್ನು ನೀನು ಹೆಣ್ಣಾಗಿ ಭಿಕ್ಷಾಟನೆ ಮಾಡಿದರೆ ಇನ್ನೆಷ್ಟು ಮಾಡುತ್ತೀಯಾ ಎಂದು ಧಮ್ಕಿ ಹಾಕಿದ್ದಾರೆ.

> ### ಮೂರು ವರ್ಷ ಭಿಕ್ಷಾಟನೆ ಮಾಡಿಸಿದ್ದರು
>
> ನಾನು ಮೂರು ವರ್ಷಗಳ ಹಿಂದೆ ಅಂಬೇಡ್ಕರ್ ಕಾಲೇಜ್ ಬಳಿ ಬರ್ಕತ್ ಎಂಬುವವರ ಟೀ ಅಂಗಡಿಯಲ್ಲಿ ಕೆಲಸವನ್ನು ಮಾಡಿಕೊಂಡಿದ್ದೆನು. ಈ ಸಮಯದಲ್ಲಿ ಟೀ ಸ್ಟಾಲ್‌ನಲ್ಲಿ ಟೀ ಕುಡಿಯಲು ಬರುತ್ತಿದ್ದ ಚಿತ್ರ, ಅಶ್ವಿನಿ, ಕಾಜಲ್, ಪ್ರೀತಿ, ಮುಗಿಲರವರು ನನಗೆ ಪರಿಚಯವಾಗಿ ನಮ್ಮ ಜತೆ ಬಂದರೆ ನಿನ್ನನ್ನು ಒಳ್ಳೆಯ ಮನೆಯಲ್ಲಿರಿಸಿ ಒಳ್ಳೆಯ ಸಂಪಾದನೆಗೆ ದಾರಿ ಮಾಡಿಕೊಡುವುದಾಗಿ ಪುಸಲಾಯಿಸಿದರು. ನಾನು ಒಪ್ಪದೇ ಇದ್ದಾಗ ನನ್ನನ್ನು ಹೆದರಿಸಿ ಬೆದರಿಸಿ ಅವರ ಮನೆ ಟ್ಯಾನರಿ ರಸ್ತೆಯಲ್ಲಿರುವ ಬೆಂಗಳೂರು ನಗರ ಇಲ್ಲಿ ಇರಿಸಿಕೊಂಡು ನನ್ನ ಮನೆಯವರಿಗೆ ಕೊಲೆ ಮಾಡಿಸುತ್ತೇನೆಂದು ಬೆದರಿಕೆ ಒಡ್ಡಿ ನನ್ನ ಬಳಿಯಿಂದ ಮೂರು ವರ್ಷಗಳ ಕಾಲ ಭಿಕ್ಷಾಟನೆ ಮಾಡಿಸಿ ದುಡಿಸಿಕೊಂಡಿರುತ್ತಾರೆ.
>
> ಜುಲೈ 12, 2024 ರಂದು ರಾತ್ರಿ 8.30 ಗಂಟೆಗೆ, ನೀನು ಗಂಡಸಾಗಿರುವಾಗಲೇ ಪ್ರತಿದಿನ ಎರಡು ಸಾವಿರ ದುಡಿದು ಕೊಡುತ್ತೀಯ ಹೆಣ್ಣಾದರೆ ಇನ್ನೂ ಎಷ್ಟು ಹಣವನ್ನು ದುಡಿದು ಕೊಡುತ್ತೀಯ? ಎಂದು ಹೇಳಿ ಹೆಣ್ಣಾಗು ಎಂದು ಹೇಳಿ ನನ್ನ ಇಚ್ಛೆಗೆ ವಿರುದ್ಧವಾಗಿ ಚಿತ್ರ, ಅಶ್ವಿನಿ, ಕಾಜಲ್, ಪ್ರೀತಿ, ಮುಗಿಲ ಎಂಬುವವರು ಗಾಂಜಾ ಸೇವಿಸಿ, ಮದ್ಯಪಾನ ಮಾಡಿಕೊಂಡು ಓರ್ವ ಹೆಂಗಸನ್ನು ಕರೆದುಕೊಂಡು ನನಗೆ ಯಾವುದೋ ಇಂಜೆಕ್ಷನ್ ಅನ್ನು ಕೊಡಲು ಬಂದಾಗ ನಾನು ತಪ್ಪಿಸಿಕೊಂಡು ಓಡಲು ಪ್ರಯತ್ನಿಸಿದಾಗ ಐದು ಜನ ನನ್ನನ್ನು ಹಿಡಿದುಕೊಂಡು ನನಗೆ ಬಲವಂತವಾಗಿ ಬಗ್ಗಿಸಿ ಬೆನ್ನಿಗೆ ಇಂಜೆಕ್ಷನ್ ನೀಡಿ ಪ್ರಜ್ಞೆ ತಪ್ಪಿಸಿ ಮರ್ಮಾಂಗವನ್ನು ಕತ್ತರಿಸಿರುತ್ತಾರೆ. ನಾನು ಎಚ್ಚರವಾದಾಗ ನನ್ನ ಮರ್ಮಾಂಗದ ಬಳಿ ಗಾಯವಾಗಿದ್ದು ಪೈಪನ್ನು ಅಳವಡಿಸಿರುತ್ತಾರೆ. ನಂತರ ಆ.3 ರವರೆಗೆ ಮನೆಯಲ್ಲಿಯೇ ಕೂಡಿ ಹಾಕಿ, ಮನೆ ಮೇಲೆ ಕರೆದುಕೊಂಡು ಹೋಗಿ ಯಾವುದೋ ಪೂಜೆ ಮಾಡಿಸಿರುತ್ತಾರೆ. ನಂತರ ನನ್ನನ್ನು ಭಿಕ್ಷಾಟನೆ ಮಾಡಿಕೊಂಡು ಬರುವಂತೆ ಹಾಗೂ ಲೈಂಗಿಕ ಕಾರ್ಯಕರ್ತೆಯಾಗಿ ಕೆಲಸ ಮಾಡುವಂತೆ ಒತ್ತಾಯಿಸಿ ಐದು ಲಕ್ಷ ಕೊಡುವಂತೆ ಬೆದರಿಸಿದರು. ತಪ್ಪಿಸಿಕೊಂಡು ಬಂದು ದೂರನ್ನು ನೀಡುತ್ತಿದ್ದು ನನಗೆ ಬಲವಂತವಾಗಿ ಮರ್ಮಾಂಗ ಕತ್ತರಿಸಿ ಗಾಯಮಾಡಿ ಶಾಶ್ವತ ಹೂನ ಮಾಡಿ ಮನೆಯಲ್ಲಿ ಕೂಡಿ ಹಾಕಿದ್ದ ಚಿತ್ರ, ಅಶ್ವಿನಿ, ಕಾಜಲ್, ಪ್ರೀತಿ, ಮುಗಿಲ ಎಂಬುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ ಎಂದು ದೂರಿದ್ದಾನೆ.

ಸಮಾಚಾರ ಸಣ್ಣದಲ್ಲ

ನಾಳೆ ನೀರಿನ ಅದಾಲತ್

ಬೆಂಗಳೂರು: ಬೆಂಗಳೂರು ಜಲಮಂಡಳಿಯ ವತಿಯಿಂದ ಆ.22ರಂದು ಬೆಳಗ್ಗೆ 9.30ರಿಂದ 11.00 ಗಂಟೆಯವರೆಗೆ ನೀರಿನ ಅದಾಲತ್‌ನ್ನು ಆಯೋಜಿಸಲಾಗುವುದು ಎಂದು ಮಂಡಳಿ ತಿಳಿಸಿದೆ. ನಗರದ (ಆಗ್ನೇಯ-3), (ಆಗ್ನೇಯ-6) (ಪಶ್ಚಿಮ-1-3), (ವಾಯುವ್ಯ-5),(ಉತ್ತರ-2-3), (ದಕ್ಷಿಣ-1-3), (ನೈರುತ್ಯ-3), (ನೈರುತ್ಯ-6) ಮತ್ತು (ಪೂರ್ವ-2-4) ಉಪಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ಸಹಾಯವಾಣಿ 1916ಗೆ ಅಥವಾ ವಾಟ್ಸ್ ಅಪ್ ನಂಬರ್ 8762228888 ಗೆ ಸಂದೇಶ ಕಳುಹಿಸುವ ಮೂಲಕ ದೂರು ದಾಖಲಿಸಬಹುದು ಎಂದು ಮಂಡಳಿ ತಿಳಿಸಿದೆ.

ಚಿಕಿತ್ಸಾ ವೆಚ್ಚ 1.5 ಲಕ್ಷ ರು.ಗೆ ಏರಿಕೆ

ಬೆಂಗಳೂರು: ಸೊಳ್ಳೆಗಳಿಂದ ಹರಡುವ ಡೆಂಘೀ ಹಾಗೂ ಮಲೇರಿಯಾದಂಥ ರೋಗಗಳ ಚಿಕಿತ್ಸೆಗೆ ಸಾಮಾನ್ಯವಾಗಿ 50 ಸಾವಿರ ರು.ಗಳಿಂದ ಒಂದೂವರೆ ಲಕ್ಷ ರೂಪಾಯಿವರೆಗೆ ವೆಚ್ಚವಾಗುತ್ತಿದೆ ಎಂಬ ಅಂಶ ಪಾಲಿಸಿ ಬಜಾರ್ ನಡೆಸಿದ ಆರೋಗ್ಯ ವಿಮಾ ಅಧ್ಯಯನದಿಂದ ತಿಳಿದು ಬಂದಿದೆ. ಡೆಂಘೀ ಮತ್ತು ಮಲೇರಿಯಾಗೆ ಸಂಬಂಧಿಸಿದ ಕ್ಲೇಮ್‌ಗಳು ಒಟ್ಟು ಋತುಮಾನದ ಕಾಯಿಲೆಗಳ ಕ್ಲೇಮ್‌ಗಳ ಶೇ.15 ರಷ್ಟಿದೆ. ಜುಲೈ ಮತ್ತು ಆಗಸ್ಟ್‌ನಲ್ಲಿ ತಿಂಗಳ ಸೊಳ್ಳೆಗಳಿಗೆ ಸೂಕ್ತವಾದ ಸಂತಾನೋತ್ಪತ್ತಿಯ ತಾಣಗಳು ನಿರ್ಮಾಣವಾಗುವುದರಿಂದ ರಚಿಸಿದಾಗ ಈ ಕ್ಲೇಮ್‌ಗಳು ಹೆಚ್ಚಾಗುತ್ತವೆ ಎಂದು ಅಧ್ಯಯನ ವರದಿ ಹೇಳಿದೆ. ಮುಂಗಾರಿನ ಅವಧಿಯಲ್ಲಿ ಉತ್ತುಂಗಕ್ಕೇರುವ ಮತ್ತೊಂದು ಅನಾರೋಗ್ಯ ವೆಂದರೆ ಗ್ಯಾಸ್ಟ್ರೋಎಂಟರೈಟಿಸ್ ಅಥವಾ ಹೊಟ್ಟೆ ಜ್ವರ, ಇದು ಮಲೇರಿಯಾದ ಚಿಕಿತ್ಸೆಯ ವೆಚ್ಚವನ್ನು ಹೊಂದಿದೆ. ಈ ಕಾಯಿ ಲೆಯು ಋತುಮಾನದ ಹಕ್ಕುಗಳಲ್ಲಿ ಶೇ.18 ರಷ್ಟಿದೆ. ಒಟ್ಟು ಋತುಮಾನದ ಕಾಯಿಲೆಗಳ ಕ್ಲೇಮ್‌ಗಳಲ್ಲಿ ಮುಂಬೈ ಶೇಕಡ 20 ರಷ್ಟು ಪಾಲು ಹೊಂದಿದ್ದರೆ, ದೆಹಲಿ ಶೇ. 18, ಬೆಂಗಳೂರು ಶೇ. 15, ಚೆನ್ನೈ ಶೇ. 12 ಮತ್ತು ಹೈದರಾಬಾದ್ನಲ್ಲಿ ಶೇ.ಶ 10 ರಷ್ಟಿದೆ ಎಂದು ಪಾಲಿಸಿ ಬಜಾರ್ ಆರೋಗ್ಯ ವಿಮೆಯ ಮುಖ್ಯಸ್ಥ ಸಿದ್ದಾರ್ಥ್ ಸಿಂಘಾಲ್ ಹೇಳಿದ್ದಾರೆ.

ಭಾರತರತ್ನಕ್ಕೆ ಅರಸು ಹೆಸರು ಶಿಫಾರಸು

ಕಾರ್ಮಿಕ ನಾಯಕ ಎಸ್.ಕೆ. ಕಾಂತಾಗೆ ದೇವರಾಜ ಅರಸು ಪ್ರಶಸ್ತಿ ಪ್ರದಾನ | ದೇವರಾಜ ಅರಸು ಎಲೆಕ್ಟ್ರಾನಿಕ್ ಸಿಟಿ ಎಂದು ಬದಲಾವಣೆ: ಕಾರ್ಯಕ್ರಮದಲ್ಲಿ ಸಿಎಂ ಸಿದ್ದು ಇಂಗಿತ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೆಲ ದಿನಗಳ ಹಿಂದಷ್ಟೇ ರಾಮನಗರ ಜಿಲ್ಲೆಯ ಹೆಸರನ್ನು ಬದಲಾಯಿಸಿದ್ದ ರಾಜ್ಯ ಸರಕಾರ ಇದೀಗ, ಬೆಂಗಳೂರಿನ ಬಹುತೇಕ ಐಟಿ ಕಂಪನಿಗಳ ಹಬ್ ಆಗಿರುವ ಎಲೆಕ್ಟ್ರಾನಿಕ್ ಸಿಟಿಯ ಹೆಸರನ್ನು ಬದಲಾವಣೆ ಮಾಡಲು ಮುಂದಾಗಿದೆ.

ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಘೋಷಣೆ ಮಾಡಿದ್ದು, ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯನ್ನು ದೇವರಾಜ ಅರಸು ಎಲೆಕ್ಟ್ರಾನಿಕ್ ಸಿಟಿ ಎಂದು ಮರು ನಾಮಕರಣ ಮಾಡುವುದಾಗಿ, ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಆಯೋಜಿಸಲಾಗಿದ್ದ, ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಅವರ 109ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಘೋಷಿಸಿದರು. ಇದರೊಂದಿಗೆ ಅರಸು ಅವರಿಗೆ ಮರಣೋತ್ತರ ಭಾರತರತ್ನ ಪ್ರಶಸ್ತಿ ನೀಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲಾಗುವುದು ಎಂದರು.

ಹಿಂದುಳಿದವರನ್ನು ತುಳಿಯಲು ಈಗಲೂ ನಿರಂತರವಾಗಿ ಹುನ್ನಾರಗಳು ನಡೆಯುತ್ತಿವೆ. ನಾನು ಮುಖ್ಯಮಂತ್ರಿಯಾದ ಬಳಿಕ ಬಡವರಿಗಾಗಿ, ಮಹಿಳೆಯರಿಗಾಗಿ, ರೈತರಿಗೆ ಅನೇಕ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದೇವೆ. ಐದು ಗ್ಯಾರಂಟಿ ಯೋಜನೆಗಳು ಬಡವರು, ಮಹಿಳೆಯರು, ರೈತರು, ಯುವಕರ ಪರವಾಗಿದೆ. ಆದರೆ ಬದಲಾವಣೆ ಬಯಸದ, ಬಡವರ ವಿರೋಧಿಗಳು ಇದನ್ನು ವಿರೋಧಿಸುತ್ತಿದ್ದಾರೆ ಎಂದು ಹೇಳಿದರು.

ಜಾತಿ ವ್ಯವಸ್ಥೆ ಹೋಗದೆ ಸಮಸಮಾಜ ಅಸಾಧ್ಯ: ಸಮಾಜದಲ್ಲಿ ಬಡತನ ಮತ್ತು ಜಾತಿ ವ್ಯವಸ್ಥೆ ಸಂಪೂರ್ಣವಾಗಿ ತೊಲಗದೆ ಸಮ ಸಮಾಜ ನಿರ್ಮಾಣ ಸಾಧ್ಯವಿಲ್ಲ, ಸಮಾಜದಲ್ಲಿ ಮೇಲು -ಕೀಳು ಇರಬಾರದು. ಬಡವ -ಬಲ್ಲಿದ ಇರಬಾರದು. ಜಾತಿ ವ್ಯವಸ್ಥೆ ಇರಬಾರದು, ಎಲ್ಲರೂ ಮನುಷ್ಯರಾಗಿ ಸಮಾನವಾಗಿ ಬದುಕಬೇಕು ಎಂಬುವುದೇ ಬಸವಾದಿ ಶರಣರ ಕನಸು. ಇದೇ ತತ್ವದ ಆಧಾರದ ಮೇಲೆ ಅಂಬೇಡ್ಕರ್ ಅವರು ಸಂವಿಧಾನ ರಚಿಸಿದರು. ಸಾಮಾಜಿಕ ನ್ಯಾಯದ ಹರಿಕಾರ ದೇವರಾಜ ಅರಸು ಅವರು ಸಹ ಈ ತತ್ವ-ಸಿದ್ಧಾಂತಗಳ ಆಧಾರದಲ್ಲಿ ಆಡಳಿತ ನಡೆಸಿ, ರಾಜ್ಯದಲ್ಲಿ ಹಲವಾರು ಕ್ರಾಂತಿಕಾರಿ ಬದಲಾವಣೆ ತಂದರು.

ದೇವರಾಜ ಅರಸು ಅವರು ಅರಸು ಮನೆತನದಲ್ಲಿ ಹುಟ್ಟಿದ್ದರೂ, ಸಮಾಜದ ತಳ ಸಮುದಾಯವಾದ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು, ಮಹಿಳೆಯರ ಬಗ್ಗೆ ಬಹಳ ಕಾಳಜಿ ಹೊಂದಿದ್ದರು. ಸಮಾಜದಲ್ಲಿನ ಅಸಮಾನತೆಯನ್ನು ಹೋಗಲಾಡಿಸಲು, ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಲು ನಮ್ಮ ಸಂವಿಧಾನ ಒತ್ತು ನೀಡಿದೆ. ಇದೇ ಹಾದಿಯಲ್ಲಿ ಸಂವಿಧಾನಕ್ಕೆ ಬದ್ಧವಾಗಿ ನಾವು ಆಡಳಿತ ನಡೆಸುತ್ತಿದ್ದೇವೆ. ನೆಹರು ಕಾಲದಿಂದ ಇಂದಿನವರೆಗೂ ಅಸಮಾನತೆಯ ಸಮಾಜವನ್ನು ತೊಡೆದು ಸಮಸಮಾಜ ನಿರ್ಮಾಣಕ್ಕಾಗಿ ನಿರಂತರವಾಗಿ ಪ್ರಯತ್ನಗಳನ್ನು ನಡೆಸಲಾಗಿದೆ ಎಂದು ಹೇಳಿದರು.

> ಪ್ರತಿಯೊಬ್ಬರಿಗೂ ಶಿಕ್ಷಣ ಹಾಗೂ ಆರ್ಥಿಕ ಸ್ವಾತಂತ್ರ್ಯ ಸಿಕ್ಕಿದರೆ ಮಾತ್ರ ಜಾತಿ ವ್ಯವಸ್ಥೆ ಹೋಗಬಹುದು. ಇದಕ್ಕಾಗಿಯೇ ಅರಸು ಅವರು ದಲಿತರು, ಮಹಿಳೆಯರು, ರೈತರು, ಅಲ್ಪಸಂಖ್ಯಾತರ ಶಿಕ್ಷಣಕ್ಕೆ ಒತ್ತು ನೀಡಿದರು. ಮಲಹೊರುವುದು ಸೇರಿದಂತೆ ಅನೇಕ ಅನಿಷ್ಟ ಪದ್ಧತಿಗಳನ್ನು ನಿರ್ಮೂಲನೆ ಮಾಡಿದರು.
>
> - ಸಿದ್ದರಾಮಯ್ಯ ಮುಖ್ಯಮಂತ್ರಿ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ವಿಧಾನಸೌಧದಲ್ಲಿ ಆಯೋಜಿಸಲಾಗಿದ್ದ ಹಿರಿಯ ಮುತ್ಸದ್ದಿ ದಿ. ದೇವರಾಜಅರಸು 109ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಿರಿಯ ಕಾರ್ಮಿಕ ನಾಯಕ ಎಸ್.ಕೆ. ಕಾಂತಾ ಅವರಿಗೆ ದೇವರಾಜ ಅರಸು ಪ್ರಶಸ್ತಿಯನ್ನು ಪ್ರದಾನ ಮಾಡಿದರು. ಈ ವೇಳೆ ಸಚಿವ ಶಿವರಾಜ್ ತಂಗಡಗಿ, ಎಚ್.ಸಿ. ಮಹದೇವಪ್ಪ, ಸಭಾಪತಿ ಬಸವರಾಜ ಹೊರಟ್ಟಿ ಸೇರಿದಂತೆ ಅನೇಕರಿದ್ದರು.

ಭೂ ಸುಧಾರಣೆ ಕಾಯ್ದೆಗೆ ಮತ್ತೆ ತಿದ್ದುಪಡಿ

ಅರಸು ಅವರು ಉಳುವವನೇ ಭೂಮಿಯೊಡೆಯ ಎಂದು ಭೂ ಸುಧಾರಣೆ ಕಾಯ್ದೆಗೆ ತಿದ್ದುಪಡಿ ಮಾಡಿ ಅಸಂಖ್ಯಾತ ಜನರಿಗೆ ಭೂಮಿಯ ಮಾಲೀಕತ್ವ ನೀಡಿದರು. ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರ ಭೂಮಿಯ ಹಕ್ಕನ್ನು ಖಾತ್ರಿಪಡಿಸಲು 79 ಎ ಮತ್ತು ಬಿ ಗೆ ಮಾಡಿರುವ ತಿದ್ದುಪಡಿಯನ್ನು ಮತ್ತೆ ಸರಿಪಡಿಸಲಾಗುವುದು. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಅನುಗುಣವಾಗಿ ಅನುದಾನವನ್ನು ಖರ್ಚು ಮಾಡಲು ಎಸ್‌ಸಿಪಿ/ಟಿಎಸ್‌ಪಿ ಕಾಯ್ದೆಗೆ ತಿದ್ದುಪಡಿ ತಂದದ್ದು ನಮ್ಮ ಸರ್ಕಾರ. ಕೇಂದ್ರದಲ್ಲಿ ಈ ರೀತಿಯ ಕಾಯ್ದೆಯನ್ನು ಜಾರಿಗೆ ತರದೆ ಇಲ್ಲಿ ಅನುಷ್ಠಾನದ ಬಗ್ಗೆ ಪ್ರತಿಪಕ್ಷಗಳು ಟೀಕೆ ಮಾಡುತ್ತಿವೆ. ಈ ರೀತಿ ಟೀಕಿಸಲು ಅವರಿಗೆ ಯಾವುದೇ ನೈತಿಕ ಹಕ್ಕಿಲ್ಲ ಎಂದರು.

ಒಬಿಸಿ ಮೀಸಲಿಗೆ ಅರಸರೇ ಕಾರಣ: ಎಲ್ಲರಿಗೂ ಸಮಾನ ಅವಕಾಶ ಸಿಗಲು ಹಾವನೂರು ಅವರ ಅಧ್ಯಕ್ಷತೆಯಲ್ಲಿ ಹಿಂದುಳಿದ ವರ್ಗದ ಆಯೋಗ ರಚನೆ ಮಾಡಿ, ಎಷ್ಟೇ ವಿರೋಧ ಇದ್ದರೂ ಆಯೋಗದ ಶಿಫಾರಸುಗಳನ್ನು ಜಾರಿ ಮಾಡಿದರು. ಇದರಿಂದ ಹಿಂದುಳಿದ ವರ್ಗದವರಿಗೆ ಶಿಕ್ಷಣದಲ್ಲಿ ಮೀಸಲಾತಿ ಸಾಧ್ಯವಾಯಿತು. ತಳ ಸಮುದಾಯದವರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಸಬಲಗೊಳಿಸಲು ಎಷ್ಟೇ ವಿರೋಧ ಇದ್ದರೂ, ಜಾರಿಗೊಳಿಸಿದರು. ಹಿಂದುಳಿದವರಿಗೆ ಶೇ.38 ರಷ್ಟು ಮೀಸಲಾತಿ ಸಿಕ್ಕಿದ್ದರೆ ಅದಕ್ಕೆ ಅರಸು ಅವರೇ ಕಾರಣ ಎಂದು ಅಭಿಪ್ರಾಯಪಟ್ಟರು.

ಜಾತಿಗಣತಿ ಮಾಡದೆ ಸಾಮಾಜಿಕ ನ್ಯಾಯ ಸಾಧ್ಯವಿಲ್ಲ: ಪ್ರತಿಯೊಬ್ಬರಿಗೂ ಸಾಮಾಜಿಕ ನ್ಯಾಯವನ್ನು ಕಲ್ಪಿಸುವ ನಿಟ್ಟಿನಲ್ಲಿ ದೇಶದಲ್ಲೇ ಮೊದಲ ಬಾರಿಗೆ ನಾವು ಜಾತಿಗಣತಿ ಮಾಡಿದ್ದೇವೆ. ಜಾತಿ ಗಣತಿ ಮಾಡದೇ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿ ಗತಿ ತಿಳಿಯಲು ಹಾಗೂ ಸಾಮಾಜಿಕ ನ್ಯಾಯ ಒದಗಿಸಲು ಸಾಧ್ಯವಿಲ್ಲ. ಸಾಮಾಜಿಕ ನ್ಯಾಯ ಒದಗಿಸಲು ನಾವು ನಡೆಸುತ್ತಿರುವ ಪ್ರಯತ್ನಗಳಿಂದ ಹತಾಶರಾಗಿ ನನ್ನನ್ನು ರಾಜಕೀಯವಾಗಿ ಮುಗಿಸಲು ಹುನ್ನಾರ ಮಾಡುತ್ತಿದಾರೆ.

ನಾನು 1984ರಲ್ಲಿ ಮೊದಲ ಬಾರಿಗೆ ಮಂತ್ರಿಯಾದ ಬಳಿಕ ಕಳೆದ 40 ವರ್ಷಗಳಲ್ಲಿ ಇಂದಿನವರೆಗೆ ನನ್ನ ಜೀವನದಲ್ಲಿ ಯಾವುದೇ ಕಳಂಕವಿಲ್ಲ. ನಾನು ಯಾವುದೇ ತಪ್ಪು ಮಾಡದಿದ್ದರೂ ಈಗ ಮಸಿ ಬಳಿಯಲು ನಿರಂತರ ಪ್ರಯತ್ನ ನಡೆಯುತ್ತಿದೆ. ಅಧಿಕಾರ ಇದ್ದರೂ, ಇಲ್ಲದಿದ್ದರೂ, ಸಾಮಾಜಿಕ ನ್ಯಾಯದ ವಿಷಯದಲ್ಲಿ, ನಂಬಿರುವ ಸಿದ್ಧಾಂತಗಳ ಕುರಿತು ಯಾವತ್ತೂ ರಾಜಿ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ನಗರಕ್ಕಿಲ್ಲ ರಸ್ತೆಗುಂಡಿಗಳಿಂದ ಮುಕ್ತಿ; 2302 ಗುಂಡಿ ಪತ್ತೆ

ಬೆಂಗಳೂರು: ನಗರದಲ್ಲಿ ಮಳೆಯಾದಾಗಲೆಲ್ಲಾ ರಸ್ತೆಗುಂಡಿಗಳಿಂದಾಗಿ ಅನೇಕ ಅನಾಹುತಗಳಾಗುತ್ತಿದ್ದರೂ ಗುಂಡಿಗಳಿಗೆ ಶಾಶ್ವತ ಪರಿಹಾರ ಮಾತ್ರ ದೊರೆಯುತ್ತಿಲ್ಲ ಎಂದು ಸಾರ್ವಜನಿಕರು ಬೇಸರ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಹಲವು ಕಡೆಗಳಲ್ಲಿ ಬೃಹತ್ ಗಾತ್ರದ ಗುಂಡಿಗಳು ಕಂಡು ಬಂದಿದ್ದು, ಈವರೆಗೆ ಒಟ್ಟು 2,302 ಗುಂಡಿಗಳು ಪತ್ತೆಯಾಗಿವೆ. ಈ ಪೈಕಿ ಕೇವಲ 155 ಗುಂಡಿಗಳನ್ನು ಮಾತ್ರ ಮುಚ್ಚಲಾಗಿದ್ದು, ಮಳೆ ನಿಂತ ಕೂಡಲೇ ಗುಂಡಿಗಳ ಮುಚ್ಚುವ ಕಾರ್ಯ ಆರಂಭಿಸಲಾಗುತ್ತಿದೆ. ಕೆಲವೆಡೆ ಕೋಲ್ಡ್ ಮಿಕ್ಸ್ ಬಳಸಿ ಮುಚ್ಚುವ ಪ್ರಯತ್ನದಲ್ಲಿ ಅಧಿಕಾರಿಗಳಿದ್ದಾರೆ.

ಇನ್ನು ಇತ್ತೀಚೆಗಷ್ಟೇ ಬಿಡುಗಡೆಯಾದ ಗುಂಡಿ ಗಮನ ಆ್ಯಪ್‌ನಿಂದ ಸಂಗ್ರಹಿಸಿದ ದೂರುಗಳ ಮಾಹಿತಿ ಆಧರಿಸಿ ಬೆಂಗಳೂರು ದಕ್ಷಿಣ ಹಾಗೂ ಮಹದೇವಪುರ ವಲಯದಲ್ಲಿ ಅತಿಹೆಚ್ಚು ದೂರುಗಳು ದಾಖಲಾಗಿದ್ದು, ತುರ್ತು ಆಧಾರದಲ್ಲಿ ಗುಂಡಿಗಳನ್ನು ಮುಚ್ಚುವ ಕಾರ್ಯವನ್ನು ಅಧಿಕಾರಿಗಳು ಮಾಡುತ್ತಿದ್ದಾರೆ.

ದಕ್ಷಿಣ ವಲಯದಲ್ಲಿ 476, ಮಹದೇವಪುರದಲ್ಲಿ 465 ಮತ್ತು ಇತರೆಡೆ 309 ಗುಂಡಿಗಳಿರುವ ಕುರಿತು ದೂರುಗಳು ದಾಖಲಾಗಿವೆ. ಹೊರವಲಯದಲ್ಲಿರುವ ಈ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾರೀ ವಾಹನಗಳು ಸಂಚರಿಸುವುದರಿಂದ ಗುಂಡಿಗಳು ಬೀಳುತ್ತಿರುವ ಕುರಿತಂತೆ ದೂರುಗಳು ಕೂಡ ಹೆಚ್ಚಾಗಿ ಬರುತ್ತಿವೆ. ಜತೆಗೆ ನಿರಂತರ ಮಳೆಯಿಂದಾಗಿ ಕಾಮಗಾರಿ ಮಂದಗತಿಯಲ್ಲಿ ಸಾಗಿದೆ. ಜಲಮಂಡಳಿ ಮತ್ತು ಬೆಸ್ಕಾಂ ನಡೆಸುತ್ತಿರುವ ಕಾಮಗಾರಿಗಳಿಂದಾಗಿ ಕೆಲವು ಭಾಗಗಳಲ್ಲಿ ಹೆಚ್ಚಾಗಿರುವ ಗುಂಡಿಗಳನ್ನು ಸರಿಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಇನ್ನು, ಒಂದೇ ಗುಂಡಿ ಕುರಿತು 2000ಕ್ಕೂ ಹೆಚ್ಚು ದೂರುಗಳು ಬಂದಿದ್ದು, ಅವುಗಳನ್ನು ತಿರಸ್ಕರಿಸಲಾಗಿದೆ. ಈಗಾಗಲೇ 1,800 ಕೋಟಿ ರು. ವೆಚ್ಚದಲ್ಲಿ ನಗರದಲ್ಲಿ ವೈಟ್ ಟಾಪಿಂಗ್ ಯೋಜನೆ ಕೈಗೆತ್ತಿಕೊಳ್ಳಲಾಗಿದ್ದು, ರಸ್ತೆ ಗುಂಡಿ ಸಮಸ್ಯೆಗಳು ಮತ್ತೆ ಎದುರಾಗುವುದಿಲ್ಲ ಎಂದು ಪಾಲಿಕೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಯಶವಂತಪುರ ನಿಲ್ದಾಣಕ್ಕೆ 32 ರೈಲುಗಳ ಸಂಚಾರ ರದ್ದು

ಬೆಂಗಳೂರು: ಯಶವಂತಪುರ ರೈಲು ನಿಲ್ದಾಣದ ಪ್ಲಾಟ್ ಫಾರಂಗಳಲ್ಲಿ ಏರ್ ಕಾನ್ಕೋರ್ಸ್ ಅಳವಡಿಕೆ ಕಾಮಗಾರಿ ಹಿನ್ನೆಲೆ ನಿಲ್ದಾಣದ 2,3,4,5 ಪ್ಲಾಟ್‌ಫಾರಂಗಳನ್ನು ಹಾಗೂ ಕೆಲ ರೈಲುಗಳ ಸಂಚಾರವನ್ನು 15 ದಿನಗಳ ಕಾಲ ಬಂದ್ ಮಾಡಲಾಗಿದೆ ಎಂದು ನೈರುತ್ಯ ರೈಲ್ವೆ ತಿಳಿಸಿದೆ.

ಆ.21 ರಿಂದ ಸೆ.4ರ ವರೆಗೆ 2 ಮತ್ತು 3ನೇ ಪ್ಲಾಟ್‌ಫಾರಂ ಬಂದ್ ಆಗಲಿದ್ದು, ಸೆ.5 ರಿಂದ 19ರವರೆಗೆ 4 ಮತ್ತು 5ನೇ ಪ್ಲಾಟ್‌ಫಾರಂ ಕೂಡಾ ಬಂದ್ ಆಗಲಿದೆ. ಕೆಲ ರೈಲುಗಳನ್ನು ರದ್ದು ಮಾಡಲಾಗಿದೆ. ತುಮಕೂರು-ಕೆಎಸ್‌ಆರ್ ಬೆಂಗಳೂರು ಮತ್ತು 06575 ಕೆಎಸ್‌ಆರ್ ಬೆಂಗಳೂರು-ತುಮಕೂರು ರೈಲು ಸಂಚಾರವನ್ನು ಆ.21 ರಿಂದ 31 ಮತ್ತು ಸೆ.1 ರಿಂದ 19ರವರೆಗೆ ರದ್ದುಪಡಿಸಲಾಗಿದೆ.

ತುಮಕೂರು-ಯಶವಂತಪುರ ರೈಲು ಆ. 21 ರಿಂದ 31 ಮತ್ತು ಸೆ.1ರಿಂದ 19ರವರೆಗೆ ಚಿಕ್ಕಬಾಣಾವರ-ಯಶವಂತಪುರ ನಡುವೆ ಭಾಗಶಃ ರದ್ದಾಗಲಿದೆ. ಯಶವಂತಪುರ-ಹೊಸೂರು ಮಧ್ಯೆ ಸಂಚರಿಸುವ ರೈಲು ಆ.21ರಿಂದ 31 ಮತ್ತು ಸೆ.1ರಿಂದ 19ರವರೆಗೆ ಯಶವಂತಪುರ-ಹೆಬ್ಬಾಳ ನಡುವೆ ಭಾಗಶಃ ರದ್ದಾಗಲಿದೆ.

ವಿಶ್ವೇಶ್ವರ ಭಟ್ಟರ ಪುಸ್ತಕ ಬಿಡುಗಡೆ ಇಂದು

ಬೆಂಗಳೂರು: ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರ 'ಸಿಂಗಾಪುರ ಕೆಲವು ಟಿಪ್ಪಣಿಗಳು', ಡಾ. ಡಿ.ವಿ ಗುರುಪ್ರಸಾದ್ ಹಾಗೂ ಎಚ್. ಡುಂಡಿರಾಜ್ ಅವರ ಪುಸ್ತಕಗಳು ಬುಧವಾರ ಸಂಜೆ ಬಿಡುಗಡೆಯಾಗಲಿವೆ.

ಭಾರತದ ಅತಿದೊಡ್ಡ ಪುಸ್ತಕ ಭಂಡಾರ ಸಪ್ನ ಬುಕ್ ಹೌಸ್ ವತಿಯಿಂದ ಮೂರು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವು ಗಾಂಧಿನಗರದ ಸಪ್ನ ಬುಕ್ ಹೌಸ್‌ನಲ್ಲಿ ಬುಧವಾರ ಸಂಜೆ 5.00 ಗಂಟೆಗೆ ನಡೆಯಲಿದೆ. ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರ ಸಿಂಗಾಪುರ ಕೆಲವು ಟಿಪ್ಪಣಿಗಳು, ಡಾ.ಡಿ.ವಿ ಗುರುಪ್ರಸಾದ್ ಅವರ 'ಪಾಕಿಸ್ತಾನದ ಐ.ಎಸ್.ಐ,' ಎಚ್.ಡುಂಡಿರಾಜ್ ಅವರ 'ಒಲವಿನ ಒಲಂಪಿಕ್' ಪುಸ್ತಕಗಳನ್ನು ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ ಬಿಡುಗಡೆ ಮಾಡಲಿದ್ದು, ಜಗದೀಶ ಶರ್ಮಾ ಸಂಪ ಪುಸ್ತಕಗಳ ಪರಿಚಯ ಮಾಡಿಕೊಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ದ್ವಿಚಕ್ರ ವಾಹನ ನಕಲಿ ದಾಖಲೆ ಸೃಷ್ಟಿಸಿ ಮಾರಾಟ; ಇಬ್ಬರ ಸೆರೆ

ಬೆಂಗಳೂರು: ದ್ವಿಚಕ್ರ ವಾಹನಗಳನ್ನು ಕದ್ದು ಅವುಗಳ ಎಂಜಿನ್ ಹಾಗೂ ಚಾಸಿ ನಂಬರ್ ಟ್ಯಾಂಪರಿಂಗ್ ಮಾಡಿ, ನಕಲಿ ದಾಖಲೆಗಳನ್ನು ಸೃಷ್ಟಿಸಿ ಆನ್‌ಲೈನ್‌ನಲ್ಲಿ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ವಿದ್ಯಾರಣ್ಯಪುರ ಠಾಣಾ ಪೊಲೀಸರು ಬಂಧಿಸಿದ್ದಾರೆ.

ರಾಘವೇಂದ್ರ ಹಾಗೂ ಸಾಯಿತೇಜ ಬಂಧಿತರು. ಇವರಿಂದ 25 ದ್ವಿಚಕ್ರ ವಾಹನಗಳು, 6 ಮೊಬೈಲ್ ಫೋನ್‌ಗಳು, 2 ಲ್ಯಾಪ್ಟಾಪ್‌ಗಳು ಹಾಗೂ ಒಂದು ಕಲರ್ ಪ್ರಿಂಟರ್ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಆಂಧ್ರ ಪ್ರದೇಶದ ಕಡಪ ಜಿಲ್ಲೆಗಳಲ್ಲಿ ರಾತ್ರಿ ವೇಳೆ ದ್ವಿಚಕ್ರ ವಾಹನಗಳನ್ನು ಕಳವು ಮಾಡುತ್ತಿದ್ದ ಆರೋಪಿಗಳು, ಅವುಗಳನ್ನು ಹುಣಸಮಾರನಹಳ್ಳಿಯಲ್ಲಿರುವ ತಮ್ಮ ಮನೆಗೆ ತಂದು ಅಸಲಿ ಎಂಜಿನ್ ಹಾಗೂ ಚಾಸಿ ನಂಬರ್‌ಗಳನ್ನು ಟ್ಯಾಂಪರ್ ಮಾಡುತ್ತಿದ್ದರು. ನಂತರ ಸರಿಹೊಂದುವ ನಕಲಿ ಆರ್‌ಸಿ ಕಾರ್ಡ್, ಇನ್ಸೂರೆನ್ಸ್, ನಂಬರ್ ಪ್ಲೇಟ್‌ಗಳನ್ನು ಸೃಷ್ಟಿಸುತ್ತಿದ್ದರು. ಆನ್‌ಲೈನ್‌ನಲ್ಲಿ ಹಾಗೂ ಕೆಲವೊಮ್ಮೆ ನೇರವಾಗಿ ಮಾರಾಟ ಮಾಡುತ್ತಿದ್ದರು. ಇತ್ತೀಚಿಗೆ ವಿದ್ಯಾರಣ್ಯಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನಗಳ ಕಳವು ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತಿದ್ದರಿಂದ ಆರೋಪಿಗಳ ಪತ್ತೆಗಾಗಿ ವಿಶೇಷ ಪೊಲೀಸ್ ತಂಡ ರಚಿಸಲಾಗಿತ್ತು.

ಬಿಎಲ್‌ಒ ತಂತ್ರಾಂಶದ ಮೂಲಕ ಮನೆಮನೆ ಸಮೀಕ್ಷೆ

ಮತದಾರರ ಪಟ್ಟಿ ಪರಿಷ್ಕರಣೆ | ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ಹೇಳಿಕೆ

ಬೆಂಗಳೂರು: ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಸಂಬಂಧ ಬಿಎಲ್‌ಒ ತಂತ್ರಾಂಶದ ಮೂಲಕ ಮನೆಮನೆ ಸಮೀಕ್ಷೆ ಆರಂಭಿಸಲಾಗಿದೆ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದ್ದಾರೆ.

ನಗರದಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ-2025 ಸಂಬಂಧ ಪಾಲಿಕೆ ಕೇಂದ್ರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿ, ಇಂದಿನಿಂದ ಮತದಾರರ ಪಟ್ಟಿಯ ಕಾರ್ಯಚಟುವಟಿಕೆ ಆರಂಭವಾಗುತ್ತದೆ. ಪ್ರತಿವರ್ಷ 1ನೇ ಜನವರಿಗೆ 18 ವರ್ಷ ಮೇಲ್ಪಟ್ಟವರನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡಿಸಿ ಪಟ್ಟಿ ತಯಾರಿಸಿ ಪ್ರಕಟಣೆ ಮಾಡುತ್ತೇವೆ. ಅದರಂತೆ ಇಂದಿನಿಂದ 18ನೇ ಅಕ್ಟೋಬರ್‌ವರೆಗೆ ಬೂತ್‌ಮಟ್ಟದ ಅಧಿಕಾರಿಗಳು ಮನೆ ಮನೆ ಭೇಟಿ ನೀಡಿ ಸಮೀಕ್ಷೆ ನಡೆಸಲಿದ್ದಾರೆ. 29ನೇ ಅಕ್ಟೋಬರ್ 2024 ರಂದು ಪಟ್ಟಿಯ ಕರಡು ಪ್ರತಿಯನ್ನು ಪ್ರಕಟಗೊಳಿಸಲಿದ್ದು, 06ನೇ ಜನವರಿ 2025ರಂದು ಮತದಾರರ ಅಂತಿಮಪಟ್ಟಿಯನ್ನು ಪ್ರಕಟಗೊಳಿಸಲಾಗುವುದು ಎಂದು ಹೇಳಿದರು.

ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಮಾಡುವ ಸಂಬಂಧ ಮನೆಮನೆ ಸಮೀಕ್ಷೆ ವೇಳೆ ಬೂತ್ ಮಟ್ಟದಲ್ಲಿ ಹೊಸಮನೆಗಳು ಬಂದಿದ್ದರೆ, ಅಲ್ಲಿ ಯಾರ್ಯಾರು ಹೊಸಬರು ಬಂದಿದ್ದಾರೆ ಅಥವಾ ಸ್ಥಳದಲ್ಲಿದ್ದವರು ಬೇರೆ ಕಡೆ ಹೋಗಿದ್ದಾರೆ ಎಂಬ ಮಾಹಿತಿ ಪಡೆದು ಅರ್ಹರನ್ನು ಪಟ್ಟಿಯಲ್ಲಿ ಸೇರ್ಪಡೆ ಮಾಡಲಾಗುವುದು. ಬೇರೆ ಕಡೆ ಹೋಗಿರುವ ಹಾಗೂ ಮೃತಪಟ್ಟಿರುವವರನ್ನು ಮತದಾರರ ಪಟ್ಟಿಯಿಂದ ತೆಗೆಯಲಾಗುವುದು ಎಂದು ಹೇಳಿದರು.

ಮತಗಟ್ಟೆಗಳ ಪರಿಶೀಲನೆ: ನಗರದಲ್ಲಿ 9000 ಮತಗಟ್ಟೆಗಳಿದ್ದು, ಮತಗಟ್ಟೆಗಳನ್ನು ಪರಿಶೀಲನೆ ನಡೆಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದ್ದು, ಮತಗಟ್ಟೆಗಳಿಗೆ ಅನುಗುಣವಾಗಿ ಬೂತ್ ಮಟ್ಟದ ಅಧಿಕಾರಿಗಳನ್ನು ನಿಯೋಜನೆ ಮಾಡಲಾಗಿರುತ್ತದೆ. ನಿಯೋಜನೆ ಮಾಡಿರುವಂತಹ ಬೂತ್ ಮಟ್ಟದ ಅಧಿಕಾರಿಗಳು ಯಾರಾದರೂ ವರ್ಗಾವಣೆಯಾಗಿದ್ದರೆ ಅಥವಾ ಆರೋಗ್ಯ ಸಮಸ್ಯೆಯಿದ್ದರೆ ಅಂತಹವರ ಸ್ಥಳಕ್ಕೆ ಬೇರೆಯವರನ್ನು ನಿಯೋಜಿಸಿ ವಿವರಗಳುಳ್ಳ ಮಾಹಿತಿಯನ್ನು ಸಂಗ್ರಹಿಸಿ ವೆಬ್ ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ-2025 ಸಂಬಂಧ ರಾಜಕೀಯ ಪ್ರತಿನಿಧಿಗಳ ಜತೆ ಸಭೆ ನಡೆಸಿ ಮನೆಮನೆ ಸಮೀಕ್ಷೆ ಪ್ರಾರಂಭ ಹಾಗೂ ಇತರೆ ವಿಷಯಗಳ ಕುರಿತು ಮಾಹಿತಿ ನೀಡಿದರು.

ಈ ವೇಳೆ, ಚುನಾವಣಾ ವಿಭಾಗದ ವಿಶೇಷ ಆಯುಕ್ತ ಸೆಲ್ವಮಣಿ, ಅಪರ ಜಿಲ್ಲಾ ಚುನಾವಣಾಧಿಕಾರಿಗಳಾದ ಸ್ನೇಹಲ್, ದಯಾನಂದ್, ಅವಿನಾಶ್ ಮೆನನ್ ರಾಜೇಂದ್ರನ್, ಚುನಾವಣಾ ವಿಭಾಗದ ಸಹಾಯಕ ಆಯುಕ್ತ ಶರಣಪ್ಪ, ರಾಜಕೀಯ ಪ್ರತಿನಿಧಿಗಳು, ಅಧಿಕಾರಿಗಳು ಇದ್ದರು.

ವಿಶ್ವ ಛಾಯಾಗ್ರಾಹಕ ದಿನಾಚರಣೆ ಅಂಗವಾಗಿ ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ಆಫ್ ಬೆಂಗಳೂರು ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಆಯೋಜಿಸಿದ್ದ 25ನೇ ವರ್ಷದ ವಾರ್ಷಿಕ ಫ್ರೋಜನ್ ಮೆಮೋರಿಸ್ 2024 ಛಾಯಾಚಿತ್ರ ಪ್ರದರ್ಶನದಲ್ಲಿ ಸಚಿವ ಎಚ್.ಸಿ ಮಹದೇವಪ್ಪ ಛಾಯಾಚಿತ್ರಗಳನ್ನು ವೀಕ್ಷಿಸಿದರು.

2 ದಿನ ಮಳೆ ಮುಂದುವರಿಕೆ

ಬೆಂಗಳೂರು: ನಗರದ ಹಲವೆಡೆಗಳಲ್ಲಿ ಮಂಗಳವಾರ ಸಂಜೆ ಭಾರೀ ಮಳೆಯಾಗಿದ್ದು, ಮುಂದಿನ ಎರಡು ದಿನಗಳ ಕಾಲ ಮಳೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಮಂಗಳವಾರ ಬೆಳಗ್ಗೆಯಿಂದಲೂ ನಗರದಲ್ಲಿ ಮೋಡ ಕವಿದ ವಾತಾವರಣವಿತ್ತು. ಸಂಜೆ ವೇಳೆಗೆ ವಿವಿಧ ಬಡಾವಣೆಯಲ್ಲಿ ಮಳೆ ಆರಂಭವಾಗಿದೆ. ವಿಧಾನಸೌಧ, ಶಿವಾಜಿನಗರ, ಕಬ್ಬನ್‌ಪಾರ್ಕ್, ವರ್ತೂರು, ಕಸ್ತೂರಬಾ ರಸ್ತೆ ಸೇರಿದಂತೆ ಮೆಜೆಸ್ಟಿಕ್ ಸುತ್ತಮುತ್ತ ಮಳೆಯಾಗಿದೆ. ಸದಾಶಿವನಗರ ಪೊಲೀಸ್ ಠಾಣೆ ಮುಂಭಾಗ ಮರವೊಂದು ಧರೆಗುರುಳಿದ್ದು, ಮರ ಬಿದ್ದ ಪರಿಣಾಮ ರಸ್ತೆಯಲ್ಲಿ ನಿಂತಿದ್ದ ಒಂದು ಕಾರು ಜಖಂಗೊಂಡಿದೆ. ಬಿಬಿಎಂಪಿ ಸಿಬ್ಬಂದಿ ಬರಲು ತಡವಾದ ಹಿನ್ನೆಲೆಯಲ್ಲಿ ಪೊಲೀಸರೇ ಮರ ತೆರವು ಕಾರ್ಯಾಚರಣೆ ನಡೆಸಿದರು. ಬೃಹತ್ ಮರ ತೆರವು ಮಾಡಿ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

6ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, 4ನೇ ಬ್ಲಾಕ್, ಜಯನಗರ, ಬೆಂಗಳೂರು- 560 011, ದೂರವಾಣಿ : 080-26632973

2024-25ನೇ ಸಾಲಿಗೆ ನಿಗಮದ ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನ

ಉದ್ಯೋಗಿನಿ ಯೋಜನೆ

ಮಹಿಳೆಯರು ಆದಾಯ ಉತ್ಪನ್ನಕರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಸ್ವಯಂ ಉದ್ಯೋಗಿಗಳಾಗಲು ಬ್ಯಾಂಕುಗಳ ಮೂಲಕ ಸಾಲ ಮತ್ತು ನಿಗಮದ ಮೂಲಕ ಸಹಾಯಧನ ನೀಡಲಾಗುತ್ತಿದೆ. ವಯೋಮಿತಿ 18 ರಿಂದ 55 ವರ್ಷಗಳು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ :
ಆದಾಯ ಮಿತಿ : ರೂ. 2.00 ಲಕ್ಷಗಳು
ಘಟಕ ವೆಚ್ಚ : ಕನಿಷ್ಟ ರೂ. 1.00 ಲಕ್ಷದಿಂದ ಗರಿಷ್ಟ ರೂ. 3.00 ಲಕ್ಷಗಳು
ಸಹಾಯಧನ ಶೇ. 50 ರಷ್ಟು

ಸಾಮಾನ್ಯ ವರ್ಗ :
ಆದಾಯ ಮಿತಿ : ರೂ. 1.50 ಲಕ್ಷಗಳು
ಘಟಕ ವೆಚ್ಚ : ಗರಿಷ್ಟ ರೂ. 3.00 ಲಕ್ಷಗಳು
ಸಹಾಯಧನ ಶೇ.30 ರಷ್ಟು

ಚೇತನ ಯೋಜನೆ

ದಮನಿತ ಮಹಿಳೆಯರಿಗೆ ಆದಾಯೋತ್ಪನ್ನ ಚಟುವಟಿಕೆ ಕೈಗೊಳ್ಳಲು ರೂ. 30,000/- ಗಳ ಪ್ರೋತ್ಸಾಹಧನ ನೀಡಲಾಗುತ್ತದೆ. ವಯೋಮಿತಿ 18 ವರ್ಷ ಮೇಲ್ಪಟ್ಟು.

ಧನಶ್ರೀ ಯೋಜನೆ

ಮಹಿಳೆಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ರೂ. 30,000/-ಗಳ ಪ್ರೋತ್ಸಾಹ ಧನ ನೀಡಲಾಗುತ್ತದೆ. ವಯೋಮಿತಿ 18 ರಿಂದ 60 ವರ್ಷಗಳು.

ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ

ಆದಾಯೋತ್ಪನ್ನ ಚಟುವಟಿಕೆ ಕೈಗೊಳ್ಳಲು ರೂ. 30,000/- ಗಳ ಪ್ರೋತ್ಸಾಹಧನ ನೀಡಲಾಗುತ್ತದೆ.

ಮಾಜಿ ದೇವದಾಸಿ ಮಹಿಳೆಯರ ಪುನರ್ವಸತಿ ಯೋಜನೆ

1993-94 & 2007-08 ರ ಸಮೀಕ್ಷೆಯಲ್ಲಿ ಗುರುತಿಸಿರುವ ಮಾಜಿ ದೇವದಾಸಿ ಮಹಿಳೆಯರಿಗೆ ಆದಾಯೋತ್ಪನ್ನ ಚಟುವಟಿಕೆ ಕೈಗೊಳ್ಳಲು ರೂ. 30,000/- ಗಳ ಪ್ರೋತ್ಸಾಹಧನ ನೀಡಲಾಗುತ್ತದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರಾದ **ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳಕರ್** ರವರು ಮಾನ್ಯ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ **ಶ್ರೀಮತಿ ಜಿ. ಪದ್ಮಾವತಿ** ರವರೊಂದಿಗೆ ಚರ್ಚಿಸುತ್ತಿರುವುದು.

ವಿಶೇಷ ಸೂಚನೆ :
- ಅರ್ಜಿದಾರರು ತಮ್ಮ ಬ್ಯಾಂಕ್ ಖಾತೆಗೆ ಆಧಾರ್ ಸೀಡಿಂಗ್ ಮಾಡಿಸಿರಬೇಕು.
- ಉದ್ಯೋಗಿನಿ ಯೋಜನೆಯ SCSP/TSP ಬಳಕೆಯಾಗದ (Unspent) ಅನುದಾನದಡಿ ಸೌಲಭ್ಯ ಪಡೆಯಲು ಇಚ್ಛಿಸುವ ಫಲಾಪೇಕ್ಷಿಗಳು / ಅರ್ಜಿದಾರರು ಸಹ ಸೇವಾ ಸಿಂಧು ಪೋರ್ಟಲ್ ನಲ್ಲಿ ಅರ್ಜಿ ಸಲ್ಲಿಸುವುದು.
- ಈ ಎಲ್ಲಾ ಯೋಜನೆಗಳಿಗೆ ಅರ್ಜಿಗಳು ಸೇವಾಸಿಂಧು ಪೋರ್ಟಲ್ https://sevasindhu.karnataka. gov.in ನಲ್ಲಿ ಲಭ್ಯವಿರುತ್ತದೆ.
- ಫಲಾಪೇಕ್ಷಿಗಳು/ಅರ್ಜಿದಾರರು ಬಾಪೂಜಿ ಸೇವಾ ಕೇಂದ್ರ, ಗ್ರಾಮ ಒನ್, ಬೆಂಗಳೂರು ಒನ್, ಕರ್ನಾಟಕ ಒನ್ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸುವುದು.
- ಸರ್ಕಾರದ ವಿವೇಚನಾ ಕೋಟಾ ಮತ್ತು ನಿಗಮದ ವಿವೇಚನಾ ಕೋಟಾದಡಿ ಸೌಲಭ್ಯ ಪಡೆಯಲು ಇಚ್ಛಿಸುವ ಫಲಾಪೇಕ್ಷಿಗಳು/ಅರ್ಜಿದಾರರು ಮಾನ್ಯ ಸಚಿವರು/ಮಾನ್ಯ ಶಾಸಕರು, ಕರ್ನಾಟಕ ಸರ್ಕಾರ/ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಇವರ ಶಿಫಾರಸ್ಸು ಪತ್ರ ಪಡೆದು ಸೇವಾ ಸಿಂಧು ಪೋರ್ಟಲ್ ನಲ್ಲಿ ಅರ್ಜಿ ಸಲ್ಲಿಸುವುದು.
- 2023-24ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿ ಸೌಲಭ್ಯ ಪಡೆಯದೇ ಇರುವವರು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅಗತ್ಯವಿರುವುದಿಲ್ಲ.

https://sevasindhu.karnataka.gov.in
ಗ್ರಾಮ ಒನ್
KARNATAKA One
BANGALORE One

ಅರ್ಜಿ ಸಲ್ಲಿಸಲು ದಿನಾಂಕ : 21.08.2024 ರ ಬೆಳಿಗ್ಗೆ 10.00 ಗಂಟೆಯಿಂದ 21.09.2024 ರ ಸಂಜೆ 5.30 ಗಂಟೆಯವರೆಗೆ ಅವಕಾಶ ಕಲ್ಪಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲೆಯ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲೆಯ ಅಭಿವೃದ್ಧಿ ನಿರೀಕ್ಷಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಕಛೇರಿ ಅಥವಾ ನಿಗಮದ ವೆಬ್ ಸೈಟ್ (https://kswdc.karnataka.gov.in) ಸಂಪರ್ಕಿಸುವುದು.

ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

ಸರ್ಕಾರದ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

"ದೇಶದ ಕಾಡು, ವನ್ಯಜೀವಿ, ನದಿಗಳು ಸೇರಿ ಪರಿಸರ ಉಳಿಸುವುದು" - ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.

ಸಮಾಚಾರ ಸಣ್ಣದಲ್ಲ

ಮೈಸೂರು: ಹಾಸ್ಟೆಲ್ ವಿದ್ಯಾರ್ಥಿನಿ ಸಾವು

ಮೈಸೂರು: ದಕ್ಷಾ ಕಾಲೇಜಿನ ಹಾಸ್ಟೆಲ್‌ನಲ್ಲಿ ಪಿಯುಸಿ ವಿದ್ಯಾರ್ಥಿನಿ ಅನುಮಾನಾಸ್ಪದವಾಗಿ ಮೃತಪಟ್ಟ ಘಟನೆ ನಡೆದಿದೆ. ಹೂಟಗಳ್ಳಿಯಲ್ಲಿರುವ ದಕ್ಷಾ ಪಿಯು ಕಾಲೇಜಿನ ಜಯಪ್ರಾರ್ಥನಾ (17) ಮೃತ ವಿದ್ಯಾರ್ಥಿನಿ. ದ್ವಿತೀಯ ಪಿಯುಸಿ ಓದುತ್ತಿದ್ದ ಜಯ ಪ್ರಾರ್ಥನ, ಮೂಲತಃ ಮಂಡ್ಯ ಜಿಲ್ಲೆಯ ನಾಗಮಂಗಲದವರು. ಭಾನುವಾರ ಊಟದ ನಂತರ ಪ್ರಾರ್ಥನಾ ಆರೋಗ್ಯದಲ್ಲಿ ಏರುಪೇರಾ ಗಿದೆ. ಆಡಳಿತ ಮಂಡಳಿ ತಕ್ಷಣ ಚಿಕಿತ್ಸೆ ಕೊಡಿಸಿದೆ. ಆದರೆ, ಆಕೆಯ ಅನಾರೋಗ್ಯ ವಿಚಾರವನ್ನು ಪೋಷಕರ ಗಮನಕ್ಕೆ ತರದೇ ನಿರ್ಲಕ್ಷ್ಯ ತೋರಿದೆ. ಮರುದಿನ ಸೋಮವಾರ ಮತ್ತೆ ಏರುಪೇರಾದಾಗ ಪೋಷಕರಿಗೆ ವಿಷಯ ಮುಟ್ಟಿಸಿದೆ. ಆದರೆ, ಪೋಷಕರು ಬರುವ ಮುನ್ನವೇ ಜಯಪ್ರಾರ್ಥನಾ ಮೃತಪಟ್ಟಿದ್ದಾರೆ.

ಮಗಳ ಸಾವಿಗೆ ಕಾಲೇಜು ಆಡಳಿತ ಮಂಡಳಿಯೇ ಕಾರಣ ಎಂದು ಆರೋಪಿಸಿದ ಪೋಷಕರು, ಈ ಕುರಿತು ಮೈಸೂರಿನ ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಿದ್ದಾರೆ.

ಎಚ್‌ಡಿಕೆಗೂ ಪ್ರಾಸಿಕ್ಯೂಷನ್ ಸಂಕಟ

← ಮೊದಲಪುಟದಿಂದ

ಆದರೆ ಸಿದ್ದರಾಮಯ್ಯ ಅವರ ರಾಜಕೀಯ ಜೀವನಕ್ಕೆ ಮಸಿ ಬಳಿಯಬೇಕು, ಸರಕಾರವನ್ನು ಅಸ್ಥಿರಗೊಳಿಸಬೇಕು ಎನ್ನುವ ಕಾರಣಕ್ಕೆ ರಾಜ್ಯಪಾಲರು ತರಾತುರಿಯಲ್ಲಿ ಅನುಮತಿಸಿದ್ದಾರೆ ಎನ್ನುವ ವಾದವನ್ನು ಮಂಡಿಸಲು ಸಿದ್ದರಾಮಯ್ಯ ಪರ ವಕೀಲರು ಸಜ್ಜಾಗಿದ್ದಾರೆ ಎನ್ನಲಾಗಿದೆ. ಇನ್ನೊಂದು ಮೂಲದ ಪ್ರಕಾರ, ಕುಮಾರಸ್ವಾಮಿ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡದಿದ್ದರೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸುವ ಸಾಧ್ಯತೆಯೂ ಇದೆ ಎನ್ನಲಾಗಿದೆ.

ಕುಮಾರಸ್ವಾಮಿ ವಿರುದ್ಧ ಗಂಭೀರ ಆರೋಪಗಳಿವೆ. ಲೋಕಾಯುಕ್ತ ಎಚ್‌ಡಿಕೆ ವಿರುದ್ಧ ಪ್ರಾಸಿಕ್ಯೂಷನ್ ಕೇಳಿದೆ. ಇದನ್ನು ತಿರುಚಿ ಕುಮಾರಸ್ವಾಮಿ ಮಾತನಾಡುತ್ತಿದ್ದಾರೆ. ಲೋಕಾಯುಕ್ತ ಚಾರ್ಜ್‌ಶೀಟ್‌ನಲ್ಲಿ ಆರೋಪವಿದೆ. ಕಾನೂನುಬಾಹಿರ ಶಿಫಾರಸು ಎಂದು ಪ್ರಸ್ತಾಪಿಸಲಾಗಿದೆ. ಚಾರ್ಜ್‌ಶೀಟ್‌ನಲ್ಲಿ ಭ್ರಷ್ಟಾಚಾರದ ಹೆಸರಿದೆ. ಅಂತಹವರು ಕೇಂದ್ರ ಮಂತ್ರಿಯಾಗಿ ಮುಂದುವರಿಯಬಹುದಾ?

- ಎ.ಎಸ್.ಪೊನ್ನಣ್ಣ ಸಿಎಂ ಕಾನೂನು ಸಲಹೆಗಾರ

10 ತಿಂಗಳಿಂದ ರಾಜ್ಯಪಾಲರು ಏಕೆ ಅನುಮತಿ ಕೊಡಲಿಲ್ಲ. ಟಿ.ಜೆ. ಅಬ್ರಹಾಂ ಕೊಟ್ಟ ದೂರಿಗೆ ಸಿಎಂಗೆ ನೋಟಿಸ್ ಕೊಡ್ತಾರೆ.

ಏನಿದು ಪ್ರಕರಣ?

ಸಮ್ಮಿಶ್ರ ಸರಕಾರದ ಅವಧಿಯಲ್ಲಿ ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಅಸ್ತಿತ್ವದಲ್ಲಿಯೇ ಇರದ ಕಂಪನಿಗೆ ಗಣಿಗಾರಿಕೆಗೆ ಅನುಮತಿ ನೀಡಲಾಗಿದೆ ಎನ್ನುವ ಆರೋಪ ಕೇಳಿಬಂದಿದೆ. ಈ ಸಂಬಂಧ ಕುಮಾರಸ್ವಾಮಿಯವರ ವಿರುದ್ಧ 1988ರ ಭ್ರಷ್ಟಾಚಾರ ತಡೆ ಕಾಯಿದೆಯನ್ವಯ ಕಾನೂನು ಕ್ರಮಕ್ಕಾಗಿ, ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ವಿಶೇಷ ತನಿಖಾ ತಂಡದ ಎಡಿಜಿಪಿ ಚಂದ್ರಶೇಖರ್ ರಾಜ್ಯಪಾಲರಿಗೆ ಪತ್ರ ಬರೆದು ಅನುಮತಿ ಕೋರಿದ್ದಾರೆ. 2023ರ ನವೆಂಬರ್ 21ರಂದು ಮೊದಲ ಬಾರಿಗೆ ಈ ಸಂಬಂಧ ಅನುಮತಿ ಕೋರಲಾಗಿತ್ತು. ಆದರೆ ರಾಜ್ಯಪಾಲರಿಂದ ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ಬಂದಿರಲಿಲ್ಲ. 2007ರ ಅಕ್ಟೋಬರ್ ಆರರಂದು ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್ ಎಂಬ ಅಸ್ತಿತ್ವದಲ್ಲಿಲ್ಲದ ಸಂಸ್ಥೆಗೆ ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನ ಭಾವಿಹಳ್ಳಿ, ತಿಮ್ಮಪ್ಪಗುಡಿಯಲ್ಲಿ 550 ಎಕರೆ ಜಾಗವನ್ನು ಗಣಿಗಾರಿಕೆಗೆ ಅಕ್ರಮವಾಗಿ ಗುತ್ತಿಗೆಗೆ ನೀಡಿರುವುದರಲ್ಲಿ ಎಚ್‌ಡಿಕೆ ಪಾತ್ರವಿದೆ ಎಂದು ತನಿಖಾ ಸಂಸ್ಥೆ ತಿಳಿಸಿದೆ. ಗುತ್ತಿಗೆ ನೀಡುವಾಗ ಮಿನರಲ್ಸ್ ಕನ್ಸೆಷನ್ ನಿಯಮಗಳ, ನಿಯಮ 59(2)ನ್ನು ಉಲ್ಲಂಘಿಸಲಾಗಿದೆ.ಕುಮಾರಸ್ವಾಮಿ ಅವರು ವಾಣಿಜ್ಯ ಮತ್ತು ಕೈಗಾರಿಕೆ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳ ಜತೆಗೂಡಿ, ಸುಳ್ಳು ದಾಖಲೆ ಸೃಷ್ಟಿಸಿದ ವಿನೋದ್ ಗೋಯಲ್‌ಗೆ 550 ಎಕರೆ ಭೂಮಿ ಮಂಜೂರು ಮಾಡಿದ್ದಾರೆ ಎಂದು ಆರೋಪಿಸಲಾಗಿದೆ. ಈ ಪ್ರಕರಣದಲ್ಲಿ ವಿನೋದ್ ಗೋಯಲ್ ಪ್ರಥಮ ಆರೋಪಿಯಾಗಿದ್ದು, ಎಚ್.ಡಿ.ಕುಮಾರಸ್ವಾಮಿ ಎರಡನೇ ಆರೋಪಿ. ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಕಾರ್ಯ ದರ್ಶಿ ಕೆ.ಜಯಚಂದ್ರ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಪ್ರಥಮ ದರ್ಜೆ ಸಹಾಯಕ ಬಿ.ಟಿ.ಜವರೇಗೌಡ ಮೂರು ಮತ್ತು ನಾಲ್ಕನೇ ಆರೋಪಿಗಳಾಗಿದ್ದಾರೆ.

ಲೋಕಾಯುಕ್ತದವರೇ ಪ್ರಾಸಿಕ್ಯೂಷನ್‌ಗೆ ಕೇಳಿದ್ದರು. ನಮ್ಮ ಒತ್ತಾಯದ ಮೇಲೆ ರಾಜ್ಯಪಾಲರು ಈಗ ಮುಂದಾಗಿದ್ದಾರೆ. ಕುಮಾರಸ್ವಾಮಿ ಪ್ರಾಸಿಕ್ಯೂಷನ್ ಬಗ್ಗೆ ನೋಡುತ್ತಿದ್ದಾರೆ. ರಾಜ್ಯಪಾಲ ಆದವರು ರಾಜಕೀಯ ಮಾಡಬಾರದು. ಕಾನೂನು ಪ್ರಕಾರವೇ ನೋಡಬೇಕು.

- ಸಲೀಂ ಅಹ್ಮದ್, ವಿಧಾನಪರಿಷತ್ ಸದಸ್ಯ

ಪ್ರತಿಪಕ್ಷ ನಾಯಕರ ವಿರುದ್ಧ ಪುರಾವೆಗಳಿವೆ. ಲೋಕಾಯುಕ್ತ ಸಂಸ್ಥೆಯವರೇ ತನಿಖೆ ಮಾಡಿದ್ದರು. ಮೇಲ್ನೋಟಕ್ಕೆ ಆರೋಪ ಇದೆ ಅಂದಿದ್ದರು. ಆದರೆ ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಟ್ಟಿಲ್ಲ. ಪಕ್ಷಪಾತ ಮಾಡುವ ರಾಜ್ಯಪಾಲರನ್ನು ವಾಪಸ್ ಕರೆಸಿಕೊಳ್ಳಬೇಕು. ರಾಜ್ಯಪಾಲರು ತಕ್ಷಣ ಕ್ರಮ ಕೈಗೊಳ್ಳಬೇಕು.

- ಈಶ್ವರ್ ಖಂಡ್ರೆ, ಸಚಿವ

ಕಿಡಿಗೇಡಿಗಳಿಂದ ಸರಕಾರಿ ಶಾಲೆ ಧ್ವಂಸ

ಹುಬ್ಬಳ್ಳಿ: 100 ವರ್ಷ ಪೂರೈಸಿದ ಶಾಲೆಯನ್ನು ಕಿಡಿಗೇಡಿಗಳು ಧ್ವಂಸಮಾಡಿದ ಘಟನೆ ಧಾರವಾಡ ಜಿಲ್ಲೆಯ ಗಿರಣಿಚಾಳ ಪ್ರದೇಶದಲ್ಲಿ ನಡೆದಿದೆ.

ಗಿರಣಿಚಾಳದ ಮೈದಾನದಲ್ಲಿರುವ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಕಟ್ಟಡವನ್ನು ಕಿಡಿಗೇಡಿಗಳು ಧ್ವಂಸ ಮಾಡಿದ್ದಾರೆ. 4 ರಿಂದ 5ನೇ ತರಗತಿಯ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದ ಕೊಠಡಿಯನ್ನು ರಾತ್ರೋರಾತ್ರಿ ದುಷ್ಕರ್ಮಿಗಳು ಕೆಡವಲಾಗಿದೆ.

ಶತಮಾನಗಳಿಂದ ನಡೆಸಿಕೊಂಡು ಬರುತ್ತಿದ್ದ ಈ ಶಾಲೆಯನ್ನು ಧ್ವಂಸ ಮಾಡಿದ್ದಕ್ಕೆ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದು, ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹಿಸಿದ್ದಾರೆ.ಜೊತೆಗೆ ತಾವು ಕಲಿತು ಹೋದ ಶಾಲೆ ಧ್ವಂಸವಾಗಿರುವುದನ್ನು ಕಂಡು ಹಳೆಯ ವಿದ್ಯಾರ್ಥಿಗಳು ಆಕ್ರೋಶ ಹೊರಹಾಕಿದ್ದಾರೆ.

ಪುರಸಭೆ ಕಾರ್ಯಾಲಯ, ಚಿಕ್ಕೋಡಿ
ತಾ ॥ ಚಿಕ್ಕೋಡಿ ಜಿ ॥ ಬೆಳಗಾವಿ

ಕ್ರಸಂ.: ಪುಸಚಿ:ಲೋಇ15ನೇ ಹ:2024–25 ದಿನಾಂಕ: 17.08.2024

("ಕೆಪಿಪಿ ಪೋರ್ಟಲ್") ಟೆಂಡರ್ ಪ್ರಕಟಣೆ – 2ನೇ ಕರೆ

(ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸುವ ಸೂಚನೆ)

ಚಿಕ್ಕೋಡಿ ಪುರಸಭೆ ವ್ಯಾಪ್ತಿಯಲ್ಲಿ ಸನ್ 2024–25ನೇ ಸಾಲಿನ 15ನೇ ಹಣಕಾಸು ಆಯೋಗದ ಅನುದಾನದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ದರ್ಜೆ ಗುತ್ತಿಗೆದಾರರಿಂದ ಐಟಂವಾರು ಶೀಲ ಬಂದ ಟೆಂಡರ್ ಗಳನ್ನು KW-3 ನಮೂನೆಯಲ್ಲಿ ಆಹ್ವಾನಿಸಲಾಗಿದೆ. **ಒಟ್ಟು ಕಾಮಗಾರಿಗಳ ಸಂಖ್ಯೆ: 1, ವಿವರಗಳು 1) ಇಂಡೆಂಟ್ ಸಂಖ್ಯೆ: 24051/call-2 ರೂ. 63.00 ಲಕ್ಷ (others). ಈ ಮೇಲೆ ತಿಳಿಸಿದ ಕಾಮಗಾರಿಗಳ ಕಾಲಮಿತಿ 3 ತಿಂಗಳು.**

ವಿವರಗಳು: 1) ಖಾಲಿ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಡೌನ್ ಲೋಡ್ ಮಾಡುವ ದಿನಾಂಕ: **17.08.2024.** 2) ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಸ್ವೀಕರಿಸುವ ಕೊನೆಯ ದಿನಾಂಕ: **25.08.2024, ಸಂಜೆ 4.00 ಗಂಟೆಯವರೆಗೆ.** 3) ತಾಂತ್ರಿಕ ಬಿಡ್ ಗಳನ್ನು ತೆರೆಯುವ ದಿನಾಂಕ: **27.08.2024 ಸಂಜೆ 5.00 ಗಂಟೆಗೆ.** 4) ಆರ್ಥಿಕ ಬಿಡ್ ಗಳನ್ನು ತೆರೆಯುವ ದಿನಾಂಕ: **28.08.2024, ಬೆಳಗ್ಗೆ 11.00 ಗಂಟೆಗೆ.** 5) ವಿಸ್ತರಿಸಬಹುದಾದ ದಿನಗಳ ಸಂಖ್ಯೆ: **2 ದಿನಗಳು.**

ಮೇಲ್ಕಾಣಿಸಿದ ಕಾಮಗಾರಿಗಳ ಎಲ್ಲಾ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **www.kppp.karnataka.gov.in** ರಿಂದ ಅಥವಾ ಪುರಸಭೆ ವೆಬ್‌ಸೈಟ್ **www.chikoditown.mrc.gov.in** ರಿಂದ ಪಡೆಯಬಹುದಾಗಿದೆ.

ಸಹಿ/– ಆಡಳಿತಾಧಿಕಾರಿ, ಪುರಸಭೆ, ಚಿಕ್ಕೋಡಿ
ಡಿಐಪಿಆರ್/ಬೆಳಗಾವಿ/657/ಮಣಿಪಾಲ್/2024–25
ಸಹಿ/– ಮುಖ್ಯಾಧಿಕಾರಿ, ಪುರಸಭೆ, ಚಿಕ್ಕೋಡಿ

ಮೈಸೂರು ರಂಗಾಯಣದ ಮುಖ್ಯಸ್ಥರಾಗಿ ಸತೀಶ್ ತಿಪಟೂರು ಮಂಗಳವಾರ ಅಧಿಕಾರ ಸ್ವೀಕರಿಸಿದರು.

ಸಂಗೊಳ್ಳಿ ರಾಯಣ್ಣ ಚಿತ್ರಕ್ಕೆ ಚಪ್ಪಲಿಹಾರ

ದುಷ್ಕರ್ಮಿಗಳ ಕೃತ್ಯಕ್ಕೆ ಜನರ ಖಂಡನೆ

ವಿಜಯಪುರ: ಸ್ವಾತಂತ್ರ್ಯ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಚಿತ್ರಕ್ಕೆ ಕಿಡಿಗೇಡಿಗಳು ಚಪ್ಪಲಿಹಾರ ಹಾಕಿ ಅಪಮಾನಿಸಿರುವ ಘಟನೆ ಜಿಲ್ಲೆಯ ಹಗರಗುಂಡ ಗ್ರಾಮದಲ್ಲಿ ನಡೆದಿದೆ. ಗ್ರಾಮದಲ್ಲಿ ಬಿಗುವಿನ ವಾತಾವರಣ ಸೃಷ್ಟಿಯಾಗಿದೆ.

ತಾಳಿಕೋಟಿ ತಾಲೂಕಿನ ಹಗರಗುಂಡದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿರುವ ರಾಯಣ್ಣ ಭಾವಚಿತ್ರಕ್ಕೆ ಕಿಡಿಗೇಡಿಗಳು ಚಪ್ಪಲಿ ಹಾರ ಹಾಕಿ ವಿಕೃತಿ ಮೆರೆದಿದ್ದಾರೆ. ಸೋಮವಾರ ತಡರಾತ್ರಿ ಘಟನೆ ನಡೆದಿರುವ ಶಂಕೆ ವ್ಯಕ್ತವಾಗಿದ್ದು, ಮಂಗಳವಾರ ಬೆಳಿಗ್ಗೆ ಕೃತ್ಯ ಬೆಳಕಿಗೆ ಬಂದಿದೆ. ಈ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ಬಿಗುವಿನ ವಾತಾವರಣ ಸೃಷ್ಟಿಯಾಗಿದ್ದು, ಸ್ಥಳೀಯ ಯುವಕರು ಚಪ್ಪಲಿಹಾರ ತೆರವುಗೊಳಿಸಿದ್ದಾರೆ. ತಾಳಿಕೋಟಿ ಠಾಣೆ ಪೊಲೀಸರು ಸ್ಥಳಕ್ಕೆ ಧಾವಿಸಿ ವಿಚಾರಣೆ ಆರಂಭಿಸಿದ್ದಾರೆ.

ತಾಲ್ಲೂಕು ಪಂಚಾಯತ್ ದೊಡ್ಡಬಳ್ಳಾಪುರ
ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ದೊಡ್ಡಬಳ್ಳಾಪುರ. ಮೊಬೈಲ್ : 94808 53105.

ಸಂಖ್ಯೆ : ಕಾ.ನಿ.ಅ./ತಾ.ಪಂ.ದೊ./ಇ.ಪ್ರೊ./ಹೊ.ಸಂ./01/2024–25
ದಿನಾಂಕ : 20–08–2024

ಅಧಿಸೂಚನೆ

2024–25 ನೇ ಸಾಲಿಗೆ (ಸೆಪ್ಟೆಂಬರ್–2024 ರಿಂದ ಮಾರ್ಚ್–2025 ರವರೆಗೆ 07 ತಿಂಗಳು) ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ದೊಡ್ಡಬಳ್ಳಾಪುರ ತಾಲ್ಲೂಕು ಪಂಚಾಯಿತಿಯಲ್ಲಿ ಖಾಲಿ ಇರುವ 02 ಡಾಟಾ ಎಂಟ್ರಿ ಆಪರೇಟರ್, 03 ಗ್ರೂಪ್ 'ಡಿ' ಮತ್ತು 01 ವಾಹನ ಚಾಲಕ ಸೇವೆಯನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ.

ವಿವರ : 1) ಟೆಂಡರ್ ಅರ್ಜಿಯನ್ನು ಸ್ವೀಕರಿಸುವ ಅಧಿಕಾರಿ : ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ದೊಡ್ಡಬಳ್ಳಾಪುರ, 2) ಟೆಂಡರ್ ಉಲ್ಲೇಖ ಮತ್ತು ಪ್ರಕಟಣೆ : ಸಂ. ಕಾನಿಅ/ತಾಪಂದೊ/ಇ.ಪ್ರೊ/ಹೊ.ಸಂ/01/2024–25, ದಿನಾಂಕ : 20–08–2024, 3) ಟೆಂಡರ್ ಅಂದಾಜು ಮೊತ್ತ : ರೂ. 7,04,023/–, (ರೂಪಾಯಿ ಏಳು ಲಕ್ಷದ ನಾಲ್ಕು ಸಾವಿರದ ಇಪ್ಪತ್ತ ಮೂರು ರೂಪಾಯಿಗಳು ಮಾತ್ರ), 4) ಇ.ಎಂ.ಡಿ. ಮೊತ್ತ : ರೂ. 17,600/– (ಹದಿನೇಳು ಸಾವಿರದ ಆರು ನೂರು ರೂಪಾಯಿಗಳು ಮಾತ್ರ), 5) ಟೆಂಡರ್ ಸಲ್ಲಿಸಲು ಪ್ರಾರಂಭಿಕ ದಿನಾಂಕ : 21–08–2024, 6) ಭರ್ತಿ ಮಾಡಿದ ಟೆಂಡರು ಫಾರಂಗಳನ್ನು ಆನ್‌ಲೈನ್ ಮೂಲಕ ಸಲ್ಲಿಕೆಗೆ ಕೊನೆಯ ದಿನಾಂಕ : 04–09–2024 ಸಾಯಂಕಾಲ 5.00 ಗಂಟೆ. 7) ಟೆಂಡರು ತೆರೆಯುವುದು. ಅ) ತಾಂತ್ರಿಕ ಲಕೋಟೆ ದಿನಾಂಕ : 09–09–2024 ಬೆಳಿಗ್ಗೆ 11.00, ಆ) ಆರ್ಥಿಕ ಲಕೋಟೆ ದಿನಾಂಕ : 11–09–2024 ಮಧ್ಯಾಹ್ನ 3.00, 8) ಕಾರ್ಯಾದೇಶ ನೀಡುವುದು : ಆರ್ಥಿಕ ಬಿಡ್ ಅನುಮೋದನೆಗೊಂಡ ನಂತರ, 9) ಇ–ಟೆಂಡರ್ ಡಾಕ್ಯುಮೆಂಟ್ ಲಭ್ಯವಾಗುವ ವೆಬ್‌ಸೈಟ್‌ನ ವಿಳಾಸ www.kppp.karnataka.gov.in, 10) ಹೆಚ್ಚಿನ ಮಾಹಿತಿಗಾಗಿ : ಕಾರ್ಯನಿರ್ವಾಹಕ ಅಧಿಕಾರಿಗಳ ಕಾರ್ಯಾಲಯ, ತಾಲ್ಲೂಕು ಪಂಚಾಯಿತಿ, ದೊಡ್ಡಬಳ್ಳಾಪುರ, ದೂರವಾಣಿ ಸಂಖ್ಯೆ : 080 – 2762 7287.

ಭರ್ತಿ ಮಾಡಿದ ಟೆಂಡರ್ ಫಾರಂನ್ನು ನಿಗದಿತ ಅವಧಿಯೊಳಗೆ ಆನ್‌ಲೈನ್ ಮೂಲಕ ಸಲ್ಲಿಸತಕ್ಕದ್ದು, ಇದಕ್ಕಾಗಿ ಟೆಂಡರ್ ನಮೂನೆ 2 & 3 ನ್ನು ಉಪಯೋಗಿಸುವುದು.

ಹೆಚ್ಚಿನ ವಿವರಗಳಿಗೆ www.kppp.karnataka.gov.in ನಲ್ಲಿ ನೋಡುವುದು.

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ದೊಡ್ಡಬಳ್ಳಾಪುರ.
ವಾಸಾಸಂಇ/ಬೆಂಗ್ರಾಜಿ/ಮಣಿಪಾಲ್/1554/2024–25

ಮಂಗಳೂರು ಮಹಾನಗರಪಾಲಿಕೆ
DMA/2024-25/EE3 ದಿನಾಂಕ: 19.08.2024

ಟೆಂಡರ್ ಪ್ರಕಟಣೆ

E-PROCUREMENT OF KARNATAKA

ಮನಪಾ ವ್ಯಾಪ್ತಿಯ ಬರುವ ವಿ.ನಂ.42 ಡೊಂಗರಕೇರಿ ವಾರ್ಡಿನ ಡೊಂಗರಕೇರಿ ವೆಂಕಟರಮಣ ದೇವಸ್ಥಾನದಿಂದ ನ್ಯೂ ಚಿತ್ರ ಟಾಕೀಸ್ ವರೆಗೆ ರಸ್ತೆ ಅಗಲೀಕರಣ ಕಾಮಗಾರಿ. ಅ.ಪ.ಟ್ಟಿ. ಮೊತ್ತ ರೂ.117.90ಲಕ್ಷ. (ಪ್ರೀಮಿಯಂ ಎಫ್.ಎ.ಆರ್ ಅನುದಾನ) DMA/ 2024-25/WORK INDENT NO.24908 ಮತ್ತು ಸಾಮಾನ್ಯ ಅನುದಾನದಲ್ಲಿ WORK INDENT NO.24414, 24427, 24436 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 04.09.2024. ಹೆಚ್ಚಿನ ವಿವರವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮುಖಾಂತರ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಮಹಾನಗರಪಾಲಿಕೆ, ಮಂಗಳೂರು
DIPR / MNG / 461 / MPL / 24-25

ದಸರಾ ಸಿದ್ಧತೆ: ಇಂದು ಗಜಪಯಣಕ್ಕೆ ಚಾಲನೆ

ಮೈಸೂರು: ವಿಶ್ವ ವಿಖ್ಯಾತ ದಸರಾ ಜಂಬೂ ಸವಾರಿಯಲ್ಲಿ ಪ್ರಧಾನ ಆಕರ್ಷಣೆಯಾದ ಆನೆಗಳನ್ನು ಸಾಂಪ್ರದಾಯಿಕ ವಾಗಿ ಕಾಡಿನಿಂದ ನಾಡಿಗೆ ಬೀಳ್ಕೊಡಲು ಆಗಸ್ಟ್ 21ರಂದು ವೀರನಹೊಸಳ್ಳಿಯಲ್ಲಿ ವಿಧ್ಯುಕ್ತವಾಗಿ ಗಜಪಯಣ ಆಯೋಜಿಸಲಾಗಿದೆ ಅಭಿಮನ್ಯು ನೇತೃತ್ವದಲ್ಲಿ 9 ಆನೆಗಳಿಗೆ ಪೂಜೆ ಸಲ್ಲಿಸುವ ಮೂಲಕ ಗಜಪಯಣಕ್ಕೆ ನಾಂದಿ ಹಾಡಲಾಗುವುದು. ನಂತರ ಎರಡನೇ ಹಂತದಲ್ಲಿ 5 ಆನೆಗಳು ಬರಲಿದ್ದು, 4 ಆನೆಗಳನ್ನು ತುರ್ತು ಮೀಸಲಿಟ್ಟುಕೊಳ್ಳಲಾಗುತ್ತಿದೆ. ವೀರನಹೊಸಹಳ್ಳಿಯಿಂದ ಹೊರಡುವ ಆನೆಗಳ ತಂಡ ಸಂಜೆ ವೇಣಲೆಗೆ ಮೈಸೂರಿನ ಅರಣ್ಯ ಭವನದ ಆವರಣಕ್ಕೆ ಆಗಮಿಸಲಿದೆ. ಬುಧವಾರ ಬೆಳಗ್ಗೆ 10.20ರಿಂದ 10.45ರೊಳಗಿನ ಶುಭ ಮುಹೂರ್ತದಲ್ಲಿ ಗಜಪಡೆಗೆ ಪುಷ್ಪಾರ್ಚನೆ ನಡೆಯಲಿದೆ. ಅರಣ್ಯ ಸಚಿವ ಈಶ್ವರ್ ಖಂಡ್ರೆ, ಜಿಲ್ಲಾ ಉಸ್ತುವಾರಿ ಸಚಿವ ಡಾ. ಮಹದೇವಪ್ಪ, ಸ್ಥಳೀಯ ಶಾಸಕರು ಭಾಗವಹಿಸಲಿದ್ದಾರೆ.

ಜಲಾಶಯಗಳ ಮಟ್ಟ

ಜಲಾಶಯ	ಗರಿಷ್ಠಮಟ್ಟ	ಇಂದಿನಮಟ್ಟ	ಒಳಹರಿವು
ಕೆಆರ್‌ಎಸ್	124.80	123.56	10,393
ಕಬಿನಿ	2284	2,282.32	3,474
ಹಾರಂಗಿ	2859	2,857.61	1,507
ಹೇಮಾವತಿ	2922	2,920.83	4,896
ತುಂಗಭದ್ರಾ	1633	1,625.13	31,033
ಆಲಮಟ್ಟಿ	1,704.81	1,704.70	31,968
ನಾರಾಯಣಪುರ	1,615	1,614.97	27,631
ಲಿಂಗನಮಕ್ಕಿ	1,819.12	1,816.80	8,811

ಬ್ಲೇಡ್‌ನಿಂದ ಹಲ್ಲೆ: ಬಾಲಕನ ಸೆರೆ

ಪುತ್ತೂರು: ಪುತ್ತೂರಿನ ಕೊಂಬೆಟ್ಟು ಎಂಬಲ್ಲಿ ಅಪ್ರಾಪ್ತ ವಯಸ್ಸಿನ ಹಿಂದೂ ಬಾಲಕನೊಬ್ಬ ಮುಸ್ಲಿಂ ಬಾಲಕಿಯ ಕೈಗೆ ಬ್ಲೇಡ್ ನಿಂದ ಕೊಯ್ದು ಪರಾರಿಯಾಗಿದ್ದಾನೆ. ಈ ಘಟನೆ ಬೆನ್ನಲ್ಲೇ ಕೆಲಕಾಲ ಬಿಗುವಿನ ಪರಿಸ್ಥಿತಿ ನಿರ್ಮಾಣವಾಗಿತ್ತು.

ನಿನ್ನನ್ನು ಪ್ರೀತಿಸುತ್ತೇನೆ ಎಂದು ಹೇಳಿದ ಬಾಲಕನಿಗೆ ವಿದ್ಯಾರ್ಥಿನಿ ಬೈದಿದ್ದಾಳೆ. ಇದರಿಂದ ಸಿಟ್ಟಿಗೆದ್ದ ಬಾಲಕ ಬಾಲಕಿಯ ಕೈಗೆ ಬ್ಲೇಡ್‌ನಿಂದ ಹಲ್ಲೆ ಮಾಡಿ ಪರಾರಿಯಾಗಿದ್ದಾನೆ. ಬಾಲಕಿಯನ್ನು ಸರಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಬಾಲಕನನ್ನು ಬಂಧಿಸಲಾಗಿದೆ.

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ
ಕ್ರಮಾಂಕ:ಶಿಮನಪಾಶಿ:ಕಾವಿ:ಟೆಂಡರ್:14/2024-25 ದಿನಾಂಕ:16.08.2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999 ಆಕ್ಟ್ ಹಾಗೂ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಏಕ-ಲಕೋಟೆ ಟೆಂಡರ್ ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ವಿವರಗಳನ್ನು ವೆಬ್‌ಸೈಟ್ www.kppp.karnataka.gov.in ನಲ್ಲಿ ಪಡೆದುಕೊಳ್ಳಬಹುದು.

(1) ಇ ಪ್ರಕ್ಯೂರ್ ಮೆಂಟ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **30.08.2024 (ಸಂಜೆ 4.00 ಗಂಟೆಗೆ).** (2) ಇ-ಪ್ರಕ್ಯೂರ್ ಮೆಂಟ್ ಮೂಲಕ ಟೆಂಡರ್‌ನ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: **31.08.2024 (ಸಂಜೆ 4.30 ಗಂಟೆಗೆ)** (3) ಹೆಚ್ಚಿನ ವಿವರಗಳನ್ನು ಇ–ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೇ ವಿವರಗಳನ್ನು ಕಛೇರಿಯ ಸೂಚನಾ ಫಲಕದಲ್ಲಿ ಪಡೆಯಬಹುದಾಗಿದೆ. (4) ಕಾಮಗಾರಿ ಪೂರೈಸುವ ಅವಧಿ : **04 ತಿಂಗಳುಗಳು.** (5). ಅನುದಾನ : **2007-08, 2008-09 ಹಾಗೂ 2009-10ನೇ ಸಾಲಿನ ಪ್ರಕೃತಿ ವಿಕೋಪ ಪರಿಹಾರದ ಅನುದಾನ, 2024-25ನೇ ಸಾಲಿನ ಮಹಾನಗರಪಾಲಿಕೆ ಸಾಮಾನ್ಯ ನಿಧಿ ಅನುದಾನ, 2009-10ನೇ ಸಾಲಿನ ಪ್ರಕೃತಿ ವಿಕೋಪ ಪರಿಹಾರದ ಅನುದಾನ, 2024-25ನೇ ಸಾಲಿನ 15ನೇ ಹಣಕಾಸು ಅನುದಾನ, 2021-22ನೇ ಸಾಲಿನ 15ನೇ ಹಣಕಾಸು ಉಳಿತಾಯ ಅನುದಾನ ಮತ್ತು 2021-22ನೇ ಸಾಲಿನ 15ನೇ ಹಣಕಾಸು ಆಯೋಗದ MPC (MILLION PLUS CHALLENGE) ಅನುದಾನ** (6) ಪರಿಶಿಷ್ಟ ಜಾತಿಯ ಗುತ್ತಿಗೆದಾರರು ಭಾಗವಹಿಸಬಹುದಾದ ಕಾಮಗಾರಿಗಳು **:18059, 18743/CALL-2.** (7) ಪರಿಶಿಷ್ಟ ಪಂಗಡದ ಗುತ್ತಿಗೆದಾರರು ಭಾಗವಹಿಸಬಹುದಾದ ಕಾಮಗಾರಿಗಳು : **25121** (8) ಇತರೆ ಗುತ್ತಿಗೆದಾರರು ಭಾಗವಹಿಸಬಹುದಾದ ಕಾಮಗಾರಿಗಳು : **20508, SE3506, SE3507, SE3508 SE3509, SE3294, SE3505, 24996, 25739, 23360/CALL-2, 20421/CALL-2, 21761/CALL-2, 20053/CALL-2**

ಸೂಚನೆ : ಟೆಂಡರ್‌ಗೆ ಸಂಬಂಧಪಟ್ಟ ಯಾವುದೇ ರೀತಿಯ ಬದಲಾವಣೆ ಅಥವಾ ತಿದ್ದುಪಡಿಯನ್ನು ಇ–ಪೋರ್ಟಲ್ ಮುಖಾಂತರ ಸೂಚಿಸಲಾಗುವುದು.

ವಾ.ಸಾ.ಸಂ.ಇ./ಶಿ/ನಂ.105-08 ಝೇಂಕಾರ್/2024-25
ಸಹಿ/–ಕಾರ್ಯಪಾಲಕ ಅಭಿಯಂತರರು, ಶಿವಮೊಗ್ಗ ಮಹಾನಗರ ಪಾಲಿಕೆ ಶಿವಮೊಗ್ಗ

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಅರಕಲಗೂಡು, ಹಾಸನ ಜಿಲ್ಲೆ–573102
ಫೋ.ನಂ.220350 **E-mail: ka.arkalgudu.tp@gmail.com**
ನಂ:ಅ.ಪ.ಪಂ/ಕಿ.ಅ/ಟೆಂಡರ್/ಎಸ್.ಎಫ್.ಸಿ//15ನೇ ಹಣಕಾಸು/03/2024–25 ದಿನಾಂಕ:19/08/2024

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರಮೆಂಟ್ ಮೂಲಕ ಮಾತ್ರ)

ಅರಕಲಗೂಡು ಪಟ್ಟಣ ವ್ಯಾಪ್ತಿಯಲ್ಲಿ 2023–24 ನೇ ಸಾಲಿನ 15ನೇ ಹಣಕಾಸು ಯೋಜನೆಯ ಅನುದಾನದಲ್ಲಿ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣ ಪಾರದರ್ಶಕತೆ ಆಧ್ಯಾದೇಶ 2000 ರಂತೆ ಹಾಗೂ STANDARD TENDER DOCUMENT ಸರ್ಕಾರದ ಅದೇಶ ಸಂಖ್ಯೆ: ಎಫ್.ಡಿ/06/ಪಿಸಿಎಲ್/2006, ಬೆಂಗಳೂರು ರಂತೆ ದ್ವಿಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಐಟಂವಾರು ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ http://kppp.karnataka.gov.in ನ್ನು ಅಥವಾ ಕಚೇರಿಯ ಅಭಿಯಂತರರ ಶಾಖೆಯನ್ನು ಸಂಪರ್ಕಿಸಬಹುದಾಗಿದೆ. 1.ಖಾಲಿ ಟೆಂಡರ್ ಪಾರಂಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪ್ರಕಾರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ: 03/09/2024 ರಂದು ಸಂಜೆ 5.30 ಗಂಟೆ 2.ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 05/09/2024 ರ ಬೆಳಗ್ಗೆ 11.00 ಗಂಟೆ 3.ಆರ್ಥಿಕ ಬಿಡ್ ತೆರೆಯುವ ದಿನಾಂಕ: 09/09/2024 ರ ಬೆಳಗ್ಗೆ 11.00 ಗಂಟೆ ಕ್ರ.ಸಂ. 1)ವಿವರ DMA/ 2024-25/IND2705 ಕಾಯ್ದಿರಿಸಿದ ಮೊತ್ತ (ರೂ.ಲಕ್ಷಗಳಲ್ಲಿ) 5.50 2)ವಿವರ DMA/2024-25/IND2701 ಕಾಯ್ದಿರಿಸಿದ ಮೊತ್ತ (ರೂ.ಲಕ್ಷಗಳಲ್ಲಿ) 24.30

ಸಹಿ/–ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಅರಕಲಗೂಡು
ವಾಸಾಸಂಇ/ಹಿಸನಿ/ಹಾಸನ/320/ಕೆಎಸ್ಎಂಸಿಎ/2024–25

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.
ಸಂಖ್ಯೆ: ಕಾಇಂ:ಲೋವಿಚಿ:ಜೆಇ–2:ಟೆಂಡರ್–06:2024–25 ದಿನಾಂಕ: 19.08.2024

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಏಕ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಅರ್ಹ ಗುತ್ತಿಗೆದಾರರು ವೆಬ್‌ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.

ಕಾಮಗಾರಿಗಳ ವಿವರ:– ಇ– ಪ್ರೊಕ್ಯೂರ್‌ಮೆಂಟ್ ಮೂಲಕ– ಏಕ ಲಕೋಟೆ ಪದ್ಧತಿ ಸಾಮಾನ್ಯ:– ಲೆಕ್ಕ ಶೀರ್ಷಿಕೆ: 3054–03–337–0–05–200 ರಾಜ್ಯ ಹೆದ್ದಾರಿ ನಿರ್ವಹಣೆ (1) ಹೊಳಲ್ಕೆರೆ ತಾಲ್ಲೂಕು ರಾ.ಹೆ–47 ಮಂಡ್ಯ–ಹಡಗಲಿ ರಾ.ಹೆ–47 ಕಿ.ಮೀ 240.80 ರಿಂದ 244.97, ಕಿ.ಮೀ 245.74 ರಿಂದ 247.60 , ಕಿ.ಮೀ 247.92 ರಿಂದ 251.80, ಕಿ.ಮೀ 252.09 ರಿಂದ 257.40 ಮತ್ತು ಕಿ.ಮೀ 258.30 ರಿಂದ 267.30ರವರೆಗೆ ವಾರ್ಷಿಕ ನಿರ್ವಹಣೆ. (ವ.ಇಂ. 13320)/2ನೇ ಕರೆ.

ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):– 18.00

ಕಾಮಗಾರಿಗಳ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ. **(1)** ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 23–08–2024 ಸಮಯ 17–30 **(2)** ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ 26–08–2024 ಸಮಯ 16–00 **(3)** ಆರ್ಥಿಕ ಬಿಡ್ ತೆರೆಯುವ ದಿನಾಂಕ:– 27–08–2024 ಸಮಯ 16–15 ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.

DIPR/CTA/KSMCA/202/2024-25
ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಚಿತ್ರದುರ್ಗ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU–104/1098/2024–25 ದಿನಾಂಕ:19.08.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಜಮೀನನ್ನು ಅರ್ಜಿದಾರರು ವ್ಯವಸಾಯ ಭೂಉಪಯೋಗ ವಲಯದಿಂದ ವಸತಿ ಭೂಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಜಾಯ್.ಕೆ.ಪಿ. ಬಿನ್ ಪ್ರಭಾಕರನ್	ಆನೇಕಲ್	ಸರ್ಜಾಪುರ	ಹಲಸಹಳ್ಳಿ ತಿಪ್ಪಸಂದ್ರ	64/3	1–00	ವ್ಯವಸಾಯ	ವಸತಿ

ಷರಾ: ಈ ಜಮೀನಿನಲ್ಲಿ ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ. ಪ್ರಶ್ನಿತ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತವಾದ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯ ಜಾಗಗಳು, ಉದ್ಯಾನವನಗಳು, ಸಾರ್ವಜನಕರಿಗೆ ಲಭ್ಯವಾಗುತ್ತದೆ. ಕಾನೂನುಬದ್ಧವಾದ ನಿವೇಶನಗಳು ಸಾರ್ವಜನಿಕರಿಗೆ ಲಭ್ಯವಾಗುತ್ತದೆ ಎಂದು ಅರ್ಜಿದಾರರು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU–113/1096/2024–25 ದಿನಾಂಕ:19.08.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಭೂಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಮೆ॥ ಪ್ರಜ್ಞಾ ಕನ್‌ಸ್ಟ್ರಕ್ಷನ್ಸ್‌ರವರ ಪ್ರತಿನಿಧಿ ವ್ಯವಸ್ಥಾಪಕ ಪಾಲುದಾರರಾದ ಶ್ರೀ ವೆನ್ನಾ ವೆಂಕಟರಮಣ ರೆಡ್ಡಿ	ಬೆಂಗಳೂರು ಪೂರ್ವ	ಬಿದರಹಳ್ಳಿ	ಆದೂರು	143	5–00	ವ್ಯವಸಾಯ	ವಸತಿ

ಷರಾ: ಅರ್ಜಿದಾರರು ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಶಾಲೆಯ ಹಾಲಿನಪುಡಿ ಮನೆಗೆ: ಸಿಕ್ಕಿಬಿದ್ದ ಮುಖ್ಯ ಶಿಕ್ಷಕ

ಮೈಸೂರು: ಮಕ್ಕಳ ಅಪೌಷ್ಟಿಕತೆ ಹೋಗಲಾಡಿಸಲು ಸರಕಾರಿ ಶಾಲೆಯ ಮಕ್ಕಳಿಗೆ ನೀಡುತ್ತಿದ್ದ ಹಾಲಿನಪುಡಿಯನ್ನು ಮನೆಗೆ ಕೊಂಡೊಯ್ಯುತ್ತಿದ್ದ ಮುಖ್ಯ ಶಿಕ್ಷಕ ಸ್ಥಳೀಯರ ಕೈಗೆ ಸಿಕ್ಕಿಬಿದ್ದ ಘಟನೆ ಹೆಗ್ಗಡದೇವನಕೋಟೆಯಲ್ಲಿ ನಡೆದಿದೆ.

ಪಟ್ಟಣದ ಸರಕಾರಿ ಪ್ರಾಥಮಿಕ ಬಾಲಕಿಯರ ಶಾಲೆಯ ಗಣೇಶ್ ಸಿಕ್ಕಿಬಿದ್ದ ಮುಖ್ಯ ಶಿಕ್ಷಕ. ಮಕ್ಕಳಿಗಾಗಿ ಸರಕಾರ ಉಚಿತವಾಗಿ ನೀಡುವ 10 ಹಾಲಿನಪುಡಿಯ ಪೊಟ್ಟಣಗಳನ್ನು ಶಿಕ್ಷಕ ದ್ವಿಚಕ್ರ ವಾಹನದಲ್ಲಿ ಕೊಂಡೊಯ್ಯುತ್ತಿದ್ದಾಗ ಸಿಕ್ಕಿಬಿದ್ದಿದ್ದಾನೆ.

ಹಾಲಿನ ಪ್ಯಾಕೆಟ್‌ಗಳ ಅವಧಿ ಮೀರಿದ್ದರಿಂದ ಮನೆಗೆ ಕೊಂಡೊಯ್ಯುತ್ತಿದ್ದೆ ಎಂದು ಶಿಕ್ಷಕ ಸ್ಪಷ್ಟೀಕರಣ ಕೊಡಲು ಮುಂದಾಗಿದ್ದರು. ಆದರೆ ಪ್ಯಾಕೆಟ್‌ಗಳನ್ನು ಪರಿಶೀಲಿಸಿದಾಗ ಡಿಸೆಂಬರ್ ವರೆಗೂ ಹಾಲಿನಪುಡಿ ಬಳಕೆ ಮಾಡಲು ಅವಧಿ ಇರುವುದು ಖಾತರಿಯಾಗಿದೆ.

ಪ್ರತಿ ಶುಕ್ರವಾರ
ಸಿನಿಮಾಸ್
ಜಾಸ್ತಿ ಮಾಸ್ ಜಾಸ್ತಿ ಕ್ಲಾಸ್

ಟ್ವೀಟೂ-ಖಾರಾ

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ದಲಿತರು, ಬುಡಕಟ್ಟು,ಹಿಂದುಳಿದ ಮತ್ತು ದುರ್ಬಲ ವರ್ಗಗಳ ಮೀಸಲಾತಿ ಕಿತ್ತುಕೊಳ್ಳುವ ಬಿಜೆಪಿಯ ಪ್ರಯತ್ನವನ್ನು ಕಾಂಗ್ರೆಸ್ ಪಕ್ಷದ ಸಾಮಾಜಿಕ ನ್ಯಾಯದ ಹೋರಾಟ ವಿಫಲಗೊಳಿಸಿದೆ. ಸಂವಿಧಾನದ ಶಕ್ತಿ ದುರಹಂಕಾರದ ಸರ್ವಾಧಿಕಾರಿ ಧೋರಣೆಯನ್ನು ಸೋಲಿಸಬಹುದು ಎಂಬುದಕ್ಕೆ ಲ್ಯಾಟರಲ್ ಎಂಟ್ರಿ ಹಿಂತೆಗೆದುಕೊಂಡ ಮೋದಿ ಸರಕಾರದ ನಿರ್ಧಾರ ಸಾಬೀತುಪಡಿಸಿದೆ. ಈ ಬಗ್ಗೆ ಕಾಂಗ್ರೆಸ್ ಹಾಗೂ ಇಂಡಿಯಾ ಪಕ್ಷಗಳು ನಡೆಸಿದ ಹೋರಾಟಕ್ಕೆ ಜಯ ಸಿಕ್ಕಿದೆ.

ಅವೇಶ್ ಶೇಖ್, ಮಧ್ಯಪ್ರದೇಶ

ಇದು ಸಂವಿಧಾನ ಮತ್ತು ಪ್ರಬಲ ಪ್ರತಿಪಕ್ಷದ ಶಕ್ತಿಗೆ ಸಂದ ಜಯ. ಈ ಹೋರಾಟಕ್ಕೆ ಸರ್ವಾಧಿಕಾರದ ಶಕ್ತಿಗಳು ಮಣಿಯಬೇಕಾಯಿತು.

ಸಮಾಚಾರ ಸಣ್ಣದಲ್ಲ

ಲಾರಿಗೆ ಬಸ್ ಡಿಕ್ಕಿ: ಒಬ್ಬ ಸಾವು, 6 ಮಂದಿಗೆ ಗಾಯ

ಕುಷ್ಟಗಿ: ಕುಷ್ಟಗಿ ತಾಲೂಕಿನ ಕುರಬನಾಳ ರಾಷ್ಟ್ರೀಯ ಚತುಷ್ಪಥ ಹೆದ್ದಾರಿಯಲ್ಲಿ ಬೆಳ್ಳಂಬೆಳಗ್ಗೆ ಸ್ಲೀಪರ್ ಕೋಚ್ ಬಸ್, ಚಲಿಸುವ ಲಾರಿಗೆ ಹಿಂದಿನಿಂದ ಡಿಕ್ಕಿ ಹೊಡೆದ ಪರಿಣಾಮ ಬಸ್ಸಿನಲ್ಲಿದ್ದ ಓರ್ವ ಪ್ರಯಾಣಿಕ ಸ್ಥಳದಲ್ಲೇ ಮೃತಪಟ್ಟು, 6 ಪ್ರಯಾಣಿಕರು ಗಾಯಗೊಂಡಿರುವ ಘಟನೆ ನಡೆದಿದೆ.ತಮಿಳುನಾಡು ಮೂಲದ ನಟೇಶನ್ ಮೃತ ದುರ್ದೈವಿ. ಕುಷ್ಟಗಿ-ಹೊಸಪೇಟೆ ಚತುಷ್ಪಥ ರಾಷ್ಟ್ರೀಯ ಹೆದ್ದಾರಿ ಕುರಬನಾಳ ಸಮೀಪ ಬೆಂಗಳೂರಿನಿಂದ ಗೋವಕ್ಕೆ ಹೊರಟಿದ್ದ ಬಸ್ಸು, ಮುಂದೆ ಸಾಗುತ್ತಿದ್ದ ಲಾರಿಗೆ ಡಿಕ್ಕಿ ಹೊಡೆದಿದೆ. ಸ್ಲೀಪರ್ ಕೋಚ್ ಬಸ್ ಚಾಲಕನ ಓವರ್ ಸ್ಪೀಡ್ ಹಾಗೂ ನಿದ್ದೆಯ ಮಂಪರಿನಲ್ಲಿ ಲಾರಿಗೆ ವೇಗವಾಗಿ ಡಿಕ್ಕಿ ಹೊಡೆದಿದ್ದೇ ಕಾರಣ ಎನ್ನಲಾಗುತ್ತಿದೆ.

ಅಪಹರಿಸಿ ಹಲ್ಲೆ ಇಬ್ಬರ ಬಂಧನ

ಮಂಗಳೂರು: ಫುಟ್ಬಾಲ್ ಪಂದ್ಯದ ವೇಳೆ ಕಾಲೇಜು ವಿದ್ಯಾರ್ಥಿಗಳ ನಡುವೆ ಗಲಭೆ ಉಂಟಾಗಿ, ತಂಡವೊಂದು ವಿದ್ಯಾರ್ಥಿಗಳನ್ನು ಅಪಹರಿಸಿ ಅಮಾನುಷವಾಗಿ, ಹಲ್ಲೆಗೈದ ಘಟನೆ ಮಂಗಳೂರಿನಲ್ಲಿ ನಡೆದಿದೆ. ಪ್ರಕರಣ ಸಂಬಂಧ ಮಂಗಳೂರು ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ಮಂಗಳೂರಿನ ನೆಹರೂ ಮೈದಾನದಲ್ಲಿ ಕಳೆದ ಆ.14 ರಂದು ಎರಡು ಪ್ರತಿಷ್ಠಿತ ಕಾಲೇಜು ವಿದ್ಯಾರ್ಥಿಗಳ ಮಧ್ಯೆ ಫುಟ್ಬಾಲ್ ಟೂರ್ನಮೆಂಟ್ ನಡೆದಿತ್ತು. ಈ ವೇಳೆ ತಂಡಕ್ಕೆ ಬೆಂಬಲಿಸಿದ ದ್ವೇಷದಲ್ಲಿ ಮತ್ತೊಂದು ತಂಡದ ವಿದ್ಯಾರ್ಥಿಗಳು ಇವರನ್ನು ಅಪಹರಿಸಿದ್ದಾರೆ. ಆ.19ರ ಸೋಮವಾರ ಸಂಜೆ ಇವರನ್ನು ಪಾಂಡೇಶ್ವರದ ಫೋರಂ ಮಾಲ್ ಬಳಿಯಿಂದ ಕಾರಿನಲ್ಲಿ ಅಪಹರಿಸಿದ್ದು, ಮಹಾಕಾಳಿ ಪಡ್ಪು ಎಂಬಲ್ಲಿಗೆ ಕರೆದೊಯ್ದು ಹಲ್ಲೆ ನಡೆಸಿದ್ದಾರೆಂದು ದೂರಲಾಗಿದೆ. ಆರೋಪಿಗಳು ಸಂತ್ರಸ್ತರ ಮೇಲೆ ಹಲ್ಲೆ ನಡೆಸುವಾಗ ಚಿತ್ರೀಕರಿಸಿದ್ದಾರೆ, ಹಲ್ಲೆ ನಡೆಸಿದ ನಂತರ ಸಂತ್ರಸ್ತರನ್ನು ಬಿಡಲಾಯಿತು. ದೂರಿನ ಮೇರೆಗೆ ಪಾಂಡೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತಾಂತರಕ್ಕೆ ಯತ್ನ: ಇಬ್ಬರ ಬಂಧನ

ಯಾದಗಿರಿ: ಹಿಂದು ಧರ್ಮದ ಮನೆಗಳಿಗೆ ತೆರಳಿ ಬಲವಂತವಾಗಿ ಕ್ರೈಸ್ತ ಧರ್ಮದ ಕರಪತ್ರ ಹಂಚಿ ಮತಾಂತರಕ್ಕೆ ಯತ್ನಿಸಿದ ಇಬ್ಬರು ಮಹಿಳೆಯರನ್ನು ಜನರೇ ಪೊಲೀಸರಿಗೆ ಒಪ್ಪಿಸಿದ ಘಟನೆ ಮಂಗಳವಾರ ನಡೆದಿದೆ. ನಗರದ ಲಕ್ಷ್ಮೀ ಬಡಾವಣೆಯಲ್ಲಿನ ಹಿಂದೂ ಸಮುದಾಯದ ಮನೆಗಳಿಗೆ ಆಗಮಿಸಿ ಮತಾಂತರಕ್ಕೆ ಮಾಡಲು ಮುಂದಾಗಿದ್ದ ಬೆಂಗಳೂರು ಮೂಲದ ರೇಚಲ್ ರಾಬರ್ಟ್ ಹಾಗೂ ಕರುಣಾ ಎನ್ನುವರನ್ನು ಪೊಲೀಸರಿಗೆ ಒಪ್ಪಿಸಲಾಗಿದೆ. ಹಿಂದೂ ದೇವರ ಬಗ್ಗೆ ಕೇವಲವಾಗಿ ಮಾತನಾಡಿದ್ದಾರೆ ಎನ್ನಲಾಗಿದೆ. ಭೂಮಿ ಮೇಲೆ ದೇವರು ಅಂತ ಇದ್ದರೆ ಏಸುಕ್ರಿಸ್ತ ಒಬ್ಬನೇ. ನಿಮ್ಮ ದೇವರು ನಿಮಗೆ ರಕ್ಷಣೆ ನೀಡುವುದಿಲ್ಲ. ನೀವು ಹಿಂದು ಧರ್ಮ ತ್ಯಜಿಸಿ, ಕ್ರೈಸ್ತ ಧರ್ಮಕ್ಕೆ ಬನ್ನಿ ಎಂದು ಪ್ರಚೋದನೆ ಮಾಡಿದ್ದಾರೆ.

{ **ರಮೇಶ್ ಜಿಗಜಿಣಗಿ** } ಸಂಸದ

ಸಿಎಂ ಸಿದ್ದರಾಮಯ್ಯ ಕೂಡಲೇ ರಾಜೀನಾಮೆ ನೀಡಿ ತನಿಖೆ ಎದುರಿಸಬೇಕು, ತಮ್ಮ ಪ್ರಾಮಾಣಿಕ ರಾಜಕಾರಣ ಜೀವನದ ಬದ್ಧತೆಯನ್ನು ಪ್ರದರ್ಶಿಸಬೇಕಾದ ಸಮಯ ಬಂದಿದ್ದು, ಕೂಡಲೇ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಹುದ್ದೆಯಲ್ಲಿ ಸಿದ್ದರಾಮಯ್ಯ ಮುಂದುವರಿಯುವುದು ಸರಿಯಲ್ಲ.

ಅಸಮಾನತೆ ತೊಲಗಿಸುವ ಕಾರ್ಯಕ್ರಮ ರೂಪಿಸಿದರೆ ಬಿಜೆಪಿ ಸಹಿಸಲ್ಲ | ನನ್ನನ್ನು ಕಂಡರೆ ಬಿಜೆಪಿಯವರಿಗೆ ಹೊಟ್ಟೆಕಿಚ್ಚು

ಸಮ ಸಮಾಜವನ್ನು ಬಿಜೆಪಿ ಒಪ್ಪಲ್ಲ: ಸಿಎಂ

ಬೆಂಗಳೂರು: ಅಸಮಾನತೆ ತೊಲಗಿಸುವ ಕಾರ್ಯಕ್ರಮಗಳನ್ನು ರೂಪಿಸಿದರೆ ಬಿಜೆಪಿ ಸಹಿಸಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಟೀಕಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಆಯೋಜಿಸಿದ್ದ ಸದ್ಭಾವನಾ ದಿನಾಚರಣೆ ಹಾಗೂ ಡಿ. ದೇವರಾಜ ಅರಸು ಜಯಂತಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಬಡವರ ವಿರೋಧಿಯಾಗಿವೆ. ನಾವು ಸಮಾನತೆ ತರುವ ನಿಟ್ಟಿನಲ್ಲಿ ಹೋರಾಟ ಮಾಡುತ್ತಿದ್ದೇವೆ. ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ ಎಂಬ ಕಾರಣಕ್ಕೆ ನನ್ನ ವಿರುದ್ಧ ಷಡ್ಯಂತ್ರ ರೂಪಿಸುತ್ತಿದ್ದಾರೆ ಎಂದು ಕಿಡಿಕಾರಿದರು.

ರಾಜೀವ್ ಗಾಂಧಿ ಪ್ರಧಾನಿಯಾಗಿದ್ದಾಗ ದೇಶದ ಭವಿಷ್ಯ ರೂಪಿಸುವ ಯುವಕ-ಯುವತಿಯರಿಗೆ ಹಕ್ಕು ನೀಡಿದರು. ಸಾಮಾಜಿಕ ನ್ಯಾಯದ ಪರವಾಗಿದ್ದು ಎಲ್ಲರಿಗೂ ಸಮಾನ ಅವಕಾಶ ದೊರಕಿಸಬೇಕು ಎಂಬುದು ಅವರ ಆಶಯವಾಗಿತ್ತು. ಯಾವುದೇ ಜಾತಿ, ಧರ್ಮ, ಪ್ರಾದೇಶಿಕತೆ ತಾರತಮ್ಯವಿಲ್ಲದೆ ಎಲ್ಲರೂ ಭಾರತೀಯರು ಎಂಬ ಒಗ್ಗಟ್ಟಿನ ಅಗತ್ಯವಿದೆ ಎಂಬುದು ಅವರ ಕನಸು. ಮಹಿಳೆಯರ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿದ್ದು, ಜತೆಗೆ ಸಂವಿಧಾನ ತಿದ್ದುಪಡಿ ತರುವ ಮೂಲಕ ಮಹಿಳೆಯರಿಗೆ ಸ್ಥಳೀಯ ಸಂಸ್ಥೆಗಳಲ್ಲಿ ರಾಜಕೀಯ ಮೀಸಲು ನೀಡಿದರು ಎಂದು ಹೇಳಿದರು.

ಕಾಂಗ್ರೆಸ್ ಅಸಮಾನತೆ ವಿರುದ್ಧ ಹೋರಾಟ ಮಾಡುತ್ತದೆ. ಅದಕ್ಕೆ ಬಿಜೆಪಿಯವರಿಗೆ ಸಹಿಸಲಾಗಲ್ಲ. ಅದಕ್ಕೆ ನನ್ನ ಮೇಲೆ ಮುಗಿಬಿದ್ದಿದ್ದಾರೆ. ನನ್ನ ವಿರುದ್ಧ ಸುಳ್ಳು ಆರೋಪ ಹೊರಿಸಿರುವುದರ ಹಿಂದೆ ಬಿಜೆಪಿಯವರ ಹೊಟ್ಟೆಕಿಚ್ಚು ಕೆಲಸ ಮಾಡುತ್ತಿದೆ. ಅಂತೆಯೇ ಕಾಂಗ್ರೆಸ್ ಪಕ್ಷ ಅಸಮಾನತೆಯನ್ನು ಹೋಗಲಾಡಿಸಲು ಬಯಸುತ್ತದೆ. ಈಗಲೂ ಅಸಮಾನತೆ ವಿರುದ್ಧ ಹೋರಾಟ ಮಾಡುತ್ತಿದೆ. ಅದಕ್ಕೆ ಬಿಜೆಪಿಯವರಿಗೆ ಸಹಿಸಲಾಗುತ್ತಿಲ್ಲ. ಅಸಮಾನತೆ ವಿರುದ್ಧ ಕಾರ್ಯಕ್ರಮ ನೀಡುತ್ತೇನೆಂಬ ಕಾರಣಕ್ಕೆ ಬಿಜೆಪಿ ನನ್ನನ್ನು ಸಹಿಸುತ್ತಿಲ್ಲ. ಈಗ ಗ್ಯಾರಂಟಿಗಳನ್ನು ಜಾರಿ ಮಾಡಿದ್ದಕ್ಕೆ ಹೊಟ್ಟೆಯುರಿಯಿಂದ ಮಾಡಬಾರದ್ದನ್ನೆಲ್ಲ ಮಾಡುತ್ತಿದ್ದಾರೆ. ನನ್ನ ಮೇಲೆ ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕೆಪಿಸಿಸಿ ಕಚೇರಿಯಲ್ಲಿ ಆಯೋಜಿಸಿದ್ದ ಸದ್ಭಾವನಾ ದಿನಾಚರಣೆ ಹಾಗೂ ಡಿ. ದೇವರಾಜ ಅರಸು ಜಯಂತಿಯಲ್ಲಿ ಭಾಗವಹಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜೀವ್ ಗಾಂಧಿ ಹಾಗೂ ದೇವರಾಜ ಅರಸು ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ರಾಜೀವ್ ಗಾಂಧಿ, ಅರಸರು ನಮಗೆ ಮಾರ್ಗದರ್ಶಿ

ರಾಜೀವ್ ಗಾಂಧಿ ಹಾಗೂ ದೇವರಾಜ ಅರಸರ ಬದುಕು- ಕೆಲಸಗಳು ನಮಗೆ ಮಾರ್ಗದರ್ಶಿಯಾಗಿದೆ. ಅವರ ಹಾದಿಯಲ್ಲಿ ನಾವು ನಡೆಯಬೇಕು. ರಾಜೀವ್ ಗಾಂಧಿಯವರು ಚಿಕ್ಕ ವಯಸ್ಸಿನಲ್ಲಿಯೇ ದೇಶದ ಪ್ರಧಾನಿಯಾಗಿದ್ದರು. ಅವರು ಪ್ರಧಾನಿಯಾಗಿದ್ದಾಗ ಆಧುನಿಕ ಭಾರತದ ಕನಸನ್ನು ಕಂಡಿದ್ದರು. ಯುವಜನತೆಯ ಮೇಲೆ ಅಪಾರ ವಿಶ್ವಾಸವಿಟ್ಟುಕೊಂಡಿದ್ದರು. ಅವರು ದೇಶದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಬೆಳವಣಿಗೆಗೆ ಕಾರಣಕರ್ತರಾಗಿದ್ದರು. ಯಾವಾಗಲೂ ಸಾಮಾಜಿಕ ನ್ಯಾಯದ ಪರವಿದ್ದರು. ದೇಶದಲ್ಲಿ ಬದಲಾವಣೆ ಆಗಬೇಕು. ಸಮಾನ ಅವಕಾಶ ಸಿಗಬೇಕು ಎಂದು ಹಂಬಲಿಸಿದರು. ಯಾವುದೇ ಜಾತಿ, ಧರ್ಮ, ಭಾಷೆ, ಪ್ರಾದೇಶಿಕತೆ ಭೇದ ಮರೆತು, ಎಲ್ಲೇ ಇದ್ದರೂ ಭಾರತೀಯರು ಒಗ್ಗಟ್ಟಾಗಿರಬೇಕು ಎಂಬ ಕನಸನ್ನು ಕಂಡಿದ್ದರು ಎಂದು ನೆನಪಿಸಿಕೊಂಡರು.

ದೇವರಾಜ ಅರಸು ಅವರು 1972 ರಿಂದ ದೀರ್ಘ ಕಾಲ ರಾಜ್ಯದ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದರು. ಅರಸು ಅವರನ್ನು ಸಾಮಾಜಿಕ ನ್ಯಾಯದ ಹರಿಕಾರ ಎಂದು ಕರೆಯುತ್ತೇವೆ. ಹಾವನೂರ ಆಯೋಗದ ರಚನೆ ಮಾಡಿ, ಹಿಂದುಳಿದವರಿಗೆ ಶಿಕ್ಷಣ ಉದ್ಯೋಗದಲ್ಲಿ ಮೀಸಲಾತಿ ಒದಗಿಸಿದರು; ಸಮಾಜದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾದವರನ್ನು ರಾಜಕೀಯವಾಗಿ ಗುರುತಿಸಿ, ಅವರಿಗೆ ಚುನಾವಣೆಯಲ್ಲಿ ನಿಲ್ಲಲು ಅವಕಾಶ ಕೊಟ್ಟರು. ವಿಧಾನಸೌಧದ ಮೆಟ್ಟಿಲು ಹತ್ತಲು ಸಾಧ್ಯವೇ ಇಲ್ಲ ಎಂದುಕೊಂಡವರೂ ವಿಧಾನ ಸೌಧ ಪ್ರವೇಶಿಸುವಂತೆ ಮಾಡಿದರು ಎಂದರು.

ರಾಜ್ಯಪಾಲರು ಕೇಂದ್ರದ ಪ್ರತಿನಿಧಿಯಂತೆ ಕೆಲಸ ಮಾಡಬಾರದು

ಇನ್ನು ಇದಕ್ಕೂ ಮೊದಲು ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ರಾಜ್ಯಪಾಲರು ಭಾರತದ ರಾಷ್ಟ್ರಪತಿಯವರ ಪ್ರತಿನಿಧಿಗಳಾಗಿ ಕೆಲಸ ಮಾಡಬೇಕೆ ಹೊರತು ಕೇಂದ್ರ ಸರಕಾರದ ಪ್ರತಿನಿಧಿಯಾಗಿ ಕೆಲಸ ಮಾಡಬಾರದು ಎಂದು ಟೀಕಿಸಿದರು. ಕುಮಾರಸ್ವಾಮಿಯವರ ಮೇಲಿನ ತನಿಖೆಗೆ ರಾಜ್ಯಪಾಲರು ಅನುಮತಿ ನೀಡಲು ಲೋಕಾಯುಕ್ತದವರು ಮನವಿ ಮಾಡಿರುವ ಬಗ್ಗೆ ಪ್ರತಿಕ್ರಿಯಿಸಿ, ಸಾಯಿ ವೆಂಕಟೇಶ್ವರ ಮಿನರಲ್ಸ್‌ನಲ್ಲಿ ನಡೆದ ಗಣಿಗಾರಿಕೆಗೆ ಸಂಬಂಧಿಸಿದಂತೆ ತನಿಖೆ ನಡೆಸಲು ಲೋಕಾಯುಕ್ತದವರು 23-11-2023ರಂದು ಅನುಮತಿ ಕೋರಿದ್ದು, ಆ ಬಗ್ಗೆ ರಾಜ್ಯಪಾಲರು ಯಾವುದೇ ನಿರ್ಣಯ ಕೈಗೊಳ್ಳದ ಕಾರಣ,ಲೋಕಾಯುಕ್ತ ಮತ್ತೊಮ್ಮೆ ಕೋರಿದ್ದಾರೆ. ಆದರೆ 26-07-2024 ರಂದು ಅಬ್ರಾಹಂ ರವರು ತನ್ನ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿದ ತಕ್ಷಣ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದು, ಇಂತಹ ತಾರತಮ್ಯವೇಕೆ ಎಂದು ಪ್ರಶ್ನಿಸಿದರು.

ಬಿಜೆಪಿಯವರು ತಾವು ಹಿಂದುಳಿದವರು, ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ , ಪರಿಶಿಷ್ಟ ಪಂಗಡವರ ಪರ ಎಂದು ಎಷ್ಟೇ ಹೇಳಿಕೊಂಡರೂ, ಅವರು ಬಡವರು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರ ಪರವಿರಲು ಸಾಧ್ಯವಿಲ್ಲ. ಬಡವರಿಗೆ ಅವರು ಯಥಾ ಸ್ಥಿತಿಯಲ್ಲಿರಬೇಕು. ಅವರಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ ಶಕ್ತಿ ಬರಬಾರದು ಎಂದು ಬಯಸುತ್ತಾರೆ.

- **ಸಿದ್ದರಾಮಯ್ಯ** ಮುಖ್ಯಮಂತ್ರಿ

ಶೋಕಿ ಮಾಡೋರಿಗೆ ಟಿಕೆಟ್ ಕೊಟ್ಟಿರಲಿಲ್ಲ

ದೇವರಾಜ ಅರಸು ಅವರ ಬಗ್ಗೆ ಪತ್ರಿಕೆಯಲ್ಲಿ ಓದಿದ ಘಟನೆಯೊಂದನ್ನು ನೆನಪಿಸಿಕೊಂಡ ಸಿದ್ದರಾಮಯ್ಯ ಅವರು, ಅರಸು ಅವರು ಕೆಪಿಸಿಸಿ ಅಧ್ಯಕ್ಷರಾಗಿದ್ದಾಗ, ಜಾಫರ್ ಷರೀಫ್ ಅವರಿಗೆ ಟಿಕೆಟ್ ಕೊಟ್ಟರು. ನಾಗರತ್ನಮ್ಮ ಅವರು ಜಟಕಾ ಗಾಡಿ ಓಡಿಸುವವರಿಗೆ ಟಿಕೆಟ್ ಕೊಡ್ತೀಯಲ್ಲ ಎಂದಿದ್ದರು. ಅದಕ್ಕೆ ಅರಸು 'ನೋಡಮ್ಮಾ, ಇನ್ನು ಮೇಲೆ ಜಟಕಾ ಸಾಹೇಬರಿಗೆ, ಕ್ಷೌರ ಮಾಡುವವರಿಗೆ ಟಿಕೆಟ್ ಕೊಡೋದು. ಶೋಕಿ ಮಾಡುವವರಿಗಲ್ಲ' ಎಂದು ಉತ್ತರಿಸಿದರಂತೆ ಎಂದು ಸ್ಮರಿಸಿದರು. ಮಲ ಹೊರುವ ಪದ್ಧತಿ, ಜೀತ ಪದ್ಧತಿ ನಿಷೇಧ, ಸಾಲಮನ್ನಾ ಇಂತಹ ಅನೇಕ ಪ್ರಗತಿ ಪರ ಕಾನೂನುಗಳನ್ನು ಮಾಡಿದ ಅವರು, ಅರಸು ಮನೆತನದಲ್ಲಿ ಹುಟ್ಟಿದರೂ ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರ ಪರವಾಗಿ ಕೆಲಸ ಮಾಡಿದರು ಎಂದರು.

ರಾಜಭವನ ಬಿಜೆಪಿ, ಜೆಡಿಎಸ್ ಕಚೇರಿ

ಯಾದಗಿರಿ: ರಾಜ್ಯದಲ್ಲಿರುವ ರಾಜಭವನ, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ಕಚೇರಿ ಯಾದರೆ, ರಾಜ್ಯಪಾಲರು ಆ ಪಕ್ಷಗಳ ಏಜೆಂಟ್ ಆಗಿದ್ದಾರೆ ಎಂದು ಸಚಿವ ಶರಣಬಸಪ್ಪ ದರ್ಶನಾಪುರ ಕಿಡಿಕಾರಿದರು.

ಸುದ್ದಿಗಾರರೊಂದಿಗೆ ಮಾತನಾಡಿರುವ ಅವರು, ಕುಮಾರಸ್ವಾಮಿ ವಿರುದ್ಧ ಇದೀಗ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ಎಸ್‌ಐಟಿ ಕೋರಿದೆ. ಇದು ಸೇರಿ ರಾಜ್ಯಪಾಲರ ಮುಂದೆ ಇರುವ ಎಲ್ಲಾ ಪ್ರಕರಣ ಗಳನ್ನು ತನಿಖೆ ಮಾಡಲಿ. ಅದು ಬಿಟ್ಟು ಸಿದ್ದರಾಮ ಯ್ಯನವರ ಹೆಸರಿಗೆ ಮಸಿ ಬಳಿಯುವ ಒಂದೇ ಒಂದು ಕೆಟ್ಟ ಉದ್ದೇಶ

ದಿಂದ ಇಷ್ಟೆಲ್ಲಾ ನಡೆ ಯುತ್ತಿದೆ ವಾಗ್ದಾಳಿ ನಡೆಸಿ ದರು. ಈ ಹಿಂದೆ ಬಿಜೆಪಿ ಮಾ ಡಿದ ಪಾದ ಯಾತ್ರೆಗೆ ಜನ ಸೇರಿಲ್ಲ. ಇದೀಗ ಈ ಪ್ರತಿಭಟನೆ ಸಹ ಯಶಸ್ವಿಯಾಗಲ್ಲ. ಅವ ರದ್ದೇ ಪಕ್ಷದ ಮುಖಂಡರೇ ಪಾದಯಾತ್ರೆಯಲ್ಲಿ ಸೇರಿ ಇಲ್ಲಿಯೂ ಭಾಗವಹಿಸುತ್ತಿಲ್ಲ. ಜೆಡಿಎಸ್‌ನವರಿಗೆ ಕಾಲು-ಕೈ ಬೀಳುವ ಪಾಳಿ ಬಂತು ಎಂದು ಬಿಜೆಪಿ ನಡೆಸಲಿರುವ ಪ್ರತಿಭಟನೆ ಯನ್ನು ಟೀಕಿಸಿದರು.

ಆಲಮಟ್ಟಿಗೆ ಇಂದು ಸಿಎಂ ಬಾಗಿನ ಅರ್ಪಣೆ

ವಿಜಯಪುರ: ಉತ್ತರ ಕರ್ನಾಟಕದ ಜನರ ಜೀವನದಿ, ಜೀವನಾಡಿ ಕೃಷ್ಣಾ ನದಿಯ ಆಲಮಟ್ಟಿ ಆಣೆಕಟ್ಟೆಯಲ್ಲಿ

ಗರಿಷ್ಠ ಮಟ್ಟಕ್ಕೆ ನೀರು ಸಂಗ್ರಹಣೆಯಾದ ಪ್ರಯುಕ್ತ ಆ.21 ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಪ್ರದಾಯದಂತೆ ಜಲಾಶಯಕ್ಕೆ ಬಾಗಿನ ಅರ್ಪಣೆ ಮಾಡಲಿದ್ದಾರೆ. ಆಲಮಟ್ಟಿ ಜಲಾಶಯಕ್ಕೆ ಬಾಗಿನ ಅರ್ಪಿಸಲು ಮುಖ್ಯ ಮಂತ್ರಿಗಳು ಆಗಮಿಸುವ ಹಿನ್ನೆಲೆ ಕೆಬಿಜೆಎನ್‌ಎಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ.ಮೋಹನ್‌ರಾಜ್ ಹಾಗೂ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಮಂಗಳವಾರ ಆಲಮಟ್ಟಿಗೆ ಭೇಟಿ ನೀಡಿ, ಜಂಟಿಯಾಗಿ ಪರಿಶೀಲನೆ ನಡೆಸಿದ್ದಾರೆ. ಹೆಲಿಪ್ಯಾಡ್ ಸ್ಥಳ ಹಾಗೂ ಅಲ್ಲಿನ ಭದ್ರತೆ, ಬಾಗಿನ ಅರ್ಪಿಸುವ ಸ್ಥಳಕ್ಕೆ ಭೇಟಿ ನೀಡಿ, ಪೂಜಾ ಸ್ಥಳ, ಅಲ್ಲಿ ಹೂವಿನ ಅಲಂಕಾರ, ಶಾಮಿಯಾನ ವ್ಯವಸ್ಥೆ, ಸೂಕ್ತ ಆಸನ ವ್ಯವಸ್ಥೆ ಕುರಿತು ಪರಿಶೀಲನೆ ನಡೆಸಿ ಎಲ್ಲ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಸಚಿವರಾದ ಶಿವಾನಂದ ಪಾಟೀಲ, ಡಾ.ಎಂ.ಬಿ.ಪಾಟೀಲ, ಕೃಷ್ಣಾ ಮೇಲ್ದಂಡೆ ಯೋಜನೆ ನೀರಾವರಿ ಸಲಹಾ ಸಮಿತಿ ಅಧ್ಯಕ್ಷ ಸಚಿವ ಆರ್.ಬಿ.ತಿಮ್ಮಾಪೂರ ಸೇರಿದಂತೆ ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಯ ವಿವಿಧ ಜನಪ್ರತಿನಿಧಿಗಳು, ಅಧಿಕಾರಿಗಳು ಭಾಗವಹಿಸಲಿದ್ದಾರೆ.

ಸುಬುಧೇಂದ್ರ ತೀರ್ಥರ ನೇತೃತ್ವದಲ್ಲಿ ಪೂಜಾ ಕೈಂಕರ್ಯ

ಮಂತ್ರಾಲಯದಲ್ಲಿ ಪೂರ್ವಾರಾಧನೆ

ರಾಯಚೂರು: ಮಂತ್ರಾಲಯದ ಶ್ರೀಗುರು ರಾಘವೇಂದ್ರ ಸ್ವಾಮಿಗಳ 353 ನೇ ಆರಾಧನಾ ಮಹೋತ್ಸವ ಹಿನ್ನೆಲೆಯಲ್ಲಿ ಗುರುರಾಯರ ಪೂರ್ವಾರಾಧನೆ ಸಂಭ್ರಮ ಸಡಗರದಿಂದ ನಡೆಯಿತು.

ಆರಾಧನಾ ಮೂರನೇ ದಿನವಾದ ಮಂಗಳವಾರ ಬೆಳಗ್ಗೆ ನಿರ್ಮಾಲ್ಯ, ಬೃಂದಾವನಕ್ಕೆ ಪಂಚಾಮೃತ ಅಭಿಷೇಕ, ಸುವರ್ಣಾಭರಣಗಳಿಂದ ಅಲಂಕಾರ, ಶ್ರೀ ರಂಗಂ ಕ್ಷೇತ್ರದಿಂದ ಶ್ರೀ ರಂಗನಾಥ ದೇವರ ವಸ್ತ್ರಸಮರ್ಪಣೆ ನೆರವೇರಿತು. ನಂತರ ಸುವರ್ಣ, ರಜತ ರಥೋತ್ಸವ, ಪ್ರಹ್ಲಾದರಾಜರ ಉತ್ಸವ ಮೂರ್ತಿಯ ಪಲ್ಲಕ್ಕಿ, ಶ್ರೀ ಮನ್ ಮೂಲ ರಾಮ ದೇವರ ವಿವಿಧ ಪೂಜಾ ಕೈಂಕರ್ಯಗಳು ಶ್ರೀಮಠದ ಪೀಠಾಧಿಪತಿ ಶ್ರೀ ಸುಬುಧೇಂದ್ರ ತೀರ್ಥರ ನೇತೃತ್ವದಲ್ಲಿ ಆರಂಭವಾಗಿವೆ. ಬೆಳಗ್ಗೆ ನಿರ್ಮಾಲ್ಯ ವಿಸರ್ಜನೆ ನಡೆದಿದ್ದು ಇದಾದ ನಂತರ ರಾಯರ ಮೂಲ ಬೃಂದಾವನಕ್ಕೆ ವಿಶೇಷ ಅಭಿಷೇಕ ನಡೆದವು. ಮಠದ ಪ್ರಾಕಾ ರದಲ್ಲಿ ರಜತ ಸಿಂಹ ವಾಹನೋತ್ಸವ, ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಗಣ್ಯರಿಗೆ ರಾಘವೇಂದ್ರ ಅನುಗ್ರಹ ಪ್ರಶಸ್ತಿ ಪ್ರದಾನ ಮಾಡಲಾ ಯಿತು. ರಾಯರು ಸಶರೀರರಾಗಿ ವೃಂದಾವ ನಸ್ಥರಾದ ಪೂರ್ವ ದಿನವನ್ನು ರಾಯರ ಪೂರ್ವಾರಾಧನೆಯನ್ನಾಗಿ ಮಾಡಲಾಗುತ್ತಿದೆ.

ದೇಶ, ವಿದೇಶದಿಂದ ಭಕ್ತರ ಆಗಮನ

ಆರಾಧನಾ ಮಹೋತ್ಸವಕ್ಕೆ ದೇಶ, ವಿದೇಶ, ಅಂತಾರಾಜ್ಯ ಹಾಗೂ ರಾಜ್ಯದ ನಾನಾ ಭಾಗಗಳಿಂದ ಭಕ್ತರು ಆಗಮಿಸುತ್ತಿದ್ದಾರೆ. ಈ ಮಹೋತ್ಸವಕ್ಕೆ ಬರುವ ಭಕ್ತರಿಗೆ ಸಕಲ ವ್ಯವಸ್ಥೆಯನ್ನು ಶ್ರೀಮಠ ಕಲ್ಪಿಸಿದೆ. ಇನ್ನು ಆರಾಧನಾ ಮಹೋತ್ಸವಕ್ಕೆ ನಾನಾ ಭಾಗಗಳಿಂದ ಭಕ್ತರು ರಾತ್ರಿ ವೇಳೆ ಮಠದ ಮುಂಭಾಗದ ಕಾರಿಡಾರ್ ವಿಶ್ರಾಂತಿ ಪಡೆಯುತ್ತಿದ್ದರು. ಆದರೆ ಸೋಮವಾರ ರಾತ್ರಿ 2 ಗಂಟೆಯ ಸುಮಾರಿಗೆ ಭಾರಿ ಮಳೆ ಸುರಿಯುತ್ತಿತ್ತು. ಆಗ ಖುದ್ದು ಪೀಠಾಧಿಪತಿ ಶ್ರೀಸುಬುಧೇಂದ್ರ ತೀರ್ಥರು ಶ್ರೀಮಠದ ಬಾಗಿಲು ತೆರೆದು, ರಾಯರ ಮಠದ ಪ್ರಾಕಾರ ಹಾಗೂ ಮಂಟಪದಲ್ಲಿ ವಿಶ್ರಾಂತಿ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರು.



ಮಂತ್ರಾಲಯದ ಶ್ರೀಗುರು ರಾಘವೇಂದ್ರ ಸ್ವಾಮಿಗಳ 353 ನೇ ಆರಾಧನಾ ಮಹೋತ್ಸವ ಹಿನ್ನೆಲೆಯಲ್ಲಿ ಗುರುರಾಯರ ಪೂರ್ವಾರಾಧನೆ ಸಂಭ್ರಮ ಸಡಗರದಿಂದ ನಡೆಯಿತು.

ಹೆದರುವ ಗುಣ ಸಿದ್ದರಾಮಯ್ಯ ರಕ್ತದಲ್ಲಿ ಇಲ್ಲ: ಡಿಕೆಶಿ

ದೆಹಲಿಗೆ ಶೀಘ್ರ ಸಿಎಂ ಭೇಟಿ

ಕಲಬುರಗಿ: ಗುರುವಾರ ನಡೆಯುವ ಶಾಸಕಾಂಗ ಸಭೆಯ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿಗೆ ತೆರಳಿ ಅಲ್ಲಿನ ನಾಯಕರಿಗೆ ಮುಡಾ ಪ್ರಕರಣದ ಸಂಪೂರ್ಣ ಮಾಹಿತಿ ನೀಡಲಿದ್ದಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ ದೆಹಲಿ ಭೇಟಿಯಲ್ಲಿ ಯಾವುದೇ ವಿಶೇಷ ಅರ್ಥವಿಲ್ಲ. ಕಾಂಗ್ರೆಸ್‌ನ ಹೈಕ ಮಾಂಡ್, ಸಚಿವರು, ಶಾಸಕರು ಮುಖ್ಯ ಮಂತ್ರಿ ಬೆಂಬಲಕ್ಕಿದ್ದೇವೆ. ನಮ್ಮ ಹೋರಾಟ ನಿರಂತರ ಆಗಿರಲಿದೆ ಎಂದು ಹೇಳಿದರು.

ದೆಹಲಿಯಲ್ಲಿ ಬಿಜೆಪಿಯೇತರ ಸರಕಾರಗಳು ಒಕ್ಕೂಟದ ಮೂಲಕ ಹೋರಾಟ ಮಾಡಲಿವೆಯಾ ಎಂಬ ಪ್ರಶ್ನೆಗೆ ಈಗಾಗಲೇ ದೇಶದಲ್ಲಿ ಇಂಡಿಯಾ ಒಕ್ಕೂಟ ಇದೆ. ನಾವು ಈಗಾಗಲೇ ಹೋರಾಟ ಆರಂಭಿಸಿದ್ದೇವೆ. ಇನ್ನು ರಾಜ್ಯಪಾಲರಗಳು ಏನೇನು ಮಾಡುತ್ತಿದ್ದಾರೆ ಎಂಬುದು ಪಶ್ಚಿಮ ಬಂಗಾಲ ನೋಡಿ ತಿಳಿದುಕೊಳ್ಳಿ ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ, ಸಚಿವ ಡಾ.ಶರಣಪ್ರಕಾಶ ಪಾಟೀಲ, ಕೆಕೆಆರ್‌ಟಿಸಿ ಅಧ್ಯಕ್ಷ, ಶಾಸಕ ಎಂ.ವೈ.ಪಾಟೀಲ, ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ ಅಧ್ಯಕ್ಷ, ಶಾಸಕಿ ಕನೀಜ್ ಫಾತಿಮಾ, ಸಂಸದ ರಾಮಕೃಷ್ಣ ದೊಡ್ಡಮನಿ, ವಿಧಾನ ಪರಿಷತ್ ಶಾಸಕ ಜಗದೇವ ಗುತ್ತೇದಾರ, ಎ. ವಸಂತಕುಮಾರ ಇದ್ದರು.

ಕ್ರಸ್ಟ್ ಗೇಟ್ ಅಳವಡಿಕೆ ಯಶಸ್ವಿ: ಕಾರ್ಮಿಕರಿಗೆ ಸನ್ಮಾನ: ನಾಡಿನ ಜೀವನಾಡಿ ತುಂಗಭದ್ರಾ ಜಲಾಶಯದಲ್ಲಿ ಇತ್ತೀಚೆಗೆ 19ನೇ ಕ್ರಸ್ಟ್ ಗೇಟ್ ಆಕಸ್ಮಿಕವಾಗಿ ಕಳಚಿಬಿದ್ದ ಕಾರಣ ದೊಡ್ಡ ಆತಂಕವೇ ಅಲ್ಲಿ ಸೃಷ್ಟಿಯಾಗಿತ್ತು. ಎಂಜಿನಿಯರ್, ಕಾರ್ಮಿಕರ, ತಜ್ಞರು ಹಾಗೂ ಅಧಿಕಾರಿಗಳ ಸತತ ಶ್ರಮದಿಂದ ಐದೇ ದಿನದಲ್ಲಿ ಕ್ರಸ್ಟ್ ಗೇಟ್ ಯಶಸ್ವಿಯಾಗಿ ಬದಲಾಯಿಸಿ ರೈತರ ಆತಂಕ ದೂರ ಮಾಡಲಾಗಿದೆ. ಮುಂದೆ ಮಳೆ ಹೆಚ್ಚಿರುವ ಕಾರಣ ಜಲಾಶಯ ಭರ್ತಿಯಾಗುವ ಎಲ್ಲಾ ಆಶಾಭಾವನೆ ಇದ್ದು, ಶೀಘ್ರವೇ ಕ್ರಸ್ಟ್ ಗೇಟ್ ಅಳವಡಿಕೆಗೆ ಜೀವದ ಹಂಗು ತೊರೆದು ಶ್ರಮಿಸಿದ ಎಲ್ಲಾ ಕಾರ್ಮಿಕರನ್ನು ಸನ್ಮಾನಿಸಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಹೇಳಿದರು.

ಮೈಸೂರಿನಲ್ಲಿ ಆಸ್ತಿ ಕಳಕೊಂಡಿದ್ದು ಪಾರ್ವತಿಯವರು. ಅವರಿಗೆ ನಿವೇಶನ ಹಂಚಿಕೆ ಮಾಡಿದ್ದು ಬಿಜೆಪಿ ಸರಕಾರ ಇದ್ದಾಗ. ಇದಕ್ಕೆ ಪರಿಹಾರ ನೀಡಿ ಎಂದ ಕೂಡ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪತ್ರ ಬರೆದಿಲ್ಲ. ಇದರಿಂದ ಹೆದರಿಕೆ ಎಂಬ ಮಾತು ಏಕೆ ಬರುತ್ತೇ ಎಂದು ಪ್ರಶ್ನಿಸಿದ ಅವರು, ಮುಖ್ಯಮಂತ್ರಿಗಳೇ ಸ್ವತಃ ತನಿಖೆಗೆ ಆದೇಶ ಮಾಡಿದ್ದಾರೆ. ಹೆದರುವ ಗುಣ ಸಿದ್ದರಾಮಯ್ಯ ಅವರ ರಕ್ತದಲ್ಲಿ ಇಲ್ಲ. ಎಲ್ಲಿ ನ್ಯಾಯ ಇದೆಯೋ ಅಲ್ಲಿ ಜಯ ಇದೆ. ಮುಂದಿನ ಹತ್ತು ವರ್ಷ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿರಲ್ಲಿದ್ದಾರೆ.

-**ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

371(ಜೆ) ಕಾಯಿದೆ ದಶಮಾನೋತ್ಸವ ಆಚರಣೆಗೆ ಚಿಂತನೆ

ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಹೊಸ ಭಾಷೆಯನ್ನೆ ಬರೆದ 371ಜೆ ಕಾಯಿದೆ ಜಾರಿಗೆ ಬಂದು ಇದೀಗ ದಶಮಾನೋತ್ಸವ ಆಚರಿಸುತ್ತಿದ್ದು, ಈ ಸಂದರ್ಭದಲ್ಲಿ ಪ್ರದೇಶದಲ್ಲಿ ಸಂಭ್ರಮಾಚರಣೆ ಆಚರಿಸಲು ನಿರ್ಧರಿಸಲಾಗಿದೆ ಎಂದು ರಾಜ್ಯದ ಉಪ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ ಹೇಳಿದರು. 371(ಜೆ) ಪರಿಣಾಮ ಪ್ರದೇಶದಲ್ಲಿ ಕಳೆದ ಒಂದು ದಶಕದಲ್ಲಿ ಹಲವಾರು ಗಮನಾರ್ಹ ಬದಲಾವಣೆ ಕಂಡಿದೆ. ಈ ನಿಟ್ಟಿನಲ್ಲಿ ಸಂಭ್ರಮಾಚರಣೆ ಆಚರಿಸಲಾಗುತ್ತಿದೆ. ಇದಕ್ಕೆ ವಿಧಾನ ಸಭೆ ಮತ್ತು ವಿಧಾನ ಪರಿಷತ್ ವಿರೋಧಪಕ್ಷದ ನಾಯಕರನ್ನು ಸಹ ಆಹ್ವಾನಿಸಲಾಗುವುದು. ಡಾ.ಮಲ್ಲಿಕಾರ್ಜುನ ಖರ್ಗೆ ಅವರ ವಿಶೇಷ ಪ್ರಯತ್ನದ ಫಲವಾಗಿ ಈ ಕಾಯಿದೆ ಜಾರಿಗೆ ಬಂದಿದೆ. 371(ಜೆ) ಕಾಯ್ದೆಯ ಪರಿಣಾಮವಾಗಿ ಇಂದಿಲ್ಲಿ ಏರ್ ಪೋರ್ಟ್ ಸ್ಥಾಪಿಸಲಾಗಿದೆ. 371 ಹಾಸಿಗೆಯ ಜಯದೇವ ಆಸ್ಪತ್ರೆ ಲೋಕಾರ್ಪಣೆಗೆ ಸಿದ್ಧಗೊಂಡಿದೆ. ಟ್ರಾಮಾ ಸೆಂಟರ್ ಉದ್ಘಾಟನೆಯಾಗಿದ್ದು, ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆ ಮುಂದಿನ ದಿನದಲ್ಲಿ ಬರಲಿದೆ. ಕಿದ್ವಾಯಿ ಆಸ್ಪತ್ರೆ ಕಟ್ಟಡ ವಿಸ್ತೀರ್ಣಗೊಳ್ಳಲಿದೆ. ಬೃಹತ್ ಇಎಸ್‌ಐಸಿ ಕಟ್ಟಡ ಸ್ಥಾಪನೆಯಾಗಿದೆ. ಹಲವು ವೈದ್ಯಕೀಯ ಸೌಲಭ್ಯಗಳನ್ನು ನೀಡುವ ಮೂಲಕ ಕಲಬುರಗಿಯನ್ನು ಮೆಡಿಕಲ್ ಹಬ್ ಆಗಿ ಪರಿವರ್ತಿಸಲಾಗಿದೆ ಎಂದರು.

ಪರೀಕ್ಷೆಗೆ ಓದು ಎಂದಿದ್ದಕ್ಕೆ ವಿದ್ಯಾರ್ಥಿ ಆತ್ಮಹತ್ಯೆ

ಹಿರಿಯಡ್ಕ: ಪರೀಕ್ಷೆ ಹತ್ತಿರ ಬರುತ್ತಿದೆ ಮೊಬೈಲ್ ಬಳಕೆ ಕಡಿಮೆ ಮಾಡಿ ಓದುವ ಕಡೆಗೆ ಗಮನಕೊಡು ಎಂದು ವಿದ್ಯಾರ್ಥಿಯೊಬ್ಬನಿಗೆ ಹೆತ್ತವರು ಬುದ್ಧಿ ಹೇಳಿದ್ದಕ್ಕೆ ಮನನೊಂದ ಕಾಲೇಜು ವಿದ್ಯಾರ್ಥಿ ಬ್ಯಾಗ್ ಸಮೇತ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಹಿರಿಯಡ್ಕ ಸರಕಾರಿ ಪದವಿಪೂರ್ವ ಕಾಲೇಜಿನ ಪ್ರಥಮ ಪಿಯುಸಿ ವಿದ್ಯಾರ್ಥಿಯಾಗಿದ್ದ ಪ್ರಥಮೇಶ್ (17) ಅಂಜಾರು ಪೊಲೀಸ್ ಕ್ವಾರ್ಟರ್ಸ್ ಬಳಿ ನಿವಾಸಿಯಾಗಿದ್ದು, ಅತಿಯಾಗಿ ಮೊಬೈಲ್ ಬಳಸುತ್ತಿದ್ದ. ಪರೀಕ್ಷೆಗಳಲ್ಲಿ ಅಂಕ ಕಡಿಮೆ ಬರುತ್ತಿತ್ತು. ಕಾಲೇಜಿನಲ್ಲಿ ಪರೀಕ್ಷೆ ಪ್ರಾರಂಭವಾಗಿರುವ ಕಾರಣ ಮನೆಯವರು ಬುದ್ಧಿ ಮಾತು ಹೇಳಿ ಮೊಬೈಲ್ ತೆಗೆದಿಟ್ಟಿದ್ದರು. ಆ ಬಳಿಕ ಮನೆಯಿಂದ ಹೊರಟ ವಿದ್ಯಾರ್ಥಿ ಅತ್ತ ಕಾಲೇಜಿಗೂ ಹೋಗದೆ , ಇತ್ತ ಮನೆಗೂ ಬಾರದೆ ನಾಪತ್ತೆಯಾಗಿದ್ದ. ಈ ಬಗ್ಗೆ ಹಿರಿಯಡ್ಕ ಪೊಲೀಸ್ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಿಸಲಾಗಿತ್ತು. ಸೋಮವಾರ ಎಷ್ಟು ಹುಡುಕಾಡಿದರೂ ವಿದ್ಯಾರ್ಥಿ ಪತ್ತೆಯಾಗಿಲ್ಲ. ಮಂಗಳವಾರ ಬೆಳಗ್ಗೆ ಹಿರಿಯಡ್ಕ ಪ್ರಥಮ ದರ್ಜೆ ಕಾಲೇಜಿನ ಸಮೀಪದಲ್ಲಿರುವ ಜನವಸತಿ ರಹಿತ ಮನೆಯ ಬಾವಿಯಲ್ಲಿ ಶಾಲಾ ಬ್ಯಾಗ್ ತೇಲುತ್ತಿರುವುದು ಪತ್ತೆಯಾಗಿತ್ತು. ತಕ್ಷಣ ಪೊಲೀಸರು ಪಾತಾಳ ಗರಡಿ ಬಳಸಿ ವಿದ್ಯಾರ್ಥಿಯ ಮೃತದೇಹ ಮೇಲೆತ್ತಿದ್ದಾರೆ.

ಸಕಲೇಶಪುರ ಬಳಿ ಮಣ್ಣು ತೆರವು ಕಾರ್ಯಾಚರಣೆ ಪೂರ್ಣ

ಮಂಗಳೂರಿಗೆ ರೈಲು ಸಂಚಾರ ಪುನಾರಂಭ

ಮಂಗಳೂರು: ಸಕಲೇಶಪುರ-ಬಾಳ್ಳುಪೇಟೆ ನಡುವಿನ ಮಂಗಳೂರು-ಬೆಂಗಳೂರು ರೈಲು ಹಳಿ ಮೇಲೆ ಗುಡ್ಡ ಕುಸಿತದಿಂದ ಬಿದ್ದಿದ್ದ ಮಣ್ಣು ತೆರವು ಕಾರ್ಯಾಚರಣೆ ಸಂಪೂರ್ಣಗೊಂಡಿದ್ದು, ಇದರ ಬೆನ್ನಲ್ಲೇ ರೈಲು ಸಂಚಾರ ಮತ್ತೆ ಆರಂಭಗೊಂಡಿದೆ.

ರೈಲುಮಾರ್ಗದ ಮೇಲೆ ಬಿದ್ದಿದ್ದ ಮಣ್ಣನ್ನು ತೆರವು ಮಾಡುವ ಕಾರ್ಯ ಸೋಮವಾರ ಸಂಜೆಗೆ ಪೂರ್ಣಗೊಂಡಿದೆ. ರೈಲು ಮಾರ್ಗವನ್ನು ರೈಲುಗಳ ಸಂಚಾರಕ್ಕೆ ಮುಕ್ತವಾಗುವಂತೆ ಮತ್ತೆ ಮರು ಹೊಂದಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮಂಗಳವಾರ ಸಂಚರಿಸಬೇಕಿದ್ದ 07378 ಮಂಗಳೂರು ಸೆಂಟ್ರಲ್-ವಿಜಯಪುರ ಎಕ್ಸ್‌ಪ್ರೆಸ್ ರೈಲು ಮಾತ್ರ ರದ್ದಾಗಿದ್ದು, ಉಳಿದ ಎಲ್ಲಾ ರೈಲುಗಳು ನಿಗದಿತ ದಿನಾಂಕ ಹಾಗೂ ಸಮಯದಂತೆ ಸಂಚರಿಸಲಿದೆ. ಕುಸಿತದ ಸ್ಥಳದಲ್ಲಿ ರೈಲು ಸಂಚಾರದ ವೇಗಕ್ಕೆ ಮಿತಿ ಹೇರಲಾಗಿದೆ. ಮೇಲ್ಭಾಗದಿಂದಲೇ ಮಣ್ಣನ್ನು ತೆರವು ಗೊಳಿಸುವ ಮೂಲಕ ರೈಲುಗಳ ಸಂಚಾರಕ್ಕೆ ಮಾರ್ಗವನ್ನು ಮುಕ್ತಗೊಳಿಸಲಾಗಿದೆ.

ವಾರದ ಹಿಂದೆ ಗುಡ್ಡ ಕುಸಿದಿದ್ದ ಜಾಗದಲ್ಲಿ ಶುಕ್ರವಾರ ಮತ್ತೆ ಮಣ್ಣು ಕುಸಿದಿತ್ತು. ಇದೇ ಕಾರಣಕ್ಕೆ ರೈಲು ಸಂಚಾರವನ್ನು ಮತ್ತೊಮ್ಮೆ ಸ್ಥಗಿತಗೊಳಿಸಲಾಗಿತ್ತು. ಮೂರು ದಿನಗಳಿಂದ ಮಣ್ಣು ತೆರವು ಕಾರ್ಯ ನಡೆಸಲಾಗಿತ್ತು. ಇದೀಗ ಮರಳಿ ರೈಲು ಸೇವೆಗಳು ಪ್ರಾರಂಭವಾಗಿದೆ.

ರಾಜ್ಯಪಾಲರು ಬಿಜೆಪಿ ಏಜೆಂಟ್

ಮಂಗಳೂರು: ಪ್ರಸ್ತುತ ರಾಜಕೀಯ ಬೆಳವಣಿಗೆಗಳನ್ನು ಗಮನಿಸಿದರೆ ರಾಜ್ಯಪಾಲರು ಬಿಜೆಪಿ ಅಧ್ಯಕ್ಷರಂತೆ ಕೆಲಸ ಮಾಡುತ್ತಿದ್ದಾರೆ ಅನ್ನಿಸುತ್ತಿದೆ ಎಂದು ಕಾಂಗ್ರೆಸ್ ಮುಖಂಡ ಬಿ.ಕೆ. ಹರಿಪ್ರಸಾದ್ ಟೀಕಿಸಿದ್ದಾರೆ. ಸುದ್ದಿಗಾರರೊಂದಿಗೆ

ಮಾತನಾಡಿ, ರಾಜ್ಯಪಾಲರು ರಾಜಭವನವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಸಂವಿಧಾನದ ಚೌಕಟ್ಟಿನಲ್ಲಿರುವ ರಾಜ್ಯಪಾಲ ಹುದ್ದೆಯಲ್ಲಿರುವವರು, ತಮ್ಮ ಚೌಕಟ್ಟನ್ನು ಬಿಟ್ಟು ಬಿಜೆಪಿ ನಿರ್ದೇಶನದಂತೆ ಕೆಲಸ ಮಾಡುವುದು ಸರಿಯಲ್ಲ ಎಂದರು. ಈ ಹಿಂದೆ ಬಿಜೆಪಿ ಆಪರೇಷನ್ ಕಮಲದ ಮೂಲಕ ಸರಕಾರ ಕೆಡವಿತ್ತು. ಈಗ ಇನ್ನೊಂದು ರೀತಿಯ ವಾಮಮಾರ್ಗದ ಮೂಲಕ ಸರಕಾರ ಅಸ್ಥಿರಗೊಳಿಸಲು ಪ್ರಯತ್ನಿಸುತ್ತಿದೆ. ಸಿದ್ದರಾಮಯ್ಯ ಮೇಲೆ ಮಾಡುತ್ತಿರುವ ಆರೋಪ ಕಪೋಲಕಲ್ಪಿತವಾಗಿದೆ. ರಾಜ್ಯಪಾಲರು ಹಿಂದೆ ರಾಜಕಾರಣಿ ಆಗಿದ್ದವರು, ಅವರನ್ನು ನಾನು ಹತ್ತಿರದಿಂದ ಬಲ್ಲೆ. ಬಿಜೆಪಿಯವರಿಗೆ ದಲಿತರ ಮೇಲೆ ಪ್ರೀತಿ ಇದ್ದರೆ ಸಂವಿಧಾನ ಬದಲಾವಣೆ ಬಗ್ಗೆ ಯಾಕೆ ಮಾತನಾಡುತ್ತಿದ್ದರು? ಸಾಂವಿಧಾನಿಕ ಹುದ್ದೆಯಲ್ಲಿದ್ದವರ ಬಗ್ಗೆ ನಾವು ಮಾತನಾಡುವುದು ಸರಿಯಲ್ಲ ಎಂದರು.

ವಿಶ್ವವಾಣಿ

ಸಂಪಾದಕೀಯ

ಕಾನೂನಿನ ದುರ್ಬಳಕೆ ಆಗದಿರಲಿ

ದೇಶದೆಲ್ಲೆಡೆ ದಶಕಗಳಿಂದ ದ್ವೇಷ ರಾಜಕಾರಣದ ಮಾತುಗಳು ಕೇಳಿ ಬರುತ್ತಿದ್ದರೂ ಕರ್ನಾಟಕ ರಾಜಕೀಯ ಇದಕ್ಕೆ ಹೊರತಾಗಿದೆ ಎಂಬಂತಿತ್ತು. ಎಲ್ಲ ರಾಜ್ಯಗಳಂತೆ ನಮ್ಮಲ್ಲೂ ಆರೋಪ, ಪ್ರತ್ಯಾರೋಪಗಳು, ಟೀಕಾ ಪ್ರಹಾರಗಳಿದ್ದರೂ ನಾಯಕರು ಪರಸ್ಪರ ಎದುರಾದಾಗ ಕೈಕುಲುಕಿ ಮಾತನಾಡಿಸುವ ಕನಿಷ್ಠ ಸೌಜನ್ಯಕ್ಕೆ ಕೊರತೆ ಇರಲಿಲ್ಲ. ಕೆಲವು ರಾಜ್ಯಗಳ ರಕ್ತರಂಜಿತ ರಾಜಕೀಯ ಚರಿತ್ರೆ, ಹಾಲಿ-ಮಾಜಿ ಮುಖ್ಯಮಂತ್ರಿಗಳು ಸರದಿ ಪ್ರಕಾರ ಜೈಲಿಗೆ ಹೋಗುವುದನ್ನು ಕಂಡಾಗ ಕರುನಾಡಿನ ರಾಜಕಾರಣದ ಬಗ್ಗೆ ಹೆಮ್ಮೆಯೆನಿಸುತಿತ್ತು. ಆದರೆ ಇದೀಗ ನಮ್ಮಲ್ಲೂ ದ್ವೇಷ ಮೊಳಕೆಯೊಡೆದು ಹೆಮ್ಮರವಾಗಿ ಬೆಳೆಯುವ ಲಕ್ಷಣಗಳು ಕಾಣುತ್ತಿವೆ. ಕಳೆದ ವಿಧಾನಸಭಾ ಚುನಾವಣೆಗೆ ಮೊದಲೇ ಲಯ ತಪ್ಪಿದ ನಾಯಕರ ಮಾತುಗಳು ಇದೀಗ ರಾಜಕಾರಣವನ್ನು ಮೀರಿ ವೈಯಕ್ತಿಕ ಮಟ್ಟಕ್ಕೆ ಜಾರಿವೆ. ನಾಯಕರ ಭಾಷೆ, ಹಾವ-ಭಾವಗಳು ಬೀದಿ ಜಗಳಕ್ಕಿಂತಲೂ ಕೆಳಮಟ್ಟದಲ್ಲಿವೆ. ಒಬ್ಬರನ್ನೊಬ್ಬರು ಜೈಲಿಗೆ ಕಳುಹಿಸುವ ಮಾತುಗಳು ಕೇಳಿ ಬರುತ್ತಿವೆ. ಹಳೆಯ ಕಡತಗಳನ್ನು ಬಿಚ್ಚಿ ಪರಸ್ಪರರ ತಪ್ಪುಗಳನ್ನು ಹೆಕ್ಕಿ ತೆಗೆಯಲು ದಲ್ಲಾಳಿಗಳು ಹುಟ್ಟಿಕೊಂಡಿದ್ದಾರೆ. ತಪ್ಪು ಮಾಡಿದ ನಾಯಕರು ಕಾನೂನು ಪ್ರಕಾರ ಶಿಕ್ಷೆ ಅನುಭವಿಸಲೇಬೇಕು. ಆದರೆ ಜೈಲಿಗೆ ಕಳುಹಿಸದೆ ಬಿಡಲಾರೆ ಎಂಬ ಸವಾಲಿನ ಮಾತುಗಳು ರಾಜಕಾರಣಕ್ಕೆ ತಕ್ಕುದಲ್ಲ. ಸಾರ್ವಜನಿಕ ಸೇವೆ, ಜನರ ಒಳಿತಿಗಾಗಿ ಆಯ್ಕೆ ಮಾಡಿಕೊಳ್ಳುವ ರಾಜಕಾರಣ ದ್ವೇಷದ ಕುಲುಮೆಯಾಗಬಾರದು. ಭಿನ್ನಾಭಿಪ್ರಾಯಗಳನ್ನು ಪ್ರಜಾತಂತ್ರದ ಮೌಲ್ಯಗಳನ್ನಾಗಿ ಕಾಣುವ ಗುಣ ಇಲ್ಲದೇ ಹೋದರೆ ನಾಯಕರು, ನಾಯಕರಾಗಿ ಉಳಿಯದೇ ಸರ್ವಾಧಿಕಾರಿಗಳಾಗುತ್ತಾರೆ. ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ನಾವು ಈಗ ಕಾಣುತ್ತಿರುವ ಬೆಳವಣಿಗೆಗಳು ಮುಂದಿನ ರಾಜಕಾರಣದ ದಿಕ್ಕನ್ನು ಸೂಚಿಸುತ್ತಿವೆ. ಸಚ್ಚಾರಿತ್ರ್ಯದ ವ್ಯಕ್ತಿಗಳಾರೂ ಇನ್ನು ಮುಂದೆ ರಾಜಕಾರಣಕ್ಕೆ ಬರುವಂತಿಲ್ಲ, ಬಂದರೂ ಅವರ ತೇಜೋವಧೆ ತಪ್ಪುವುದಿಲ್ಲ ಎಂಬ ಸಂದೇಶ ಎಲ್ಲೆಡೆ ರವಾನೆಯಾಗುತ್ತಿರುವುದು ದುರದೃಷ್ಟಕರ. ಸಿಎಂ ಸಿದ್ದರಾಮಯ್ಯ ಅವರು ಇದೀಗ ಮುಡಾ ಪ್ರಕರಣದಲ್ಲಿ ಕಾನೂನು ಹೋರಾಟದಲ್ಲಿದ್ದಾರೆ. ಇವರೊಂದಿಗೆ ಡಿಸಿಎಂ, ಮಾಜಿ ಸಿಎಂಗಳು ಹಳೆಯ ಪ್ರಕರಣಗಳಲ್ಲಿ ವಿಚಾರಣೆ ಎದುರಿಸುತ್ತಿದ್ದಾರೆ. ಎರಡನೇ ಹಂತದ ಇನ್ನಷ್ಟು ನಾಯಕರು ಬೇರೆ, ಬೇರೆ ಪ್ರಕರಣಗಳಲ್ಲಿ ಆರೋಪಿಗಳಾಗಿದ್ದಾರೆ. ಕಾನೂನಿನ ಪರಿಮಿತಿಯಲ್ಲಿ, ಪ್ರಜಾಪ್ರಭುತ್ವದ ಸ್ಥಾಪಿತ ಮೌಲ್ಯಗಳಡಿಯಲ್ಲಿ ಇವರ ವಿಚಾರಣೆ ನಡೆಯಲಿ. ಅಪರಾಧಿಗಳಿಗೆ ಶಿಕ್ಷೆಯಾಗಿ, ನಿರಪರಾಧಿಗಳಿಗೆ ನ್ಯಾಯ ಸಿಗಲಿ. ವೈಯಕ್ತಿಕ ದ್ವೇಷಕ್ಕೆ, ನೀಚ ರಾಜಕಾರಣಕ್ಕೆ ಕಾನೂನು ಮತ್ತು ತನಿಖಾ ಸಂಸ್ಥೆಗಳ ದುರ್ಬಳಕೆ ಆಗದಿರಲಿ.

ಸೊಂಪಾದಕೀಯ

ಎಲ್ಲಮ್ಮನ್ ದುಡ್ಡು, ಯಾರದ್ದೋ ಜಾತ್ರೆ

ಜನರಿಗೆ ದೇವರ ಬಗ್ಗೆ ಎಷ್ಟೇ ಭಕ್ತಿ ಇದ್ರೂ, ದೇವಸ್ಥಾನಗಳಲ್ಲಿ ಹುಂಡಿ ಕಳ್ಳತನ ಆಗೋದು ಮಾತ್ರ ಇನ್ನೂ ನಡೆಯುತ್ತಲೇ ಇದೆ. ಹಾಗಂತ ಭಗವಂತನನ್ನು ನಂಬುವವರು ಹುಂಡಿಗೆ ಹಣ ಹಾಕ್ತಾರೆ, ನಂಬದೇ ಇರುವವರು ಹುಂಡಿಯಿಂದ ಹಣ ಕದೀತಾರೆ ಅನ್ನೋ ಹಾಗೂ ಇಲ್ಲ. ಯಾಕಂದ್ರೆ, ಕೆಲ ದಿನಗಳ ಹಿಂದೆ ಸಿಕ್ಕಿಬಿದ್ದ ಖತರ್‌ನಾಕ್ ಕಳ್ಳನೊಬ್ಬ ಪ್ರತಿಸಲ ಕದ್ದಾಗಲೂ ತನ್ನ ಊರಿನ ದೇವಸ್ಥಾನಕ್ಕೆ ಹೋಗಿ ಅಲ್ಲಿನ ದೇವರಿಗೆ ತಪ್ಪುಕಾಣಿಕೆ ಹಾಕಿ, ಆಮೇಲೆ ಕದ್ದ ಬಂಗಾರವನ್ನು ಮಾರಾಟ ಮಾಡುತ್ತಿದ್ದನಂತೆ. ಇದಕ್ಕಿಂತ ಗಾಬರಿ ಬೀಳಿಸೋ ವಿಷಯ ಅಂದ್ರೆ, ಅವನು ಮೊದಲು ಅದೇ ದೇವಸ್ಥಾನದಲ್ಲಿ ಪೂಜಾರಿ ಆಗಿದ್ದನಂತೆ. ಹಾಗಾಗಿ ಹುಂಡಿಗೆ ಕನ್ನ ಹಾಕುವವರೆಲ್ಲ ನಾಸ್ತಿಕರು ಅನ್ನಂಗಿಲ್ಲ. ಒಟ್ಟಿನಲ್ಲಿ ಸುಲಭವಾಗಿ ಸಿಕ್ಕರೆ ದೇವರ ದುಡ್ಡನ್ನೂ ಕಳ್ಳರು ಬಿಡ್ತಾ ಇಲ್ಲ. ಕೆಲ ದಿನಗಳ ಹಿಂದೆ ಎಲ್ಲಮ್ಮದೇವಿಯ ದೇವಸ್ಥಾನದ ಹುಂಡಿಗೆ ಕನ್ನ ಹಾಕಿ ಕಳ್ಳರು ಎಲ್ಲವನ್ನೂ ದೋಚಿದ ಮೇಲೆ 'ಎಲ್ಲಮ್ಮನ್ ದುಡ್ಡು, ಯಾರದ್ದೋ ಜಾತ್ರೆ' ಅಂತ ಜನ ತಮಗೆ ತೋಚಿದಂತೆ ಮಾತಾಡಿದ್ದು ಕೇಳಿಬಂದಿತ್ತು. ಇದನ್ನೆಲ್ಲ ನೋಡಿಯೇ ಏನೋ ಇತ್ತೀಚೆಗೆ ಗೋಕರ್ಣದ ಮಹಾಬಲೇಶ್ವರ ದೇವಸ್ಥಾನದಲ್ಲಿ ಗರ್ಭಗುಡಿಯ ಬಾಗಿಲ ಸಂದಿನಲ್ಲಿ ಹಾವೊಂದು ಒಂದಷ್ಟು ದಿನ ಠಿಕಾಣಿ ಹೂಡಿತ್ತು. ಸಾಮಾನ್ಯವಾಗಿ ಹಾವುಗಳು ನಿಧಿ ಕಾಯುತ್ತವೆ ಅನ್ನೋದು ನಂಬಿಕೆಯ ಮಾತು. ಹಾಗಾಗಿ ಈಗ ನಾಗರಾಜ ಕೂಡಾ ದೇವಸ್ಥಾನದ ಹುಂಡಿಯನ್ನು ಕಾಯುತ್ತಾ ಅಲ್ಲೇ ಮೊಕ್ಕಾಂ ಹೂಡಿದ್ದನಾ ಅನ್ನೋ ಅನುಮಾನ ಬಂದರೆ ತಪ್ಪೇನಿಲ್ಲ. ಯಾಕಂದ್ರೆ ಉರಗ ತಜ್ಞರು ಬಂದು ಎಷ್ಟೇ ಹರಸಾಹಸ ಮಾಡಿದರೂ ಹಾವು ಅಲ್ಲಿಂದ ಕದಲಲು ತಯಾರಿರಲಿಲ್ಲವಂತೆ. ಕೊನೆಗೆ ಹಾವನ್ನು ಅದರ ಪಾಡಿಗೆ ಬಿಟ್ಟು ಜನ ಎಂದಿನಂತೆ ದೇವರ ದರ್ಶನ ಮತ್ತು ಪೂಜೆಯಲ್ಲಿ ನಿರತರಾಗಿದ್ದರು. ಆದರೆ ಹಾವಿನ ಚಲನವಲನಗಳ ಮೇಲೆ ಸಿಸಿಟಿವಿ ಮೂಲಕ ನಿಗಾ ಇಡಲಾಗಿತ್ತಂತೆ. ಕೊನೆಗೆ ಒಂದು ರಾತ್ರಿ ಆ ಹಾವು ತನ್ನ ಜಾಗ ಬಿಟ್ಟು ದೇವಾಲಯದಿಂದ ಹೊರಹೋಗಿರುವ ದೃಶ್ಯ ಸಿಸಿಟಿವಿ ಫೂಟೇಜ್‌ನಿಂದ ಗೊತ್ತಾಗಿದೆ.

ಸಂಪಾದಕರ ಸದ್ಯಶೋಧನೆ

ಡಾ.ಕಲಾಂ ಮತ್ತು ಕೋವಿಂದ

ರಾಷ್ಟ್ರಪತಿಯಾಗಿದ್ದಾಗ 5 ವರ್ಷಗಳನ್ನು ರಾಮನಾಥ ಕೋವಿಂದ ಹೇಗೆ ಕಳೆದರು ಎಂಬುದು ಅನೇಕರಿಗೆ ಗೊತ್ತೇ ಆಗಲಿಲ್ಲ. ರಾಷ್ಟ್ರಪತಿ ಎಂಬ ಆ ಘನವ್ಯಕ್ತಿ ಸುದ್ದಿಯಲ್ಲೇ ಇರುತ್ತಿರಲಿಲ್ಲ. ಅವರ ಮಾತು, ಕೃತಿ, ಭಾಷಣ ಸುದ್ದಿಯಾಗುತ್ತಿರಲಿಲ್ಲ. ಅವರ ತತ್ತ್ವ, ಸಿದ್ಧಾಂತಗಳೇನು ಎಂಬುದು ಹೆಚ್ಚಿನವರಿಗೆ ತಿಳಿಯಲಿಲ್ಲ. ಅವರ ಒಲವು-ನಿಲುವುಗಳೇನು ಎಂಬುದೂ ನಿಗೂಢವಾಗಿತ್ತು. ಅವರ ಅನಿಸಿಕೆ, ಆಚಾರ, ಆಚರಣೆಗಳೇನು ಎಂಬುದು ಸಹ ಗೊತ್ತಾಗಲಿಲ್ಲ. ಅವರು ರಾಷ್ಟ್ರಪತಿ ಭವನ ಎಂಬ ಭವ್ಯಗೂಡಿನಲ್ಲಿ ಗುಬ್ಬಚ್ಚಿಯಂತೆ ಇದ್ದುಬಿಟ್ಟಿದ್ದರು. ಅವರು ಕನಿಷ್ಠ ಪತ್ರಿಕೆಗಳಲ್ಲಿ ಮುಖಪುಟದ ಸುದ್ದಿ ಅಥವಾ ಫೋಟೋಸುದ್ದಿಯೂ ಆಗಲಿಲ್ಲ. ಕೋವಿಡ್ ನಂತರ ಕೋವಿಂದ ಮತ್ತಷ್ಟು ತೆರೆಮರೆಗೆ ಸರಿದುಬಿಟ್ಟರು. ರಾಷ್ಟ್ರಪತಿಯಂಥ ಹುದ್ದೆಯಲ್ಲಿರುವವರು ಇಷ್ಟು ನೇಪಥ್ಯಕ್ಕೆ ಸರಿಯಬಾರದು ಮತ್ತು ಹೊರಜಗತ್ತಿನ ಜತೆ ಸಂಬಂಧ ಕಡಿದುಕೊಂಡು ಬದುಕಬಾರದು. ತಮಗೂ ಒಂದು ಸ್ವತಂತ್ರ ವ್ಯಕ್ತಿತ್ವವಿದೆ ಎಂಬುದನ್ನಾದರೂ ಆಗಾಗ ತೋರಿಸಬೇಕು. ಆದರೆ ಕೋವಿಂದರನ್ನು ನೋಡಿದರೆ ಇಂಥ ಯಾವ ಲಕ್ಷಣಗಳೂ ಕಾಣಿಸುತ್ತಿರಲಿಲ್ಲ. ಹಳೆಯ ಮಫತ್‌ಲಾಲ್ ಸೂಟಿಂಗ್ಸ್‌ನ ವೃದ್ಧ ರೂಪದರ್ಶಿಯಂತೆ ಕಾಣುತ್ತಿದ್ದರು! ಡಾ.ಅಬ್ದುಲ್ ಕಲಾಂ ರಾಜಕಾರಣಿಯಾಗಿರಲಿಲ್ಲ. ಕಾನೂನು, ಸಂವಿಧಾನ, ಸಂಸದೀಯ ನಡಾವಳಿ ಇತ್ಯಾದಿಗಳ ಬಗ್ಗೆ ಅವರಿಗೆ ಹೆಚ್ಚಿನ ಅರಿವು ಇರಲಿಲ್ಲ. ಮೂಲತಃ ಅವರು ವಿಜ್ಞಾನಿ. ರಕ್ಷಣಾ ಸಚಿವರಿಗೆ ಮತ್ತು ಪ್ರಧಾನ ಮಂತ್ರಿಗಳಿಗೆ ವೈಜ್ಞಾನಿಕ ಸಲಹೆಗಾರರಾಗಿದ್ದರಿಂದ, ಅಧಿಕಾರದ ಮೊಗಸಾಲೆಗೆ ಬಂದು-ಹೋಗುತ್ತಿದ್ದರು. ಅದು ಬಿಟ್ಟರೆ, ಅವರಿ ಗೂ ರಾಜಕೀಯಕ್ಕೂ ಅಷ್ಟಕ್ಕಷ್ಟೇ. ಅವರು ರಾಷ್ಟ್ರಪತಿಯಾದಾಗ, ಅನೇಕರಿಗೆ ಸಂದೇಹಗಳಿದ್ದವು. ಆದರೆ ಡಾ.ಕಲಾಂ ಈ ದೇಶ ಕಂಡ ಅತ್ಯಂತ ವರ್ಚಸ್ವಿ, ಪ್ರಭಾವಿ, ಜನಪ್ರಿಯ, ಜನಸಾಮಾನ್ಯರ ರಾಷ್ಟ್ರಪತಿ ಎಂದು ಕರೆಯಿಸಿಕೊಂಡರು. ಘನತೆವೆತ್ತ ರಾಷ್ಟ್ರಪತಿ ಕುರ್ಚಿಯನ್ನು ಅವರು ರಾಷ್ಟ್ರಪತಿ ಭವನದ ಹೊರಗಡೆ ತಂದು ಇಟ್ಟರು. ಜನಸಾಮಾನ್ಯರ ಬಳಿ ಹೋದರು. ರಾಷ್ಟ್ರಪತಿಗೆ ಅಂಟಿಕೊಂಡಿದ್ದ ಶಿಷ್ಟಾಚಾರದ ಮೈಲಿಗೆಯನ್ನು ಕಿತ್ತೆಸೆದರು. ಹಾಗೆಂದು ರಾಷ್ಟ್ರಪತಿ ಪೀಠದ ಘನತೆಯನ್ನು ಸ್ವಲ್ಪವೂ ದುರ್ಬಲಗೊಳಿಸಲಿಲ್ಲ. ಅವರು ಸಿದ್ಧಭಾಷಣ ಬಿಟ್ಟು, ಆಶುಭಾಷಣ ಮಾಡಿದರು. ಮಕ್ಕಳು ಮತ್ತು ಯುವಕರ ಮಾರ್ಗದರ್ಶನಕ್ಕಾಗಿ ತಮ್ಮ ಸಮಯವನ್ನು ಮುಡಿಪಾಗಿಟ್ಟರು. ಅವರಲ್ಲಿ ಪ್ರೇರಣೆ ತುಂಬುವ, ಹುರಿದುಂಬಿಸುವ ಕೆಲಸ ಮಾಡಿದರು. ಅವರಲ್ಲಿ ಕನಸಿನ ಬೀಜ ಬಿತ್ತಿದರು. ರಾಷ್ಟ್ರಪತಿ ಡಾ.ಕಲಾಂ, ಕಲಾಂ ಮೇಷ್ಟ್ರಾದರು. ಅವರು ಯಾವ ವಿವಾದಗಳನ್ನು ಎಳೆದುಕೊಳ್ಳಲಿಲ್ಲ. ರಾಷ್ಟ್ರಪತಿ ಭವನದ ಸುತ್ತಮುತ್ತ ತಮ್ಮ ಕುಟುಂಬದವರನ್ನು ಬಿಟ್ಟುಕೊಳ್ಳಲಿಲ್ಲ. ಅವರೇನೂ ಎರಡನೇ ಅವಧಿಗೆ ಯಾರ ಮುಂದೆಯೂ ಹಲ್ಲು ಗಿಂಜಲಿಲ್ಲ. ಅವರೇ ಮತ್ತೊಂದು ಅವಧಿಗೆ ರಾಷ್ಟ್ರಪತಿ ಆಗಲಿ ಎಂಬ ಜನರ ಒತ್ತಾಸೆಯ ಕೂಗು ಮಾತ್ರ ದೇಶಾದ್ಯಂತ ಕೇಳಿ ಬಂತು. ಆದರೆ ರಾಜಕೀಯ ಕಾರಣಗಳಿಂದ ಅದು ಈಡೇರಲಿಲ್ಲ. ಮಾಜಿ ಆದ ಬಳಿಕವೂ ಕಲಾಂ ವರ್ಚಸ್ಸು ಕಡಿಮೆಯಾಗಲಿಲ್ಲ. ರಾಷ್ಟ್ರಪತಿ ಹುದ್ದೆಗೆ ಡಾ.ಕಲಾಂ ಮರ್ಯಾದೆ, ಘನತೆ, ಅರ್ಥವಂತಿಕೆ ಮತ್ತು ಸಾರ್ಥಕ್ಯವನ್ನು ತಂದುಕೊಟ್ಟರು. ಸಾಮಾನ್ಯವಾಗಿ ರಾಷ್ಟ್ರಪತಿ ಹುದ್ದೆಗೇರುವವರು ನಿವೃತ್ತಿಯಂಚಿನಲ್ಲಿರುವ ವೃದ್ಧ ರಾಜಕಾರಣಿಗಳು. ಜೀವನದುದ್ದಕ್ಕೂ ರಾಜಕಾರಣ ಮಾಡಿ ಸುಸ್ತಾಗಿ, ರಾಷ್ಟ್ರಪತಿ ಭವನದಲ್ಲಿ ಸರಕಾರಿ ಖರ್ಚಿನಲ್ಲಿ ದಣಿವು ಆರಿಸಿಕೊಳ್ಳಲು ಅಂತಿಮ ನಿಲ್ದಾಣ ಕಂಡುಕೊಳ್ಳುವವರು. ಅಲ್ಲಿ ಅವರಿಗೆ ಕೈಗೆ-ಕಾಲಿಗೆ ಆಳುಗಳು, ಸೇವಕರು. ಸರಕಾರಿ ಮೇಜವಾನಿಕೆಯಲ್ಲಿ ದೌಲತ್ತು ಮೆರೆದು ಹೋಗುತ್ತಾರೆ. ಮೂಲತಃ ಅವರು ಅಧಿಕಾರದಲ್ಲಿರುವ ಪಕ್ಷದ ನಾಯಕರ ಬಾಲಬಡುಕರಾಗಿರುತ್ತಾರೆ. ಇಲ್ಲದಿದ್ದರೆ ಆ ಸ್ಥಾನಕ್ಕೆ ಹೋಗಲು ಸಾಧ್ಯವಿಲ್ಲ. ಡಾ.ಕಲಾಂ ಅವರನ್ನು ರಾಷ್ಟ್ರಪತಿ ಮಾಡಿದ್ದು ವಾಜಪೇಯಿ ಸರಕಾರ. ಅವರು ನಿವೃತ್ತರಾಗುವಾಗ ಯುಪಿಎ ಸರಕಾರವಿತ್ತು. ಸೋನಿಯಾ ಗಾಂಧಿ ಪ್ರಧಾನಿಯಾಗಲು ಡಾ.ಕಲಾಂ ತೊಡಕಾದರು ಎಂಬುದು ಗೊತ್ತಿರುವ ರಹಸ್ಯ. ಹೀಗಾಗಿ ಸೋನಿಯಾ, ಡಾ.ಕಲಾಂ ಇನ್ನೊಂದು ಅವಧಿಗೆ ರಾಷ್ಟ್ರಪತಿ ಆಗಲು ಸಮ್ಮತಿಸಲಿಲ್ಲ.

ಮೆಸೊಪೊಟೋಮಿಯನ್ ನಾಗರಿಕತೆಯ ಆಸ್ಪತ್ರೆಗಳು

ಡಾ. ನಾ.ಸೋಮೇಶ್ವರ
ಹಿಂದಿರುಗಿ ನೋಡಿದಾಗ
vveditoped@gmail.com

ನಮ್ಮ ಪೂರ್ವಜರ ಕಾಲಮಾನವನ್ನು ಶಿಲಾಯುಗ, ಕಂಚಿನ ಯುಗ ಮತ್ತು ಕಬ್ಬಿಣದ ಯುಗ ಎಂದು ವರ್ಗೀಕರಿಸಬಹುದು. ಶಿಲಾಯುಗವನ್ನು ಮತ್ತೆ ಮೂರು ಉಪಯುಗಗಳನ್ನಾಗಿ ವರ್ಗೀಕರಿಸುವ ಪದ್ಧತಿಯಿದೆ.

- ಪ್ರಾಚೀನ ಶಿಲಾಯುಗ, ಕ್ರಿ.ಪೂ.5,00,000-ಕ್ರಿ.ಪೂ. 10,000 ವರ್ಷಗಳು ನಡುವಿನ ಅವಧಿ;
- ಮಧ್ಯಮ ಶಿಲಾಯುಗ, ಕ್ರಿ.ಪೂ.10,000-ಕ್ರಿ.ಪೂ.6,000 ವರ್ಷಗಳ ನಡುವಿನ ಅವಧಿ;
- ನವಶಿಲಾಯುಗ, ಕ್ರಿ.ಪೂ.6000-ಕ್ರಿ.ಪೂ.1,000 ವರ್ಷಗಳ ನಡುವಿನ ಅವಧಿ.

ನವಶಿಲಾಯುಗದ ಕಾಲವ್ಯಾಪ್ತಿಯಲ್ಲಿ 'ಕಂಚಿನಯುಗ' ಅಥವಾ 'ಚಾಲ್ಕೋಲಿಥಿಕ್' ಯುಗವು ಅಲ್ಲಲ್ಲಿ ಕಾಣಿಸಿಕೊಂಡಿತು. ಸರಿಸುಮಾರು 3,000 ವರ್ಷಗಳ ಹಿಂದೆ ಆರಂಭವಾಗಿ ಕ್ರಿ.ಪೂ.500ರವರೆಗೆ ಮುಂದುವರಿಯಿತು. ಗ್ರೀಕ್ ಭಾಷೆಯಲ್ಲಿ 'ಖಾಲ್ಕೋಸ್' ಎಂದರೆ ತಾಮ್ರ, 'ಲಿಥೋಸ್' ಎಂದರೆ ಕಲ್ಲು. ಹಾಗಾಗಿ ಚಾಲ್ಕೋಲಿಥಿಕ್ ಯುಗವನ್ನು 'ತಾಮ್ರಶಿಲಾಯುಗ' ಎಂದು ಕರೆಯುವುದುಂಟು. ಆದರೆ ವಾಡಿಕೆಯಲ್ಲಿ ಈ ಅವಧಿಯು ಕಂಚಿನ ಯುಗ (ಬ್ರಾಂಜ್ ಏಜ್) ಎಂದೇ ಪ್ರಸಿದ್ಧವಾಗಿದೆ. ಈ ಅವಧಿಯಲ್ಲಿ ನಮ್ಮ ಪೂರ್ವಜರು ತಾಮ್ರವನ್ನು ಮೊದಲ ಬಾರಿಗೆ ಕಂಡುಹಿಡಿದರು ಎನ್ನುವುದು ನಿಜ. ಆದರೆ ಅವರು ತಾಮ್ರಕ್ಕಿಂತ ಕಂಚನ್ನು, ಕಂಚಿನಿಂದ ಮಾಡಿದ ಉಪಕರಣಗಳನ್ನೇ ಬಳಸಿದ್ದು ಹೆಚ್ಚು. ತಾಮ್ರದ ಜತೆಯಲ್ಲಿ ಸುಮಾರು ಶೇ.12ರಷ್ಟು ತವರವನ್ನು ಮಿಶ್ರ ಮಾಡಿದರೆ ಕಂಚು ದೊರೆಯುತ್ತದೆ. ಈ ಕಂಚಿನ ಯುಗದ ನಂತರ 'ಕಬ್ಬಿಣದ ಯುಗ'ವು ಸರಿಸುಮಾರು ಕ್ರಿ.ಪೂ.1500ರಲ್ಲಿ ಆರಂಭವಾಗಿ ಕ್ರಿ.ಪೂ.200ರವರೆಗೆ ಮುಂದುವರಿಯಿತು.

ನಮ್ಮ ಪೂರ್ವಜರು ಈ ಕಂಚಿನ ಯುಗದಲ್ಲಿ ಐದು ಮಹಾನ್ ನಾಗರಿಕತೆಗಳನ್ನು ಕಟ್ಟಿದರು. ಈ ನಾಗರಿಕತೆಗಳ ನಿರ್ಮಾಣದಲ್ಲಿ ಕಂಚು ಮತ್ತು ಕಂಚಿನಿಂದ ಮಾಡಿದ ಆಯುಧಗಳು, ಗೃಹೋಪಕರಣಗಳು, ಸಾಧನಗಳು ಸಾಮ್ರಾಜ್ಯ ವಿಸ್ತರಣೆಗೆ, ಕೃಷಿಗೆ ಹಾಗೂ ನಗರ ನಿರ್ಮಾಣಕ್ಕೆ ನೆರವಾದವು. ಪ್ರಾಚೀನ ಮೆಸೊಪೊಟೋಮಿಯನ್ ನಾಗರಿಕತೆ (ಕ್ರಿ.ಪೂ.4400-ಕ್ರಿ.ಪೂ.1900), ಪ್ರಾಚೀನ ಸಿಂಧು-ಸರಸ್ವತಿ ಕಣಿವೆಯ ನಾಗರಿಕತೆ (ಕ್ರಿ.ಪೂ.3300-ಕ್ರಿ.ಪೂ.1300), ಪ್ರಾಚೀನ ಈಜಿಪ್ಷಿಯನ್ ನಾಗರಿಕತೆ (ಕ್ರಿ.ಪೂ.3100-ಕ್ರಿ.ಪೂ.332), ಪ್ರಾಚೀನ ಮಿನೋವನ್ ನಾಗರಿಕತೆ (ಕ್ರಿ.ಪೂ.3000-ಕ್ರಿ.ಪೂ.1100) ಮತ್ತು ಪ್ರಾಚೀನ ಚೀನೀ ನಾಗರಿಕತೆ (ಕ್ರಿ.ಪೂ.1600-ಕ್ರಿ.ಪೂ.221) ಈ ಐದು ನಾಗರಿಕತೆಗಳಲ್ಲಿ ಮೆಸೊಪೊಟೋಮಿಯನ್ ನಾಗರಿಕತೆಯಲ್ಲಿ ವೈದ್ಯಕೀಯ, ವೈದ್ಯಕೀಯ ಪದ್ಧತಿ ಹಾಗೂ ಆಸ್ಪತ್ರೆಗಳು ಬೆಳೆದು ಬಂದ ಬಗೆಯತ್ತ ಒಂದು ಪಕ್ಷಿನೋಟವನ್ನು ಹರಿಸೋಣ.

ಮೆಸೊಪೊಟೋಮಿಯನ್ ನಾಗರಿಕತೆಯನ್ನು 'ನಾಗರಿಕತೆಯ ತೊಟ್ಟಿಲು' (ಕ್ರಾಡಲ್ ಆಫ್ ಸಿವಿಲೈಜೇಶನ್) ಎಂದು ಕರೆಯುವುದುಂಟು. ಹಾಗಾಗಿ ಸಮಕಾಲೀನ ಮನುಕುಲ ನಾಗರಿಕತೆಯ ಎಲ್ಲ ಬೇರುಗಳನ್ನು ಮೆಸೊಪೊಟೋಮಿಯನ್ ನಾಗರಿಕತೆಯಲ್ಲೇ ಹುಡುಕಬೇಕಾಗುತ್ತದೆ. ಸಮಕಾಲೀನ ಆಸ್ಪತ್ರೆಗಳ ನಿರ್ಮಾಣ ಹಾಗೂ ಕಾರ್ಯವೈಖರಿಗಳ ಸ್ಥೂಲ ಪರಿಕಲ್ಪನೆಯು ಮೆಸೊಪೊಟೋಮಿಯನ್ ನಾಗರಿಕತೆಯಲ್ಲಿ ಕಂಡುಬರುತ್ತದೆ. ಪ್ರಾಚೀನ ಮೆಸೊಪೊಟೋಮಿಯನ್ ನಾಗರಿಕತೆಯನ್ನು ನಾವು ಇಂದು 'ಇರಾಕ್' ಎಂಬ ಹೆಸರಿನಿಂದ ಗುರುತಿಸುತ್ತೇವೆ. ಸಿರಿಯ, ಇರಾನ್ ಮತ್ತು ತುರ್ಕಿಯ ಕೆಲವು ಭೂಭಾಗಗಳು ಸಹ ಮೆಸೊಪೊಟೋಮಿಯನ್ ನಾಗರಿಕತೆಯ ವ್ಯಾಪ್ತಿಯಲ್ಲಿ ಒಳಗೊಳ್ಳುತ್ತವೆ.

ದೇವಾಲಯ ಮತ್ತು ಆಸ್ಪತ್ರೆ: ಜಗತ್ತಿನ ಎಲ್ಲ ನಾಗರಿಕತೆಗಳ ಜನರು ದೈವ ಅಥವಾ ದೇವ್ವಗಳ ಕೋಪದ ಕಾರಣ ನಾನಾ ರೀತಿಯ ರೋಗ-ರುಜಿನಗಳು, ಸಾವು- ನೋವುಗಳು ಬರುತ್ತವೆ ಎಂದು ನಂಬಿದ್ದರು. ಪುರೋಹಿತರು ದೈವ/ದೆವ್ವ ಮತ್ತು ಸಾಮಾನ್ಯ ಜನರ ನಡುವೆ ಕೊಂಡಿಯಾಗಿದ್ದರು. ಜನಸಾಮಾನ್ಯರ ನೋವುಗಳನ್ನು ದೈವ/ದೆವ್ವಗಳಿಗೆ ನಿವೇದಿಸಿ, ಅವರಿಂದ ಉಪಶಮನದ ಮಾರ್ಗವನ್ನು ತಿಳಿದು, ಪರಿಹಾರೋಪಾಯವನ್ನು ತಿಳಿಸುತ್ತಿದ್ದರು. ಹಾಗಾಗಿ ಆರಂಭದ ದಿನಗಳಲ್ಲಿ ದೇವಾಲಯಗಳು ಬೇರೆ ಬೇರೆ ಆಗಿರಲಿಲ್ಲ. ಅವೆರಡೂ ಒಂದೇ ಆಗಿದ್ದವು. ಇದರಿಂದಾಗಿ ದೇವಾಲಯಗಳಲ್ಲಿಯೇ ರೋಗಿಗಳು ಉಳಿದುಕೊಳ್ಳುತ್ತಿದ್ದರು. ಅವರಿಗೆ ದೇವಾಲಯಗಳಲ್ಲಿಯೇ ಚಿಕಿತ್ಸಾ ಸೌಲಭ್ಯಗಳು ದೊರೆಯುತ್ತಿದ್ದವು.

ಈಜಿಪ್ಷಿಯನ್ ಸಂಸ್ಕೃತಿ ಎಂದರೆ ಮೊದಲು ನಮ್ಮ ನೆನಪಿನಲ್ಲಿ ಪಿರಮಿಡ್ಡುಗಳು ಮೂಡುತ್ತವೆ. ಹಾಗೆಯೇ ಮೆಸೊಪೊಟೋಮಿಯನ್ ಸಂಸ್ಕೃತಿಯೆಂದರೆ ನಮ್ಮ ಮನಸ್ಸಿನಲ್ಲಿ ಜ಼ಿಗುರಾತ್ ಮೂಡುತ್ತವೆ. ಜ಼ಿಗುರಾತ್ ಎನ್ನುವ ಬೃಹತ್ ಕಟ್ಟಡದಲ್ಲಿ ದೇವಾಲಯವಿರುತ್ತಿತ್ತು. ಅಲ್ಲಿ ಧಾರ್ಮಿಕ/ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು. ಹಾಗೆಯೇ ಇವು ಆಡಳಿತ ನಿರ್ವಹಣಾ ಕೇಂದ್ರಗಳಾಗಿದ್ದವು. ಇವುಗಳ ಜತೆಯಲ್ಲಿ ಆಸ್ಪತ್ರೆಯೂ ಇರುತ್ತಿದ್ದವು. ಉದಾಹರಣೆಗೆ ಮೆಸೊಪೊಟೋಮಿಯನ್ ಸಂಸ್ಕೃತಿಯ ಪ್ರಾಚೀನ ನಗರಗಳಲ್ಲಿ ಒಂದಾದ 'ಎರುಡು'ವಿನಲ್ಲಿರುವ ಜ಼ಿಗುರಾತ್. ಇದರ ಅಧಿದೈವ ಎಂಕಿ. ಎಂಕಿಯು ಜ್ಞಾನ, ಜಲ, ಮಂತ್ರ-ತಂತ್ರ ಹಾಗೂ ಚಿಕಿತ್ಸಾ ವೈದ್ಯನಾಗಿದ್ದ. ಉರ್ ಮತ್ತು ಬ್ಯಾಬಿಲೋನ್ ನಗರಗಳಲ್ಲೂ ಜ಼ಿಗುರಾತ್ ಇದ್ದವು.

ಪ್ರಾಚೀನ ಮೆಸೊಪೊಟೋಮಿಯನ್ ಸಂಸ್ಕೃತಿಯಲ್ಲಿ ಎರಡು ವರ್ಗದ ವೈದ್ಯರಿದ್ದರು. ಮೊದಲನೆಯವರನ್ನು 'ಅಸು' ಅಥವಾ 'ಚಿಕಿತ್ಸಾ ವೈದ್ಯರು' ಎಂದು ಕರೆಯಬಹುದು. ಹೆಸರೇ ಸೂಚಿಸುವ ಹಾಗೆ, ಇವರು ನಾನಾ ರೀತಿಯ ಮೂಲಿಕೆಗಳನ್ನು ಪ್ರಯೋಗಿಸಿ ರೋಗರುಜಿನಗಳನ್ನು ನಿಯಂತ್ರಿಸುತ್ತಿದ್ದರು. ಎರಡನೆಯ ವರ್ಗದವರೇ 'ಅಸಿಪು' ವೈದ್ಯರು. ಇವರನ್ನು 'ಮಂತ್ರವೈದ್ಯರು' ಎಂದು ಕರೆಯಬಹುದು. ಇವರು ನಾನಾ ರೀತಿಯ ಮಂತ್ರ-ತಂತ್ರಗಳನ್ನು ಪಠಿಸಿ ದುಷ್ಟಶಕ್ತಿಗಳನ್ನು ಹೊಡೆದೋಡಿಸುತ್ತಿದ್ದರು. ತಾಯತಗಳನ್ನು ಕಟ್ಟಿ ರಕ್ಷಣೆಯನ್ನು ಒದಗಿಸುತ್ತಿದ್ದರು. 'ಸಬ್ಲೂತು' ಎಂಬ ಸೂಲಗಿತ್ತಿಯರು ಇರುತ್ತಿದ್ದರು. ಸೂಲಗಿತ್ತಿಯರೇ ಹೆರಿಗೆಯನ್ನು ಮಾಡಿಸುತ್ತಿದ್ದರು. ವೈದ್ಯರು ಹೆರಿಗೆಯನ್ನು ಮಾಡಿಸುತ್ತಿರಲಿಲ್ಲ. ಆದರೆ ವೈದ್ಯರು ಹೆರಿಗೆಯ ಅವಧಿಯಲ್ಲಿ ಅಗತ್ಯ ವೈದ್ಯಕೀಯ ಉಪಚಾರಗಳನ್ನು ನಿರ್ವಹಿಸುತ್ತಿದ್ದರು. ಹೆರಿಗೆಯ ಅವಧಿಯಲ್ಲಿ ಮಂತ್ರವೈದ್ಯರು ಇರುತ್ತಿದ್ದರು. ಶಿಶುಗಳನ್ನು ಬಲಿ ತೆಗೆದುಕೊಳ್ಳುವ ಅಥವಾ ಹೊತ್ತೊಯ್ಯುವ 'ಲಮಾ ಷ್ತು' ಅಥವಾ 'ಪಜ್ಹೂಜ್ಹು' ದುಷ್ಟಶಕ್ತಿಗಳನ್ನು ನಿಗ್ರಹಿಸುತ್ತಿದ್ದರು. ಈ ಎರಡೂ ವರ್ಗದ ವೈದ್ಯರು ಆಸ್ಪತ್ರೆಗಳಲ್ಲಿಯೇ ಇರುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಇವರು ರೋಗಿಯ ಮನೆಗೇ ಹೋಗಿ, ಅಲ್ಲಿ ಅಗತ್ಯ ಸೇವೆಯನ್ನು ಸಲ್ಲಿಸುತ್ತಿದ್ದರು. ಅಸು ಮತ್ತು ಅಸಿಪು ವೈದ್ಯಕೀಯವನ್ನು ಸ್ತ್ರೀ-ಪುರುಷರಿಬ್ಬರೂ ಕಲಿಯಲು ಅವಕಾಶವಿತ್ತು. ಆದರೆ ಸ್ತ್ರೀವೈದ್ಯರಿಗಿಂತ ಪುರುಷವೈದ್ಯರೇ ಅಧಿಕ ಪ್ರಮಾಣದಲ್ಲಿದ್ದರು ಎನ್ನಲಾಗಿದೆ.

ದುಷ್ಟ ಶಕ್ತಿಗಳಿಂದ ರಕ್ಷಣೆಯನ್ನು ಕೊಡುವ ತಾಯತ

ಪ್ರಾಚೀನ ಮೆಸೊಪೊಟೋಮಿಯನ್ ಸಂಸ್ಕೃತಿಯಲ್ಲಿ ಆರೋಗ್ಯದ ಅಧಿದೇವತೆಯ ಹೆಸರು 'ಗುಲ'. ಗುಲ ಎಂಬ ಶಬ್ದವನ್ನು 'ಗ್ರೇಟ್', 'ಮಹಾನ್' ಎಂದು ಅರ್ಥೈಸಬಹುದು. ಸ್ವಾಸ್ಥ್ಯ ಮಹಾನ್ ಅಧಿದೇವತೆ ಎನ್ನುವುದು ಈ ಹೆಸರಿನ ಸಾರಾಂಶ. ಈಕೆಯನ್ನು 'ನಿನ್‌ಕರಾಕ್' ಎಂದೂ ಕರೆಯುತ್ತಿದ್ದರು. 'ಕರಾಕ್' ಎನ್ನುವುದು ಒಂದು ನಗರದ ಹೆಸರು. ನಿನ್‌ಕರಾಕ್ ಎಂದರೆ 'ಕರಾಕ್ ನಗರದ ದೇವಿ' ಎಂದರ್ಥ. ಪ್ರತಿಮಾಶಾಸ್ತ್ರದ ಅನ್ವಯ ಈಕೆಯ ವಿಗ್ರಹವು ನಕ್ಷತ್ರಗಳ ನಡುವೆ ತೇಲುತ್ತಿರುವ ಹಾಗೆ ಕೆತ್ತುತ್ತಿದ್ದರು ಹಾಗೂ ಜತೆಯಲ್ಲಿ ಒಂದು ನಾಯಿ ಇರುತ್ತಿತ್ತು. ಈ ದೇವಾಲಯ ಆಸ್ಪತ್ರೆಗಳಲ್ಲಿ ದೊರೆಯುತ್ತಿದ್ದ ಸೇವೆಗಳೆಂದರೆ:

ವೈದ್ಯಕೀಯ ಸಲಹೆ (ಮೆಡಿಕಲ್ ಕನ್ಸಲ್ಟೇಷನ್): ನಮ್ಮ ಇಂದಿನ ಆಸ್ಪತ್ರೆಗಳ ಹಾಗೆ, ಜನಸಾಮಾನ್ಯರು ದೇವಾಲಯ ಆಸ್ಪತ್ರೆಗಳಿಗೆ ಬರುತ್ತಿದ್ದರು. ತಮ್ಮ ಅನಾರೋಗ್ಯವನ್ನು ನಿವೇದಿಸಿಕೊಳ್ಳುತ್ತಿದ್ದರು ಹಾಗೂ ವೈದ್ಯರು ನೀಡುತ್ತಿದ್ದ ಚಿಕಿತ್ಸೆ, ಸಲಹೆ ಮತ್ತು ಮಾರ್ಗದರ್ಶನಗಳನ್ನು ಅನುಸರಿಸುತ್ತಿದ್ದರು.

ಶಸ್ತ್ರವೈದ್ಯಕೀಯ (ಸರ್ಜರಿ): ಕೆಲವು ಆದಿಮ ಶಸ್ತ್ರಚಿಕಿತ್ಸೆಗಳು ನಡೆಯುತ್ತಿದ್ದವು. ಸಾಮಾನ್ಯವಾಗಿ ಹಲವು ವಿಧವಾದ ಗಾಯಗಳಿಗೆ ಚಿಕಿತ್ಸೆಯು ದೊರೆಯುತ್ತಿತ್ತು. ಜಾರಿದ ಕೀಲುಗಳನ್ನು ಮರುಕೂರಿಸುತ್ತಿದ್ದರು ಅಥವಾ ಮುರಿದ ಮೂಳೆಗಳಿಗೆ ಕಟ್ಟು ಕಟ್ಟುತ್ತಿದ್ದರು. ಕಣ್ಣುಪೊರೆಗೂ ಚಿಕಿತ್ಸೆಯು ದೊರೆಯುತ್ತಿತ್ತು.

ಮದ್ದಿನಂಗಡಿ (ಫಾರ್ಮಸಿ): ದೇವಾಲಯ ಆಸ್ಪತ್ರೆಗಳಲ್ಲಿ ಮೂಲಿಕಾ ಔಷಧಗಳನ್ನು, ಕಷಾಯಗಳನ್ನು, ಲೇಪನಗಳನ್ನು ತಯಾರಿಸಿ ಅವನ್ನು ರೋಗಿಗಳಿಗೆ ನೀಡುವ ವ್ಯವಸ್ಥೆ ಇರುತ್ತಿತ್ತು.

ಆಧ್ಯಾತ್ಮಿಕ ಚಿಕಿತ್ಸೆ (ಸ್ಪಿರಿಚುವಲ್ ಹೀಲಿಂಗ್): ರೋಗ-ರುಜಿನಗಳು ದೈವ/ದೆವ್ವದ ಕೋಪದ ಕಾರಣ ಬರುತ್ತವೆ ಎಂಬ ನಂಬಿಕೆಯು ಪ್ರಧಾನವಾಗಿದ್ದ ಕಾರಣ, ಅವುಗಳನ್ನು ಆರಾಧನೆ ಮತ್ತು ಕಾಣಿಕೆಗಳ ಮೂಲಕ ಒಲಿಸಿಕೊಳ್ಳುವ ಪ್ರಯತ್ನಗಳು ನಡೆಯುತ್ತಿದ್ದವು. ಮಂತ್ರ, ತಂತ್ರ, ಭಜನೆ, ಪೂಜೆ, ಆರಾಧನೆಗಳ ಮೂಲಕ ತಮ್ಮ ರೋಗ-ರುಜಿನಗಳನ್ನು ಗುಣಪಡಿಸುವಂತೆ ಪ್ರಾರ್ಥಿಸುತ್ತಿದ್ದರು. ಅಂದಿನ 'ಅಸಿಪು' ವೈದ್ಯರು ರೋಗಿಗಳಿಗೆ ಧೈರ್ಯ, ಭರವಸೆ ಹಾಗೂ ಸಾಂತ್ವನಗಳನ್ನು ನೀಡುತ್ತಿದ್ದರು.

ದೇವಾಲಯ ಆಸ್ಪತ್ರೆಗಳ ನಿರ್ಮಾಣ ಹಾಗೂ ಕಾರ್ಯವು ಪೂರ್ವಯೋಜಿತವಾಗಿ ಇರುತ್ತಿತ್ತು. ದೇವಾಲಯಗಳ ಆಸ್ಪತ್ರೆಗಳಿಗೆ ಬರುವವರು ನಡೆದುಕೊಳ್ಳಬೇಕಾದ ರೀತಿ ರಿವಾಜುಗಳನ್ನು ತಿಳಿಸುವ ಜೇಡಿಮಣ್ಣಿನ ಹಲಗೆಗಳು ಇರುತ್ತಿದ್ದವು. ದೇವಾಲಯ ಆಸ್ಪತ್ರೆಗಳಲ್ಲಿ ವಿವಿಧ ವಿಭಾಗಗಳು ಇರುತ್ತಿದ್ದವು. ದೇವಾಲಯದ ಗರ್ಭಗುಡಿ ಹಾಗೂ ಪ್ರಾರ್ಥನಾ ಮಂದಿರ, ವೈದ್ಯರ ಪರೀಕ್ಷಾ ಸ್ಥಳ, ಔಷಧ ತಯಾರಿಕೆ ಮತ್ತು ವಿತರಣೆಯ ಸ್ಥಳ ಹಾಗೂ ರೋಗಿಗಳು ಉಳಿದುಕೊಳ್ಳಲು ಇಂದಿನ ವಾರ್ಡ್ ರೂಪದ ಕೋಣೆಗಳು ಇರುತ್ತಿದ್ದವು. ಸೋಂಕು ರೋಗದಿಂದ ನರಳುತ್ತಿದ್ದವರಿಗೆ ಪ್ರತ್ಯೇಕ ವಾರ್ಡ್ ಇರುತ್ತಿದ್ದವು. ಅವರಿರುವ ಕೊಠಡಿಯೊಳಗೆ ಅಸು ವೈದ್ಯರು ಹಾಗೂ ಅವರ ಸಹಾಯಕರಿಗೆ ಮಾತ್ರ ಪ್ರವೇಶವಿರುತ್ತಿತ್ತು. ದೇವಾಲಯ ಆಸ್ಪತ್ರೆಗಳಲ್ಲಿ ದಾಖಲೀಕರಣ ವ್ಯವಸ್ಥೆಯು ಅಚ್ಚುಕಟ್ಟಾಗಿರುತ್ತಿತ್ತು. ಎಷ್ಟು ಜನ ರೋಗಿಗಳು ಬಂದರು, ಅವರ ಅನಾರೋಗ್ಯದ ಸ್ವರೂಪ (ರೋಗನಿದಾನ), ಅವರಿಗೆ ಏನು ಚಿಕಿತ್ಸೆಯನ್ನು ನೀಡಲಾಯಿತು, ಎಷ್ಟು ದಿನ ಆಸ್ಪತ್ರೆಯಲ್ಲಿದ್ದರು, ಅವರು ಪೂರ್ಣ ಗುಣಮುಖರಾದರೆ? ಎನ್ನುವ ಬಗ್ಗೆ ವಿವರಗಳಿರುವ ಜೇಡಿಮಣ್ಣಿನ ಫಲಕಗಳನ್ನು ರಕ್ಷಿಸಿಡುತ್ತಿದ್ದರು.

ಹಮುರಬಿಯ ವೈದ್ಯಕೀಯ ನೀತಿ ಸಂಹಿತೆ (ಕೋಡ್ ಆಫ್ ಹಮುರಬಿ) ಮನುಕುಲದ ಲಭ್ಯ ನ್ಯಾಯವೈದ್ಯಕೀಯ ಕಾನೂನು. ತಪ್ಪು ಮಾಡಿದ ವೈದ್ಯರಿಗೆ ಕಠಿಣ ಶಿಕ್ಷೆಯನ್ನು ನೀಡುತ್ತಿದ್ದರು. ಈ ವ್ಯವಸ್ಥೆಯು ವೈದ್ಯರನ್ನು ಸದಾ ಜಾಗರೂಕತೆಯಿಂದ ವೃತ್ತಿಯಲ್ಲಿ ತೊಡಗುವಂತೆ ಎಚ್ಚರಿಸುತ್ತಿತ್ತು.

ಪ್ರಾಚೀನ ಮೆಸೊಪೊಟೋಮಿಯನ್ ವೈದ್ಯರ ವೈದ್ಯಕೀಯ ಜ್ಞಾನವು ಸೀಮಿತವಾಗಿತ್ತು. ಆದರೆ ಅವರು ವ್ಯಕ್ತಿಯ ರೋಗಲಕ್ಷಣಗಳನ್ನು ಅನುಸರಿಸಿ, ಇವು ಕಾಯಜನ್ಯವಾದದ್ದೋ ಅಥವ ದೈವಪ್ರಕೋಪದಿಂದ (ಮನೋಜನ್ಯ?) ಹುಟ್ಟಿದ್ದೋ ಎನ್ನುವುದನ್ನು ತಿಳಿಯಲು ಶಕ್ತರಿದ್ದರು. ಈ ಹಿನ್ನೆಲೆಯಲ್ಲಿ ಚಿಕಿತ್ಸೆಯನ್ನು ನೀಡುತ್ತಿದ್ದ ಪರಿಯು ತರ್ಕಬದ್ಧವಾಗಿತ್ತು ಎನ್ನಬಹುದು. ಅವರು ತಮಗೆ ತಿಳಿದಿದ್ದ ವಿಷಯ ಜ್ಞಾನವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದರು. ಅವರು ಪ್ರಧಾನವಾಗಿ ಗಿಡಮೂಲಿಕೆಗಳು, ಖನಿಜಗಳು ಹಾಗೂ ಕೆಲವು ಪ್ರಾಣಿಜನ್ಯ ವಸ್ತುಗಳಿಂದ ಔಷಧಗಳನ್ನು ತಯಾರಿಸುತ್ತಿದ್ದರು. ಅವರು ನೋವು ನಿವಾರಣೆಗಾಗಿ ವಿಲ್ಲೋ ತೊಗಟೆಯನ್ನು (ಸ್ಯಾಲಿಕ್ಸ್ ಹರ್ಬೇಶಿಯೆ) ಬಳಸುತ್ತಿದ್ದರು. ಅದನ್ನು ಇಂದಿಗೂ ನಾವು ಬಳಸುತ್ತಿದ್ದೇವೆ. ವಿಲ್ಲೋ ತೊಗಟೆ/ಎಲೆಯಲ್ಲಿರುವ 'ಅಸಿಟೈಲ್ ಸ್ಯಾಲಿಸಿಲಿಕ್ ಆಸಿಡ್' ಜ್ವರಹಾರಕ ಹಾಗೂ ನೋವು ನಿವಾರಕ ಎಂಬ ಅಂಶ ನಮಗೆ ತಿಳಿದಿದೆ. ಪ್ರಾಚೀನ ಮೆಸೊಪೊಟೋಮಿಯನ್ ವೈದ್ಯರಿಗೆ ಸುಮಾರು 5000 ಮೂಲಿಕೆಗಳ ಪರಿಚಯವಿತ್ತು ಎನ್ನಲಾಗಿದೆ.

ಮೆಸೊಪೊಟೋಮಿಯನ್ ಸಂಸ್ಕೃತಿಯು ಆಚರಣೆಗೆ ತಂದ ಆಸ್ಪತ್ರೆಗಳ ಉತ್ತರದಾಯಿತ್ವವನ್ನು ಹಾಗೂ ಪ್ರಭಾವವನ್ನು ಈಜಿಪ್ಷಿಯನ್ ಸಂಸ್ಕೃತಿಯ ವೈದ್ಯಕೀಯ ಪದ್ಧತಿಯಲ್ಲಿ ನೋಡಬಹುದು. ಹಾಗೆಯೇ ನಂತರ ಆವಿರ್ಭವಿಸಿದ ಗ್ರೀಕ್ ಮತ್ತು ರೋಮನ್ ಸಂಸ್ಕೃತಿಗಳೂ ಮೆಸೊಪೊಟೋಮಿಯನ್ ಆರೋಗ್ಯ ಸಂಸ್ಕೃತಿಯ ಉತ್ತಮಾಂಶಗಳನ್ನು ತಮ್ಮ ಸಂಸ್ಕೃತಿಯಲ್ಲೂ ಅಳವಡಿಸಿಕೊಳ್ಳಲು ಹಿಂಜರಿಯಲಿಲ್ಲ. ಹಾಗಾಗಿ ಈ ಪ್ರಾಚೀನ ಸಂಸ್ಕೃತಿಯು ಹಾಕಿಕೊಟ್ಟ ಬಲವಾದ ಅಡಿಪಾಯದ ಮೇಲೆ ಆಧುನಿಕ ವೈದ್ಯಕೀಯವು ಬೆಳೆದುಬಂದಿತು ಎನ್ನಲು ಯಾವುದೇ ಅಡ್ಡಿಯಿಲ್ಲ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಮುಂದೆ ಹೀಗಾಗದಿರಲಿ

ತುಂಗಭದ್ರಾ ಅಣೆಕಟ್ಟಿನ ಕ್ರಸ್ಟ್ ಗೇಟ್ ಒಂದರ ಸರಪಳಿ ಮುರಿದುಹೋದ ಕಾರಣ, ದೊಡ್ಡ ಸಮಸ್ಯೆಯಾಗಿ ಏನು ಅನಾಹುತವಾಗುವುದೋ ಎಂಬ ಭಯ ಎದುರಾಗಿತ್ತು. ಆದರೆ ಜಲಾಶಯದ ನೀರನ್ನು ತುರ್ತಾಗಿ ಗಣನೀಯ ಪ್ರಮಾಣದಲ್ಲಿ ಹೊರಬಿಟ್ಟಿದ್ದರಿಂದ ಮತ್ತು ಗೇಟನ್ನು ಸಮರ್ಥರಿಂದ ಸರಿಪಡಿಸಲು ಕ್ಷಿಪ್ರಕ್ರಮ ಕೈಗೊಂಡಿದ್ದರಿಂದ, ಏನೂ ಅನಾಹುತವಾಗಲಿಲ್ಲ. ಅಂಕಣಕಾರ ಶಿಶಿರ್ ಹೆಗಡೆಯವರ ಕಳೆದ ವಾರದ ಲೇಖನದಲ್ಲಿದ್ದಂತೆ ಅಣೆಕಟ್ಟು ಯಾವತ್ತಿದ್ದರೂ ತಲೆಯ ಮೇಲೆ ತೂಗುತ್ತಿರುವ ಕತ್ತಿಯಂತೆ, ಕೆಳಭಾಗದ ಜನರಿಗೆ ದುರಂತದ ಸುಳಿವನ್ನೇ ನೀಡದೆ ಅದು ಬಲಿ ತೆಗೆದುಕೊಳ್ಳಬಹುದು. ಸದ್ಯಕ್ಕೆ ಸಮಸ್ಯೆಯ ಪರಿಹಾರವಾದಂತಾಗಿದೆ. ಹಾಗಂತ ಸರಕಾರ ಕಣ್ಣುಮುಚ್ಚಿ ಕುಳಿತುಕೊಳ್ಳಬಾರದು. ಮುಂದಿನ ದಿನಗಳಲ್ಲಿ ಇಂಥ ಅನಾಹುತಗಳು ಆಗದಂತಿರಲು ರಾಜ್ಯದ ಎಲ್ಲಾ ಜಲಾಶಯಗಳ ನಿರ್ವಹಣೆಯ ಸ್ಥಿತಿಗತಿ ಮತ್ತು ಆಗಬೇಕಿರುವ ದುರಸ್ತಿ ಕಾರ್ಯಗಳ ಬಗ್ಗೆ ಅದು ಗಮನ ಹರಿಸುವಂತಾಗಲಿ.

- ಜಯರಾಂ ಪಣಿಯಾಡಿ, ಬೆಂಗಳೂರು

ಸಾಕು ಈ ಹಗ್ಗಜಗ್ಗಾಟ

ರಾಜ್ಯದ ಬಿಜೆಪಿ ನಾಯಕರು ಈಚೀಚೆಗೆ ಕೇವಲ ರಾಜಕೀಯ ಲಾಭಕ್ಕಾಗಿ ಹೋರಾಡುತ್ತಿರುವಂತಿದೆ. ಇದರಿಂದಾಗಿ ಸಮಾಜದ ಶಾಂತಿ-ನೆಮ್ಮದಿಗೆ ಭಂಗ ಒದಗುತ್ತಿದೆಯೆಂದು ರಾಜ್ಯದ ಜನರು ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸುವಂತಾಗಿದೆ. ಯಡಿಯೂರಪ್ಪನವರು ಬಿಜೆಪಿಯ ನಾಯಕರಾಗಿದ್ದಾಗ, ಜನರ ಅಭಿವೃದ್ಧಿಗೆ ಪೂರಕವಾದ ಹೋರಾಟ ಮಾಡಿ ಪಕ್ಷವನ್ನು ಬೆಳೆಸಿದ್ದರು. ಆದರೆ ಇಂದು ಬಿ.ವೈ. ವಿಜಯೇಂದ್ರ ಅವರು ಅನುಭವದ ಕೊರತೆಯಿಂದಾಗಿ ಕಡ್ಡಿಯನ್ನು ಗುಡ್ಡ ಮಾಡುತ್ತಿದ್ದಾರೆ. ಇದರಿಂದಾಗಿ ಕಾಂಗ್ರೆಸ್ ಸರಕಾರಕ್ಕೆ ಪರೋಕ್ಷವಾಗಿ ಹೆಚ್ಚು ಲಾಭವಾಗುತ್ತಿದೆ ಹಾಗೂ ಬಿಜೆಪಿಯ ಬಗೆಗಿನ ಜನರ ಒಲವು ಕ್ಷೀಣಿಸುತ್ತಿದೆ. ಒಟ್ಟಾರೆ ಹೇಳುವುದಾದರೆ, ರಾಜ್ಯ ಮತ್ತು ರಾಷ್ಟ್ರ ರಾಜಕಾರಣದಲ್ಲಿ ನಡೆಯುತ್ತಿರುವ ಹಗ್ಗಜಗ್ಗಾಟಗಳನ್ನು ನೋಡುತ್ತಿರುವ ಶ್ರೀಸಾಮಾನ್ಯರಲ್ಲಿ ರಾಜಕೀಯವೆಂದರೆ ತಾತ್ಸಾರಭಾವ ಮೂಡುತ್ತಿದೆ.

- ಸುರೇಂದ್ರ ಪೈ, ಭಟ್ಕಳ

ಪರಸ್ಪರ ಕೈಜೋಡಿಸಿ

ತಾವು ನಂಬಿದ ಮೌಲ್ಯಗಳೊಂದಿಗೆ ರಾಜಿ ಮಾಡಿಕೊಳ್ಳದೆ ಬದುಕುತ್ತಾ, ಜನರ ಸೇವೆಯೇ ಜನಾರ್ದನನ ಸೇವೆ ಅಂತ ಭಾವಿಸುವುದು ನಮ್ಮ ರಾಜಕಾರಣಿಗಳ ಪರಿಪಾಠವಾಗಬೇಕು. ತಾವು ಜನನಾಯಕರಲ್ಲ, ಜನಸೇವಕರು ಎಂಬ ಅರಿವು ಅವರಿಗೆ ಇರಬೇಕು. ರಾಜಕಾರಣಿಯಾದವನು ಜನರ ಪಾಲಿಗೆ ವಕೀಲನಂತೆ, ರಾಯಭಾರಿಯಂತೆ ಕೆಲಸ ಮಾಡಬೇಕು. ಎಲ್ಲರಿಗೂ ಸಮಾನ ಹಕ್ಕುಗಳನ್ನು ದೊರಕಿಸಲು ಮುಂದಾಗಬೇಕು. ಮಾನವ ಹಕ್ಕುಗಳ ರಕ್ಷಣೆಗೆ ಕಟಿಬದ್ಧನಾಗಬೇಕು.

ಆದರೆ ಇತ್ತೀಚಿನ ರಾಜ್ಯ ರಾಜಕೀಯವನ್ನು ನೋಡುತ್ತಿದ್ದರೆ, ರಾಜಕಾರಣಿಗಳು ಇವೆಲ್ಲವನ್ನೂ ಬದಿಗೊತ್ತಿ ತಮ್ಮ ರಾಜಕೀಯ ಎದುರಾಳಿಗಳ ಕಾಲೆಳೆದು, ನಿಂದಿಸಿ, ಬೈದಾಡಿಕೊಂಡು ದಿನ ದೂಡುವುದೇ ನಿಜವಾದ ರಾಜಕಾರಣ ಎಂದು ಭಾವಿಸಿದಂತಿದೆ. ಜನಸೇವೆಯ ಉದ್ದೇಶವನ್ನು ಕೆಲ ರಾಜಕಾರಣಿಗಳು ಮರೆತಂತಿದೆ. ತಮ್ಮ ಎದುರಾಳಿ ನಾಯಕರನ್ನು ಹಣಿಯಲು ಎಲ್ಲರೂ ರಾಜಕಾರಣವನ್ನು ಬಳಸಿಕೊಳ್ಳುತ್ತಿದ್ದಾರೆ. ಪರಸ್ಪರರ ವಿರುದ್ಧ ಕತ್ತಿ ಮಸೆಯುತ್ತಿದ್ದಾರೆ. ಪ್ರತಿನಿತ್ಯ ದಿನಪತ್ರಿಕೆಗಳು ಹಾಗೂ ಸುದ್ದಿವಾಹಿನಿಗಳ ತುಂಬೆಲ್ಲಾ ಬರೀ ಕಿತ್ತಾಟದ, ಪರಸ್ಪರ ದೋಷಾರೋಪಗಳ, ನಿಂದನೆಯ ಸುದ್ದಿಗಳನ್ನು ಜನತೆ ನೋಡುವಂತಾಗಿದೆ. ತಮ್ಮ ಮೇಲೆ ನಂಬಿಕೆ ಇಟ್ಟು ಚುನಾಯಿಸಿ ಕಳುಹಿಸಿದ ಜನತೆಗೆ ಹಾಗೂ ಕ್ಷೇತ್ರಕ್ಕೆ ತಮ್ಮ ಅಧಿಕಾರಾವಧಿಯಲ್ಲಿ ಜನರು ನೆನಪಿಡುವಂಥ ಅಭಿವೃದ್ಧಿ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದನ್ನು ರಾಜಕಾರಣಿಗಳು ಮರೆತಿರುವುದು ದುರಂತವೇ ಸರಿ. ರಾಜ್ಯದ ಕೋಟ್ಯಂತರ ಮಂದಿಯ ಬದುಕು ಹಾಗೂ ನೆಮ್ಮದಿಯನ್ನು ಗಮನದಲ್ಲಿಟ್ಟುಕೊಂಡು, ತಮ್ಮ ಅಹಂ ಹಾಗೂ ಹಠಮಾರಿತನವನ್ನು ಬಿಟ್ಟು, ಪ್ರತಿಯೊಂದರಲ್ಲೂ ರಾಜಕೀಯ ಮಾಡದೇ ಜನರ ಒಳಿತಿಗಾಗಿ ಶ್ರಮಿಸಬೇಕು ಎಂಬುದನ್ನು ಪ್ರತಿಯೊಬ್ಬ ರಾಜಕಾರಣಿಯೂ ಅರಿಯಬೇಕಿದೆ. ವಿಪರ್ಯಾಸವೆಂದರೆ, ಇಂಥದೊಂದು ಬದಲಾವಣೆಗೆ ಈಗಿನ ರಾಜಕಾರಣಿಗಳು ಮನಸ್ಸು ಮಾಡುತ್ತಿಲ್ಲ, ಇದು ಖೇದಕರ. ರಾಜಕಾರಣಿಗಳ ಕನಸು, ಕನವರಿಕೆಗಳು ಆಕಾಶಕ್ಕಿಂತ ಮಿಗಿಲಾದ ವಿಸ್ತಾರ ಹೊಂದಿರಬೇಕಾದ್ದು ಈ ಕ್ಷಣದ ಅನಿವಾರ್ಯತೆ. ಆದ್ದರಿಂದ ರಾಜಕಾರಣಿಗಳು ಇನ್ನಾದರೂ ಪರಸ್ಪರ ಕೆಸರೆರಚಾಟ, ರಂಪಾಟ ಬಿಟ್ಟು ರಾಜ್ಯದ ಅಭಿವೃದ್ಧಿಗೆ ಮತ್ತು ಜನರ ಕಲ್ಯಾಣಕ್ಕೆ ಪರಸ್ಪರ ಕೈಜೋಡಿಸುವಂತಾಗಲಿ.

- ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಪಂಚ ಗ್ಯಾರಂಟಿ ಯೋಜನೆಗಳ ಸುತ್ತಮುತ್ತ

ವಿಶ್ಲೇಷಣೆ
ರಮಾನಂದ ಶರ್ಮಾ
vveditoped@gmail.com

ಯಾವುದೇ ಕಾರಣಕ್ಕೆ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮ್ಮ ಸ್ವಾತಂತ್ರ್ಯೋತ್ಸವದ ಸಂದೇಶದಲ್ಲಿ ಖಡಾಖಂಡಿತವಾಗಿ ಹೇಳಿದ್ದಾರೆ ಮತ್ತು ಆಶ್ವಾಸನೆ ನೀಡಿದ್ದಾರೆ. ಆದರೂ ಈ ನಿಟ್ಟಿನಲ್ಲಿ ಹಲವು ವದಂತಿಗಳು ಹರಿದಾಡುತ್ತಲೇ ಇವೆ. 'ಗ್ಯಾರಂಟಿ ಯೋಜನೆಗಳಿಗೆ ಸದ್ಯದಲ್ಲಿಯೇ ಎಳ್ಳು-ನೀರು ಸಾಧ್ಯತೆ', 'ಅಳಿವಿನಂಚಿನಲ್ಲಿ ಗ್ಯಾರಂಟಿ ಯೋಜನೆಗಳು', 'ಗ್ಯಾರಂಟಿ ಯೋಜನೆಗಳ ಪರಿಷ್ಕರಣೆ', 'ಮಾನದಂಡದಲ್ಲಿ ಮಾರ್ಪಾಡು', 'ಉಳ್ಳವರಿಗೆ ಗ್ಯಾರಂಟಿ ಯೋಜನೆ ಇಲ್ಲ, ಬಡತನ ರೇಖೆಯಿಂದ ಕೆಳಗಿದ್ದವರಿಗೆ ಮಾತ್ರ' ಹೀಗೆ ಸಾಗುತ್ತದೆ ವದಂತಿಗಳ ಸಾಲು. ಗ್ಯಾರಂಟಿ ಯೋಜನೆಗಳ ಮುಂದುವರಿಕೆಯ ವಿಷಯದಲ್ಲಿ ಪಕ್ಷದೊಳಗೇ ಕೆಲವರು ಅಪಸ್ವರ ಎತ್ತಿದ್ದು, 'ಈ ಯೋಜನೆಗಳಿಂದಾಗಿ ಅಭಿವೃದ್ಧಿ ಕುಂಠಿತವಾಗಿದೆ, ನಿರೀಕ್ಷೆಯಷ್ಟು ಅನುದಾನ ಹರಿಯುತ್ತಿಲ್ಲ' ಎಂಬ ಅಸಮಾಧಾನ ಅವರಿಂದ ವ್ಯಕ್ತವಾಗುತ್ತಿದೆಯಂತೆ.

ಹಣದುಬ್ಬರದ ದಿನಗಳಲ್ಲಿ ಖರೀದಿ ಶಕ್ತಿ ಕುಂದಿರುವಾಗ ಜನಸಾಮಾನ್ಯರಿಗೆ ಸ್ವಲ್ಪ breathing space ನೀಡಲು ಜಾರಿಗೊಳಿಸಲಾಗಿದ್ದ ಈ ಯೋಜನೆಗಳಿಗೆ ವಾರ್ಷಿಕ ಸುಮಾರು 6,000 ಕೋಟಿ ರು. ವೆಚ್ಚವಾಗುತ್ತಿದ್ದು, ಕೆಲವು ಸಮೀಕ್ಷೆಗಳ ಪ್ರಕಾರ ಜನರು ಇದನ್ನು ಸ್ವಾಗತಿಸಿದ್ದಾರೆ. 'ಶಕ್ತಿ' ಯೋಜನೆ ಅಡಿಯಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ನೀಡುವ ಕೊಡುಗೆಗೆ ಈವರೆಗೆ 6,541 ಕೋಟಿ ರು. ಖರ್ಚಾಗಿದ್ದರೆ, 'ಗೃಹಜ್ಯೋತಿ' ಯೋಜನೆ ಅಡಿಯಲ್ಲಿ ಪ್ರತಿ ಮನೆಗೆ 200 ಯುನಿಟ್‌ವರೆಗೆ ಉಚಿತ ವಿದ್ಯುತ್ ನೀಡಲು 8,844 ಕೋಟಿ, 'ಗೃಹಲಕ್ಷ್ಮಿ' ಯೋಜನೆಯಡಿ 25,200 ಕೋಟಿ ವೆಚ್ಚವಾಗಿದೆ. 'ಅನ್ನಭಾಗ್ಯ' ಯೋಜನೆಯಡಿ 7,763 ಕೋಟಿ, 'ಯುವನಿಧಿ' ಹೆಸರಿನಲ್ಲಿ ನಿರುದ್ಯೋಗಿ ಡಿಪ್ಲೊಮಾ ಮತ್ತು ಪದವೀಧರರಿಗೆ 91 ಕೋಟಿ ರು. ನೀಡಲಾಗಿದೆ. ಈ ಯೋಜನೆಗಳಿಂದ ಫಲಾನುಭವಿಗಳ ಹೊಟ್ಟೆ ಪೂರ್ಣವಾಗಿ ತುಂಬಿಲ್ಲದಿರಬಹುದು, ಆದರೆ ಹಸಿದ ಹೊಟ್ಟೆಗೆ ಕಿಂಚಿತ್ತಾದರೂ ಉಣಿಸಿದ ಸಮಾಧಾನ ಕಾಣುತ್ತದೆ. ಯೋಜನೆ ಯಾವುದೇ ಇರಲಿ, ಅದರ ಅನುಷ್ಠಾನದಲ್ಲಿ ನೂರಕ್ಕೆ ನೂರರಷ್ಟು ಯಶಸ್ಸು ದೊರಕುವುದು ಕಷ್ಟ. ಒಂದು ಕಾಲಕ್ಕೆ ಭಾರಿ ಸುದ್ದಿ ಮಾಡಿದ್ದ, ಇಂದಿರಾ ಗಾಂಧಿಯವರ '20 ಅಂಶಗಳ ಕಾರ್ಯಕ್ರಮ'ದ ಅನುಷ್ಠಾನದಲ್ಲಿ ಕೂಡ ನಿರೀಕ್ಷಿತ ಪರಿಣಾಮಕಾರಿತ್ವ ಮತ್ತು ದಕ್ಷತೆ ಇರಲಿಲ್ಲ. ಆದರೆ ಮೂಲೋದ್ದೇಶವನ್ನು ಸಾಧಿಸುವಲ್ಲಿ ಈ ಯೋಜನೆ ಯಶಸ್ಸು ಕಂಡಿತ್ತು.

ಸಿದ್ದರಾಮಯ್ಯ ಸರಕಾರದ ಪಂಚ ಗ್ಯಾರಂಟಿ ಯೋಜನೆಗಳು ಆರಂಭದಿಂದಲೂ ಒಂದು ರೀತಿಯ ಬಾಲಗ್ರಹ ಪೀಡೆಗೆ ಒಳಗಾಗಿದ್ದವು. ರಾಜಕೀಯದ under current ಇದೆ ಎನ್ನಲಾದ ಈ ಯೋಜನೆಗಳನ್ನು, ಮತದಾರರ ಮನವೊಲಿಸಿ ಚುನಾವಣೆ ಗೆಲ್ಲಲು ರೂಪಿಸಿದ್ದು ಎಂದು ಸಿದ್ದರಾಮಯ್ಯನವರ ರಾಜಕೀಯ ವಿರೋಧಿಗಳು ದೇಶಾದ್ಯಂತ ಬಿಂಬಿಸಿದ್ದರು. ಇದರಲ್ಲಿ ಹುದುಗಿರುವ ಸಾಮಾನ್ಯ ಜನರ ಆರ್ಥಿಕ ಉನ್ನತಿಯ ಅಂಶವನ್ನು ಹತ್ತಿಕ್ಕಿ, 'ಇಂಥ ಯೊಜನೆಗಳಿಂದ ದೇಶ ದಿವಾಳಿಯಗುತ್ತದೆ; ಅಫ್ಘಾನಿಸ್ತಾನ, ಪಾಕಿಸ್ತಾನ ಮತ್ತು ಶ್ರೀಲಂಕಾದಂತೆ ದೇಶವು ಆರ್ಥಿಕ ಕ್ಷೋಭೆಗೆ ಒಳಗಾಗುತ್ತದೆ. ದೇಶವು ಅಂತಾರಾಷ್ಟ್ರೀಯ ಹಣಕಾಸು ಮಾರುಕಟ್ಟೆಯಲ್ಲಿ ಭಿಕ್ಷೆ ಯಾಚಿಸುವ ದಿನ ದೂರವಿಲ್ಲ' ಎಂದೆಲ್ಲಾ ಅಪಪ್ರಚಾರ ಮಾಡಿದರು. ಬಹುತೇಕ ಬಡ ಮತ್ತು ಮಧ್ಯಮ ವರ್ಗದವರಿಗೆ ನೀಡುವ ಈ ಗ್ಯಾರಂಟಿ ಮತ್ತು ಉಚಿತ ಭಾಗ್ಯಗಳನ್ನು ಹೀನಾಯವಾಗಿ 'ಬಿಟ್ಟಿಭಾಗ್ಯ' ಎಂದು ಕರೆಯಲಾಯಿತು. ಕೆಲ ಮಾಧ್ಯಮದವರು ಮತ್ತು ಬುದ್ಧಿಜೀವಿಗಳು ಈ ಯೋಜನೆಗಳನ್ನು ಮನಸಾರೆ ಟೀಕಿಸಿದರು, ರೀಮುಗಟ್ಟಲೆ ಬರೆದರು. ಜನರ ತೆರಿಗೆ ಹಣ ಬಿಟ್ಟಿಭಾಗ್ಯಗಳಿಗೆ ಹರಿದುಹೋಗುತ್ತಿದ್ದು, ಅಭಿವೃದ್ಧಿಯ ರೈಲಿಗೆ ಇನ್ನು ಹಸಿರು ನಿಶಾನೆ ಅಸಾಧ್ಯ ಎಂದು ಕೊರೆದರು. ವಿಪರ್ಯಾಸವೆಂದರೆ, ಸಿದ್ದರಾಮಯ್ಯನವರ ಗ್ಯಾರಂಟಿ ಯೋಜನೆಗಳನ್ನು ಹೀಗೆ ಲೇವಡಿ ಮಾಡಿದ್ದವರು, ರಾಜಸ್ಥಾನ ಮತ್ತು ಮಧ್ಯಪ್ರದೇಶ ರಾಜ್ಯಗಳಲ್ಲಿ ಇಂಥದೇ ಯೋಜನೆಗಳ ಭರವಸೆ ನೀಡಿ ಅಧಿಕಾರ ಹಿಡಿದಾಗ ದನಿಯೆತ್ತಲಿಲ್ಲ. ರಾಜಕೀಯದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ, 'ನಾನು ಮಾಡಿದರೆ ಸರಿ, ಅದನ್ನೇ ಇನ್ನೊಬ್ಬ ಮಾಡಿದರೆ ತಪ್ಪು' ಎಂಬ ಅಲಿಖಿತ ಸಿದ್ಧಾಂತಕ್ಕೆ ಕೆಲವು ರಾಜಕೀಯ ಪಕ್ಷಗಳು ಶರಣಾಗಿದ್ದು ದುರಂತ.

ವಾಸ್ತವದಲ್ಲಿ ಈ ಗ್ಯಾರಂಟಿಗಳನ್ನು 'ಸರಿ' ಎನ್ನಲಾಗದು ಮತ್ತು 'ತಪ್ಪು' ಎಂದೂ ಅಭಿಪ್ರಾಯಪಡಲಾಗದು. ಇವುಗಳಲ್ಲಿ ಸಕಾರಾತ್ಮಕ ಮತ್ತು ನಕಾರಾತ್ಮಕ ಎರಡೂ ಅಂಶಗಳಿವೆ. ಒಂದು ನಿಶ್ಚಿತ ಅಥವಾ ಕಡಿಮೆ ವರಮಾನ ಇರುವವರ ಬದುಕು ಹಣದುಬ್ಬರದಿಂದ ದುಸ್ತರವಾಗುತ್ತಿರುವಾಗ, ಅವರಿಗೆ ತಿಂಗಳ ಕೊನೆ ಕಾಣಲು ಯಾವುದಾದರೂ ರೂಪದಲ್ಲಿ ನಾಲ್ಕು ಕಾಸನ್ನು ನೀಡುವುದರಲ್ಲಿ ತಪ್ಪೇನಿಲ್ಲ. ಇಂಥ ನೆರವು ನೀಡುವುದು ಸರಕಾರದ ಕರ್ತವ್ಯ ಕೂಡಾ ಎನ್ನಬಹುದು. ಜನರು ಕೂಡ ದೇಶವನ್ನು ಮುನ್ನಡೆಸಲು ದಿನದ 24 ಗಂಟೆ ಯಾವುದಾದರೊಂದು ರೂಪದಲ್ಲಿ ತೆರಿಗೆ ನೀಡುವ ಮೂಲಕ ಸರಕಾರಿ ಬೊಕ್ಕಸವನ್ನು ಸಮೃದ್ಧಗೊಳಿಸುತ್ತಲೇ ಇರುತ್ತಾರೆ. ಹೀಗೆ ಸರಕಾರಕ್ಕೆ ನೀಡಿದ ಹಣದಲ್ಲಿ ಒಂದಷ್ಟು ಭಾಗವನ್ನು ಇಂಥ ಭಾಗ್ಯಗಳ ಮೂಲಕ ವಾಪಸ್ ಪಡೆಯುವುದರಲ್ಲಿ ತಪ್ಪೇನಿಲ್ಲ. ಈ ಭಾಗ್ಯವನ್ನು ಸರಕಾರದ್ದೇ ಹಣವೆಂದು ಧಾರಾಳವಾಗಿ ಹೇಳಲಾಗದು.

ಗ್ಯಾರಂಟಿ ಯೋಜನೆಗಳನ್ನು ರೂಪಿಸುವಾಗ, ಮಾನದಂಡವನ್ನು ನಿಗದಿಪಡಿಸುವಾಗ, ಚುನಾವಣಾ ದಿನ ಸಮೀಪಿಸುತ್ತಿದ್ದ ಅವಸರದಲ್ಲಿ ಸ್ವಲ್ಪ ಎಡವಿದಂತೆ ಕಾಣುತ್ತಿದ್ದು, ಅದು ಸರಕಾರಕ್ಕೆ ದುಬಾರಿಯಾಗಿ ಪರಿಣಮಿಸುವ ಲಕ್ಷಣ ಕಾಣುತ್ತದೆ. 'ಬಡತನ ರೇಖೆಯಿಂದ ಕೆಳಗಿದ್ದವರಿಗೆ ಅಥವಾ ಆದಾಯ ಕರ ಮಿತಿಯೊಳಗೆ ಆದಾಯವಿದ್ದವರಿಗೆ ಎಂದು ಒತ್ತುನೀಡಿ ಯೋಜನೆಗಳನ್ನು ಘೋಷಿಸಿದ್ದರೆ ಸರಕಾರ ಈಗಿನ ಸಂಕಷ್ಟದಲ್ಲಿ ಇರುತ್ತಿರಲಿಲ್ಲ; ಹಾಗೆಯೇ ಶಕ್ತಿ ಯೋಜನೆ ಅಡಿಯಲ್ಲಿ ಪ್ರಯಾಣದ ದೂರಕ್ಕೆ ಗರಿಷ್ಠ ಮಿತಿಯನ್ನು ಹೇರಬೇಕಿತ್ತು' ಎಂದು ತಜ್ಞರು ಅಲವತ್ತುಕೊಳ್ಳುತ್ತಾರೆ. ಇದನ್ನು, 'ದಿನಾ ಉದ್ಯೋಗಕ್ಕೆ ತೆರಳಲು ಬಸ್ಸನ್ನು ಅವಲಂಬಿಸಿರುವವರಿಗೆ', 'ಗರಿಷ್ಠ ತಮ್ಮ ತಾಲೂಕಿನೊಳಗೆ ಪ್ರಯಾಣಿಸಲು', 'ದಿನಕ್ಕೊಂದೇ ಬಾರಿ ಪ್ರಯಾಣಕ್ಕೆ ಅವಕಾಶ' ಎಂಬೆಲ್ಲಾ ಕಟ್ಟುಪಾಡುಗಳನ್ನು ವಿಧಿಸಬೇಕಿತ್ತು ಎಂಬ ಅಭಿಪ್ರಾಯವೂ ಇದೆ. ಈ ಯೋಜನೆಯಡಿ ರಾಜ್ಯಾದ್ಯಂತ ಉಚಿತವಾಗಿ ಪ್ರಯಾಣಿಸುವ ಅವಕಾಶ ಮಹಿಳೆಯರಿಗೆ ಇರುವುದರಿಂದ ಬಸ್ಸುಗಳು ಅವರಿಂದ ತುಂಬಿ ತುಳುಕುತ್ತದೆ; ಮಠ-ಮಂದಿರ-ಪುಣ್ಯಕ್ಷೇತ್ರಗಳಲ್ಲಿ ದಟ್ಟಣೆ ಕಾಣುತ್ತಿದ್ದು, ದೇವಸ್ಥಾನಗಳ ಆದಾಯದಲ್ಲಿ ಏರಿಕೆಯಾಗಿದೆ ಎನ್ನುವ ಮಾತು ಕೇಳಿಬರುತ್ತಿದೆ. 'ಸಾರಿಗೆ ಬಸ್ಸುಗಳ ನಷ್ಟವು ಮಂದಿರಗಳ ಆದಾಯವಾಗಿದೆ' ಎಂಬ ಜೋಕ್ ಅಲ್ಲಲ್ಲಿ ಕೇಳುತ್ತದೆ. ಮಹಿಳೆಯರಿಗೆ ಪ್ರಯಾಣ ಉಚಿತ ಮಾಡುವ ಬದಲು ಟಿಕೆಟ್ ದರವನ್ನು ಶೇ.50ರಷ್ಟು ಇಳಿಸಿದ್ದರೂ ಸಾಕಾಗುತ್ತಿತ್ತು; ಗಾರ್ಮೆಂಟ್ಸ್‌ನಲ್ಲಿ ದುಡಿಯುವ ಮಹಿಳೆಯರಿಗೆ ಸಂಬಳ ತುಂಬಾ ಕಡಿಮೆಯಿದ್ದು ಅವರಿಗೆ ಮಾಸಿಕ ಬಸ್ ಪಾಸ್‌ನಲ್ಲಿ ವಿನಾಯಿತಿ ಕೊಡಲಾಗುತ್ತದೆ. ಅದೇ ರೀತಿ ಉಳಿದ ಬಡಕಾರ್ಮಿಕರಿಗೂ ವಿನಾಯಿತಿ ಕೊಡಬಹುದಿತ್ತು ಎನ್ನುವವರಿದ್ದಾರೆ.

ಇನ್ನು ಮಾಸಿಕ 200 ಯುನಿಟ್‌ನಷ್ಟು ಉಚಿತ ವಿದ್ಯುತ್‌ನ ಬಾಬತ್ತಿಗೆ ಬರೋಣ. ಈ ಇತಿಮಿತಿಯ ಆಸುಪಾಸಿನಲ್ಲಿ ವಿದ್ಯುತ್ ಬಳಸುವ ಕೆಲವರು, ಗೀಜರ್ ಬದಲು ಸೋಲಾರ್ ಹೀಟರ್ ಬಳಸಿಕೊಂಡು ತಮ್ಮ ವಿದ್ಯುತ್ ಬಳಕೆಯನ್ನು 200 ಯುನಿಟ್‌ನೊಳಗೆ ಮಿತಗೊಳಿಸಿ 'ಗೃಹಜ್ಯೋತಿ' ಯೋಜನೆಯ ಲಾಭ ಪಡೆದರೆ, ಈವರೆಗೆ 50-150 ಯುನಿಟ್ ಬಳಸುತ್ತಿದ್ದವರು ಧಾರಾಳವಾಗಿ 200 ಯುನಿಟ್ ಬಳಸಿ ಗೃಹಜ್ಯೋತಿಗೆ ಸವಾಲು ಹಾಕುತ್ತಾರೆ ಎನ್ನಲಾಗುತ್ತದೆ. ನೈತಿಕವಾಗಿ ತಪ್ಪು ಎನಿಸಿದರೂ, ಇವೆಲ್ಲವೂ ನಿಯಮಾವಳಿಯಂತೆ ಮತ್ತು ನಿಗದಿತ ಮಾನದಂಡದ ಅಡಿಯಲ್ಲಿ ನಡೆಯುತ್ತಿರುವುದರಿಂದ ಯಾರನ್ನೂ ದೂಷಿಸಲಾಗದು. ಸರಕಾರವು ಚಾಪೆಯ ಅಡಿಯಲ್ಲಿ ನುಸುಳಿದರೆ, ಜನರು ರಂಗೋಲಿಯ ಕೆಳಗೆ ನುಸುಳುವ ಮನಸ್ಥಿತಿಯವರು ಎಂಬುದು ಹೊಸ ಬೆಳವಣಿಗೆಯೇನಲ್ಲ.

ಉಚಿತ, ವಿನಾಯಿತಿ ಇವುಗಳನ್ನು ನೀಡುವಾಗ ಸರಿಯಾಗಿ ಮತ್ತು ಸುದೀರ್ಘವಾಗಿ ಹೋಮ್‌ವರ್ಕ್ ಮಾಡಬೇಕಾಗುತ್ತದೆ. ಇವನ್ನು ಒಮ್ಮೆ ನೀಡಿದ ಮೇಲೆ ವಾಪಸ್ ಪಡೆಯುವುದು ಕ್ಲಿಷ್ಟಕರ. ದೇಶದಲ್ಲಿ ಎಲ್ಲೂ ಇಂಥ ವಿನಾಯಿತಿಯನ್ನು ನೀಡಿ ವಾಪಸ್ ಪಡೆದ ಮಾಹಿತಿಯಿಲ್ಲ. ಬೇಸಗೆ ಮತ್ತು ಚಳಿಗಾಲಕ್ಕೆಂದು ಬಿಡಲಾಗುವ ವಿಶೇಷ ರೈಲುಗಳು, ವಿಮಾನಗಳು ಮುಂದಿನ ದಿನಗಳಲ್ಲಿ ಹಾಗೆಯೇ ಕಾಯಂ ಆಗುವ ಪ್ರಮೇಯವೇ ಹೆಚ್ಚು. ಅವು ಎಂದೂ ರದ್ದಾಗುವುದಿಲ್ಲ. ಅಂತೆಯೇ ಈ ಗ್ಯಾರಂಟಿಗಳನ್ನು ರದ್ದುಮಾಡುವುದು ತುಂಬಾ ಕಷ್ಟ. ಪ್ರಯಾಣಿಕರ ಒತ್ತಾಯಕ್ಕೆ ಸ್ಪಂದಿಸಿ ಯಾವುದಾದರೂ ರೈಲಿಗೆ ತಾತ್ಕಾಲಿಕ ನಿಲುಗಡೆ ನೀಡಿದರೆ, ಅದು ಸಾಮಾನ್ಯವಾಗಿ ಕಾಯಂ ಆಗುತ್ತದೆ, ರದ್ದಂತೂ ಆಗುವುದಿಲ್ಲ. ಅದೇ ರೀತಿ, ಗ್ಯಾರಂಟಿಗಳು ಕೂಡ. ಸಿದ್ದರಾಮಯ್ಯನವರು ಈಗ ಒತ್ತಡದಲ್ಲಿ ಇದ್ದಾರೆ. ಗ್ಯಾರಂಟಿಗಳನ್ನು ಅಕಸ್ಮಾತ್ ರದ್ದುಪಡಿಸಿದರೆ, ಅಂಥ ಕ್ರಮವು ಮುಂಬರುವ ಚುನಾವಣೆಯಲ್ಲಿ ಮಾರ್ಮಿಕ ಏಟು ನೀಡುವುದು ದಿಟ. ರದ್ದುಪಡಿಸದಿದ್ದರೆ ಅಥವಾ ಸೂಕ್ತ ಮಾರ್ಪಾಡು ಮಾಡದಿದ್ದರೆ, ಅಂಥ ನಡೆಯು ಇನ್ನೊಂದು ರೀತಿಯ ಪೆಟ್ಟು ಕೊಡುವುದೂ ಅಷ್ಟೇ ನಿಜ.

(ಲೇಖಕರು ಆರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)

ಭಟ್ಟರ್ ಸ್ಕಾಚ್

● ವಿ.ಹೇಮಂತಕುಮಾರ, ಬೆಂಗಳೂರು
ಕೆಲವರಿಗೆ ಠೇವಣಿ ಕಳೆದುಕೊಳ್ಳುತ್ತೇವೆ ಎಂಬುದು ಗೊತ್ತಿದ್ದರೂ ಚುನಾವಣೆಯಲ್ಲಿ ಸ್ಪರ್ಧಿಸುತ್ತಾರಲ್ಲ?
- ಅನಿಸಿದ್ದನ್ನು ಅನುಸರಿಸು ಎಂಬ ಮಾತಿನಲ್ಲಿ ಅವರಿಗೆ ನಂಬಿಕೆ!

● ಸತೀಶ ಎಲ್.ವಿ., (ಇಮೇಲ್ ಮೂಲಕ)
ಭಟ್ರೇ, ಟ್ರಾನ್ಸ್‌ಫಾರ್ಮರ್ ಪಕ್ಕದಲ್ಲೇ ಕೆಲವರು ಮೂತ್ರ ವಿಸರ್ಜಿಸುತ್ತಾರಲ್ಲ?
- ಕಂಬಕ್ಕೆ ವಿಸರ್ಜಿಸಿದರೆ, ನಾಯಿ ಅನ್ನಬಹುದು ಎಂದು ಭಾವಿಸಿ, ಈ ಎಚ್ಚರಿಕೆ ತೆಗೆದುಕೊಂಡಿರುತ್ತಾರೆ!

● ಸುನಿಲ್ ಕುಮಾರ, ಚನ್ನಪಟ್ಟಣ
ಭಟ್ರೇ, ಹೆಂಡತಿಗೆ ವಿಚಿತ್ರವಾಗಿ ಸರ್‌ಪ್ರೈಸ್ ಕೊಡುವುದು ಹೇಗೆ?
- ಗರ್ಲ್ ಫ್ರೆಂಡ್ ತೋರಿಸಿ, ನಿನ್ನ ಸ್ಥಾನ ತುಂಬಲು ಸೋತ ನತದೃಷ್ಟೆ ಎಂದು ಪರಿಚಯಿಸುವುದು!

● ಶರಣಪ್ಪ ಮಸ್ಕಿ, ಯಲಬುರ್ಗಾ
ಹೆಂಗಸರಿಗೆ ಎರಡು ಬಾಯಿಗಳಿದ್ದಿದ್ದರೆ ?
- ಲಿಪ್‌ಸ್ಟಿಕ್ ಕಂಪನಿಗಳ ಲಾಭ ದ್ವಿಗುಣ ಅಂತ ಹೆಡ್‌ಲೈನ್ ಬರೀತಾ ಇದ್ವಿ!

● ಸಿದ್ದಾಪ್ಪಾಜಿ, ಹರಿಹರ
ಭಟ್ರೇ, ಹೆಂಡತಿಯನ್ನು ನಮ್ಮ ನಿಯಂತ್ರಣದಲ್ಲಿ ಇಟ್ಟುಕೊಳ್ಳುವ ಮಾರ್ಗ ಯಾವುದು ?
- ನೂರೆಂಟು ಮಾರ್ಗಗಳಿವೆ, ಆದರೆ ಯಾವುದೂ ವರ್ಕ್ ಆಗೊಲ್ಲ!

● ಹೇಮಂತ ಬಿ.ಎನ್., (ಇಮೇಲ್ ಮೂಲಕ)
ಹಾಸಿಗೆಯಲ್ಲಿ ಮಲಗಿಯೇ ಜೀವನದಲ್ಲಿ ಯಾರಾದರೂ ಸಾಧಿಸಿದ್ದಾರಾ?
- ಹಾಸಿಗೆ ತಯಾರಕ ಕಂಪನಿಗಳು ಮಾತ್ರ!

● ವೇಣುಗೋಪಾಲ ಕಂಚಿತೋಟ, (ಇಮೇಲ್ ಮೂಲಕ)
ಭಟ್ರೇ, ಆರ್‌ಸಿಬಿ ಕಪ್ ಗೆಲ್ಲೋ ತನಕ ಮದುವೆ ಆಗೊಲ್ಲ ಅಂತ ನನ್ನ ಸ್ನೇಹಿತ ಹೇಳ್ತಾ ಇದ್ದಾನಲ್ಲ?
- ಸರಿ, ಹಾಗಾದರೆ ಈ ಜನ್ಮದಲ್ಲಿ ಅವನಿಗೆ ಮದುವೆ ಇಲ್ಲ ಬಿಡು!

● ಶಾರದಾ ವಿಜಯನಾಥ, ಮೈಸೂರು
ಭಟ್ರೇ, ಎಲ್ಲದಕ್ಕೂ ಯೋಗ್ಯತೆ ಬೇಕು ಅಂತಾರಲ್ಲ?
- ಸಾಲ ಮಾಡೋದಕ್ಕೂ ಅದು ಬೇಕು!

● ರಾಜಾರಾಮ ಹೆಗಡೆ, ಶಿರಸಿ
ಅದೃಷ್ಟವಾಗಿದ್ದು ಶಾಪವಾಗುವುದು ಯಾವಾಗ?
- ನಗುವಾಗ ಕೆನ್ನೆ ಗುಳಿ ಬಿದ್ದರೆ ಅದೃಷ್ಟ, ರಸ್ತೆಗೆ ಗುಳಿ ಬಿದ್ದರೆ ಸಂಕಷ್ಟ

ಕಾಶ್ಮೀರದಿಂದ ಹಿಂದೂಗಳಿಗೆ ಏನು ಲಾಭ?

ಕಹಿವಾಸ್ತವ
ಎಸ್.ಶ್ರೀನಿವಾಸ್
0

ಕೇಂದ್ರದ ಬಿಜೆಪಿ ಸರಕಾರವು ಐದು ವರ್ಷಗಳ ಹಿಂದೆ ಸಂವಿಧಾನದ 370 ಮತ್ತು 35-ಎ ವಿಧಿಗಳನ್ನು ರದ್ದುಗೊಳಿಸಿದಾಗ ನನ್ನ ಸ್ನೇಹಿತರೊಬ್ಬರು ಕರೆ ಮಾಡಿ, 'ಕಾಶ್ಮೀರದಿಂದ ಹಿಂದೂಗಳಿಗೆ ಏನು ಲಾಭ ಅಂತ ಕೇಳುತ್ತಿದ್ದಿರಲ್ಲ, ಈಗ ನೋಡಿ ದಾಲ್ ಸಾಗರ್ ಎದುರುಗಡೆಯೇ ನೀವೊಂದು ನಿವೇಶನವನ್ನು ಖರೀದಿಸಬಹುದು; ಅಲ್ಲದೆ, ಸ್ವಲ್ಪ ದಿನಗಳಲ್ಲೇ ಪಾಕ್ ಆಕ್ರಮಿತ ಕಾಶ್ಮೀರ ಕೂಡ ನಮ್ಮದಾಗುತ್ತೆ' ಎಂದಿದ್ದರು. ಇತ್ತೀಚೆಗೆ ಉಗ್ರಗಾಮಿಗಳ ಸರಣಿ ದಾಳಿಗಳಲ್ಲಿ ನಿತ್ಯ ಪ್ರಾಣ ಕಳೆದುಕೊಳ್ಳುತ್ತಿರುವ ನಮ್ಮ ಸೈನಿಕರ ಸುದ್ದಿ ಓದಿದ ನಂತರ ನಾನು ಆ ನನ್ನ ಸ್ನೇಹಿತರಿಗೆ ಕರೆಮಾಡಿ, 'ನೋಡೀ, ಒಂದು ಒಳ್ಳೆಯ ನಿವೇಶನವಿದೆ, ಬಹಳ ಕಡಿಮೆ ದರದಲ್ಲಿ ಮಾರಾಟವಾಗ್ತಾ ಇದೆ. ನಿಮ್ಮ ಮಗಳ ಭವಿಷ್ಯಕ್ಕೆ ಒಂದು ಒಳ್ಳೆಯ ಹೂಡಿಕೆ ಆಗುತ್ತೆ' ಅಂತ ಹೇಳಿ, ಅದರ ದರವನ್ನೂ ತಿಳಿಸಿದೆ. ಅದಕ್ಕವರು ಆಸಕ್ತಿ ತೋರಿ, 'ನಿವೇಶನ ಎಲ್ಲಿದೆ?' ಅಂತ ಕೇಳಿದರು. ನಾನು, 'ಜೆ.ಜೆ. ನಗರದಲ್ಲಿ' ಅಂದಾಗ ನಿರಾಶೆಗೊಂಡು, 'ಏನ್ರೀ, ತಮಾಷೆ ಮಾಡ್ತೀರಾ?' ಎಂದರು. ಆಗ ನಾನು, 'ಬೆಂಗಳೂರಿನಲ್ಲೇ ಒಂದು ಪ್ರದೇಶದಲ್ಲಿ ನಿವೇಶನ ಖರೀದಿಸಲು ಭಯ ಪಡೋ ನೀವು, ಇನ್ನು ಕಾಶ್ಮೀರದಲ್ಲಿ ಕೊಂಡ್ಕೊಳ್ತೀರಾ?!' ಎಂದುತ್ತರಿಸಿದೆ. ಈ ಲೇಖನ ಬರೆಯಲು ಈ ಸಂಭಾಷಣೆಯೇ ಸ್ಫೂರ್ತಿಯಾಗಿದ್ದರಿಂದ, ಅದನ್ನಿಲ್ಲಿ ಉಲ್ಲೇಖಿಸಿರುವೆ, ಅಷ್ಟೇ.

ಹಿಂದೂಗಳಿಗೆ ಯಾವ ಲಾಭವಾಗಿದೆ?

ಕಳೆದ 5 ವರ್ಷದಿಂದೀಚೆಗೆ ಎಷ್ಟು ಜನ ಪ್ರಭಾವಿ ರಾಜಕಾರಣಿಗಳು, ಸಿನಿಮಾ ತಾರೆಯರು (ಬಾಲಿವುಡ್‌ನ ಖಾನ್ ಗಳಾದರೂ) ಅಥವಾ ಉದ್ದಿಮೆದಾರರು ಕಾಶ್ಮೀರದಲ್ಲಿ ಆಸ್ತಿಯನ್ನು ಖರೀದಿಸಿದ್ದಾರೆ? ವಿದೇಶದಲ್ಲಿ ತಂತಮ್ಮ ಪಂಥದ ಮಂದಿರ-ಮಠಗಳನ್ನು ಸ್ಥಾಪಿಸಲು ಪೈಪೋಟಿ ಮಾಡುತ್ತಿರುವ ನಮ್ಮ ಕೆಲ ಮಠಾಧೀಶರು ಕಾಶ್ಮೀರದಲ್ಲಿ ತಮ್ಮ ಮಠವನ್ನು ಸ್ಥಾಪಿಸಲು ಹಿಂಜರಿಯುತ್ತಿರುವುದೇಕೆ? ಸ್ವಾಮಿನಾರಾಯಣ ಪಂಥದವರು ಭವ್ಯವಾದ ದೇವಸ್ಥಾನವನ್ನು ಸಂಯುಕ್ತ ಅರಬ್ ಗಣರಾಜ್ಯದಲ್ಲಿ (ಯುಎಇ) ಕಟ್ಟುವ ಬದಲು ಕಾಶ್ಮೀರದಲ್ಲೇಕೆ ಕಟ್ಟಲಿಲ್ಲ? ಕಾಶ್ಮೀರವು ಭಾರತದ ಅವಿಭಾಜ್ಯ ಅಂಗ ಅನ್ನುವವರು 'ಕ್ಯಾಂಪಸ್ ಆಯ್ಕೆ'ಯಲ್ಲಿ ತಮ್ಮ ಮಕ್ಕಳಿಗೆ ಕಾಶ್ಮೀರದಲ್ಲಿ ಕೆಲಸ ದೊರೆತರೆ ಅಲ್ಲಿಗೆ ತೆರಳಲು ಅನುಮತಿ ನೀಡುತ್ತಾರೋ?

ಪ್ರಸ್ತುತ ಲಕ್ಷಾಂತರ ಹಿಂದೂಗಳು ಅಮೆರಿಕ, ಬ್ರಿಟನ್‌ನಲ್ಲಿ ಮತ್ತು ಯುರೋಪ್ ಖಂಡದ ಹಲವು ದೇಶಗಳಲ್ಲಿ ವಾಸಿಸುತ್ತಿದ್ದಾರೆ ಹಾಗೂ ಲಕ್ಷಾಂತರ ಭಾರತೀಯರು ಗಲ್ಫ್ ರಾಷ್ಟ್ರಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ವಿದ್ಯಾಭ್ಯಾಸಕ್ಕಾಗಿ ಚೀನಾ ಸೇರಿದಂತೆ ಅನೇಕ ರಾಷ್ಟ್ರಗಳಿಗೆ ತೆರಳುವವರಿದ್ದಾರೆ. ಆದರೆ ಕಾಶ್ಮೀರ ಕಣಿವೆಯಲ್ಲಿ ಭಾರತ ಸರಕಾರವು ಸಾರ್ವಭೌಮತ್ವವನ್ನು ಹೊಂದಿದ್ದರೂ, ಅಲ್ಲಿ ವಾಸಿಸಲು ಮತ್ತು ಕೆಲಸ ಮಾಡಲು ಹಿಂದೂಗಳು ಏಕೆ ಹಿಂಜರಿಯುತ್ತಾರೆ? ಇದಕ್ಕಿರುವ ಕಾರಣ ಸರಳವಾಗಿದೆ- ಅದೆಂದರೆ, ಭದ್ರತೆಯ ಕೊರತೆ ಮತ್ತು ಕಾಶ್ಮೀರದ ಮುಸಲ್ಮಾನರು ತಮ್ಮನ್ನು ಭಾರತದೊಂದಿಗೆ ಗುರುತಿಸಿಕೊಳ್ಳಲು ಇಷ್ಟಪಡದಿರುವುದು ಮತ್ತು ಭಾರತದ ಬಗ್ಗೆ ಅವರಿಗಿರುವ ತಿರಸ್ಕಾರದ ಮನೋಭಾವ.

370 ಮತ್ತು 35-ಎ ವಿಧಿಗಳನ್ನು ರದ್ದುಗೊಳಿಸಿದ ಕಾರಣ ಕಾಶ್ಮೀರದಲ್ಲಿ ಪ್ರವಾಸೋದ್ಯಮಕ್ಕೆ ಹೆಚ್ಚು ಲಾಭವಾಗಿದೆ ಹಾಗೂ ಮೊನ್ನಿನ ಸಾರ್ವತ್ರಿಕ ಚುನಾವಣೆಯಲ್ಲಿ ಹೆಚ್ಚು ಜನರು ಕಾಶ್ಮೀರದಲ್ಲಿ ಮತ ಚಲಾಯಿಸಿದರು ಎಂದು ಹಲವರು ಹಿಗ್ಗುತ್ತಾರೆ. ಪ್ರವಾಸೋದ್ಯಮದ ಚೇತರಿಕೆಯಿಂದ ಅಲ್ಲಿಯ ಮುಸಲ್ಮಾನರಿಗೆ ಲಾಭವಾಗಿದೆಯೇ

ಹೊರತು ಮತ್ಯಾರಿಗೂ ಅಲ್ಲ. ಹಾಗೆಯೇ, ಹೆಚ್ಚು ಜನ ಮುಂದೆ ಬಂದು ಮತ ಚಲಾಯಿಸಿದ್ದರಿಂದ ಗೆದ್ದಿದ್ದು ಓರ್ವ ಮುಸಲ್ಮಾನ ಅಭ್ಯರ್ಥಿಯೇ ವಿನಾ, ಹಿಂದೂ ಅಭ್ಯರ್ಥಿಯಲ್ಲ. ಸಾಮಾನ್ಯವಾಗಿ ರಾಷ್ಟ್ರಗಳು ಖನಿಜ ಸಂಪನ್ಮೂಲಕ್ಕಾಗಿ, ವಸಾಹತಿನ ಉದ್ದೇಶಕ್ಕಾಗಿ ಅಥವಾ ದೇಶದ ಭದ್ರತೆಯ ದೃಷ್ಟಿಯಿಂದ ಕೆಲ ಪ್ರದೇಶಗಳನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುತ್ತವೆ. ಉದಾಹರಣೆಗೆ ರಷ್ಯಾವು ಕ್ರಿಮಿಯಾ ದ್ವೀಪವನ್ನು ಭದ್ರತಾ ಕಾರಣಕ್ಕಾಗಿ ಹಾಗೂ ಇಸ್ರೇಲ್ ದೇಶವು ವೆಸ್ಟ್ ಬ್ಯಾಂಕ್ ಪ್ರದೇಶವನ್ನು ತನ್ನ ಜನರನ್ನು ನೆಲೆಗೊಳಿಸಲು ಆಕ್ರಮಿಸಿಕೊಂಡಿವೆ. ಆದರೆ ಭಾರತ ಸರಕಾರಕ್ಕೆ ಈ ಯಾವ ಉದ್ದೇಶಗಳಿಲ್ಲ. ಹಾಗಿದ್ದಲ್ಲಿ, ಕೇವಲ ಪ್ರತಿಷ್ಠೆಗೋಸ್ಕರ ಕೋಟ್ಯಂತರ ರುಪಾಯಿಗಳನ್ನು ಭಾರತವು ವ್ಯಯ ಮಾಡುತ್ತಿರುವುದೇಕೆ ಹಾಗೂ ಸಾವಿರಾರು ಸೈನಿಕರ ಬಲಿಪಡೆದಿರುವ ಕಾಶ್ಮೀರವನ್ನು ತನ್ನ ವಶದಲ್ಲಿ ಇಟ್ಟುಕೊಳ್ಳಲು ಪ್ರಯತ್ನಿಸುತ್ತಿರುವುದೇಕೆ?

ಕಾಶ್ಮೀರ ಕಣಿವೆಯ ಮೇಲಿನ ತನ್ನ ಹಿಡಿತವನ್ನು ಕಾಪಾಡಿಕೊಳ್ಳಲು ಭಾರತ ಸರಕಾರವು ಇದುವರೆಗೂ ಕೋಟಿಗಟ್ಟಲೆ ರುಪಾಯಿಗಳನ್ನು ವ್ಯಯ ಮಾಡಿದೆ. ಕೇವಲ 'ಸಿಯಾಚಿನ್' ಎಂಬ ಪ್ರದೇಶವನ್ನು ಕಾಪಿಟ್ಟುಕೊಳ್ಳಲು ದಿನನಿತ್ಯ 6 ಕೋಟಿ ರುಪಾಯಿಯನ್ನು ಅದು ಖರ್ಚುಮಾಡುತ್ತಿದೆ. ಕಾಶ್ಮೀರಕ್ಕಾಗಿ ಭಾರತ ಹಾಗೂ ಪಾಕಿಸ್ತಾನದ ನಡುವೆ ನಡೆದ ಯುದ್ಧಗಳಿಂದ ಮತ್ತು ಉಗ್ರಗಾಮಿಗಳ ದಾಳಿಯಿಂದ ಸತ್ತ/ಸಾಯುತ್ತಿರುವ ನಮ್ಮ ಸೈನಿಕರ ಸಂಖ್ಯೆ ಬಹುಶಃ ಲಕ್ಷಕ್ಕೆ ಮುಟ್ಟಿರಬಹುದು. ಕಾಶ್ಮೀರದ ಅಭಿವೃದ್ಧಿಗಾಗಿ ಭಾರತ ಸರಕಾರವು ಇದುವರೆಗೂ ಕೋಟ್ಯಂತರ ರುಪಾಯಿ ಖರ್ಚು ಮಾಡಿದ್ದರೂ ಅಲ್ಲಿಯ ಜನ ಭಾರತವನ್ನು ದ್ವೇಷಿಸುತ್ತಾರೆ, ಪಾಕಿಸ್ತಾನದಿಂದ ಬರುವ ಉಗ್ರಗಾಮಿಗಳಿಗೆ ಆಶ್ರಯ ಹಾಗೂ ಗುಪ್ತಮಾಹಿತಿಗಳನ್ನು ನೀಡಿ ಅವರೊಂದಿಗೆ ಸಹಕರಿಸುತ್ತಾರೆ. ಹೀಗಿರುವಾಗ ಕಾಶ್ಮೀರವನ್ನು ಯಾವ ಪುರುಷಾರ್ಥಕ್ಕಾಗಿ ತಮ್ಮ ಅಧೀನದಲ್ಲಿ ಇಟ್ಟುಕೊಳ್ಳಲು ಹಿಂದೂಗಳು ಹಪಹಪಿಸುತ್ತಿದ್ದಾರೆ?

ಪಟೇಲರಿಗೆ ಆಸಕ್ತಿ ಇರಲಿಲ್ಲ

ಬೇರೆಲ್ಲಾ ರಾಜ ಸಂಸ್ಥಾನಗಳನ್ನು ಭಾರತ ಒಕ್ಕೂಟದಲ್ಲಿ ವಿಲೀನಗೊಳಿಸುವ ನಿಟ್ಟಿನಲ್ಲಿ ಮುತುವರ್ಜಿ ವಹಿಸಿದ ಸರ್ದಾರ್ ವಲ್ಲಭಭಾಯಿ ಪಟೇಲರು ಕಾಶ್ಮೀರ ರಾಜ್ಯದ ವಿಷಯದಲ್ಲಿ ಹೆಚ್ಚು ಆಸಕ್ತಿ ತೋರಲಿಲ್ಲ. ಇದಕ್ಕೆ ಮುಖ್ಯಕಾರಣ, ಅಲ್ಲಿನ ನಿವಾಸಿಗಳಲ್ಲಿ ಮುಸಲ್ಮಾನರು ಬಹುಸಂಖ್ಯಾತರಾಗಿದ್ದು, ಇದರಿಂದ ಮುಂದೆ ಭಾರತಕ್ಕೆ ತೊಂದರೆಯಾಗಬಹುದು ಎಂಬುದು ಅವರ ಗ್ರಹಿಕೆಯಾಗಿತ್ತು. ಆದ್ದರಿಂದ, 1947ರ ಆಗಸ್ಟ್‌ನಲ್ಲಿ ಭಾರತ ಸ್ವತಂತ್ರವಾದಾಗ ಕಾಶ್ಮೀರವು ನವಭಾರತದ ಭಾಗವಾಗಿರಲಿಲ್ಲ. ಎರಡು ತಿಂಗಳ ನಂತರ ಪಾಕಿಸ್ತಾನವು ಕಾಶ್ಮೀರದ ಮೇಲೆ ದಾಳಿಮಾಡಿದಾಗ, ಅದರ ಮಹಾರಾಜನು ಕಾಶ್ಮೀರವನ್ನು ಭಾರತದೊಂದಿಗೆ ವಿಲೀನಗೊಳಿಸಲು ನಿರ್ಧರಿಸಿದ.

1933ರಲ್ಲೇ ಭಾರತದ ಮುಸಲ್ಮಾನರಿಗೆ ಒಂದು ಪ್ರತ್ಯೇಕ ರಾಜ್ಯದ ಬಗ್ಗೆ ಪರಿಕಲ್ಪನೆ ಮಾಡಿದ್ದ ರಹಮತ್ ಅಲಿ ಎಂಬುವವನು ಇದರಲ್ಲಿ ಕಾಶ್ಮೀರವನ್ನು ಸೇರಿಸಿದ್ದ. 1947ರಲ್ಲಿ ಬ್ರಿಟಿಷರು ಭಾರತವನ್ನು ತೊರೆಯುವ ಮೊದಲು 500ಕ್ಕೂ ಹೆಚ್ಚಿನ ರಾಜ ಸಂಸ್ಥಾನಗಳಿಗೆ ಒಂದೋ ಭಾರತದಲ್ಲಿ ಇಲ್ಲವೇ ಪಾಕಿಸ್ತಾನದಲ್ಲಿ ವಿಲೀನಗೊಳ್ಳುವ ಆಯ್ಕೆಯನ್ನು ನೀಡಲಾಗಿತ್ತು. ಆಗ ಹೈದರಾಬಾದ್ ಸಂಸ್ಥಾನದ ನಿಜಾಮನು ಮೊದಲು ಸ್ವತಂತ್ರನಾಗಿ ಉಳಿಯಲು ನಿರ್ಧರಿಸಿ, ನಂತರದಲ್ಲಿ ತನ್ನ ಸಂಸ್ಥಾನವನ್ನು ಪಾಕಿಸ್ತಾನದೊಡನೆ ವಿಲೀನಗೊಳಿಸಲು ಮುಂದಾದ. ಆದರೆ, ಹೈದರಾಬಾದ್ ಸಂಸ್ಥಾನದ ಬಹುಪಾಲು ಜನರು ಹಿಂದೂಗಳಾಗಿದ್ದ ಕಾರಣ ಅದು ಭಾರತಕ್ಕೆ ಸೇರಬೇಕೆಂದು ಆಗ್ರಹಿಸಿದ ವಲ್ಲಭ್‌ಭಾಯಿ ಪಟೇಲರು ಸೇನೆ ಮತ್ತು ಪೊಲೀಸ್ ಬಲದ ನೆರವಿನೊಂದಿಗೆ ಹೈದರಾಬಾದ್ ಸಂಸ್ಥಾನವು ಭಾರತದಲ್ಲಿ ವಿಲೀನಗೊಳ್ಳುವಂತೆ ನೋಡಿಕೊಂಡರು. ಹಾಗೆಯೇ ಜುನಾಗಢ ಸಂಸ್ಥಾನದ ನವಾಬನು ಪಾಕಿಸ್ತಾನದೊಂದಿಗೆ ವಿಲೀನಗೊಳ್ಳಲು ತೀರ್ಮಾನಿಸಿದಾಗ ಅಂದಿನ ಭಾರತ ಸರಕಾರವು ಅವನ ತೀರ್ಮಾನವನ್ನು ತಿರಸ್ಕರಿಸಿ ಜುನಾಗಢವನ್ನು ವಶಪಡಿಸಿಕೊಂಡಿತು. ಜುನಾಗಢದಲ್ಲಿ ಬಹುಪಾಲು ನಾಗರಿಕರು ಹಿಂದೂಗಳು ಎಂಬುದು ಈ ಕ್ರಮಕ್ಕೆ ಭಾರತ ಸರಕಾರವು ಕೊಟ್ಟ ಕಾರಣವಾಗಿತ್ತು. ಇದೇ ತರ್ಕದ ಪ್ರಕಾರ, ಕಾಶ್ಮೀರವು ತನಗೆ ಸೇರಬೇಕೆಂಬುದು ಪಾಕಿಸ್ತಾನದ ವಾದವಾಗಿತ್ತು.

ಜನಾಭಿಪ್ರಾಯ ಸಂಗ್ರಹವೇ ಪರಿಹಾರ

ಭಾರತವು ತನ್ನನ್ನು ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ಎಂದು ಕರೆದುಕೊಳ್ಳುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಮಸ್ಯೆಗಳನ್ನು ಮಾತುಕತೆಯ ಮೂಲಕ ಇತ್ಯರ್ಥಗೊಳಿಸಲಾಗುತ್ತದೆ. ಕಾಶ್ಮೀರಿಗಳು ಭಾರತದಲ್ಲಿಯೇ ಇರಬೇಕೋ ಅಥವಾ ಪಾಕಿಸ್ತಾನಕ್ಕೆ ಸೇರಬೇಕೊ ಅಥವಾ ಸ್ವತಂತ್ರವಾಗಿ ಉಳಿಯಬೇಕೋ ಎಂಬುದನ್ನು ನಿರ್ಧರಿಸಲು 'ಜನಾಭಿಪ್ರಾಯ ಸಂಗ್ರಹ'ಕ್ಕೆ ಮುಂದಾಗುವುದಾಗಿ ಭಾರತವು ವಿಶ್ವಸಂಸ್ಥೆಗೆ ಭರವಸೆ ನೀಡಿತ್ತು. ಕಾರಣಾಂತರಗಳಿಂದ ಅದನ್ನು ನಡೆಸಲಾಗಲಿಲ್ಲ. ಯುಗೋಸ್ಲಾವಿಯಾ, ಜೆಕೊಸ್ಲೋವಾಕಿಯಾದಂಥ ಐರೋಪ್ಯ ರಾಷ್ಟ್ರಗಳು ಜನಾಭಿಪ್ರಾಯ ಸಂಗ್ರಹಿಸುವ ಮೂಲಕ ವಿವಿಧ ಜನಾಂಗೀಯ ಅಲ್ಪಸಂಖ್ಯಾತರಿಗೆ ಪ್ರತ್ಯೇಕವಾಗಿ ಸ್ವತಂತ್ರ ರಾಜ್ಯ/ರಾಷ್ಟ್ರಗಳನ್ನು ಸ್ಥಾಪಿಸಲು ಒಪ್ಪಿ ತಂತಮ್ಮ ಜನಾಂಗೀಯ ಸಮಸ್ಯೆಗಳನ್ನು ಬಗೆಹರಿಸಿಕೊಂಡಿವೆ.

ಪ್ರಸ್ತುತ, ಮೂಲ ಕಾಶ್ಮೀರ ಸಂಸ್ಥಾನದ ಸುಮಾರು ಮೂರನೇ ಒಂದರಷ್ಟು ಭಾಗವು ಪಾಕಿಸ್ತಾನದ ನಿಯಂತ್ರಣದಲ್ಲಿದ್ದು ಅದನ್ನು 'ಆಜಾದ್ ಕಾಶ್ಮೀರ' ಎಂದು ಕರೆಯಲಾಗುತ್ತದೆ. ಭಾರತದ ವಶದಲ್ಲಿರುವ ಕಾಶ್ಮೀರ ಕಣಿವೆಯಲ್ಲಿ ಶೇ.100ರಷ್ಟು ಮುಸ್ಲಿಮರು, ಜಮ್ಮುವಿನಲ್ಲಿ ಶೇ.70ರಷ್ಟು ಹಿಂದೂಗಳು ಮತ್ತು ಶೇ.30ರಷ್ಟು ಮುಸಲ್ಮಾನರು ಹಾಗೂ ಲಡಾಖ್‌ನಲ್ಲಿ ಐವತ್ತು-ಐವತ್ತು ಅನುಪಾತದಲ್ಲಿ ಮುಸಲ್ಮಾನರು-ಬೌದ್ಧರು ನೆಲೆಸಿದ್ದಾರೆ. ಭಾರತವು ಈಗಲಾದರೂ ವಿಶ್ವಸಂಸ್ಥೆಯ ಆಶ್ರಯದಲ್ಲಿ ಮತ್ತು ಪ್ರಮುಖ ರಾಷ್ಟ್ರಗಳ ಸಮ್ಮುಖದಲ್ಲಿ ಜನಾಭಿಪ್ರಾಯ ಸಂಗ್ರಹಣೆ ಮಾಡಿ, ಬಹುಸಂಖ್ಯೆಯಲ್ಲಿ ಮುಸಲ್ಮಾನರಿರುವ ಕಾಶ್ಮೀರವನ್ನು ಸಂಪೂರ್ಣವಾಗಿ ಹಾಗೂ ಮುಸ್ಲಿಂ ಬಾಹುಳ್ಯದ ಜಮ್ಮುವಿನ ಕೆಲಭಾಗವನ್ನು ಪಾಕಿಸ್ತಾನಕ್ಕೆ ಕೊಟ್ಟು, ಉಳಿದ ಜಮ್ಮು ಪ್ರದೇಶವನ್ನು ಹಿಮಾಚಲ ಪ್ರದೇಶದೊಂದಿಗೆ ವಿಲೀನಗೊಳಿಸಿ, ಲಡಾಖ್ ಪ್ರದೇಶದಲ್ಲಿ ಹಿಂದೂ ಜನಸಂಖ್ಯೆ ಇಲ್ಲದ ಕಾರಣ ಅದನ್ನು ವಿಶ್ವಸಂಸ್ಥೆಯ ಆಡಳಿತಕ್ಕೆ ಬಿಟ್ಟುಕೊಡುವುದರಿಂದ 'ಕಾಶ್ಮೀರ ಸಮಸ್ಯೆ'ಗೆ ಶಾಶ್ವತವಾದ ಪರಿಹಾರವನ್ನು ಕಂಡುಕೊಳ್ಳಬಹುದು ಮತ್ತು ಮುಂದಿನ ಪೀಳಿಗೆಗೆ ಉಗ್ರವಾದ-ಮುಕ್ತ ಭಾರತವನ್ನು ಬಳುವಳಿಯಾಗಿ ನೀಡಬಹುದು. ಲಡಾಖ್ ಅನ್ನು ಬಿಟ್ಟುಕೊಡುವ ಮುಖಾಂತರ ಚೀನಾದೊಂದಿಗಿನ ನಮ್ಮ ಗಡಿವಿವಾದವು ಬಗೆಹರಿದಂತಾಗುತ್ತದೆ.

ನಮ್ಮ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ರಷ್ಯಾ-ಉಕ್ರೇನ್ ನಡುವಿನ ಯುದ್ಧದಲ್ಲಿ ಹಾಗೂ ಗಾಜಾದಲ್ಲಿ ನಡೆಯುತ್ತಿರುವ ಘರ್ಷಣೆಯಲ್ಲಿ ಶಾಂತಿಸ್ಥಾಪನೆಯ ಮಧ್ಯಸ್ಥಿಕೆ ವಹಿಸುತ್ತಾರೆ ಎಂಬ ಸುದ್ದಿಗಳು ಇತ್ತೀಚೆಗೆ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ. ಆದರೆ ಅವರು ತಮ್ಮ ಕಾಲಾವಧಿಯಲ್ಲಿ ಕಾಶ್ಮೀರದ ಸಮಸ್ಯೆಯನ್ನು ಬಗೆಹರಿಸಿದರೆ, ಅದು ನಿಜಾರ್ಥದಲ್ಲಿ 'ಶಾಂತಿ ಸ್ಥಾಪನೆ'ಯ ಉಪಕ್ರಮವಾದೀತು.

(ಲೇಖಕರು ಇತಿಹಾಸಕಾರರು ಹಾಗೂ ಸಂಶೋಧಕರು)

ಭೂಮಿಗೀತ

ಬಸವರಾಜ ಶಿವಪ್ಪ ಗಿರಗಾಂ

ಬೆಳೆಯ ಆವರ್ತನ ಅತ್ಯಗತ್ಯ

ರಾಜ್ಯದಲ್ಲಿ ಮುಂಗಾರು ಭರ್ಜರಿಯಾಗಿಯೇ ಆರಂಭವಾಗಿದೆ. ಕಳೆದ ವರ್ಷದ ಬರಗಾಲದ ಛಾಯೆ ಮಾಯವಾಗಿ, ಕೃಷಿವಲಯದಲ್ಲಿ ಮಂದಹಾಸ ಮೂಡಿದೆ. ಈಗಾಗಲೇ ಬಹುತೇಕ ಭಾಗದಲ್ಲಿ ಬಿತ್ತನೆಯಾಗಿದೆ. ಹಿಂದಿನ ವರ್ಷ ಬಂಪರ್ ಆದಾಯ ಕೊಟ್ಟಿದ್ದರಿಂದಲೋ ಅಥವಾ ಇನ್ನಿತರ ಕಾರಣಕ್ಕೋ ರೈತರು ಒಂದೇ ಬೆಳೆಯ ಮೇಲೆ ಅವಲಂಬಿತರಾಗುತ್ತಿದ್ದಾರೆ. ಇದನ್ನು ತಪ್ಪಿಸಲು ಕೃಷಿ ವಿಶ್ವವಿದ್ಯಾಲಯಗಳು ಹರಸಾಹಸ ಪಡುತ್ತಿದ್ದರೂ, ರೈತರು ಸಮರ್ಪಕವಾಗಿ ಸ್ಪಂದಿಸದಿರುವುದು ದುರಂತ. ನಮ್ಮ ಪೂರ್ವಜರು ನೀರಿನ ಕೊರತೆಯ ದಿನಮಾನಗಳಲ್ಲಿ ಹಂಗಾಮಿಗೆ ತಕ್ಕಂತೆ ವಿವಿಧ ಬೆಳೆಗಳನ್ನು ಬೆಳೆಯುವುದರಲ್ಲಿ ನಿಸ್ಸೀಮರಾಗಿದ್ದರು. ರಾಸಾಯನಿಕಗಳ ಅರಿವಿಲ್ಲದ ಅಂದಿನ ದಿನಗಳಲ್ಲಿ ಮಣ್ಣಿನ ಫಲವತ್ತತೆಗೆ ಬೆಳೆಯ ಆವರ್ತನವೊಂದೇ ಪ್ರಮುಖ ಸಾಧನವಾಗಿತ್ತು. ಅಂದು ಮಣ್ಣು ಆರೋಗ್ಯವಾಗಿದ್ದುದರಿಂದ ಮನುಕುಲ ಸೇರಿದಂತೆ ಸಮಸ್ತ ಜೀವಸಂಕುಲವೇ ಆರೋಗ್ಯವಂತವಾಗಿ ನಳನಳಿಸುತ್ತಿತ್ತು ಎಂಬುದನ್ನು ಸದ್ಯದ ಅನಾರೋಗ್ಯಕರ ಪರಿಸರಕ್ಕೆ ಸಾಕ್ಷಿಯಾಗಿರುವ ಪ್ರತಿಯೊಬ್ಬರೂ ಗಂಭೀರವಾಗಿ ಪರಿಗಣಿಸಬೇಕು.

ಬೆಳೆಯ ಆವರ್ತನದಿಂದಾಗಿ ಮಣ್ಣಿನ ಆರೋಗ್ಯಕ್ಕೆ ಅವಶ್ಯವಿರುವ ಪೋಷಕಾಂಶಗಳು ನೈಸರ್ಗಿಕವಾಗಿ ಮಣ್ಣಿನಲ್ಲೇ ರಚನೆಯಾಗುತ್ತವೆ. ಮಣ್ಣಿನ ಫಲವತ್ತತೆಯು ತ್ವರಿತವಾಗಿ ಮತ್ತು ಪರಿಣಾಮಕಾರಿಯಾಗಿ ಹೆಚ್ಚಾಗಿ ಪ್ರತಿ ಬೆಳೆಯ ಇಳುವರಿಯೂ ಹೆಚ್ಚುತ್ತದೆ. ಪೋಷಕಾಂಶಗಳ ಅಸಮತೋಲನದ ಅಪಾಯ ಕಡಿಮೆಯಾಗಿ ಸುಸ್ಥಿರ ಬೇಸಾಯ ಸಾಧ್ಯವಾಗುತ್ತದೆ. ಒಂದೊಂದು ಬೆಳೆಯೂ ಒಂದೊಂದು ಪೋಷಕಾಂಶಗಳ ರಚನೆಗೆ ಸಹಕಾರಿಯಾಗುವುದರಿಂದ, ಹಿಂದಿನ ಬೆಳೆಯಿಂದ ಸ್ಥಿರೀಕರಣಗೊಂಡ ಪೋಷಕಾಂಶಗಳು ಮುಂದಿನ ಬೆಳೆಗೆ ಸಹಕಾರಿಯಾಗುತ್ತವೆ.

ಪ್ರತಿ ಹಂಗಾಮಿನಲ್ಲಿ ಒಂದೇ ಬೆಳೆಯನ್ನು ಬೆಳೆಯುವುದರಿಂದ ಮಣ್ಣಿಗೆ ಪೋಷಕಾಂಶಗಳ ಕೊರತೆಯಾಗುವುದು ನಿಶ್ಚಿತ. ಇದನ್ನು ಸರಿದೂಗಿಸಲು ಬಾಹ್ಯವಾಗಿ/ಕೃತಕವಾಗಿ ಅವಶ್ಯಕ ಪೋಷಕಾಂಶಗಳನ್ನು ಸೇರಿಸಬೇಕಾಗುತ್ತದೆ. ಆದರೆ ಬೆಳೆಗಳ ಆವರ್ತನದಿಂದ ಇದು ಬಹುತೇಕವಾಗಿ ತಪ್ಪುತ್ತದೆ. ಕೆಲವು ಬೆಳೆಗಳು ಬೇರುಗಳ ಮುಖಾಂತರ ವಾತಾವರಣದಲ್ಲಿನ ಸಾರಜನಕವನ್ನು ಮಣ್ಣಿನಲ್ಲಿ ಸ್ಥಿರೀಕರಿಸಿ, ಮುಂದಿನ ಬೆಳೆಗೆ ಅಗತ್ಯವಿರುವ ಸಾರಜನಕವನ್ನು ಪೂರೈಸುತ್ತವೆ. ಇದರಿಂದಾಗಿ ಮಣ್ಣಿನಲ್ಲಿ ಸಾರಜನಕದ ಮಟ್ಟವು ಹೆಚ್ಚಾಗುತ್ತದೆ. ಕೆಲವು ಕೀಟ ಮತ್ತು ರೋಗಗಳು ನಿರ್ದಿಷ್ಟ ಬೆಳೆಗಳಿಗೆ ಮಾತ್ರ ಹಾನಿಮಾಡುತ್ತವೆ, ಆದರೆ ಬೆಳೆಯ ಆವರ್ತನದಿಂದ ಇದು ಸಂಭವಿಸುವುದಿಲ್ಲ ಮತ್ತು ಬೆಳೆಯಲ್ಲಿ ಕೀಟನಾಶಗಳ ಬಳಕೆ ತಗ್ಗಿ ಆರೋಗ್ಯಕರ ಬೆಳವಣಿಗೆ ಸಾಧ್ಯವಾಗುತ್ತದೆ.

ಪ್ರತಿಯೊಂದು ಬೆಳೆಯ ನೀರಿನ ಬೇಡಿಕೆ ಭಿನ್ನವಾಗಿರುತ್ತದೆ. ಋತುಮಾನ ಮತ್ತು ನೀರಿನ ಲಭ್ಯತೆಯ ಪ್ರಮಾಣಕ್ಕೆ ಅನುಗುಣವಾಗಿ ಬೆಳೆಗಳ ಆವರ್ತನವನ್ನು ಮಾಡಬಹುದು. ಬೆಳೆಗಳ ಆವರ್ತನದಿಂದಾಗಿ ಮೇಲಿಂದ ಮೇಲೆ ಮಾಗಿ ಉಳುಮೆ ಮತ್ತು ಭೂಮಿತಯಾರಿ ಮಾಡಬೇಕಾಗುತ್ತದೆ. ಇದರಿಂದ ಮಣ್ಣು ಸಡಿಲಗೊಂಡು ಅದಕ್ಕೆ ಗಾಳಿ ಮತ್ತು ಸೂರ್ಯಪ್ರಕಾಶ ಸೇರ್ಪಡೆಯಾಗಿ ಸತ್ವ ಹೆಚ್ಚುತ್ತದೆ. ಬೆಳೆಯ ನಾಟಿಯ ನಂತರದಲ್ಲೂ ಅಂತರಬೇಸಾಯ ಕೈಗೊಳ್ಳುವುದರಿಂದ ಕಳೆನಾಶವಾಗುತ್ತದೆ. ಬೆಳೆಯ ಆವರ್ತನದಿಂದಾಗಿ ಪ್ರತಿ ಬೆಳೆಯ ಬೇರು ಮತ್ತು ಇತರೆ ಬೆಳೆಯುಳಿಕೆಗಳು ಮಣ್ಣಿನಲ್ಲಿ ಸೇರುವುದರಿಂದ ಸಾವಯವ ಇಂಗಾಲವು ಹೆಚ್ಚಾಗಿ ನೀರನ್ನು ಹಿಡಿದಿಟ್ಟುಕೊಳ್ಳುವ ಮಣ್ಣಿನ ಸಾಮರ್ಥ್ಯವೂ ಹೆಚ್ಚುತ್ತದೆ. ಆಳವಾಗಿ ಬೇರುಬಿಡುವ ಬೆಳೆಗಳಿಂದ ಮಣ್ಣು ಆಳದವರೆಗೆ ಸಡಿಲಗೊಳ್ಳುತ್ತದೆ, ಇದರಿಂದ ನೀರು ಇಂಗುವಿಕೆ ಹೆಚ್ಚಾಗಿ ಅಂತರ್ಜಲ ಮಟ್ಟ ವೃದ್ಧಿಸುತ್ತದೆ.

ಕೃಷಿ ಕಾರ್ಮಿಕರ ಕೊರತೆಯಿಂದಾಗಿ ರೈತರು ಅನಿವಾರ್ಯವಾಗಿ ದೀರ್ಘಾವಧಿ ಬೆಳೆಗಳತ್ತ ಆಕರ್ಷಿತರಾಗುತ್ತಿದ್ದಾರೆ. ಈ ಪರಿಪಾಠದಿಂದಾಗಿ ಮಣ್ಣಿನ ಫಲವತ್ತತೆ ಕಡಿಮೆಯಾಗುತ್ತದೆ. ಫಲವತ್ತತೆಯನ್ನು ನಿರಂತರವಾಗಿ ಕಾಪಾಡಲು, ದೀರ್ಘಾವಧಿಯ ಎರಡು ಬೆಳೆಗಳ ನಡುವಿನ ಅಂತರದಲ್ಲಿ ಒಂದು ಅಲ್ಪಾವಧಿ ಬೆಳೆ ಬೆಳೆಯಬೇಕು ಮತ್ತು ಮಾಗಿ ಉಳುಮೆ ಕೈಗೊಳ್ಳಬೇಕು.

(ಲೇಖಕರು ಕೃಷಿ ತಜ್ಞರು ಹಾಗೂ ಸಹಾಯಕ ಮಹಾ ಪ್ರಬಂಧಕರು)

ಹವಾಮಾನ ವೈಪರೀತ್ಯದ ಮಧ್ಯೆ ಬೀಜ ಬೇಸಾಯದ ಪ್ರಗತಿ

ಒಂದು ನಿರ್ದಿಷ್ಟ ಪ್ರದೇಶದ ಮಣ್ಣು ಹಾಗೂ ಹವಾಮಾನಕ್ಕೆ ಪೂರಕವಾದ ಗುಣಮಟ್ಟದ ಬೀಜಗಳನ್ನು ಬಿತ್ತನೆ ಮಾಡಿದರೆ ಖಂಡಿತವಾಗಿಯೂ ಉತ್ಪಾದನೆಯಲ್ಲಿ ಗಣನೀಯ ಏರಿಕೆಯಾಗುವುದು ಕಂಡುಬರುತ್ತದೆ. ಈ ವಾಸ್ತವವನ್ನು ಅರಿತಿರುವ ಮೋದಿ ಅವರು ಈ ನಿಟ್ಟಿನಲ್ಲಿ ಇನ್ನಷ್ಟು ವಿಶಾಲ ಹಾಗೂ ಪರಿಣಾಮಕಾರಿ ದೃಷ್ಟಿಕೋನದಿಂದ ಕಾರ್ಯನಿರ್ವಹಿಸುವಂತೆ ನಮಗೆ ಮಾರ್ಗದರ್ಶನ ನೀಡಿದ್ದಾರೆ.

ಕೃಷಿರಂಗ
ಶಿವರಾಜ್ ಸಿಂಗ್ ಚೌಹಾಣ್
vveditoped@gmail.com

ಕೃಷಿ ಅಭಿವೃದ್ಧಿ ಹಾಗೂ ರೈತರ ಕಲ್ಯಾಣವೇ ನಮ್ಮ ಸರಕಾರದ ಪ್ರಮುಖ ಆದ್ಯತೆ. ನಮ್ಮ ಜೀವನಾಧಾರದ ವಾಸ್ತುಶಿಲ್ಪಿಗಳಾದ ಅನ್ನದಾತರ ಜೀವನದಲ್ಲಿ ಸಂತೋಷ ಹಾಗೂ ಸಮೃದ್ಧಿಯನ್ನು ತರುವುದು ನಮ್ಮ ಸಂಕಲ್ಪ. ಅದನ್ನು ಸಾಕಾರಗೊಳಿಸಲು ನಾವು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನೂ ಕೈಗೊಳ್ಳುತ್ತೇವೆ. ರೈತರ ಆದಾಯ ಹೆಚ್ಚಿಸಲು ನಾವು ಆರು ಅಂಶಗಳ ಕಾರ್ಯವಿಧಾನಗಳನ್ನು ರೂಪಿಸಿದ್ದೇವೆ. ಉತ್ಪಾದನೆಯನ್ನು ಹೆಚ್ಚಿಸುವುದು, ಕೃಷಿ ಉತ್ಪನ್ನಗಳ ವೆಚ್ಚ ತಗ್ಗಿಸುವುದು, ಕೃಷಿ ಉತ್ಪನ್ನಗಳಿಗೆ ನ್ಯಾಯಯುತ ಬೆಲೆ ಒದಗಿಸುವುದು, ಪ್ರಕೃತಿ ವಿಕೋಪಗಳು ತಲೆದೋರಿದ ಸಂದರ್ಭದಲ್ಲಿ ಸೂಕ್ತ ಆರ್ಥಿಕ ನೆರವು ಕಲ್ಪಿಸುವುದು, ವೈವಿಧ್ಯದ ಕೃಷಿ ಮತ್ತು ಸಾವಯವ ಕೃಷಿಯನ್ನು ಉತ್ತೇಜಿಸುವ ಮಹತ್ವದ ಚಿಂತನೆಯನ್ನು ರೂಪಿಸಲಾಗಿದೆ. ಉತ್ಪಾದನೆಯನ್ನು ಹೆಚ್ಚಿಸಲು ಹಾಗೂ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಲು ಇರುವ ಪ್ರಮುಖ ಅಂಶವೆಂದರೆ ಅದು ಗುಣಮಟ್ಟದ ಬಿತ್ತನೆ ಬೀಜಗಳು. ಗುಣಮಟ್ಟದ ಬೀಜಗಳನ್ನು ಬಳಸಿದರೆ ನೀರಿನ ಕೊರತೆಯಿರುವ ಪ್ರದೇಶಗಳು ಹಾಗೂ ಪ್ರತಿಕೂಲ ಹವಾಮಾನದ ಪರಿಸ್ಥಿತಿಯಲ್ಲೂ ಹೆಚ್ಚಿನ ಇಳುವರಿ ಪಡೆಯಲು ಸಹಕಾರಿಯಾಗಲಿದೆ. ಆ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು 109 ಹೊಸ ತಳಿಯ ಬೀಜಗಳನ್ನು ರೈತರಿಗೆ ಮತ್ತು ದೇಶಕ್ಕೆ ಸಮರ್ಪಿಸಿದ್ದಾರೆ.

ಕಳೆದ ದಶಕದಲ್ಲಿ ಕೃಷಿ ಭೂರಚನೆಯು ಬಹಳ ವೇಗವಾಗಿ ಬದಲಾಗಿದೆ. ಹಾಗಾಗಿ ಸದ್ಯದ ಜಾಗತಿಕ ತಾಪಮಾನ ಮತ್ತು ಪರಿಸರ ಅಸಮತೋಲನಗಳು ಸೃಷ್ಟಿಸುವ ಸಮಸ್ಯೆಗಳನ್ನು ನಿವಾರಿಸಿಕೊಂಡು ಹೆಚ್ಚು ಉತ್ಪಾದನೆ ಮಾಡಬೇಕಾದುದು ಸವಾಲೆನಿಸಿದೆ. ಈ ಸವಾಲನ್ನು ಎದುರಿಸುವ ನಿಟ್ಟಿನಲ್ಲಿ ಮುಂದಿನ 5 ವರ್ಷಗಳಲ್ಲಿ ನಾವು 1,500 ಹೊಸ ಬಗೆಯ ಹವಾಮಾನ-ಸ್ನೇಹಿ ತಳಿಯ ಬೆಳೆಗಳನ್ನು ಅಭಿವೃದ್ಧಿಪಡಿಸುತ್ತೇವೆ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ರೈತರ ಹಿತ ರಕ್ಷಿಸಲು ವಿಜ್ಞಾನವಷ್ಟೇ ಪರಿಣಾಮಕಾರಿ ಪರಿಹಾರವೆನಿಸಿದೆ. ಹವಾಮಾನ-ಸ್ನೇಹಿ ಕೃಷಿ ಉತ್ಪನ್ನ ತಳಿಗಳನ್ನು ಅಭಿವೃದ್ಧಿಪಡಿಸುತ್ತಿರುವ ನಮ್ಮ ಕೃಷಿ ವಿಜ್ಞಾನಿಗಳ ಬಗ್ಗೆ ನನಗೆ ಬಹಳ ಹೆಮ್ಮೆ ಎನಿಸುತ್ತದೆ. ಹಾಗೆಯೇ ಕೃಷಿ ಕ್ಷೇತ್ರದಲ್ಲಿ ಸೃಷ್ಟಿಯಾಗುತ್ತಿರುವ ಆವಿಷ್ಕಾರಗಳು ಕೃಷಿ ಚಟುವಟಿಕೆ ಹಾಗೂ ಕೃಷಿಕರ ಕಲ್ಯಾಣಕ್ಕೆ ಖಾತರಿ ನೀಡಲಿವೆ ಎಂದು ನಾನು ದೃಢವಾಗಿ ನಂಬಿದ್ದೇನೆ.

ಸ್ವತಃ ಒಬ್ಬ ರೈತನಾಗಿರುವ ನಾನು ಹೆಚ್ಚಿನ ಪ್ರಮಾಣದಲ್ಲಿ ಕೃಷಿ ಉತ್ಪನ್ನವನ್ನು ಪಡೆಯಲು ಉತ್ತಮ ಬೀಜಗಳು ಎಷ್ಟು ಮುಖ್ಯ ಎಂಬುದನ್ನು ಚೆನ್ನಾಗಿ ಅರಿತಿದ್ದೇನೆ. ಒಂದು ನಿರ್ದಿಷ್ಟ ಪ್ರದೇಶದ ಮಣ್ಣು ಹಾಗೂ ಹವಾಮಾನಕ್ಕೆ ಪೂರಕವಾದ ಗುಣಮಟ್ಟದ ಬೀಜಗಳನ್ನು ಬಿತ್ತನೆ ಮಾಡಿದರೆ ಖಂಡಿತವಾಗಿಯೂ ಉತ್ಪಾದನೆಯಲ್ಲಿ ಗಣನೀಯ ಏರಿಕೆಯಾಗುವುದು ಕಂಡುಬರುತ್ತದೆ. ಈ ವಾಸ್ತವವನ್ನು ಅರಿತಿರುವ ಮೋದಿ ಅವರು ಈ ನಿಟ್ಟಿನಲ್ಲಿ ಇನ್ನಷ್ಟು ವಿಶಾಲ ಹಾಗೂ ಪರಿಣಾಮಕಾರಿ ದೃಷ್ಟಿಕೋನದಿಂದ ಕಾರ್ಯನಿರ್ವಹಿಸುವಂತೆ ನಮಗೆ ಮಾರ್ಗದರ್ಶನ ನೀಡಿದ್ದಾರೆ. ವೈವಿಧ್ಯತೆಯು ಭಾರತದ ಕೃಷಿ ಜಾಯಮಾನದ ವಿಶೇಷ ಗುಣಲಕ್ಷಣವೆನಿಸಿದೆ. ಹಾಗಾಗಿ ಅತಿ ಕಡಿಮೆ ವಿಸ್ತೀರ್ಣದ ಅಂತರಕ್ಕೂ ಕೃಷಿ ಭಿನ್ನ ರೀತಿಯಲ್ಲಿ ವಿಕಸನಗೊಂಡಿರುತ್ತದೆ. ಅದಕ್ಕೆ ಉದಾಹರಣೆ ರೂಪದಲ್ಲಿ ಹೇಳುವುದಾದರೆ, ಬಯಲುಸೀಮೆ ಪ್ರದೇಶದಲ್ಲಿನ ಕೃಷಿಗೆ ಹೋಲಿಸಿದರೆ ಬೆಟ್ಟ-ಗುಡ್ಡ ಹಾಗೂ ಪರ್ವತ ಪ್ರದೇಶಗಳಲ್ಲಿನ ಕೃಷಿ ಬಹಳ ಭಿನ್ನವಾಗಿರುತ್ತದೆ. ಈ ಎಲ್ಲ ರೀತಿಯ ವೈವಿಧ್ಯ ಹಾಗೂ ವೈರುಧ್ಯಗಳನ್ನು ಗಮನದಲ್ಲಿಟ್ಟುಕೊಂಡೇ 109 ಹೊಸ ತಳಿಯ ಬೀಜಗಳನ್ನು ಅಭಿವೃದ್ಧಿಪಡಿಸಿ ಬಿಡುಗಡೆ ಮಾಡಿದ್ದೇವೆ. ಈ 109 ಹೊಸ ತಳಿಗಳಲ್ಲಿ 69 ತಳಿಗಳು ಸಾಮಾನ್ಯ ಕೃಷಿಗೆ ಹಾಗೂ 40 ತಳಿಗಳು ತೋಟಗಾರಿಕೆ ಬಳಕೆಗೆ ಸೇರಿದ್ದಾಗಿವೆ. ಮೋದಿ ಅವರ ಸರಕಾರವು ಆರೋಗ್ಯಕರ ಮತ್ತು ಗುಣ ಮಟ್ಟದ ಆಹಾರಧಾನ್ಯದ ಉತ್ಪಾದನೆಯನ್ನು ಉತ್ತೇಜಿಸಲು ಮತ್ತು ಭಾರತವನ್ನು ಜಾಗತಿಕ ಪೋಷಣೆಯ ಕೇಂದ್ರವನ್ನಾಗಿ ಮಾಡಲು ನಿರ್ಧರಿಸಿರುವ ಜತೆಗೆ ಆ ನಿಟ್ಟಿನಲ್ಲಿ ಬದ್ಧತೆಯನ್ನೂ ತೋರಿಸುತ್ತಿದೆ.

ರೈತರ ಶ್ರಮದ ಮೌಲ್ಯಮಾಪನ ಸರಿಯಾಗಿ ನಡೆಯುವಂತೆ ಮಾಡುವುದು ಹಾಗೂ ಅವರ ಬೆಳೆಗಳಿಗೆ ನ್ಯಾಯಯುತ ಬೆಲೆ ಸಿಗುವಂತೆ ಮಾಡುವುದು ನಮ್ಮ ದೃಢ ಸಂಕಲ್ಪವಾಗಿದೆ. ಆ ಹಿನ್ನೆಲೆಯಲ್ಲೇ ನಾವು ರೈತರ ಉತ್ಪನ್ನಗಳನ್ನು ಕನಿಷ್ಠ ಬೆಂಬಲ ಬೆಲೆಯಲ್ಲಿ ಖರೀದಿಸುತ್ತಿದ್ದೇವೆ. ನಮ್ಮ ರೈತರ ಆದಾಯವನ್ನು ಹೆಚ್ಚಿಸುವುದು ಹಾಗೂ ಉತ್ಪಾದನೆಯನ್ನು ವೃದ್ಧಿಸುವುದು ನಮ್ಮ ಆದ್ಯತೆಯಾಗಿದೆ. ಹಾಗೆಯೇ ನಮ್ಮ ಕೃಷಿ ಉತ್ಪನ್ನಗಳು ಬಳಕೆಗೆ ಸುರಕ್ಷಿತವಾಗಿವೆ ಹಾಗೂ ನಮ್ಮ ಮಣ್ಣಿನ ಆರೋಗ್ಯ ರಕ್ಷಣೆಗೂ ಸಹಕಾರಿಯಾಗಿದೆ ಎಂಬುದನ್ನು ಖಾತರಿಪಡಿಸಿಕೊಳ್ಳುವ ಕಾಳಜಿಯನ್ನೂ ದೇಶ ವಹಿಸುತ್ತಿದೆ. ಭಾರತ ಇಂದು ಹೊಸ ಹಸಿರುಕ್ರಾಂತಿಗೆ ಸಾಕ್ಷಿಯಾಗಿದೆ. ಆ ಮೂಲಕ ನಮ್ಮ ಆಹಾರ ಪೂರೈಕೆದಾರರು ಕ್ರಮೇಣ, ಇಂಧನ ಪೂರೈಕೆದಾರರು ಮತ್ತು ತೈಲ ಪೂರೈಕೆದಾರರಾಗಿ ಹೊರಹೊಮ್ಮುತ್ತಿದ್ದಾರೆ. ಮೋದಿ ಅವರ ಅವಿರತ ಪ್ರಯತ್ನದ ಫಲವಾಗಿ ಪಶುಸಂಗೋಪನೆ, ಜೇನು ಸಾಕಣೆ, ಔಷಧೀಯ ಬೆಳೆ ಕೃಷಿ, ಹೂವು ಮತ್ತು ಹಣ್ಣು, ಇತರೆ ಕೃಷಿಗಳು ಸಾಮಾನ್ಯ ಕೃಷಿಯೊಂದಿಗೆ ಬೆಳವಣಿಗೆ ಹೊಂದುತ್ತಾ ಸದೃಢವಾಗುತ್ತಿವೆ.

ಹಿಂದಿನ ಸರಕಾರಗಳು ಎಂದಿಗೂ ಕೃಷಿ ಮತ್ತು ರೈತರಿಗೆ ಆದ್ಯತೆಯನ್ನೇ ನೀಡದೆ ಕಡೆಗಣಿಸಿದ್ದವು. ಆದರೆ ಮೋದಿ ನಾಯಕತ್ವದಲ್ಲಿ ಕೃಷಿ ಕ್ಷೇತ್ರವು ಇಂದು ಅಭೂತಪೂರ್ವ ಪ್ರಗತಿಯನ್ನು ಕಾಣುತ್ತಿದೆ. 2013-14ನೇ ಸಾಲಿನ ಬಜೆಟ್‌ನಲ್ಲಿ ಕೃಷಿ ಸಚಿವಾಲಯಕ್ಕೆ ಕಾಯ್ದಿರಿಸಿದ್ದ ಅನುದಾನ 27,663 ಕೋಟಿ ರು. ಆಗಿದ್ದರೆ, ಪ್ರಸಕ್ತ 2024-25ನೇ ಸಾಲಿನ ಬಜೆಟ್‌ನಲ್ಲಿ ಕೃಷಿ ಸಚಿವಾಲಯಕ್ಕೆ ಮೀಸಲಿಟ್ಟ ಅನುದಾನ 1,32,470 ಕೋಟಿ ರು.ಗೆ ಏರಿಕೆಯಾಗಿದೆ. ಬಜೆಟ್‌ನಲ್ಲಿ ಕಾಯ್ದಿರಿಸುವ ಈ ಅನುದಾನವನ್ನು ಕೃಷಿ ಇಲಾಖೆಗಷ್ಟೇ ಸೀಮಿತವಾಗಿ ನೀಡಲಾಗಿದೆ. ಉಳಿದಂತೆ ಕೃಷಿ ಮತ್ತು ರಸಗೊಬ್ಬರ ಸಬ್ಸಿಡಿ ಸೇರಿದಂತೆ ಇತರೆ ಕ್ಷೇತ್ರಗಳಿಗೆ ಪ್ರತ್ಯೇಕ ಅನುದಾನ ಕಾಯ್ದಿರಿಸಲಾಗಿದೆ. ಮೋದಿ ಸರಕಾರವು ರೈತರಿಗೆ ಕಡಿಮೆ ದರದಲ್ಲಿ ಯೂರಿಯಾ ಮತ್ತು ಡಿಎಪಿ (ಡೈಅಮೋನಿಯಂ ಫಾಸ್ಫೇಟ್) ನೀಡುತ್ತಿದೆ. ಸರಕಾರವು ರೈತರಿಗೆ ಪ್ರತಿ ಚೀಲ ಯೂರಿಯಾ ಮೇಲೆ ಸುಮಾರು 2,100 ರು. ಮತ್ತು ಡಿಎಪಿ ಮೇಲೆ 1,083 ರು. ಸಹಾಯಧನ ನೀಡುತ್ತಿದೆ. ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ ಮೂಲಕ ರೈತರು ಮತ್ತಷ್ಟು ಸ್ವಾವಲಂಬಿಗಳಾಗುವ ಜತೆಗೆ ಸಬಲರಾಗಿದ್ದಾರೆ. ಹಾಗೆಯೇ, ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯು ಬೆಳೆ ನಷ್ಟದ ಸಂದರ್ಭದಲ್ಲಿ ರೈತರಿಗೆ ದೊಡ್ಡ ವಿಮಾ ರಕ್ಷಣೆ ಯೋಜನೆಯಾಗಿ ನೆರವಾಗುತ್ತಿದೆ.

ಬೀಜ ಪೂರೈಕೆಯಿಂದ ಹಿಡಿದು ಮಾರುಕಟ್ಟೆ ಒದಗಿಸುವವರೆಗೆ ರೈತರ ಸಬಲೀಕರಣ ಮತ್ತು ರೈತರ ಕೃಷಿ ಚಟುವಟಿಕೆಯನ್ನು ಸಾಧ್ಯವಾದಷ್ಟು ಸುಗಮ-ಸುಲಭಗೊಳಿಸುವುದು, ಅವರ ಸಮಸ್ಯೆಗಳನ್ನು ನಿವಾರಿಸುವ ಜತೆಗೆ ಲಾಭ ಪ್ರಮಾಣ ಹೆಚ್ಚಾಗುವಂತೆ ಮಾಡುವ ನಿಟ್ಟಿನಲ್ಲಿ ಪ್ರತಿ ಹಂತದಲ್ಲೂ ಮೋದಿ ಸರಕಾರವು ಮಹತ್ವದ ನಿರ್ಧಾರಗಳನ್ನು ತೆಗೆದುಕೊಂಡಿದೆ. ಆ ದಿಸೆಯಲ್ಲೇ ನಾವು 1 ಲಕ್ಷ ಕೋಟಿ ರು.ಗಳ ಕೃಷಿ ಮೂಲಸೌಕರ್ಯ ನಿಧಿ ಸ್ಥಾಪನೆ ಮೂಲಕ ಕೃಷಿ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಲು ಮುಂದಾಗುತ್ತಿದ್ದೇವೆ. ಸುಮಾರು 700ಕ್ಕೂ ಹೆಚ್ಚು ಕೃಷಿ ವಿಜ್ಞಾನ ಕೇಂದ್ರಗಳು ರೈತರನ್ನು ವಿಜ್ಞಾನದೊಂದಿಗೆ ಸಂಯೋಜಿಸಲಿವೆ. 'ನಮೋ ಡ್ರೋನ್ ದೀದಿ' ಯೋಜನೆಯ ಮೂಲಕ ದೂರ ದೂರದ ಪ್ರದೇಶಗಳಲ್ಲಿರುವ ನಮ್ಮ ತಾಯಂದಿರು ಮತ್ತು ಸಹೋದರಿಯರನ್ನು ತಂತ್ರಜ್ಞಾನದೊಂದಿಗೆ ಸಂಪರ್ಕಿಸಲು ಸಾಧ್ಯವಾಗುತ್ತಿದೆ. ಈ ಅಭಿಯಾನದ ಮೊದಲ ಹಂತವಾಗಿ 'ಕೃಷಿ ಸಖಿ' ಮೂಲಕ 35,000 ಕೃಷಿ ಸಿಬ್ಬಂದಿಗೆ ತರಬೇತಿಯನ್ನೂ ಕಲ್ಪಿಸಿದ್ದೇವೆ.

ಭಾರತವನ್ನು ಕೃಷಿಯಲ್ಲಿ ಸ್ವಾವಲಂಬಿಯನ್ನಾಗಿ ಮಾಡಲು ಮೋದಿ ಅವರು ಸಂಕಲ್ಪ ತೊಟ್ಟಿದ್ದಾರೆ. ಅದನ್ನು ಸಾಕಾರಗೊಳಿಸುವ ಸಲುವಾಗಿ, ಆ ದಿಸೆಯಲ್ಲಿ ಸೂಕ್ತ ಕಾರ್ಯವಿಧಾನಗಳೊಂದಿಗೆ ಕಾರ್ಯ ನಿರ್ವಹಿಸುತ್ತಿದ್ದೇವೆ. ಮುಂದಿನ ಐದು ವರ್ಷಗಳಲ್ಲಿ 100 ರಷ್ಟು ಆಧರಿತ ತೋಟಗಾರಿಕೆ ಕ್ಲಸ್ಟರ್‌ಗಳನ್ನು 18,000 ಕೋಟಿ ರು. ವೆಚ್ಚದಲ್ಲಿ ರೂಪಿಸುತ್ತೇವೆ. ಹಾಗೆಯೇ, 1,500ಕ್ಕೂ ಹೆಚ್ಚು ಕೃಷಿ ಮಾರುಕಟ್ಟೆಗಳನ್ನು ಸಂಯೋಜಿಸುವ ಮೂಲಕ ರೈತರ ಸಂಪರ್ಕ ವ್ಯವಸ್ಥೆಯನ್ನು ಸುಧಾರಿಸಲು ಒತ್ತು ನೀಡಲಾಗುವುದು. ಜತೆಗೆ, ನಾವು 6,800 ಕೋಟಿ ರು. ವೆಚ್ಚದಲ್ಲಿ 'ಎಣ್ಣೆಬೀಜ ಮಿಷನ್' ಅನ್ನು ಆರಂಭಿಸುತ್ತಿದ್ದೇವೆ. ಸರಕಾರವು ತರಕಾರಿ ಉತ್ಪಾದನಾ ಕ್ಲಸ್ಟರ್‌ಗಳನ್ನು ರಚಿಸುವ ನಿಟ್ಟಿನಲ್ಲೂ ಕಾರ್ಯ ನಿರ್ವಹಿಸುತ್ತಿದೆ. ಇದು ಸಣ್ಣ ರೈತರು ಹೊಸ ಮಾರುಕಟ್ಟೆಗಳನ್ನು ಪ್ರವೇಶಿಸಲು ಮತ್ತು ಅವರ ತರಕಾರಿಗಳು, ಹಣ್ಣುಗಳು, ಇತರ ಉತ್ಪನ್ನಗಳಿಗೆ ಉತ್ತಮ ಬೆಲೆಯನ್ನು ಪಡೆಯಲು ನೆರವಾಗಲಿದೆ. ಸರಕಾರವು ಬೇಳೆಕಾಳುಗಳ ಪೈಕಿ ತೊಗರಿಬೇಳೆ, ಉದ್ದಿನಬೇಳೆ ಮತ್ತು ಮಸೂರ್ ಬೇಳೆಯನ್ನು (ಮಸೂರ್ ದಾಲ್) ಸಂಪೂರ್ಣವಾಗಿ ಎಂಎಸ್‌ಪಿ ದರದಲ್ಲೇ ಖರೀದಿಸುವ ಮಹತ್ವದ ತೀರ್ಮಾನ ಕೈಗೊಂಡಿದೆ.

ಯಜುರ್ವೇದದಲ್ಲಿ 'ಅನ್ನಾನಾಂ ಪತಯೇ ನಮಃ, ಕ್ಷೇತ್ರಾಣಾಂ ಪತಯೇ ನಮಃ' ಎಂಬ ಒಂದು ಉಕ್ತಿ ಇದೆ. ಅದರ ಅರ್ಥ- ಧಾನ್ಯಗಳನ್ನು ಉತ್ಪಾದಿಸುವವರಿಗೆ ಮತ್ತು ಹೊಲಗಳ ಪಾಲಕರ ಮುಂದೆ ನಾವು ತಲೆಬಾಗಿ ನಮಸ್ಕರಿಸುತ್ತೇವೆ ಎಂದು. ಹಾಗೆಯೇ 'ಕೃಷಿ ಪರಾಶರ'ದಲ್ಲೂ 'ಆಹಾರವೇ ಜೀವನ, ಆಹಾರವೇ ಶಕ್ತಿ ಮತ್ತು ಆಹಾರವು ಎಲ್ಲಾ ಅಗತ್ಯಗಳನ್ನು ಪಡೆಯುವ ಸಾಧನ' ಎಂದು ಉಲ್ಲೇಖಿಸಲಾಗಿದೆ. ರೈತರಿಲ್ಲ ಎಂದಾದರೆ ನಮ್ಮ ದೇಶದ ಅಸ್ತಿತ್ವವೇ ಅಪೂರ್ಣವೆನಿಸುತ್ತದೆ. ಆ ಕಾರಣಕ್ಕಾಗಿಯೇ ನಮ್ಮ ಪ್ರಾಚೀನ ಗ್ರಂಥಗಳಲ್ಲಿಯೂ ರೈತರನ್ನು ಗೌರವಿಸಿರುವುದನ್ನು ಕಾಣುತ್ತೇವೆ. ಕೃಷಿ ಭಾರತದ ಆರ್ಥಿಕತೆಯ ಬೆನ್ನೆಲುಬಾಗಿದ್ದರೆ, ರೈತರು ಅದರ ಆತ್ಮದಂತೆ. ನಮ್ಮ ಸಂಸ್ಕೃತಿ ಮತ್ತು ಸಂಪ್ರದಾಯದಲ್ಲಿ ರೈತರ ಸೇವೆ ದೇವರಿಗೆ ಸಲ್ಲಿಸುವ ಪೂಜೆಗೆ ಸಮಾನವಾಗಿದೆ. ಇಂದು, ಪ್ರಧಾನಿ ಮೋದಿ ಅವರ ದೀರ್ಘಾವಧಿಯ, ಸರ್ವಾಂಗೀಣ, ಸಮಗ್ರ ಮತ್ತು ಸರ್ವರ ಪ್ರಗತಿಯ ದೂರದರ್ಶಿತ್ವದ ಅಭಿವೃದ್ಧಿಯ ಪ್ರಯತ್ನಗಳಿಂದ ಭಾರತ ಮತ್ತು ನಮ್ಮ ಕೃಷಿ ಕ್ಷೇತ್ರವು ಸುಸ್ಥಿರ ಪ್ರಗತಿಯ ಹಾದಿಯತ್ತ ದಾಪುಗಾಲು ಇಡುತ್ತಿದೆ. ಭಾರತದ ಸ್ವಾತಂತ್ರ್ಯದ ಸುವರ್ಣ ಯುಗದಲ್ಲಿ (ಆಜಾದಿ ಕಾ ಅಮೃತ್ ಕಾಲ್) ನಮ್ಮ ರೈತ ಸಹೋದರರು ಮತ್ತು ಸಹೋದರಿಯರು ಸ್ವಾವಲಂಬಿಗಳಾಗಿ ಸಮೃದ್ಧಿ ಹೊಂದಲಿದ್ದಾರೆ ಎಂಬ ಪೂರ್ಣ ವಿಶ್ವಾಸ ನನಗಿದೆ. ಹಾಗೆಯೇ ನಮ್ಮ ದೇಶದ ಧಾನ್ಯಗಳು ಶ್ರೀಮಂತಿಕೆ ಮತ್ತು ಸಮೃದ್ಧಿಯಿಂದ ವೃದ್ಧಿಸುತ್ತಲೇ ಇರುತ್ತವೆ.

(ಲೇಖಕರು ಕೇಂದ್ರ ಕೃಷಿ, ರೈತರ ಕಲ್ಯಾಣ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು)

ಪ್ರತಿಸ್ಪಂದನ

ಎಂ. ಕೆಂಪಣ್ಣ

ದೇಗುಲ ಸಿಬ್ಬಂದಿಯ ದುರ್ವರ್ತನೆ

ರವಿ ಸಜಂಗದ್ದೆ ಅವರ 'ಮುಜರಾಯಿ ದೇಗುಲಗಳು ಭಕ್ತಸ್ನೇಹಿ ಆಗುವುದೆಂದು!?' ಎಂಬ ಲೇಖನವು (ವಿಶ್ವವಾಣಿ ಆ.19) ಬಹುಶಃ ಎಲ್ಲ ಮುಜರಾಯಿ ದೇಗುಲಗಳ ಸಿಬ್ಬಂದಿಯ ದುರ್ವರ್ತನೆಗಳನ್ನು ಬೆತ್ತಲಾಗಿಸಿದೆ. ಇದರಲ್ಲಿ ಉದಾರಿಸಲಾದ ಮೈಸೂರು ಚಾಮುಂಡಿ ಬೆಟ್ಟದ ಶ್ರೀ ಚಾಮುಂಡೇಶ್ವರಿ ದೇಗುಲದ ಬದಲು ಬೇರಾವುದೇ ಮುಜರಾಯಿ ದೇಗುಲದ ಹೆಸರನ್ನು ಬಳಸಿದರೂ, ಇಡೀ ಲೇಖನದಲ್ಲಿ ಬರೆದಿರುವ ಎಲ್ಲ ವಿಷಯಗಳೂ ಸರಿಹೊಂದುತ್ತವೆ. ಇದಕ್ಕೊಂದು ಉದಾಹರಣೆ, ಬೆಂಗಳೂರಿನ ಬಸವನಗುಡಿಯ ಪ್ರಖ್ಯಾತ ಶ್ರೀ ದೊಡ್ಡ ಗಣಪತಿ ದೇವಸ್ಥಾನ. ಈ ದೇವಸ್ಥಾನಕ್ಕೆ ಪ್ರತಿದಿನ ನೂರಾರು ಭಕ್ತರು ಭೇಟಿ ನೀಡುತ್ತಾರೆ, ವಿಶೇಷ ದಿನಗಳಂದು ಸಾವಿರಾರು ಜನರು ಬರುತ್ತಾರೆ. ಪ್ರತಿ ತಿಂಗಳು ಸಂಕಷ್ಟ ಚತುರ್ಥಿ ಯಂದು ಭಕ್ತರು ಅಧಿಕ ಸಂಖ್ಯೆಯಲ್ಲಿ ಭೇಟಿ ನೀಡುತ್ತಾರೆ. ಸಂಕಷ್ಟ ಚತುರ್ಥಿಯು ಮಂಗಳವಾರ ಬಂದರೆ ಅದನ್ನು 'ಅಂಗಾರಕ ಸಂಕಷ್ಟ ಚತುರ್ಥಿ' ಎಂದು ವಿಶೇಷವಾಗಿ ಆಚರಿಸಲಾಗುತ್ತದೆ. ಜೂನ್ ತಿಂಗಳಲ್ಲಿ ಈ ವಿಶೇಷ ಸಂದರ್ಭ ಒದಗಿತ್ತು ಮತ್ತು ಅಂದು ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಈ ದೇವಸ್ಥಾನಕ್ಕೆ ಭೇಟಿನೀಡಿ ಪ್ರಾರ್ಥನೆ ಸಲ್ಲಿಸಲು ಕಾತುರರಾಗಿದ್ದರು. ಬೆಳಗ್ಗೆ 11.45ರ ಸಮಯದಲ್ಲಿ ಒಂದು ಗಂಟೆಗೂ ಹೆಚ್ಚು ಕಾಲ ಅವರು ಸರದಿಯಲ್ಲಿ ಕಾದು ದೇವಸ್ಥಾನದ ಒಳಗೆ ಬಂದಾಗ, ಅಲ್ಲಿನ ಸಿಬ್ಬಂದಿ ತೀರಾ ಅನಾಗರಿಕ ರೀತಿಯಲ್ಲಿ ವರ್ತಿಸತೊಡಗಿದರು. ಹೆಂಗಸರು-ಮಕ್ಕಳು ಎಂದು ಸಹ ನೋಡದೆ, ಸರಿಯಾಗಿ ದರ್ಶನಕ್ಕೂ ಅವಕಾಶ ನೀಡದೆ ಭಕ್ತರನ್ನು ತಳ್ಳುತ್ತಿದ್ದರು. ಸಿಬ್ಬಂದಿಯೇ ಅಡ್ಡ ನಿಂತಿದ್ದರಿಂದ ದೇವರನ್ನು ಸರಿಯಾಗಿ ದರ್ಶನ ಮಾಡುವುದೂ ಭಕ್ತಗಣಕ್ಕೆ ಸಾಧ್ಯವಾಗುತ್ತಿರಲಿಲ್ಲ. ಈ ಕುರಿತು ಯಾರಾದರೂ ಪ್ರಶ್ನಿಸಿದರೆ ಅತ್ಯಂತ ಒರಟಾಗಿ ಉತ್ತರಿಸಿ ತಳ್ಳುತ್ತಿದ್ದರು. ಮತ್ತೆ ರಾತ್ರಿ 8 ಗಂಟೆಗೆ ದರ್ಶನಕ್ಕೆ ಬಂದಾಗಲೂ ಇದೇ ದುರ್ವರ್ತನೆಯ ಪುನರಾವರ್ತನೆ ದೇಗುಲ ಸಿಬ್ಬಂದಿಯಿಂದ. ಹಿರಿಯ ನಾಗರಿಕರಿಗೆ ಪ್ರತ್ಯೇಕ ದರ್ಶನಕ್ಕೆ ವ್ಯವಸ್ಥೆ ಮಾಡಬೇಕೆಂಬ ಸರಕಾರಿ ಆದೇಶವಿದ್ದರೂ ಅಲ್ಲಿ ಏನೂ ವ್ಯವಸ್ಥೆ ಮಾಡಿರಲಿಲ್ಲ.

ಗಣೇಶ ಚತುರ್ಥಿ, ಸಂಕ್ರಾಂತಿ, ಯುಗಾದಿ, ದೀಪಾವಳಿ ಹೀಗೆ ಎಲ್ಲ ಹಬ್ಬಗಳ ಸಂದರ್ಭದಲ್ಲೂ ಈ ದೇವಸ್ಥಾನದಲ್ಲಿ ಸಿಬ್ಬಂದಿಯ ಆರ್ಭಟ, ದುರ್ವರ್ತನೆ ಮೇರೆ ಮೀರುತ್ತದೆ. ಇವರಿಗೆ ಭಕ್ತರನ್ನು ನೋಡಿದರೆ ಸಂಕಟ ಎಂದು ಕಾಣುತ್ತದೆ. ಭಕ್ತರೇ ದೇವಸ್ಥಾನದ ಆದಾಯದ ಮೂಲ, ಅಲ್ಲವೇ? ಇನ್ನು, ಇಲ್ಲಿನ ಸೇವಾಕೌಂಟರ್‌ನಲ್ಲಿ ಏನಾದರೂ ವಿಚಾರಿಸಿದರೆ ಅಸಡ್ಡೆಯಿಂದ, ಒರಟಾಗಿ ಉತ್ತರಿಸುತ್ತಾರೆ. ಅಂಗಾರಕ ಸಂಕಷ್ಟ ಚತುರ್ಥಿಯ ವೇಳೆ ಕಾಣಬರುವ ಭಕ್ತರ ದಟ್ಟಣೆಯ ಬಗ್ಗೆ ಈ ದೇಗುಲದ ಕಾರ್ಯನಿರ್ವಾಹಕ ಅಧಿಕಾರಿಗೆ ಮೊದಲೇ ಪತ್ರ ಬರೆದಿದ್ದರೂ, ಭಕ್ತರನ್ನು ಸರಿಯಾಗಿ ನಿರ್ವಹಿಸಿ ನಿಯಂತ್ರಿಸಲು ಕ್ರಮ ಕೈಗೊಳ್ಳದೆ ನಿರ್ಲಕ್ಷಿಸಿದ್ದಾರೆ. ಸದರಿ ಸಿಬ್ಬಂದಿ ವರ್ಗದವರು ಈ ದೇವಸ್ಥಾನವನ್ನು ತಮ್ಮ ಖಾಸಗಿ ಸ್ವತ್ತು ಎಂದು ಭಾವಿಸಿದ್ದಾರೇನೋ ಎಂಬಂತಿರುತ್ತದೆ ಅವರ ವರ್ತನೆ. ಭಕ್ತರನ್ನು ಅತ್ಯಂತ ನಿಕೃಷ್ಟವಾಗಿ ಕಾಣುವ ಈ ಸಿಬ್ಬಂದಿ, ಭಕ್ತರು ಹಬ್ಬ-ಹರಿದಿನಗಳಂದು ದೇವಸ್ಥಾನಕ್ಕೆ ಬಂದು ನೆಮ್ಮದಿಯಾಗಿ ದೇವರನ್ನು ದರ್ಶನ ಮಾಡಿ ಪ್ರಾರ್ಥನೆ ಸಲ್ಲಿಸುವುದಕ್ಕೂ ಬಿಡುವುದಿಲ್ಲವಲ್ಲಾ, ಇದಕ್ಕೇನನ್ನುವುದು? ವಿಶೇಷ ದಿನಗಳಂದು ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ ಎಂಬುದು ಗೊತ್ತಿದ್ದರೂ, ಅವರನ್ನು ಸಮರ್ಪಕವಾಗಿ ನಿರ್ವಹಿಸಲಾಗದೆ ಸಿಬ್ಬಂದಿ ವರ್ಗದವರು ಅಸಹಾಯಕತೆ-ಆಕ್ರೋಶಗಳಿಂದ ಕೂಗಾಡುವುದನ್ನು ನೋಡಿದರೆ 'ಕೈಲಾಗದವನು ಮೈ ಪರಚಿಕೊಂಡ' ಎಂಬ ಗಾದೆಮಾತು ನೆನಪಾಗುತ್ತದೆ. ವಿಶೇಷ ದಿನಗಳಂದು ಹೆಚ್ಚುವರಿಯಾಗಿ ಹೋಮ್‌ಗಾರ್ಡ್‌ಗಳನ್ನಾಗಲೀ, ಪೊಲೀಸರನ್ನಾಗಲೀ ನೇಮಿಸಿದರೆ ಭಕ್ತರು ನೆಮ್ಮದಿಯಿಂದ ದೇವರ ದರ್ಶನ ಮಾಡಬಹುದಲ್ಲವೇ?

ಜನರು ದೇವಸ್ಥಾನಕ್ಕೆ ಬರುವುದೇ ಶಾಂತಿ-ನೆಮ್ಮದಿಯನ್ನು ಅರಸಲು; ಆದರೆ ಅವರು ಇಲ್ಲೂ ಅರಚಾಟ-ಕಿರುಚಾಟ ಕೇಳುವುದು, ಸಿಬ್ಬಂದಿಯ ದರ್ಪ- ದೌರ್ಜನ್ಯಗಳಿಗೆ ಬಲಿಪಶುವಾಗುವುದು ಯಾವ ಕರ್ಮ? ಆದ್ದರಿಂದ ಸಂಬಂಧಪಟ್ಟವರು ಈ ವಿಷಯದಲ್ಲಿ ಸೂಕ್ತ ಮೇಲ್ವಿಚಾರಣೆ ನಡೆಸಬೇಕು, ಸಿಬ್ಬಂದಿಯ ಇಂಥ ದುರ್ವರ್ತನೆ ಮರುಕಳಿಸದಂತೆ ಮುಜರಾಯಿ ಇಲಾಖೆಯು ಮುಂಜಾಗ್ರತೆ ವಹಿಸಬೇಕು. ಭಕ್ತರೊಂದಿಗೆ ಸಂಯಮ-ಸಭ್ಯತೆಯಿಂದ ವರ್ತಿಸಬೇಕೆಂದು ಅವರಿಗೆ ಆದೇಶ ನೀಡಬೇಕು. ಈ ಸಿಬ್ಬಂದಿ ವರ್ಗದವರು ಕೆಲಸದಲ್ಲಿರುವುದೇ ಭಕ್ತರಿಗಾಗಿ. ಹುಂಡಿಗೆ ಭಕ್ತರು ಹಾಕುವ ಕಾಣಿಕೆ ಮತ್ತು ದೇವಸ್ಥಾನಕ್ಕೆ ಬರುವ ಇತರ ಆದಾಯದಿಂದಲೇ ಅಲ್ಲವೇ ಇವರಿಗೆ ಸಂಬಳ ಸಿಕ್ಕೋದು? ಹೀಗಿರುವಾಗ ಭಕ್ತರ ವಿಷಯದಲ್ಲಿ ಇಂಥ ದುರ್ವರ್ತನೆ, ಉದ್ಧಟತನ ಏಕೆ?

(ಲೇಖಕರು ಹವ್ಯಾಸಿ ಬರಹಗಾರರು)

ಅಚ್ಚುಕಟ್ಟು ಪ್ರದೇಶ

RNI: KARKAN/2016/67914

VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942 Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 240

ಸಮಾಚಾರ ಸಣ್ಣದಲ್ಲ

ಕೇಜ್ರಿವಾಲ್ ನ್ಯಾಯಾಂಗ ಬಂಧನ ಅವಧಿ ವಿಸ್ತರಣೆ

ದೆಹಲಿ: ಮದ್ಯ ನೀತಿ ಹಗರಣ ಪ್ರಕರಣದಲ್ಲಿ ಜೈಲು ಪಾಲಾಗಿರುವ ದೆಹಲಿ ಸಿಎಂ ಅರವಿಂದ ಕೇಜ್ರಿವಾಲ್ ಅವರ ನ್ಯಾಯಾಂಗ ಬಂಧನ ಅವಧಿಯನ್ನು ದೆಹಲಿ

ನ್ಯಾಯಾಲಯ ವಿಸ್ತರಿಸಿದೆ. ಆಗಸ್ಟ್ 27ರ ವರೆಗೆ ಬಂಧನ ಅವಧಿ ವಿಸ್ತರಿಸಿ ರೋಸ್ ಅವೆನ್ಯೂ ಕೋರ್ಟ್ ಆದೇಶಿಸಿದೆ. ಮಾರ್ಚ್ 21ರಂದು ಅಕ್ರಮ ಹಣ ವರ್ಗಾವಣೆ ಆರೋಪದ ಮೇಲೆ ಜಾರಿ ನಿರ್ದೇಶನಾಲಯ ಕೇಜ್ರಿವಾಲ್ ಅವರನ್ನು ಬಂಧಿಸಿತ್ತು . ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ದೆಹಲಿ ಸಿಎಂಗೆ ಜಾಮೀನು ನೀಡಿತ್ತಾದರೂ ಸಿಬಿಐ ಬಂಧನ ಹಿನ್ನೆಲೆ ಮತ್ತೆ ಜೈಲುವಾಸ ಮುಂದುವರೆದಿತ್ತು. ಸಿಬಿಐ ಬಂಧನ ಪ್ರಶ್ನಿಸಿ ಸುಪ್ರೀಂ ಮೆಟ್ಟಿಲೇರಿದ್ದ ಅರವಿಂದ ಕೇಜ್ರಿವಾಲ್‌ಗೆ ಅಲ್ಲೂ ಕೂಡ ಹಿನ್ನಡೆಯಾಗಿದ್ದು , ದೆಹಲಿ ಮದ್ಯ ಹಗರಣದಲ್ಲಿ ಸಿಎಂ ಕೇಜ್ರಿವಾಲ್‌ಗೆ ಸದ್ಯ ಬಿಡುಗಡೆ ಭಾಗ್ಯ ಇಲ್ಲದಂತಾಗಿದೆ.

ಜಮ್ಮು ಕಾಶ್ಮೀರದಲ್ಲಿ 2 ಬಾರಿ ಕಂಪಿಸಿದ ಭೂಮಿ

ಶ್ರೀನಗರ: ಕಣಿವೆ ಪ್ರದೇಶ ಜಮ್ಮು ಮತ್ತು ಕಾಶ್ಮೀರದಲ್ಲಿ ಮಂಗಳವಾರ ಎರಡು ಬಾರಿ ಭೂಮಿ ಕಂಪಿಸಿದ್ದು ಜನ ಆತಂಕದಿಂದ ಮನೆಯಿಂದ ಹೊರಗೆ ಓಡಿ ಬಂದಿದ್ದಾರೆ. ಸದ್ಯ ಯಾವುದೇ ಹಾನಿಯಾಗಿರುವ ಬಗ್ಗೆ ವರದಿಯಾಗಿಲ್ಲ. ಬೆಳಗಿನ ಜಾವ 6.45 ರ ಸಮಯದಲ್ಲಿ ಉತ್ತರ ಕಾಶ್ಮೀರದ ಬಾರಾಮುಲ್ಲಾದಲ್ಲಿ ಮೊದಲು ಭೂಮಿ ಕಂಪಿಸಿದೆ. ಭೂಮಿಯ 5 ಕಿ.ಮೀಟರ್ ಆಳದಲ್ಲಿ ಭೂಕಂಪನದ ಕೇಂದ್ರಬಿಂದು ಪತ್ತೆಯಾಗಿದ್ದು ರಿಕ್ಟರ್ ಮಾಪಕದಲ್ಲಿ 4.9 ರಷ್ಟು ತೀವ್ರತೆ ದಾಖಲಾಗಿದೆ. ಮೊದಲ ಭೂಕಂಪದ ಕೆಲವೇ ಸೆಕೆಂಡ್‌ಗಳ ಅಂತರದಲ್ಲಿ 6.52ಕ್ಕೆ ಮತ್ತೆ ಭೂಮಿ ಕಂಪಿಸಿದೆ. 10 ಕಿಮೀಟರ್ ಆಳದಲ್ಲಿ ಭೂಕಂಪನದ ಕೇಂದ್ರಬಿಂದು ದಾಖಲಾಗಿದ್ದು 4.8ರಷ್ಟು ತೀವ್ರತೆಯಲ್ಲಿ ಭೂಮಿ ಕಂಪಿಸಿದೆ. ಘಟನೆಯಿಂದ ಜಮ್ಮು ಮತ್ತು ಕಾಶ್ಮೀರದ ಜನ ಆತಂಕದಲ್ಲಿದ್ದಾರೆ.

ಕಾರು ಅಪಘಾತ ಕೇಸ್ ಮತ್ತಿಬ್ಬರ ಬಂಧನ

ಪುಣೆ : ಇಬ್ಬರು ಐಟಿ ಉದ್ಯೋಗಿಗಳನ್ನು ಬಲಿ ಪಡೆದ ಪುಣೆಯ ಪೋರ್ಷೆ ಕಾರು ಅಪಘಾತ ಪ್ರಕರಣದಲ್ಲಿ ಪೊಲೀಸರು ಮತ್ತೆ ಇಬ್ಬರನ್ನ ಬಂಧಿಸಿದ್ದಾರೆ. ಬಂಧಿತರ ಸಂಖ್ಯೆ 9ಕ್ಕೆ ಏರಿಕೆಯಾಗಿದೆ. ಅಪಘಾತದ ಸಂದರ್ಭದಲ್ಲಿ ಕಾರು ಚಲಾಯಿಸುತ್ತಿದ್ದ ಅಪ್ರಾಪ್ತನ ಜತೆ ಇದ್ದ ಮತ್ತಿಬ್ಬರು ಅಪ್ರಾಪ್ತರ ರಕ್ತದ ಮಾದರಿ ಬದಲಾಯಿಸಲಾಗಿತ್ತು. ಈ ಪ್ರಕರಣದಲ್ಲಿ ಭಾಗಿಯಾಗಿದ್ದ ಆರೋಪದ ಮೇಲೆ ಇಬ್ಬರನ್ನು ಪುಣೆಯ ಕ್ರೈಂ ಬ್ರ್ಯಾಂಚ್ ಅಧಿಕಾರಿಗಳು ಸೋಮವಾರ ಸಂಜೆ ಬಂಧಿಸಿದ್ದಾರೆ. ಈ ಹಿಂದೆ ಬಂಧಿಸಲಾದ 7 ಆರೋಪಿಗಳ ವಿರುದ್ಧ ಪೊಲೀಸರು ನ್ಯಾಯಾಲಯಕ್ಕೆ 900 ಪುಟಗಳ ಚಾರ್ಜ್‌ಶೀಟ್ ಸಲ್ಲಿಕೆ ಮಾಡಿದ್ದಾರೆ. ಮೇ 19ರಂದು ಕಲ್ಯಾಣಿ ನಗರದಲ್ಲಿ 17 ವರ್ಷದ ಬಾಲಕ ಮದ್ಯ ಸೇವಿಸಿ ಪೋರ್ಶೆ ಕಾರು ಚಲಾಯಿಸಿದ್ದು ಇಬ್ಬರು ಐಟಿ ಉದ್ಯೋಗಿಗಳ ಸಾವಿಗೆ ಕಾರಣನಾಗಿದ್ದ. ಪ್ರಕರಣದಿಂದ ತಪ್ಪಿಸಿಕೊಳ್ಳಲು ಸಾಕ್ಷ್ಯ ನಾಶದ ಸಾಕಷ್ಟು ಪ್ರಯತ್ನಗಳನ್ನು ಪೊಲೀಸರು ಈ ಕೇಸ್‌ನಲ್ಲಿ ಪತ್ತೆಹಚ್ಚಿದ್ದರು.

ಭೂಕುಸಿತಕ್ಕೆ 5 ಸಾವು

ಅಗರ್ತಲಾ: ತ್ರಿಪುರಾದಲ್ಲಿ ಭಾರಿ ಮಳೆ ಸುರಿಯುತ್ತಿದ್ದು ಹಲವೆಡೆ ಭೂಕುಸಿತ ಸಂಭವಿಸಿದೆ. ಘಟನೆಯಲ್ಲಿ ಐವರು ಸಾವನ್ನಪ್ಪಿದ್ದಾರೆ. ಸೋಮವಾರ ರಾತ್ರಿ ತ್ರಿಪುರಾದ ದೇವಿಪುರದಲ್ಲಿ ಭೂಕುಸಿತ ಸಂಭವಿಸಿದ್ದು ಮನೆ ನೆಲಸಮವಾಗಿದೆ. ಮಲಗಿದ್ದ ಮೂವರು ಸಾವನ್ನಪ್ಪಿದ್ದಾರೆ. ಗುಮತಿ ಜಿಲ್ಲೆಯ ಕಾರ್ಬುಕ್ ಪ್ರದೇಶದಲ್ಲಿ ಭೂಕುಸಿತದಿಂದ ಓರ್ವ ಸಾವನ್ನಪ್ಪಿದ್ದು ಮತ್ತೊರ್ವ ಕಣ್ಮರೆಯಾಗಿದ್ದಾರೆ. ಖೋವೈ ಜಿಲ್ಲೆಯ ಚಂಪಲೈನಲ್ಲಿ 14 ವರ್ಷದ ಬಾಲಕ ಗುಡ್ಡ ಕುಸಿತದಿಂದ ಸಾವನ್ನಪ್ಪಿದ್ದಾನೆ.

ಜಮ್ಮು -ಕಾಶ್ಮೀರದಲ್ಲಿ ಭೂಗತ ಅಡಗು ತಾಣ

ರಜೌರಿ: ಜಮ್ಮು ಮತ್ತು ಕಾಶ್ಮೀರದ ರಜೌರಿ ಪ್ರದೇಶದಲ್ಲಿ ಭದ್ರತಾ ಪಡೆಗಳು ಉಗ್ರರ ಭೂಗತ ಅಡಗು ತಾಣವನ್ನು ಪತ್ತೆ ಹಚ್ಚಿದ್ದಾರೆ. ಸಗ್ರಾವಣ್ ಅರಣ್ಯ ಪ್ರದೇಶದಲ್ಲಿ ಭದ್ರತಾ ಪಡೆಗಳು ಜಂಟಿ ಕಾರ್ಯಾಚರಣೆ ವೇಳೆ ಎಲ್ಲಾ ಅಗತ್ಯ ಸೌಲಭ್ಯವಿರುವ ಭೂಗತ ಅಡಗು ತಾಣ ಪತ್ತೆಯಾಗಿದೆ. ಅಡುಗೆ ಅನಿಲ, ಪಾತ್ರೆಗಳು, ಬೆಚ್ಚನೆಯ ಹೊದಿಕೆಗಳು, ದಿನ ಬಳಕೆಯ ವಸ್ತುಗಳು ದೊಡ್ಡ ಪ್ರಮಾಣದಲ್ಲಿ ಪತ್ತೆಯಾಗಿವೆ ಎಂದು ತಿಳಿದು ಬಂದಿದೆ. ಆದರೆ ಕಾರ್ಯಾಚರಣೆ ಸಮಯದಲ್ಲಿ ಯಾವ ಉಗ್ರರು ಪತ್ತೆಯಾಗಿಲ್ಲ. ವಿಧ್ವಂಸಕ ಕೃತ್ಯಗಳ ಬಳಿಕ ಉಗ್ರರು ಅಡಗಿಕೊಳ್ಳಲು ಈ ಭೂಗತ ತಾಣ ಬಳಸುತ್ತಿದ್ದರು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

{ **ಅಶ್ವಿನಿ ವೈಷ್ಣವ್** } ರೈಲ್ವೆ ಸಚಿವ

ಯುಪಿಎಸ್‌ಸಿ 'ಲ್ಯಾಟರಲ್ ಎಂಟ್ರಿ' ವ್ಯವಸ್ಥೆಯಲ್ಲಿ ಪಾರದರ್ಶಕ ವಿಧಾನವನ್ನು ಅಳವಡಿಸಿಕೊಂಡಿದೆ. ಈಗ ಅದರಲ್ಲಿ ಮೀಸಲಾತಿ ತತ್ವವನ್ನು ಅಳವಡಿಸಲು ನಿರ್ಧರಿಸಿದ್ದೇವೆ. ಪ್ರಧಾನಿ ಅವರು ಸಾಮಾಜಿಕ ನ್ಯಾಯದ ಕಡೆಗೆ ತಮ್ಮ ಬದ್ಧತೆಯನ್ನು ತೋರಿಸಿದ್ದಾರೆ. ನೀಟ್, ವೈದ್ಯಕೀಯ ಪ್ರವೇಶ, ಸೈನಿಕ ವಿದ್ಯಾಲಯ, ನವೋದಯ ವಿದ್ಯಾಲಯ ಸೇರಿ ಎಲ್ಲೆಡೆ ಮೀಸಲಾತಿ ತತ್ವವನ್ನು ಜಾರಿಗೆ ತಂದಿದ್ದೇವೆ.

ಸರಕಾರಕ್ಕೆ ಉಚ್ಚನ್ಯಾಯಾಲಯ ಚಾಟಿ | ಸಂತ್ರಸ್ತೆ ಗುರುತು ಉಲ್ಲೇಖಕ್ಕೆ ಕಳವಳ | ವೈದ್ಯರ ಸುರಕ್ಷತೆಗೆ ಕಾರ್ಯಪಡೆ

ವೈದ್ಯೆ ಮೇಲಿನ ಕೃತ್ಯ ಭೀಕರ ಎಂದ ಸುಪ್ರೀಂ

ದೆಹಲಿ: ಆರ್ ಜಿ ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಕಿರಿಯ ವೈದ್ಯೆ ಮೇಲೆ ನಡೆದ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ವಿಚಾರಣೆಯನ್ನು ಕೈಗೆತ್ತಿಕೊಂಡಿರುವ ಸುಪ್ರೀಂ ಕೋರ್ಟ್ ಕೃತ್ಯವನ್ನು 'ಭೀಕರ' ಮತ್ತು 'ಭಯಾನಕ' ಎಂದು ವ್ಯಾಖ್ಯಾನಿಸಿದೆ. ಇಂತಹ ಸೂಕ್ಷ್ಮ ಪ್ರಕರಣದ ತನಿಖೆಯಲ್ಲಿ ನಿರ್ಲಕ್ಷ್ಯ ತೋರಿದ್ದಕ್ಕೆ ಪಶ್ಚಿಮ ಬಂಗಾಳ ಸರಕಾರ ಮತ್ತು ಕೋಲ್ಕತ್ತ ಪೊಲೀಸರಿಗೆ ಸುಪ್ರೀಂ ಚಾಟಿ ಬೀಸಿದೆ. ಮುಂದಿನ ವಿಚಾರಣೆಯನ್ನು ಆಗಸ್ಟ್ 22ಕ್ಕೆ ನಿಗದಿಪಡಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ ವೈ ಚಂದ್ರಚೂಡ , ನ್ಯಾ. ಜೆ ಬಿ ಪರ್ದಿವಾಲ ಮತ್ತು ನ್ಯಾ. ಮನೋಜ್ ಮಿಶ್ರಾ ಅವರ ಪೀಠ ವೈದ್ಯೆ ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ ಹಲವು ಪ್ರಶ್ನೆಗಳನ್ನು ಮುಂದಿಟ್ಟಿದೆ. ಆಸ್ಪತ್ರೆ ಮೇಲೆ ದಾಳಿಯಂತಹ ಘಟನೆ ತಡೆಯಲು ಸರಕಾರ ಸೋತಿರುವುದು ಬೇಸರದ ಸಂಗತಿ , ವೈದ್ಯಕೀಯ ಸಿಬ್ಬಂದಿಗೆ ಸೂಕ್ತ ಸುರಕ್ಷತೆ ಬೇಕು. ಪರಿಸ್ಥಿತಿ ಬದಲಾಗಲು ದೇಶ ಇನ್ನೊಂದು ಇಂತಹ ಘಟನೆಗೆ ಕಾಯಲು ಸಿದ್ಧವಿಲ್ಲ . ಮಹಿಳಾ ವೈದ್ಯಕೀಯ ಸಿಬ್ಬಂದಿಗಳು ಇಂತಹ ದೌರ್ಜನ್ಯಕ್ಕೆ ಹೆಚ್ಚು ಗುರಿಯಾಗುತ್ತಿದ್ದಾರೆ ಎಂದು ಕೋರ್ಟ್ ಸರಕಾರದ ಕಿವಿ ಹಿಂಡಿದೆ.

ವೈದ್ಯರ ಸುರಕ್ಷತೆ ಬಗ್ಗೆ ಸುಪ್ರೀಂ ಕಳವಳ: ಆಸ್ಪತ್ರೆಯಲ್ಲಿ ಹಗಲು ರಾತ್ರಿ ಸತತವಾಗಿ ಕೆಲಸ ಮಾಡುವ ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿಗಳ ಸುರಕ್ಷತೆ ಬಗ್ಗೆ ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿದೆ. ಸದ್ಯ ಆರ್ ಜಿ ಕರ್ ಕಾಲೇಜು ಮತ್ತು ಆಸ್ಪತ್ರೆಗೆ ಸೂಕ್ತ ಭದ್ರತೆ ನೀಡುವಂತೆ ಸಿಐಎಸ್‌ಎಫ್‌ಗೆ ಆದೇಶ ನೀಡಿದೆ. ಜತೆಗೆ ವೈದ್ಯರ ಸುರಕ್ಷತೆಗಾಗಿ 10 ಸದಸ್ಯರ ರಾಷ್ಟ್ರೀಯ ಕಾರ್ಯಪಡೆ (ಎನ್‌ಟಿಎಫ್)ರಚಿಸಿ ಆದೇಶಿಸಿದೆ. ಈ ಕಾರ್ಯಪಡೆ ವೈದ್ಯರು, ಸಂಪುಟ ಕಾರ್ಯದಶಿ, ಗೃಹ ಇಲಾಖೆ ಕಾರ್ಯದರ್ಶಿ, ಕುಟುಂಬ ಕಲ್ಯಾಣ ಇಲಾಖೆಯ ಕಾರ್ಯದರ್ಶಿ, ರಾಷ್ಟ್ರೀಯ ವೈದ್ಯಕೀಯ ಆಯೋಗದ ಅಧ್ಯಕ್ಷರು, ರಾಷ್ಟ್ರೀಯ ಪರೀಕ್ಷಾ ಮಂಡಳಿಯ ಅಧ್ಯಕ್ಷರನ್ನು ಒಳಗೊಂಡಿದೆ. ಈ ಸಮಿತಿಗೆ ಸುಪ್ರೀಂ ವೈದ್ಯಕೀಯ ಸಿಬ್ಬಂದಿ ಮೇಲೆ ನಡೆಯುವ ಲಿಂಗ ಆಧಾರಿತ ದೌರ್ಜನ್ಯ ತಡೆ ಹಾಗೂ ಕೆಲಸದ ಸ್ಥಳದಲ್ಲಿ ಗೌರವಪೂರ್ವಕ ಮತ್ತು ಸುರಕ್ಷಿತ ವಾತಾವರಣ ನಿರ್ಮಿಸಲು ಗಮನ ಹರಿಸುವಂತೆ ಸೂಚಿಸಿದೆ. ಮೊದಲ ವರದಿ ಮೂರು ವಾರಗಳಲ್ಲಿ ನೀಡುವಂತೆ ಹಾಗೂ ಅಂತಿಮ ವರದಿ 2 ತಿಂಗಳಲ್ಲಿ ಸಲ್ಲಿಸುವಂತೆ ಸೂಚಿಸಿದೆ.

ಸುಪ್ರೀಂ ಕೇಳಿದ ಪ್ರಶ್ನೆಗಳೇನು?

- ಪ್ರಾಥಮಿಕ ತನಿಖಾ ವರದಿ(ಎಫ್ ಐಆರ್) ದಾಖಲಿಸಲು ಯಾಕಿಷ್ಟು ತಡವಾಗಿದೆ ?
- ಪ್ರಕರಣವನ್ನು ಆತ್ಮಹತ್ಯೆ ಎಂದು ಬಿಂಬಿಸಲು ಹೊರಟಿದ್ದು ನಿಜವೇ?
- ಘಟನೆ ನಡೆದಾಗ ಪ್ರಾಂಶುಪಾಲರು ಏನು ಮಾಡುತ್ತಿದ್ದರು?
- ಆಸ್ಪತ್ರೆ ಮೇಲೆ ದಾಳಿ ನಡೆಯುವವರೆಗೂ ಪೊಲೀಸರು ಏನು ಮಾಡುತ್ತಿದ್ದರು?
- ಯಾಕೆ ತಡವಾಗಿ ಪೋಷಕರಿಗೆ ಮೃತದೇಹ ಹಸ್ತಾಂತರಿಸಲಾಗಿದೆ?
- ಆಸ್ಪತ್ರೆ ನವೀಕರಣ ಕಾರ್ಯ ಈಗ ಕೈಗೊಂಡಿದ್ದು ಯಾಕೆ?

ಎಲ್ಲಾ ರಾಜ್ಯಗಳು ವರದಿ ನೀಡಿ

ಒಂದು ತಿಂಗಳಲ್ಲಿ ಎಲ್ಲಾ ರಾಜ್ಯಗಳು ಆಸ್ಪತ್ರೆಗಳಲ್ಲಿನ ಭದ್ರತಾ ಸಿಬ್ಬಂದಿಗಳ ಸಂಖ್ಯೆ ಬಗ್ಗೆ ವರದಿ ನೀಡಿ ಎಂದು ಸುಪ್ರೀಂ ಸೂಚನೆ ನೀಡಿದೆ.ಎಲ್ಲಾ ರಾಜ್ಯಗಳಲ್ಲಿನ ಆಸ್ಪತ್ರೆಗಳಲ್ಲಿ ಎಷ್ಟು ಭದ್ರತಾ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ? ವಿಶ್ರಾಂತಿ ಕೊಠಡಿಗಳು ಎಷ್ಟಿವೆ? ಆಸ್ಪತ್ರೆಯ ಎಷ್ಟು ಕೊಠಡಿಗೆ ಸಾರ್ವಜನಿಕ ಪ್ರವೇಶಕ್ಕೆ ಅನುಮತಿ ಇದೆ? ಎಂಬ ಬಗ್ಗೆ ಮಾಹಿತಿ ಸಂಗ್ರಹಿಸಿ ಒಂದು ತಿಂಗಳಲ್ಲಿ ಮಾಹಿತಿ ನೀಡಿ ಎಂದು ಹೇಳಿದೆ.

ಮಾಜಿ ಪ್ರಾಂಶುಪಾಲ ವಿರುದ್ಧ ಎಫ್‌ಐಆರ್

ಆರ್‌ಜಿಕರ್ ವೈದ್ಯಕೀಯ ಕಾಲೇಜಿನ ಮಾಜಿ ಪ್ರಾಂಶು ಪಾಲ ಸಂದೀಪ್ ಘೋಷ್ ವಿರುದ್ಧ ಕೋಲ್ಕತ್ತ ಪೊಲೀಸ್ ಭ್ರಷ್ಟಾಚಾರ ಆರೋಪದ ಮೇಲೆ ಎಫ್‌ಐಆರ್ ದಾಖಲಿ ಸಿದೆ. ಜತೆಗೆ ಸಿಬಿಐ ಸತತ ಮೂರು ದಿನಗಳಿಂದ 50 ಗಂಟೆಗಳ ಕಾಲ ವಿಚಾರಣೆ ನಡೆಸಿದೆ. ಮಾಜಿ ಪ್ರಾಂಶುಪಾಲನಿಗೆ ಬಂಧನದ ಭೀತಿ ಎದುರಾಗಿದೆ. ಕೋಲ್ಕತ್ತ ಪೊಲೀಸ್ ಘೋಷ್ ವಿರುದ್ಧ ಸೆಕ್ಷನ್ 420 (ವಂಚನೆ ಕೇಸ್), ಸೆಕ್ಷನ್ 120 ಬಿ(ಅಪರಾಧ ಪಿತೂರಿ) ಹಾಗೂ ಭ್ರಷ್ಟಾಚಾರ ಕೇಸ್ ದಾಖಲಾಗಿದೆ. ವೈದ್ಯೆ ಹತ್ಯೆ ಪ್ರಕರಣದ ಆರಂಭದಿಂದಲೂ ಸಂದೀಪ್ ಘೋಷ್ ಮೇಲೆ ಹಲವು ಆಯಾಮದಲ್ಲಿ ಅನುಮಾನಗಳು ವ್ಯಕ್ತವಾಗಿವೆ. ಆರ್ ಜಿ ಕರ್ ಕಾಲೇಜು ಮತ್ತು ಆಸ್ಪತ್ರೆಯ ಹಣಕಾಸು ವ್ಯವಹಾರದಲ್ಲಿ ಅನುಮಾನ ವ್ಯಕ್ತವಾಗಿದ್ದು ತನಿಖೆಗೆ ಎಸ್‌ಐಟಿ ರಚಿಸಲಾಗಿದೆ.

ಪ್ರತಿಭಟನೆ ಕೈ ಬಿಡಲು ಸುಪ್ರೀಂ ಮನವಿ

ವೈದ್ಯೆ ಹತ್ಯಾಚಾರ ಖಂಡಿಸಿ ರಾಷ್ಟ್ರವ್ಯಾಪಿ ಕಿರಿಯ ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿ ಪ್ರತಿಭಟನೆ ನಡೆಸುತ್ತಿದ್ದಾರೆ. ಸುಪ್ರೀಂ ಕೋರ್ಟ್ ಮಂಗಳವಾರ ಪ್ರತಿಭಟನೆ ಕೈಬಿಟ್ಟು ಕರ್ತವ್ಯಕ್ಕೆ ಹಾಜರಾಗುವಂತೆ ಮನವಿ ಮಾಡಿದೆ. ಸುಪ್ರೀಂ ಮನವಿಗೆ ಹಲವೆಡೆ ವೈದ್ಯರು ಸಮ್ಮತಿ ಸೂಚಿಸಿದ್ದು ಪ್ರತಿಭಟನೆಗಳನ್ನು ನಿಲ್ಲಿಸುವುದಾಗಿ ತಿಳಿಸಿದ್ದಾರೆ. ಗೋವಾ ವೈದ್ಯರು, ರೆಸಿಡೆಂಟ್ ಡಾಕ್ಟರ್ಸ್ ಅಸೋಸಿಯೇಶನ್ ಪ್ರತಿಭಟನೆ ಹಿಂಪಡೆಯುವುದಾಗಿ ತಿಳಿಸಿದೆ. ಫೋರ್ಡಾ ವೈದ್ಯರ ಸಂಘ ಕೂಡ ವೈದ್ಯೆ ಹತ್ಯೆ ಪ್ರಕರಣದಲ್ಲಿ ಸುಪ್ರೀಂ ಮಧ್ಯಸ್ಥಿಕೆಯನ್ನು ಸ್ವಾಗತಿಸಿದ್ದು ಪ್ರತಿಭಟನೆ ಹಿಂಪಡೆಯುವ ಬಗ್ಗೆ ಚರ್ಚೆ ಕೈಗೊಂಡಿದೆ.

ಅರುಣಾ ಶಾನ್‌ಭಾಗ್ ಪ್ರಕರಣ ಉಲ್ಲೇಖ

ಕಿರಿಯ ವೈದ್ಯೆ ಮೇಲೆ ನಡೆದ ಅತ್ಯಾಚಾರ ಪ್ರಕರಣ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಕರ್ನಾಟಕದ ಅರುಣಾ ಶಾನ್‌ಭಾಗ್ ಘಟನೆಯನ್ನು ಪ್ರಸ್ತಾಪಿಸಿದ್ದಾರೆ. 1967 ರಲ್ಲಿ ಮುಂಬೈನ ಕೆಇಎಮ್ ಆಸ್ಪತ್ರೆಯಲ್ಲಿ ನರ್ಸ್ ಆಗಿ ಸೇರಿಕೊಂಡಿದ್ದ ಅವರ ಮೇಲೆ ಭೀಕರ ಅತ್ಯಾಚಾರ ನಡೆದಿತ್ತು. ಅದೇ ಆಸ್ಪತ್ರೆಯ ವಾರ್ಡ್ ಬಾಯ್ ಅರುಣಾ ಮೇಲೆ ಅತ್ಯಾಚಾರ ನಡೆಸಿದ್ದು ಘಟನೆಯಿಂದ ಅರುಣಾ ತೀವ್ರ ಮೆದುಳಿನ ಹಾನಿಗೆ ಒಳಗಾಗಿದ್ದರು. ಆಹಾರ ಕದಿಯುತ್ತಿದ್ದಿದ್ದನ್ನು ಪ್ರಶ್ನಿಸಿದ್ದಕ್ಕೆ ವಾರ್ಡ್ ಬಾಯ್ ಅರುಣಾ ಮೇಲೆ ಭೀಕರ ಕೃತ್ಯ ಎಸಗಿದ್ದ ಎಂದು ಹೇಳಲಾಗಿತ್ತು. 42 ವರ್ಷಗಳ ಕಾಲ ದೇಹದ ಮೇಲೆ ನಿಯಂತ್ರಣವೇ ಇಲ್ಲದೆ ಬದುಕಿದ್ದ ಅವರು 2015ರಲ್ಲಿ ಸಾವನ್ನಪ್ಪಿದ್ದರು.

ಸಂತ್ರಸ್ತೆ ಗುರುತು ಬಹಿರಂಗಕ್ಕೆ ಸುಪ್ರೀಂ ಕೋರ್ಟ್ ಬೇಸರ

ವೈದ್ಯೆ ಹತ್ಯಾಚಾರ ಪ್ರಕರಣದಲ್ಲಿ ಸಂತ್ರಸ್ತೆಯ ಹೆಸರು, ಫೋಟೊ, ಗುರುತು ಸಾಮಾಜಿಕ ಜಾಲತಾಣದಲ್ಲಿ ಬಹಿರಂಗಗೊಂಡಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದೆ. ಎಲ್ಲಾ ಮಾಧ್ಯಮಗಳಿಂದ ಸಂತ್ರಸ್ತೆಯ ಗುರುತು ತೆಗೆದು ಹಾಕುವಂತೆ ಹಾಗೂ ಬಳಸದಂತೆ ಸೂಚನೆ ನೀಡಿದೆ. ಅತ್ಯಾಚಾರ ಮತ್ತು ಕೊಲೆಗೆ ಒಳಗಾದ ಯುವ ವೈದ್ಯೆಗೆ ಗೌರವ ನೀಡುವ ರೀತಿಯೇ? ಎಂದು ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

ವಸ್ತುಸ್ಥಿತಿ ಮಾಹಿತಿ ಕೇಳಿದ ಕೋರ್ಟ್

ಆರ್ ಜಿ ಕರ್ ಕಾಲೇಜು ಮತ್ತು ಆಸ್ಪತ್ರೆ ಮೇಲೆ ನಡೆದ ಗುಂಪು ದಾಳಿ ಬಗ್ಗೆ ವರದಿ ನೀಡುವಂತೆ ಪಶ್ಚಿಮ ಬಂಗಾಳ ಸರಕಾರಕ್ಕೆ ಸುಪ್ರಿಂ ಸೂಚನೆ ನೀಡಿದೆ. ಹಾಗೇ ಸಿಬಿಐಗೆ ತನಿಖೆ ಯಾವ ಹಂತದಲ್ಲಿದೆ ಎಂಬ ಬಗ್ಗೆ ಗುರುವಾರದೊಳಗೆ ವರದಿ ನೀಡುವಂತೆ ಆದೇಶಿಸಿದೆ. ಹಿರಿಯ ವಕೀಲ ಕಪಿಲ್ ಸಿಬಲ್ ಆಸ್ಪತ್ರೆ ಮೇಲೆ ದಾಳಿ ಪ್ರಕರಣದಲ್ಲಿ 37 ಜನರನ್ನು ಬಂಧಿಸಲಾಗಿದ್ದು 50 ಎಫ್‌ಐಆರ್ ದಾಖಲಾಗಿವೆ ಎಂದು ತಿಳಿಸಿದ್ದಾರೆ.

ರಾಜೀವ್ ಜಯಂತಿ: ರಾಹುಲ್ ಪುಷ್ಪನಮನ

ನಿಮ್ಮ ಕನಸು ನನಸು ಮಾಡುತ್ತೇನೆ

ದೆಹಲಿ: ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ 80ನೇ ವರ್ಷದ ಜಯಂತಿ ಹಿನ್ನೆಲೆ ಅವರ ಪುತ್ರ ರಾಹುಲ್ ಗಾಂಧಿ ತಂದೆಯ ಸಮಾಧಿಗೆ ಪುಷ್ಪನಮನ ಸಲ್ಲಿಸಿದ್ದಾರೆ. ದೆಹಲಿಯ ವೀರ ಭೂಮಿಯಲ್ಲಿರುವ ರಾಜೀವ ಗಾಂಧಿ ಸಮಾಧಿಗೆ ತೆರಳಿ ಗೌರವ ನಮನ ಸಲ್ಲಿಸಿದ್ದಾರೆ. ಹಲವು ಕಾಂಗ್ರೆಸ್ ನಾಯಕರು ಕೂಡ ಮಾಜಿ ಪ್ರಧಾನಿಗೆ ಪುಷ್ಪ ನಮನ ಸಲ್ಲಿಸಿದ್ದಾರೆ.

ರಾಜೀವ್ ಗಾಂಧಿ ಬಗ್ಗೆ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿರುವ ರಾಹುಲ್ ' ಅಪ್ಪ ನಿಮ್ಮ ಕನಸನ್ನು ನನಸು ಮಾಡುತ್ತೇನೆ, ನೀವು ನೀಡಿದ ಶಿಕ್ಷಣ ನನಗೆ ಸ್ಫೂರ್ತಿ. ಭಾರತ ದೆಡೆಗಿನ ನಿಮ್ಮ ಕನಸು ನನ್ನ ಕನಸು ಕೂಡ ಅದನ್ನು ಸಾಕಾರಗೊಳಿಸುವೆ' ಎಂದು ಬರೆದುಕೊಂಡಿದ್ದಾರೆ. ದೆಹಲಿ ಕಾಂಗ್ರೆಸ್ ಕಚೇರಿಯಲ್ಲಿ ರಾಜೀವ್ ಗಾಂಧಿ ಜಯಂತಿಯನ್ನು ಆಚರಿಸಲಾಗಿದೆ. ಜನ್ಮ ದಿನಾಚರಣೆ ಹಿನ್ನೆಲೆ ಕಾಂಗ್ರೆಸ್ ನಾಯಕರು , ಕಾರ್ಯಕರ್ತರು ಸದ್ಭಾವನಾ ದಿವಸ್ ಆಚರಿಸಿದ್ದಾರೆ. ಪ್ರಧಾನಿ ಮೋದಿ ಕೂಡ ಎಕ್ಸ್ ಖಾತೆಯಲ್ಲಿ ' ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಜನ್ಮ ವಾರ್ಷಿಕೋತ್ಸವದಂದು ಅವರಿಗೆ ನನ್ನ ನಮನಗಳು' ಎಂದು ಬರೆದುಕೊಂಡಿದ್ದಾರೆ.

ಮ.ಪ್ರದೇಶ ಕಲ್ಲಿದ್ದಲು ಕಂಪನಿ ಅಧಿಕಾರಿಗಳೂ ಸೆರೆ

ಸಿಬಿಐ ಡಿವೈಎಸ್‌ಪಿ ಸಿಬಿಐನಿಂದಲೇ ಬಂಧನ

ಭೋಪಾಲ್: ಭ್ರಷ್ಟಾಚಾರ ಮತ್ತು ಲಂಚ ಪಡೆದ ಆರೋಪದಡಿ ಮಧ್ಯಪ್ರದೇಶದ ಸಿಂಗ್ರೌಲಿಯಲ್ಲಿ ಕೇಂದ್ರದ ತನಿಖಾ ದಳ(ಸಿಬಿಐ)ದ ಉಪ ಪೊಲೀಸ್ ವರಿಷ್ಠಾಧಿಕಾರಿ(ಡಿವೈಎಸ್‌ಪಿ) ಮತ್ತು ಉತ್ತರ ಕೋಲ್ ಫೀಲ್ಡ್ ಲಿ.ನ ಇಬ್ಬರು ಅಧಿಕಾರಿಗಳು ಸೇರಿದಂತೆ ಐವರನ್ನು ಸಿಬಿಐ ಬಂಧಿಸಿದೆ. ನಾರ್ಥ್ ಕೋಲ್ ಫೀಲ್ಡ್ (ಎನ್‌ಸಿಎಲ್) ಕೇಂದ್ರದ ಕಲ್ಲಿದ್ದಲು ಸಚಿವಾಲಯದಡಿ ಬರುವ 'ಮಿನಿ ರತ್ನ' ಕಂಪನಿಯಾಗಿದೆ.

ಕೇಂದ್ರ ತನಿಖಾ ದಳ ಆ.17ರಂದು ಸಿಂಗ್ರೌಲಿ ಮತ್ತು ಜಬಲ್ಪುರ ಹಾಗೂ ಉತ್ತರ ಪ್ರದೇಶದ ನೋಯ್ಡಾದಲ್ಲಿ ಇದೇ ಲಂಚ ಪ್ರಕರಣಕ್ಕೆ ಸಂಬಂಧಿಸಿ ತೀವ್ರ ಶೋಧ ನಡೆಸಿತ್ತು. ಕಲ್ಲಿದ್ದಲು ಗಣಿ ಕಂಪನಿಯ ಅಧ್ಯಕ್ಷರ ಖಾಸಗಿ ಕಾರ್ಯದರ್ಶಿ ಮತ್ತು ವ್ಯವಸ್ಥಾಪಕ ಸುಬೇದಾರ್ ಓಜಾ, ಮಾಜಿ ಅಧ್ಯಕ್ಷ ಭೋಲಾ ಸಿಂಗ್, ಹಾಲಿ ಮುಖ್ಯ ವಿಜಿಲೆನ್ಸ್ ಅಧಿಕಾರಿ ಮತ್ತು ಇತರ ಕೆಲವು ಹಿರಿಯ ಅಧಿಕಾರಿಗಳು ಸೇರಿದಂತೆ ಎನ್‌ಸಿಎಲ್‌ನ ವಿವಿಧ ಅಧಿಕಾರಿಗಳ ಆವರಣದಲ್ಲಿ ಶೋಧ ನಡೆಸಲಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ. ಆರೋಪಿಗಳನ್ನು ಜಬಲ್ಪುರದ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಆ.24ರವರೆಗೆ ಸಿಬಿಐ ಕಸ್ಟಡಿಗೆ ನ್ಯಾಯಾಲಯ ಒಪ್ಪಿಸಿದೆ ಎಂದು ಮೂಲಗಳು ತಿಳಿಸಿವೆ.

ಮೋದಿ-ಮಲೇಷ್ಯಾ ಪ್ರಧಾನಿ ಭೇಟಿ: 8 ಮಹತ್ವದ ಒಪ್ಪಂದ

ದೆಹಲಿ: ಪ್ರಧಾನಿ ಮೋದಿ ಹಾಗೂ ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ ದೆಹಲಿಯಲ್ಲಿ ವ್ಯಾಪಾರ, ಹೂಡಿಕೆ, ರಕ್ಷಣಾ ವಲಯ, ತಂತ್ರಜ್ಞಾನ ಸೇರಿ ಅನೇಕ ಮಹತ್ವದ ವಿಚಾರಗಳ ಬಗ್ಗೆ ಚರ್ಚೆ ನಡೆಸಿದ್ದಾರೆ. ಉಭಯ ನಾಯಕರು ಕನಿಷ್ಠ 8 ಮಹತ್ವಪೂರ್ಣ ಒಪ್ಪಂದಗಳಿಗೆ ಸಹಿ ಹಾಕಿದ್ದಾರೆ. ಮಲೇಷ್ಯಾ ಪ್ರಧಾನಿ ಮೂರು ದಿನಗಳ ಭಾರತ ಪ್ರವಾಸ ಕೈಗೊಂಡಿದ್ದಾರೆ.

ಸಭೆ ಬಳಿಕ ಜಂಟಿ ಸುದ್ದಿಘೋಷ್ಠಿಯಲ್ಲಿ ಮಾತನಾಡಿದ ಪ್ರಧಾನಿ ಮೋದಿ ಆರ್ಥಿಕ ಸಹಕಾರದ ವಿಚಾರದಲ್ಲಿ ಎರಡೂ ರಾಷ್ಟ್ರಗಳಿಗೂ ಸಾಕಷ್ಟು ಅವಕಾಶಗಳಿವೆ. ಶೀಘ್ರದಲ್ಲೇ ಭಾರತ -ಮಲೇಷ್ಯಾ ಕಾರ್ಯತಂತ್ರ ಪಾಲುದಾರಿಕೆಯ ಮೊದಲ ದಶಕವನ್ನು ಆಚರಿಸಲಿದ್ದೇವೆ. ಭಾರತದ ಸಹಕಾರವನ್ನು 'ಸಮಗ್ರ ಕಾರ್ಯತಂತ್ರ ಪಾಲುದಾರಿಕೆಗೆ' ಎತ್ತರಿಸಲಾಗುವುದು ಎಂದು ಮೋದಿ ಘೋಷಿಸಿದ್ದಾರೆ. ಮಲೇಷ್ಯಾ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮೊದಲ ಬಾರಿಗೆ ಪ್ರಧಾನಿ ಅನ್ವರ್ ಇಬ್ರಾಹಿಂ ಭಾರತಕ್ಕೆ ಬಂದಿರುವುದಕ್ಕೆ ಹರ್ಷ ವ್ಯಕ್ತಪಡಿಸಿದ ಮೋದಿ ಕಳೆದ ಎರಡು ವರ್ಷದಿಂದ ಅನ್ವರ್ ಅವರ ಸಹಕಾರದಿಂದ ದ್ವಿಪಕ್ಷೀಯ ವ್ಯವಹಾರದಲ್ಲಿ ಉತ್ತಮ ಬೆಳವಣಿಗೆ ಕಂಡಿದೆ. ರುಪಾಯಿ ಮತ್ತು ಮಲೇಷ್ಯಾ ರಿಂಗ್‌ಗಿಟ್ ವಹಿವಾಟು ಕೂಡ ಉತ್ತಮ ಸ್ಥಿತಿಯಲ್ಲಿದೆ ಎಂದು ಪ್ರಧಾನಿ ಸಂತಸ ವ್ಯಕ್ತಪಡಿಸಿದ್ದಾರೆ.

ಮಲೇಷ್ಯಾದಲ್ಲಿ ಆಯುರ್ವೇದ ಪೀಠ: ದ್ವಿಪಕ್ಷೀಯ ವ್ಯವಹಾರ ಮತ್ತು ಹೂಡಿಕೆ ವಿಸ್ತರಿಸಬೇಕು, ರಕ್ಷಣಾ ಉದ್ಯಮ, ಕೃತಕ ಬುದ್ಧಿಮತ್ತೆಯಂತಹ ಹೊಸ ತಾಂತ್ರಿಕ ಕ್ಷೇತ್ರಗಳನ್ನು ಸಹಕಾರ ಹೆಚ್ಚಿಸಬೇಕಿದೆ.ಭಾರತದ ಯುಪಿಐ ವ್ಯವಸ್ಥೆಯನ್ನು ಮಲೇಷ್ಯಾದ ಪೇನೆಟ್‌ನೊಂದಿಗೆ ಜೋಡಿಸುವ ಕಾರ್ಯ ಮಾಡಲಾಗುವುದು. ಎರಡೂ ರಾಷ್ಟ್ರಗಳು ಭಯೋತ್ಪಾದಕತೆ ಮತ್ತು ಉಗ್ರವಾದ ಎದುರಿಸುವಲ್ಲಿ ಒಂದೇ ರೀತಿಯ ಧೋರಣೆ ಹೊಂದಿದೆ ಎಂದು ಪ್ರಧಾನಿ ಹೇಳಿದರು. ಮಲೇಷ್ಯಾದ ತುಂಕು ಅಬ್ದುಲ್ ರಹಮಾನ್ ವಿಶ್ವವಿದ್ಯಾಲಯದಲ್ಲಿ ಆಯುರ್ವೇದ ಪೀಠ ರಚನೆ ಹಾಗೂ ಮಲಯಾ ವಿಶ್ವವಿದ್ಯಾಲಯದಲ್ಲಿ ಭಾರತೀಯ ಅಧ್ಯಯನದ ತಿರುವಳ್ಳುವರ್ ಪೀಠ ರಚನೆಗೆ ಒಪ್ಪಂದ ನಡೆದಿದೆ.

ರೈಲು ತಡೆದು ಸಾರ್ವಜನಿಕರ ಆಕ್ರೋಶ | ಅಂಗನವಾಡಿ ಶಾಲೆ ಧ್ವಂಸ

4 ವರ್ಷದ ಇಬ್ಬರು ಮಕ್ಕಳ ಮೇಲೆ ಲೈಂಗಿಕ ಕಿರುಕುಳ

ಥಾಣೆ: ಅಂಗನವಾಡಿಯೊಂದರಲ್ಲಿ ಇಬ್ಬರು ಹೆಣ್ಣುಮಕ್ಕಳಿಗೆ ಲೈಂಗಿಕ ಕಿರುಕುಳ ನೀಡಿದ ಘಟನೆ ಬೆಳಕಿಗೆ ಬಂದಿದೆ. ಆರೋಪಿಗಳ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿ ವಿದ್ಯಾರ್ಥಿಗಳ ಪೋಷಕರು ಹಾಗೂ ಸಾರ್ವಜನಿಕರು ರೈಲು ತಡೆದು ಬೃಹತ್ ಪ್ರತಿಭಟನೆ ನಡೆಸಿದ್ದಾರೆ. ಘಟನೆ ಸಂಬಂಧ ಪೊಲೀಸರು ಓರ್ವ ಸಹಾಯಕನನ್ನ ಪೋಕ್ಸೊ ಕಾಯಿದೆ ಅಡಿ ಬಂಧಿಸಿದ್ದಾರೆ.

ಘಟನೆಯಿಂದ ಉದ್ರಿಕ್ತಗೊಂಡ ಸಾರ್ವಜನಿಕರು ಶಾಲೆಗೆ ನುಗ್ಗಿ ಪೀಠೋಪಕರಣ ಧ್ವಂಸಗೊಳಿಸಿದ್ದಲ್ಲದೇ ರೈಲು ತಡೆ ನಡೆಸಿದ್ದಾರೆ. ಆರೋಪಿಯನ್ನು ಗಲ್ಲಿಗೇರಿಸುವಂತೆ ಪ್ರತಿಭಟನಾಕಾರರು ಆಗ್ರಹಿಸಿದ್ದಾರೆ. ಬದ್ಲಾಪುರ ಶಾಲೆ ಹಾಗೂ ರೈಲ್ವೆ ನಿಲ್ದಾಣದಲ್ಲಿ ಉದ್ವಿಘ್ನ ಸ್ಥಿತಿ ನಿರ್ಮಾಣಗೊಂಡಿದೆ.

ಘಟನೆ ಏನು?: ಮಹಾರಾಷ್ಟ್ರದ ಥಾಣೆ ಜಿಲ್ಲೆಯ ಬದ್ಲಾಪುರದ ಶಾಲೆಯಲ್ಲಿ ಮೂರು ಮತ್ತು ನಾಲ್ಕು ವರ್ಷದ ಇಬ್ಬರು ಅಂಗನವಾಡಿ ವಿದ್ಯಾರ್ಥಿನಿಯರ ಮೇಲೆ ಶಾಲೆಯ ಶೌಚಾಲಯದಲ್ಲಿ ಲೈಂಗಿಕ ಕಿರುಕುಳ ನಡೆದಿದೆ. ಈ ಬಗ್ಗೆ ಇಬ್ಬರು ವಿದ್ಯಾರ್ಥಿನಿಯರು ತಮ್ಮ ಪೋಷಕರ ಮುಂದೆ ಹೇಳಿಕೊಂಡಿದ್ದಾರೆ. ಶಾಲೆಯ ಶೌಚಾಲಯದಲ್ಲಿ ಸಹಾಯಕನೊಬ್ಬ ಖಾಸಗಿ ಅಂಗ ಮುಟ್ಟಿ ಕಿರುಕುಳ ನೀಡಿದ್ದಾಗಿ ಮಕ್ಕಳು ತಿಳಿಸಿದ್ದಾರೆ. ಜತೆಗೆ ಮಕ್ಕಳ ಮೈ ಮೇಲೆ ಗಾಯದ ಗುರುತುಗಳು ಕಂಡು ಬಂದಿವೆ ಎಂದು ಪೋಷಕರು ತಿಳಿಸಿದ್ದಾರೆ. ಪೋಷಕರು ಮಕ್ಕಳನ್ನು ಪರೀಕ್ಷೆಗೆ ಒಳಪಡಿಸಿದಾಗ ವೈದ್ಯರು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆ ಎಂಬುದನ್ನು ಖಚಿತಪಡಿಸಿದ್ದಾರೆ. ಸಂತ್ರಸ್ತ ಮಕ್ಕಳು ನೀಡಿದ ಮಾಹಿತಿ ಮೇರೆಗೆ ಪೋಷಕರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು ಬದ್ಲಾಪುರ ಪೊಲೀಸರು ಓರ್ವ ಸಹಾಯಕನನ್ನ ಬಂಧಿಸಿದ್ದಾರೆ. ಜತೆಗೆ ಸೋಮವಾರ ಸಂಜೆ ಶಾಲೆ ಆಡಳಿತ ಪ್ರಾಂಶುಪಾಲ, ಶಿಕ್ಷಕ ಹಾಗೂ ಮಹಿಳಾ ಸಹಾಯಕಿಯನ್ನ ಕೆಲಸದಿಂದ ವಜಾಗೊಳಿಸಿದೆ. ಆಡಳಿತ ಮಂಡಳಿ ಘಟನೆ ವಿಚಾರವಾಗಿ ಕ್ಷಮಾಪಣೆ ಪ್ರಕಟಿಸಿದ್ದು ಶಾಲೆಯ ಸ್ವಚ್ಛತಾ ಕೆಲಸಕ್ಕೆ ಟೆಂಡರ್ ನೀಡಲಾಗಿದ್ದ ಸಂಸ್ಥೆಯನ್ನು ಬ್ಲ್ಯಾಕ್ ಲಿಸ್ಟ್‌ಗೆ ಸೇರಿಸಲಾಗಿದೆ ಎಂದು ತಿಳಿಸಿದೆ.

ರೈಲು ತಡೆದು ಪ್ರತಿಭಟನೆ

ಮಂಗಳವಾರ ಬೆಳಿಗ್ಗೆ 8 ಗಂಟೆಗೆ ಶಾಲೆಯ ಪೋಷಕರು ಹಾಗೂ ಸಾರ್ವಜನಿಕರು ಬದ್ಲಾಪುರ ರೈಲ್ವೆ ನಿಲ್ದಾಣದ ಹಳಿ ಮೇಲೆ ನಿಂತು ಬೃಹತ್ ಪ್ರತಿಭಟನೆ ನಡೆಸಿದ್ದಾರೆ. ದೂರು ನೀಡಿದ 12 ಗಂಟೆಗಳ ಬಳಿಕ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ ಎಂದು ಪೊಲೀಸರ ಮೇಲೂ ಆಕ್ರೋಶ ವ್ಯಕ್ತವಾಗಿದೆ. ಮಕ್ಕಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಿಗಳ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿ ಫಲಕಗಳನ್ನು ಹಿಡಿದು ಪ್ರತಿಭಟನೆ ನಡೆಸಿದ್ದು ಬೆಳಿಗ್ಗೆ ಸಮಯದ ಹಲವು ರೈಲ್ವೆ ಸೇವೆಗಳಲ್ಲಿ ವ್ಯತ್ಯಯ ಉಂಟಾಗಿದೆ. ಕೆಲವು ಸಂಘಟನೆಗಳು ಬದ್ಲಾಪುರ ಬಂದ್‌ಗೂ ಕರೆ ನೀಡಿದ್ದಾರೆ. ರೈಲ್ವೆ ನಿಲ್ದಾಣದಲ್ಲಿ ಉದ್ರಿಕ್ತರು ಕಲ್ಲು ತೂರಾಟ ನಡೆಸಿದ್ದು ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ಹರಸಾಹಸಪಟ್ಟಿದ್ದಾರೆ. ಪೊಲೀಸ್ ಮತ್ತು ಪ್ರತಿಭಟನಾಕಾರರ ನಡುವೆ ಸಂಘರ್ಷ ನಡೆದಿದೆ.

ಎಸ್‌ಐಟಿ ರಚಿಸಿದ ಸರಕಾರ

ಪ್ರತಿಭಟನೆಗೆ ಮಣಿದ ಸರಕಾರ ಲೈಂಗಿಕ ಕಿರುಕುಳ ಪ್ರಕರಣದ ತನಿಖೆಗೆ ವಿಶೇಷ ತನಿಖಾ ತಂಡವನ್ನು ರಚಿಸಿದೆ. ಐಜಿಪಿ ರ್‍ಯಾಂಕ್ ಅಧಿಕಾರಿ ಆರತಿ ಸಿಂಗ್ ನೇತೃತ್ವದಲ್ಲಿ ಎಸ್‌ಐಟಿ ತಂಡ ರಚನೆಯಾಗಿದೆ. ಉಪ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ತನಿಖೆಯನ್ನು ತ್ವರಿತ ನ್ಯಾಯಾಲಯದಲ್ಲಿ ತನಿಖೆ ವಿಚಾರಣೆಗೆ ಪ್ರಸ್ತಾವನೆ ಸಲ್ಲಿಸುವಂತೆ ಪೊಲೀಸ್ ಕಮಿಷನರ್‌ಗೆ ಸೂಚನೆ ನೀಡಿದ್ದಾರೆ. 'ಈ ಪ್ರಕರಣವನ್ನು ತ್ವರಿತ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಲು ಎಲ್ಲಾ ಸಿದ್ಧತೆ ನಡೆಯುತ್ತಿದೆ. ಲೈಂಗಿಕ ದೌರ್ಜನ್ಯದಂತಹ ಕೃತ್ಯ ಎಸಗಿದ್ದವರನ್ನು ಶಿಕ್ಷಿಸದೇ ಬಿಡುವುದಿಲ್ಲ ಎಂದು ಸಿಎಂ ಏಕನಾಥ ಶಿಂದೆ ಭರವಸೆ ನೀಡಿದ್ದಾರೆ.

ಉ.ಪ್ರದೇಶ: ನರ್ಸ್ ಮೇಲೆ ವೈದ್ಯರಿಂದಲೇ ಅತ್ಯಾಚಾರ

ಮೊರಾದಾಬಾದ್: ಕೋಲ್ಕತ್ತಾದಲ್ಲಿ ಕಿರಿಯ ವೈದ್ಯೆ ಅತ್ಯಾಚಾರ ಮತ್ತು ಕೊಲೆ ಖಂಡಿಸಿ ದೇಶಾದ್ಯಂತ ವೈದ್ಯರು-ಶುಶ್ರೂಷಕರಿಂದ ವ್ಯಾಪಕ ಪ್ರತಿಭಟನೆ ನಡೆಯುತ್ತಿದ್ದರೆ, ಇತ್ತ ಉತ್ತರಪ್ರದೇಶದಲ್ಲಿ

ವೈದ್ಯನಿಂದಲೇ ನರ್ಸ್ ಮೇಲೆ ಅತ್ಯಾಚಾರವಾಗಿದೆ.

ಪ್ರಕರಣದಲ್ಲಿ ಭಾಗಿಯಾದ ವೈದ್ಯ, ಕೃತ್ಯಕ್ಕೆ ನೆರವಾದ ಶುಶ್ರೂಷಕಿ ಮತ್ತು ವಾರ್ಡ್‌ಬಾಯ್‌ನನ್ನು ಮೊರದಾಬಾದ್ ಪೊಲೀಸರು ಸೋಮವಾರ ಬಂಧಿಸಿದ್ದಾರೆ. ಕಳೆದ 7 ತಿಂಗಳ ಹಿಂದಷ್ಟೇ ಖಾಸಗಿ ಆಸ್ಪತ್ರೆಗೆ ನರ್ಸ್ ಆಗಿ ಸೇರಿ ಸೇವೆ ಸಲ್ಲಿಸುತ್ತಿದ್ದ 20 ವರ್ಷದ ಸಂತ್ರಸ್ತೆ ಮೇಲೆ ಅದೇ ಆಸ್ಪತ್ರೆಯ ವೈದ್ಯ ಶಹನ್‌ನವಾಜ್ ಅತ್ಯಾಚಾರ ನಡೆಸಿದ್ದಾನೆ. ಭಾನುವಾರ ಮಧ್ಯರಾತ್ರಿ ಆರೋಪಿ, ನರ್ಸ್ ಮೇಲೆ ಅತ್ಯಾಚಾರ ನಡೆಸಿದ್ದಷ್ಟೇ ಅಲ್ಲದೇ, ಈ ಬಗ್ಗೆ ದೂರು ನೀಡಿದರೆ ಕೊಲೆ ಮಾಡುವುದಾಗಿ ಬೆದರಿಕೆಯನ್ನೂ ಹಾಕಿ ದ್ದಾನೆ. ವೈದ್ಯನ ದುಷ್ಕೃತ್ಯಕ್ಕೆ ಆಸ್ಪತ್ರೆಯ ಹಿರಿಯ ನರ್ಸ್ ಮೆಹ ನಾಜ್ ಹಾಗೂ ವಾರ್ಡ್‌ಬಾಯ್ ಜುನ್ವೆದ್ ನೆರವಾಗಿದ್ದಾರೆ. ಸಂತ್ರಸ್ತೆಯನ್ನು ಬಲವಂತವಾಗಿ ಎಳೆದೊಯ್ದು ವೈದ್ಯನಿದ್ದ ಕೊಠಡಿಯಲ್ಲಿ ಕೂಡಿ ಹಾಕಿ ದುಷ್ಕೃತ್ಯಕ್ಕೆ ನೆರವಾಗಿದ್ದಾರೆ ಎಂದು ಸಂತ್ರಸ್ತೆಯ ತಂದೆ ದೂರಿನಲ್ಲಿ ವಿವರಿಸಿದ್ದಾರೆ. ಕೃತ್ಯ ನಡೆದ ಖಾಸಗಿ ಆಸ್ಪತ್ರೆಗೆ ಬೀಗ ಜಡಿಯಲಾಗಿದೆ. ಆರೋಪಿಗಳ ವಿಚಾ ರಣೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಯುಪಿಎಸ್‌ಸಿಗೆ ಕೇಂದ್ರ ಪತ್ರ | ಜಯ ನಮ್ಮದು: ಕಾಂಗ್ರೆಸ್

ಲ್ಯಾಟರಲ್ ಎಂಟ್ರಿ ಜಾಹೀರಾತು ರದ್ದು

ದೆಹಲಿ: ವಿವಾದಕ್ಕೆ ಕಾರಣವಾಗಿದ್ದ 'ಲ್ಯಾಟರಲ್ ಎಂಟ್ರಿ' ಮೂಲಕ ನೇಮಕಾತಿ ವಿಚಾರದಲ್ಲಿ ಕೇಂದ್ರ ಸರಕಾರಕ್ಕೆ ಭಾರಿ ಮುಖಭಂಗವಾಗಿದೆ. ಜಾಹೀರಾತು ರದ್ದು ಮಾಡುವಂತೆ

ಕೇಂದ್ರ ಲೋಕಸೇವಾ ಆಯೋಗಕ್ಕೆ (ಯುಪಿಎಸ್‌ಸಿ)ಗೆ ಕೇಂದ್ರ ಸರಕಾರ ಪತ್ರ ಬರೆದಿದೆ.

ಕೇಂದ್ರ ಸರಕಾರದ ಜಂಟಿ ಕಾರ್ಯದರ್ಶಿಗಳು, ನಿರ್ದೇ ಶಕರು, ಉಪನಿರ್ದೇಶಕರು ಸೇರಿ ಉನ್ನತ ಹುದ್ದೆಗಳಿಗೆ 45 ಪರಿಣಿತರನ್ನು 'ಲ್ಯಾಟರಲ್ ಎಂಟ್ರಿ' ಮೂಲಕ ನೇಮಕ ಮಾಡಿಕೊಳ್ಳಲಾಗುವುದು ಎಂದು ಯುಪಿಎಸ್‌ಸಿ ನೋಟಿಫಿಕೇಶನ್ ಹೊರಡಿಸಿತ್ತು. ಆದರೆ ಮೋದಿ ಸರಕಾರದ ಈ ನಡೆಗೆ ಮಿತ್ರ ಪಕ್ಷ ಹಾಗೂ ವಿರೋಧ ಪಕ್ಷಗಳಿಂದ ಭಾರಿ ವಿರೋಧ ವ್ಯಕ್ತವಾಗಿದ್ದು ಎಸ್‌ಸಿ, ಎಸ್‌ಟಿ, ಒಬಿಸಿ ಮತ್ತು ಹಿಂದುಳಿದ ವರ್ಗಗಳ ಪ್ರತಿಭಾನ್ವಿತರ ಮೀಸಲಾತಿ ಹಕ್ಕನ್ನು ಕಸಿದುಕೊಳ್ಳಲಾಗಿದೆ ಎಂದು ಆರೋಪಿಸಿದ್ದವು. ಈ ಹಿನ್ನೆಲೆ ಲ್ಯಾಟರಲ್ ಎಂಟ್ರಿ ಮೂಲಕ ನೇಮಕಾತಿ ಜಾಹಿರಾತು ವಾಪಸ್ ಪಡೆಯಲು ಸರಕಾರ ನಿರ್ಧರಿಸಿದೆ.

ಪತ್ರದಲ್ಲಿ ಏನಿದೆ?: ಕೇಂದ್ರ ಸಿಬ್ಬಂದಿ ಸಚಿವಾಲಯದ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಈ ಬಗ್ಗೆ ಯುಪಿಎಸ್‌ಸಿ ಅಧ್ಯಕ್ಷೆ ಪ್ರೀತಿ ಸೂದನ್ ಅವರಿಗೆ ಪತ್ರ ಬರೆದು ಕೂಡಲೇ ಜಾಹಿರಾತು ಹಿಂಪಡೆಯುವಂತೆ ಸೂಚಿಸಿದ್ದಾರೆ. ಪ್ರಧಾನ ಮಂತ್ರಿಯವರ ಸಾಮಾಜಿಕ ನ್ಯಾಯದ ವಿಚಾರದಂತೆ ಈ ನೇಮಕಾತಿ ಪ್ರಕ್ರಿಯೆಯನ್ನು ಪುನರ್ ಪರಿಶೀಲಿಸಬೇಕಿದೆ. ಜಾಹಿರಾತು ನೀಡಿದ ವಿಷಯದಲ್ಲಿ ಮೀಸಲಾತಿಗೆ ಯಾವುದೇ ಅವಕಾಶವಿಲ್ಲ ಈ ಅಂಶದಲ್ಲಿ ತಿದ್ದುಪಡಿ ಅಗತ್ಯವಿದೆ. ದಮನಿತ ಸಮುದಾಯದ ಪ್ರತಿಭಾವಂತರಿಗೂ ಅವಕಾಶ ಸಿಗುವಂತಾಗಬೇಕು ಎಂದು ಪತ್ರದಲ್ಲಿ ತಿಳಿಸಿಲಾಗಿದೆ. ಆಗಸ್ಟ್ 17ರಂದು ಬಿಡುಗಡೆ ಮಾಡಲಾದ ಜಾಹಿರಾತು ಹಿಂಪಡೆಯಲು ಸೂಚಿಸಲಾಗಿದೆ.

ಕಾಂಗ್ರೆಸ್ ಒತ್ತಡಕ್ಕೆ ಮಣಿದ ಸರಕಾರ

ಲ್ಯಾಟರಲ್ ಎಂಟ್ರಿ ಮೂಲಕ ನೇಮಕಾತಿ ಜಾಹಿರಾತು ವಾಪಸ್ ಪಡೆದ ಬಗ್ಗೆ ಪ್ರತಿಕ್ರಯಿಸಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಇದು ಕಾಂಗ್ರೆಸ್ ಹೋರಾಟದ ಫಲ ಎಂದು ಹೇಳಿದ್ದಾರೆ. ಸರ್ವಾಧಿಕಾರದ ಶಕ್ತಿಯನ್ನು ಸಂವಿಧಾನ ಮಾತ್ರ ಸೋಲಿಸಲು ಸಾಧ್ಯ. ದೇಶದ ಜನರ ಶಕ್ತಿ ಹಾಗೂ ವಿರೋಧ ಪಕ್ಷಗಳು ಮೋದಿ ಸರಕಾರದಿಂದ ದೇಶವನ್ನು ರಕ್ಷಿಸುತ್ತಿದೆ. ದಲಿತ, ಬುಡಕಟ್ಟು ಜನಾಂಗ ಹಾಗೂ ದಮನಿತರಿಗೆ ಸಾಮಾಜಿಕ ನ್ಯಾಯ ಒದಗಿಸುವೆಡೆಗಿನ ಕಾಂಗ್ರೆಸ್ ಹೋರಾಟ ಬಿಜೆಪಿಯ ಮೀಸಲಾತಿ ಕಿತ್ತುಕೊಳ್ಳುವ ಯೋಜನೆಯನ್ನು ವಿಫಲಗೊಳಿಸಿದೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

ಎಲಾನ್ ಮಸ್ಕ್‌ಗೆ ಟ್ರಂಪ್ ಕ್ಯಾಬಿನೆಟ್ ಹುದ್ದೆ ಆಫರ್

ವಾಷಿಂಗ್ಟನ್: ಡೊನಾಲ್ಡ್ ಟ್ರಂಪ್ ಸ್ಪರ್ಧೆಗೆ ಟೆಸ್ಲಾ ಸಿಇಒ ಎಲಾನ್ ಮಸ್ಕ್ ಭಾರಿ ಮೊತ್ತದ ದೇಣಿಗೆ ನೀಡಿದ್ದಾರೆ ಎಂಬ ಸುದ್ದಿ ಹರಡಿದ ಬೆನ್ನಲ್ಲೇ ಸಂದರ್ಶನವೊಂದರಲ್ಲಿ ಟ್ರಂಪ್ ದೊಡ್ಡ

ಮಟ್ಟದ ಘೋಷಣೆ ಮಾಡಿದ್ದಾರೆ. ಅಧಿಕಾರಕ್ಕೆ ಬಂದರೆ ಎಲಾನ್ ಮಸ್ಕ್‌ಗೆ ಕ್ಯಾಬಿನೆಟ್ ಹುದ್ದೆ ನೀಡುವುದಾಗಿ ತಿಳಿಸಿದ್ದಾರೆ.

ಮಾಧ್ಯಮಕ್ಕೆ ನೀಡಿದ ಸಂದರ್ಶನದಲ್ಲಿ ಎಲಾನ್ ಮಸ್ಕ್‌ಗೆ ಸರಕಾರದಲ್ಲಿ ಸ್ಥಾನ ನೀಡುತ್ತೀರಾ? ಎಂಬ ಪ್ರಶ್ನೆಗೆ ಪ್ರತಿಕ್ರಯಿ ಸಿದ ಟ್ರಂಪ್' ಎಲಾನ್ ಮಸ್ಕ್ ಬುದ್ಧಿವಂತ ವ್ಯಕ್ತಿ ಅವರಿಗೆ ಆಸಕ್ತಿ ಇದ್ದರೆ ಕ್ಯಾಬಿನೆಟ್ ಹುದ್ದೆ ಅಥವಾ ಸಲಹೆಗಾರನ ಹುದ್ದೆಯನ್ನು ನೀಡಲು ಸಿದ್ಧ. ತೆರಿಗೆ ಹಣವನ್ನು ಉತ್ತಮ ರೀತಿಯಲ್ಲಿ ಬಳಸುವ ಬಗ್ಗೆ ಸಮಿತಿ ರಚಿಸುವ ಮಸ್ಕ್ ಯೋಚನೆ ಉತ್ತಮವಾಗಿದೆ' ಎಂದು ಟ್ರಂಪ್ ಹೇಳಿದ್ದಾರೆ. ಕಳೆದ ವಾರ ಮಸ್ಕ್ ಡೋನಾಲ್ಡ್ ಟ್ರಂಪ್‌ಗೆ ಬಹಿರಂಗವಾಗಿ ಬೆಂಬಲ ಸೂಚಿಸಿದ್ದು ಎಕ್ಸ್ ಖಾತೆಯಲ್ಲಿ ಟ್ರಂಪ್ ಸಂದರ್ಶನವನ್ನು ಕೂಡ ನಡೆಸಿದ್ದರು.

ಟ್ರಂಪ್ ನೀಡಿದ ಆಫರ್ ಬಗ್ಗೆ ಪ್ರತಿಕ್ರಯಿಸಿದ ಮಸ್ಕ್, ಯುಎಸ್ ಆಡಳಿತ ಸಲಹೆಗಾರನಾಗುವ ಬಗ್ಗೆ ಯಾವುದೇ ಅಧಿಕೃತ ಚರ್ಚೆ ನಡೆದಿಲ್ಲ . ಆದರೆ ಅವಕಾಶ ಸಿಕ್ಕರೆ ಸೇವೆಗೆ ಸಿದ್ಧ ಎಂದು ಹೇಳಿದ್ದಾರೆ.

ಸಮಾಚಾರ ಸಣ್ಣದಲ್ಲ

ಭೂಕುಸಿತದಲ್ಲಿ 17 ಕುಟುಂಬ ಕಣ್ಮರೆ

ತಿರುವನಂತಪುರಂ: ಜುಲೈ 30 ರಂದು ಸಂಭವಿಸಿದ ಸರಣಿ ಭೂಕುಸಿತದಲ್ಲಿ ಇನ್ನೂ 119 ಮಂದಿ ಕಣ್ಮರೆಯಾಗಿದ್ದಾರೆ ಎಂದು ಸಿಎಂ ಪಿಣರಾಯಿ ವಿಜಯನ್ ಮಂಗಳವಾರ ಮಾಹಿತಿ ನೀಡಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು ದುರಂತದಲ್ಲಿ 17 ಕುಟುಂಬಗಳು ಸಂಪೂರ್ಣ ನಾಶವಾಗಿದೆ. 179 ಮೃತದೇಹಗಳ ಗುರುತು ಪತ್ತೆಯಾಗಿವೆ. ಮೃತಪಟ್ಟ 59 ಮಂದಿ ಅವಲಂಬಿತರಿಗೆ ಸರಕಾರದಿಂದ 6 ಲಕ್ಷ ಆರ್ಥಿಕ ನೆರವು ನೀಡಲಾಗಿದೆ. ನಾಪತ್ತೆಯಾದವರ 91 ಮಂದಿ ಸಂಬಂಧಿಕರ ಡಿಎಸ್‌ಎ ಮಾದರಿ ಸಂಗ್ರಹಿಸಿ ಪರಿಶೀಲಿಸುವ ಕಾರ್ಯ ನಡೆಯುತ್ತಿದೆ ಎಂದು ತಿಳಿಸಿದ್ದಾರೆ. ಸ್ಥಳೀಯ ಅಧಿಕಾರಿಗಳು ಹಾಗೂ ತಜ್ಞರ ಜತೆ ಸಭೆ ನಡೆಸಿ ಪುನರ್ವಸತಿ ಯೋಜನೆ ಅಂತಿಮಗೊಳಿಸಲಾಗುವುದು. ಆಶ್ರಯ ಕೇಂದ್ರಗಳಲ್ಲಿ ತಾತ್ಕಾಲಿಯ ನೆಲೆಗೆ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಸಿಎಂ ಪಿಣರಾಯಿ ವಿಜಯನ್ ತಿಳಿಸಿದ್ದಾರೆ.

ಬ್ಯಾಂಕ್ ಜತೆ ಕಂಪನಿ ವಿಲೀನ

ಬೆಂಗಳೂರು: ಭಾರತದ ಪ್ರಮುಖ ಗ್ರಾಹಕ ಪಾವತಿ ಮತ್ತು ಸಾಲ ಪೂರೈಕೆ ಕಂಪನಿಯಾಗಿರುವ ಸ್ಲೈಸ್, ನಾರ್ಥ್ ಈಸ್ಟ್ ಸ್ಮಾಲ್ ಫಿನಾನ್ಸ್ ಬ್ಯಾಂಕ್ ಜತೆ ವಿಲೀನಗೊಳ್ಳಲು ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯಿಂದ ಅನುಮೋದನೆ ಪಡೆದಿದೆ. ಈ ಅನುಮೋದನೆಯು ಅಧಿಕೃತ ವಿಲೀನಕ್ಕೆ ದಾರಿ ಮಾಡಿಕೊಟ್ಟಿದೆ. ಎನ್‌ಇಎಸ್‌ಎಫ್‌ಬಿಯ ತಳಮಟ್ಟದ ಬ್ಯಾಂಕಿಂಗ್ ಪರಿಣತಿಯೊಂದಿಗೆ ಸ್ಲೈಸ್‌ನ ಡಿಜಿಟಲ್ ಪರಾಕ್ರಮವನ್ನು ಜತೆಗೂಡಿಸಿ ಭಾರತೀಯ ಗ್ರಾಹಕರಿಗೆ ಉತ್ತಮ ಹಣಕಾಸು ಅನುಭವವನ್ನು ನೀಡಲು ಈ ಮೂಲಕ ಅನುವಾಗಲಿದೆ. ಭಾರತೀಯ ಸ್ಪರ್ಧಾ ಆಯೋಗ (ಸಿಸಿಐ), ಕಂಪನಿಗಳ ರಿಜಿಸ್ಟ್ರಾರ್ (ಆರ್‌ಒಸಿ) ಹಾಗೂ ಪ್ರಾದೇಶಿಕ ನಿರ್ದೇಶಕರಿಂದ (ಆರ್‌ಡಿ) ಅವರಿಂದ ಅನುಮೋದನೆ ಹಾಗೂ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ(ಆರ್‌ಬಿಐ) ಮತ್ತು ಆದಾಯ ತೆರಿಗೆ ಇಲಾಖೆಯಿಂದ ನಿರಾಕ್ಷೇಪಣಾ ಪ್ರಮಾಣಪತ್ರಗಳನ್ನು ಪಡೆಯುವ ನಿರ್ಣಾಯಕ ಪ್ರಕ್ರಿಯೆಗಳ ಬಳಿಕ ಇದು ನೆರವೇರಿದೆ. ಈ ವಿಲೀನವು ಎರಡೂ ಸಂಸ್ಥೆಗಳ ಸಂಯೋಜನೆಯಿಂದ ಸೃಷ್ಟಿಯಾಗುವ ವಿಸ್ತೃತ ಘಟಕಕ್ಕೆ ಸುಧಾರಿತ ತಂತ್ರಜ್ಞಾನ ಮತ್ತು ಆಳವಾದ ಸಮುದಾಯ ತಿಳುವಳಿಕೆಯನ್ನು ಬಳಸಿಕೊಳ್ಳಲು ಅನುವು ಮಾಡಿಕೊಡುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಹುಬ್ಬಳ್ಳಿ ಟೈಗರ್ಸ್‌ಗೆ ಹ್ಯಾಟ್ರಿಕ್ ಗೆಲುವು

ಬೆಂಗಳೂರು: ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಪಂದ್ಯಾವಳಿಯಲ್ಲಿ ಹುಬ್ಬಳ್ಳಿ ಟೈಗರ್ಸ್ ಗೆಲುವಿನ ಹ್ಯಾಟ್ರಿಕ್ ಸಾಧಿಸಿದೆ. ಸೋಮವಾರದ ಮೊದಲ ಮುಖಾಮುಖಿಯಲ್ಲಿ ಅದು ಬೆಂಗಳೂರು ಬ್ಲಾಸ್ಟರ್‌ಗೆ 5 ವಿಕೆಟ್‌ಗಳ ಸೋಲುಣಿಸಿತು. ಇದು ಬೆಂಗಳೂರು ತಂಡಕ್ಕೆ 4 ಪಂದ್ಯಗಳಲ್ಲಿ ಎದುರಾದ ಮೊದಲ ಆಘಾತ. ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಬೆಂಗಳೂರು ಬ್ಲಾಸ್ಟರ್ 19.5 ಓವರ್‌ಗಳಲ್ಲಿ 142 ರನ್ನಿಗೆ ಆಲೌಟ್ ಆಯಿತು. ಜವಾಬಿತ್ತ ಹುಬ್ಬಳ್ಳಿ ಟೈಗರ್ 18.5 ಓವರ್‌ಗಳಲ್ಲಿ 5 ವಿಕೆಟಿಗೆ 144 ರನ್ ಬಾರಿಸಿತು. ಇದರೊಂದಿಗೆ ಮೂರೂ ಪಂದ್ಯ ಗೆದ್ದ ಮನೀಷ್ ಪಾಂಡೆ ನೇತೃತ್ವದ ಹುಬ್ಬಳ್ಳಿ ಅಜೇಯ ಅಭಿಯಾನ ಮುಂದುವರಿಸಿತು. ಎರಡೂ ತಂಡಗಳು 6 ಅಂಕ ಹೊಂದಿವೆ. ಆದರೆ ರನ್‌ರೇಟ್‌ನಲ್ಲಿ ಮುಂದಿರುವ ಬೆಂಗಳೂರು ಅಗ್ರಸ್ಥಾನದಲ್ಲಿದೆ.

ಕರುಣ್ ನಾಯರ್ ಶತಕ: ಮಂಗಳೂರು ಡ್ರ್ಯಾಗನ್ಸ್ ಎದುರಿನ ಇನ್ನೊಂದು ಪಂದ್ಯದಲ್ಲಿ ಮೈಸೂರು ವಾರಿಯರ್ ನಾಯಕ ಕರುಣ್ ನಾಯರ್ ಸ್ಫೋಟಕ ಶತಕದ ಮೂಲಕ ಅಬ್ಬರಿಸಿದರು. ನಾಯರ್ ಕೇವಲ 48 ಎಸೆತಗಳಿಂದ 124 ರನ್ ಬಾರಿಸಿ ಅಜೇಯರಾಗಿ ಉಳಿದರು. ಸಿಡಿಸಿದ್ದು 13 ಬೌಂಡರಿ ಹಾಗೂ 9 ಸಿಕ್ಸರ್. ಮೈಸೂರು ವಾರಿಯರ್ 4ಕ್ಕೆ 226 ರನ್ ಬಾರಿಸಿ ಸವಾಲೊಡ್ಡಿದೆ.

ನಂಬಿಕೆ ಜಗದಂಬಿಕೆ
ಗುರು
ಪ್ರತಿ ಗುರುವಾರ

ಬ್ರಹ್ಮಶ್ರೀ ನಾರಾಯಣಗುರು ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ

ಮನುಷ್ಯತ್ವವಿರುವ ಸಮಾಜ ನಿರ್ಮಾಣ ನಮ್ಮ ಗುರಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬ್ರಹ್ಮಶ್ರೀ ನಾರಾಯಣ ಗುರು ಅವರು ಪ್ರತಿಪಾದಿಸಿದಂತೆ ಎಲ್ಲರೂ ಮನುಷ್ಯರಾಗಿ ಗೌರವದಿಂದ ಬದುಕುವಂತಹ ಸಮ ಸಮಾಜದ ನಿರ್ಮಾಣ ನಮ್ಮ ಗುರಿಯಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ರವೀಂದ್ರಕಲಾ ಕ್ಷೇತ್ರದಲ್ಲಿ ಆಯೋಜಿಸಲಾಗಿದ್ದ ಬ್ರಹ್ಮಶ್ರೀ ನಾರಾಯಣಗುರು ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಮಾಜದಲ್ಲಿರುವ ಅಸಮಾನತೆಯನ್ನು ನಿವಾರಿಸಿ, ಸಾಮಾಜಿಕ ನ್ಯಾಯದ ಪರವಾದ ಸಮಾಜ ನಿರ್ಮಾಣಕ್ಕೆ ನಾವು ಬದ್ಧರಾಗಿದ್ದೇವೆ. ಮನುಷ್ಯರಲ್ಲಿ ಒಂದೇ ಜಾತಿ, ಒಂದೇ ಮತ, ಒಂದೇ ದೇವರು ಎಂದು ನಾರಾಯಣ ಗುರುಗಳು ಹೇಳಿದರು. ಅದರಂತೆ ಪ್ರತಿಯೊಬ್ಬರೂ ಅನುಸರಿಸಿ ಬಾಳಲು ಪ್ರಯತ್ನಿಸಬೇಕು ಎಂದು ಹೇಳಿದರು.

ನಾರಾಯಣ ಗುರು ಅವರು ಈಡಿಗ ಜನಾಂಗದಲ್ಲಿ ಜನಿಸಿದ್ದರೂ, ಯಾವುದೇ ಧರ್ಮ, ಜಾತಿ, ಭಾಷೆಗೆ ಸೀಮಿತರಾಗಿದ್ದವರಲ್ಲ. ಅವರು ಬುದ್ಧ, ಬಸವ, ಕನಕದಾಸ ರೀತಿಯ ಸಂತರು. ಸಮಾಜದಲ್ಲಿ ಸುಧಾರಣೆ ಬಯಸಿ ಅದಕ್ಕಾಗಿ ಜೀವನವನ್ನು ಮುಡಿಪಾಗಿಟ್ಟವರು. ಈ ಹಿನ್ನೆಲೆಯಲ್ಲಿ ಸರಕಾರದ ವತಿಯಿಂದ ಎಲ್ಲಾ ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ ಆಚರಿಸಲಾಗುತ್ತಿದೆ ಎಂದರು.

ಪಟ್ಟಭದ್ರರಿಂದ ವರ್ಣ ವ್ಯವಸ್ಥೆ: ಸಮಾಜದಲ್ಲಿ ಕೆಲವು ಪಟ್ಟಭದ್ರರು ಹಿತಾಸಕ್ತಿಗಳು ಮೇಲ್ವರ್ಗ, ಕೆಳ ವರ್ಗ ಎಂದು ವರ್ಗೀಕರಣ ಮಾಡಿ ಬಹಳ ಹಿಂದೆಯೇ ವರ್ಣ ವ್ಯವಸ್ಥೆಯನ್ನು ಜಾರಿಗೆ ತಂದಿದ್ದಾರೆ. ಶೂದ್ರರಿಗೆ ಆಸ್ತಿ ಉತ್ಪಾದನೆ ಮಾಡುವುದು ಬಿಟ್ಟರೆ, ಆಸ್ತಿಯ ಮೇಲೆ ಯಾವುದೇ ಹಕ್ಕು ಇರಲಿಲ್ಲ.ಅವರನ್ನು ಅಕ್ಷರ ಸಂಸ್ಕೃತಿಯಿಂದ ವಂಚಿತರನ್ನಾಗಿ ಮಾಡಲಾಗಿತ್ತು. ಶೂದ್ರರು ಅಕ್ಷರ ಸಂಸ್ಕೃತಿಯಿಂದ ವಂಚಿತರಾದ ಹಿನ್ನಲೆಯಲ್ಲಿ ಅವಕಾಶಗಳಿಂದಲೂ ವಂಚಿತರಾದರು. ನಾರಾಯಣ ಗುರು ಅವರು ಶಿಕ್ಷಣದಿಂದ ಮಾತ್ರ ಈ ಸಂಕೋಲೆಗಳಿಂದ ಸ್ವತಂತ್ರರಾಗಲು ಸಾಧ್ಯ ಎಂದು ಬಲವಾಗಿ ನಂಬಿದ್ದರು.

ಸ್ವತಂತ್ರ ವಾದ ಆಲೋಚನೆ, ಚಿಂತನೆ ಬರಬೇಕಾದರೆ ವಿದ್ಯೆ ಕಲಿಯಲೇ ಬೇಕು. ವಿದ್ಯೆ ಇಲ್ಲದಿದ್ದರೆ ಸ್ವಾಭಿಮಾನ ಕೂಡಾ ಇರುವುದಿಲ್ಲ. ಗುಲಾಮಗಿರಿ ಮನೆ ಮಾಡಿ ಕೊಂಡಿರುತ್ತದೆ ಎಂದು ಅಭಿಪ್ರಾಯಪಟ್ಟರು.

ರವೀಂದ್ರಕಲಾ ಕ್ಷೇತ್ರದಲ್ಲಿ ಆಯೋಜಿಸಲಾಗಿದ್ದ ನಾರಾಯಣಗುರು ಜಯಂತಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಶಿವರಾಜ ತಂಗಡಗಿ ಮತ್ತಿತರು ಇದ್ದರು.

> ಅವಕಾಶ ಸಿಕ್ಕಿದರೆ ಪ್ರತಿಯೊಬ್ಬರೂ ವಿದ್ಯಾವಂತರಾಗುತ್ತಾರೆ. ವಿದ್ಯೆಗೆ ಯಾವುದೇ ಜಾತಿಯಿಲ್ಲ. ಅಂಬೇಡ್ಕರ್, ವಾಲ್ಮೀಕಿ, ವ್ಯಾಸ, ಕಾಳಿದಾಸ ಇದಕ್ಕೆ ಉದಾಹರಣೆ. ನಾರಾಯಣ ಗುರುಗಳು ತಮ್ಮ ನಡವಳಿಕೆಯಿಂದ, ಕಲಿತ ವಿದ್ಯೆಯಿಂದ ಸಂತರಾಗಿ ಬೆಳೆದರು. ಸ್ವಾತಂತ್ರ್ಯ ಬಂದು 77 ವರ್ಷವಾದರೂ, ಎಲ್ಲರೂ ವಿದ್ಯಾವಂತರಾಗಲು ಸಾಧ್ಯವಾಗಿಲ್ಲ.
>
> **- ಸಿದ್ದರಾಮಯ್ಯ, ಮುಖ್ಯಮಂತ್ರಿ**

ಪ್ರವೇಶ ನಿರಾಕರಿಸಿದ್ದಕ್ಕೆ 60 ದೇವಾಲಯಗಳ ನಿರ್ಮಾಣ

ಶೂದ್ರರಿಗೆ ದೇವಾಲಯ ಪ್ರವೇಶ ನಿರಾಕರಿಸಿದ ಸಂದರ್ಭದಲ್ಲಿ ಅದರ ವಿರುದ್ಧ ಸಂಘರ್ಷ ಕ್ಕಿಳಿಯದೇ, ನಾರಾಯಣ ಗುರು ಅವರು ಅವರದ್ದೇ ಆದ ದೇವಾಲಯ ನಿರ್ಮಿಸಲು ಹಾಗೂ ಅರ್ಚಕರನ್ನು ನೇಮಿಸಲು ಕರೆ ನೀಡಿದರು. ಈ ರೀತಿ ಕೇರಳದಲ್ಲಿ 60ಕ್ಕೂ ಅಧಿಕ ದೇವಾಲಯ ಕಟ್ಟಿದರು. ಕರಾವಳಿಯಲ್ಲೂ ದೇವಾಲಯಗಳನ್ನು ನಿರ್ಮಿಸಿದರು. ಪ್ರವೇಶ ನಿರಾಕರಿಸುವ ದೇವಾಲಯಗಳಿಗೆ ಹೋಗಲೇ ಬೇಡಿ ಎಂದು ಹೇಳಿ ಸರಳವಾಗಿ ಜನರಿಗೆ ಅರ್ಥವಾಗುವ ರೀತಿಯಲ್ಲಿ ಧರ್ಮವನ್ನು ಪ್ರತಿಪಾದಿಸಿದರು. ನಾರಾಯಣ ಗುರುಗಳು ಮೌಢ್ಯ, ಕಂದಾಚಾರಗಳ ವಿರುದ್ಧ ಬಸವಾದಿ ಶರಣರ ರೀತಿಯಲ್ಲಿ ಜಾಗೃತಿ ಮೂಡಿಸಿದರು. ಇಂದು ನಾವು ವಿದ್ಯಾವಂತರಾದರೂ ಮೌಢ್ಯಗಳನ್ನು ಬಿಟ್ಟಿಲ್ಲ. ವೈಜ್ಞಾನಿಕತೆ, ವೈಚಾರಿಕತೆ ಬೆಳೆಸಲು ಪ್ರಯತ್ನವೇ ಮಾಡಿಲ್ಲ. ಏನಾದರೂ ಕಷ್ಟ ಬಂದ ತಕ್ಷಣ ಮೌಢ್ಯಗಳಿಗೆ ಶರಣಾಗುತ್ತೇವೆ. ತಮ್ಮ ಸಂಕಷ್ಟಗಳಿಗೂ ಕರ್ಮ ಸಿದ್ಧಾಂತದ ಕಾರಣ ಹೇಳುತ್ತೇವೆ. ಸಂಕಷ್ಟ ಬಂದಾಗ ಹಣೆಯಲ್ಲಿ ಬರೆದದ್ದು, ಹಿಂದಿನ ಜನ್ಮದ ಕರ್ಮ ಎಂದು ಹೇಳುವುದು ಸರಿಯಲ್ಲ. ಅದೆಲ್ಲಾ ಸುಳ್ಳು. ಮೌಢ್ಯ, ಗೊಡ್ಡು ಸಂಪ್ರದಾಯ, ಕಂದಾಚಾರಗಳನ್ನು ನಂಬಬೇಡಿ. ನಾರಾಯಾಣ ಗುರು, ಬಸವಣ್ಣ ಹೇಳಿದ ರೀತಿ ನಡೆಯಿರಿ ಎಂದು ಸಲಹೆ ನೀಡಿದರು.

ಝಿಕಾ ಪತ್ತೆ; ಆನೇಕಲ್ ಸುತ್ತಮುತ್ತ ಹೈಅಲರ್ಟ್

ಆನೇಕಲ್: ಜಿಗಣಿ ಕೈಗಾರಿಕಾ ಪ್ರದೇಶದ ಜಿಗಣಿ, ಮಾದಾ ಪಟ್ಟಣ, ಹಾರಗದ್ದೆ ಹಾಗೂ ಸುತ್ತಮುತ್ತಲ ಹಳ್ಳಿಗಳಲ್ಲಿ ಝಿಕಾ ವೈರಸ್ ಪತ್ತೆಯಾದ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆ ಹೈ ಅಲರ್ಟ್ ಘೋಷಿಸಿದೆ.

ಆರೋಗ್ಯ ಇಲಾಖಾ ಸಿಬ್ಬಂದಿಗಳೊಂದಿಗೆ ಆಶಾ ಕಾರ್ಯಕರ್ತೆಯರನ್ನು ತೊಡಗಿಸಿಕೊಂಡು ಹಳ್ಳಿಹಳ್ಳಿಗಳ ಮನೆ ಮನೆ ಪರಿಶೀಲನೆ ಮಾಡಲಾಗುತ್ತಿದೆ.

ಜಿಗಣಿ ವ್ಯಾಪ್ತಿ ಯ ಮಾದಾಪಟ್ಟಣದಲ್ಲಿ ಕಂಟೋನ್‌ಮೆಂಟ್ ವಲಯ ಎಂದು ಘೋಷಿಸಿದ್ದು ವೈರಸ್ ಹರಡದಂತೆ ಅಧಿಕಾರಿಗಳ ತಂಡ ಮುಂಜಾಗ್ರತೆ ವಹಿಸಿದ್ದೇವೆ ಎಂದು ತಾಲೂಕು ವೈದ್ಯಾಧಿಕಾರಿ ಡಾ. ರವಿ ತಿಳಿಸಿದರು. ಸ್ಥಳದಲ್ಲಿ ಹಾಜರಿದ್ದ ಜಿಲ್ಲಾ ಮಲೇರಿಯಾ ನಿಯಂತ್ರಣ ಅಧಿಕಾರಿ ಡಾ. ಭುಜ ಬಲಿ ಮಾತನಾಡಿ, ಮಾದಾಪಟ್ಟಣದಲ್ಲಿ ಲಾರ್ವಾ ಸರ್ವೆ ಆರಂಭಿ ಸಿದ್ದು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮ ಚುರುಕುಗೊಂಡಿದೆ. ಮನೆಗಳ ಸುತ್ತಮು ತ್ತಲ ವ್ಯಾಪ್ತಿಯಲ್ಲಿ ಎಲ್ಲಿಯೂ ನೀರು ನಿಲ್ಲದಂತೆ ಎಚ್ಚರಿಕೆ ವಹಿಸಲು ಸಾರ್ವಜನಿಕರಿಗೆ ಮನವಿ ಮಾಡಲಾಗಿದೆ ಎಂದರು.

ಲಾರ್ವ ನಾಶಕ್ಕೆ ಕ್ರಮ : ಮಾದಾಪಟ್ಟಣದಲ್ಲಿ ಈಗಾಗಲೇ ಗರ್ಭಿಣಿಯರಲ್ಲಿ ವೈರಸ್ ಪತ್ತೆಯಾದ ಹಿನ್ನೆಲೆ ಹೆಚ್ಚಿನ ನಿಗಾ ವಹಿಸಲಾಗಿದೆ. ನೀರು ಶೇಖರಣ ವಸ್ತುಗಳಲ್ಲಿ ಟೆಮಿ ಪಾಸ್ ಎಂಬ ರಾಸಾಯನಿಕ ಸಿಂಪಡಿಸುವ ಮೂಲಕ ಕ್ರಮ ಕೈಗೊಳ್ಳಲಾಗಿದೆ. ಜಿಗಣಿ ಪುರಸಭಾ ವ್ಯಾಪ್ತಿಯಲ್ಲಿ ಅಂದಾಜು ಒಂದು ಲಕ್ಷ ಜನ ಸಂಖ್ಯೆಯಿದ್ದು ಕಂಟೋನ್‌ಮೆಂಟ್ ವ್ಯಾಪ್ತಿಯಲ್ಲಿ 25 ಸಾವಿರ ಮಂದಿ ವಾಸವಿದ್ದಾರೆ. ಇವರಲ್ಲಿ 227 ಮಂದಿ ಗರ್ಭಿಣಿಯರಿದ್ದು 200 ಜನರ ರಕ್ತದ ಮಾದರಿಯನ್ನು ಸಂಗ್ರಹಿಸಿ ಲ್ಯಾಬ್‌ಗೆ ಕಳುಹಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಹು ಅಂಗ ಕಸಿ, ಹೊಸ ಮಾನದಂಡ ಸೃಷ್ಟಿಸಿದ ಗ್ಲೆನಿಗಲ್ಸ್

ಬೆಂಗಳೂರು: ಗ್ಲಿನಿಗಲ್ಸ್ ಬೆಂಗಳೂರು ಆಸ್ಪತ್ರೆಯು ಬಹು ಅಂಗಾಂಗ ಕಸಿ ಚಿಕಿತ್ಸೆ ಹಾಗೂ ಆರೈಕೆಯಲ್ಲಿ ಹೊಸ ಮಾನದಂಡವನ್ನು ಹುಟ್ಟು ಹಾಕುವ ಮೂಲಕ ಹೊಸ ದಾಖಲೆಯನ್ನು ಸೃಷ್ಟಿಸಿದೆ.

ರಾಜ್ಯದಲ್ಲಿ 50 ಎಬಿಒ ಹೊಂದಾಣಿಕೆಯಾಗದ ಕಿಡ್ನಿ ಕಸಿ ಶಸ್ತ್ರ ಚಿಕಿತ್ಸೆಯನ್ನು ಮಾಡಿದ ಮೊದಲನೇ ಆಸ್ಪತ್ರೆ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿದೆ. ಭಾರತೀಯ ರೋಗಿಗಳಿಗೆ ಅತ್ಯಾಧುನಿಕ ತಂತ್ರಜ್ಞಾನ ಮತ್ತು ಸುಧಾರಿತ ವೈದ್ಯಕೀಯ ತಂತ್ರಗಳನ್ನು ಹೊಂದುವ ಮೂಲಕ ಗ್ಲೆನಿಗಲ್ಸ್ ಆಸ್ಪತ್ರೆಯು ತನ್ನ ಬದ್ಧತೆಯನ್ನು ಒತ್ತಿಹೇಳುವ ಮೂಲಕ ಹೆಗ್ಗುರುತು ಮೂಡಿಸಿದೆ.

ಗ್ಲೆನಿಗಲ್ಸ್ ಬೆಂಗಳೂರಿನ ಮುಖ್ಯ ಮೂತ್ರಪಿಂಡ ಶಾಸ್ತ್ರಜ್ಞ ಮತ್ತು ಕಸಿ ವೈದ್ಯ ಡಾ.ಅನಿಲ್ ಮಾತನಾಡಿ, 50 ಎಬಿಒ ಹೊಂದಾಣಿಕೆಯಾಗದ ಕಸಿ ಶಸ್ತ್ರಚಿಕಿತ್ಸೆಗಳ ಮೈಲಿಗಲ್ಲನ್ನು ತಲುಪಲು ನಮ್ಮ ತಂಡದ ಪ್ರಥಮಾನ್ವೇಷಕ ಮನೋಭಾವ ಮತ್ತು ಪಟ್ಟುಬಿಡದ ಸಮರ್ಪಣೆ ಕಾರಣವಾಗಿದೆ. ಈ ಸಂಕೀರ್ಣ ಕಾರ್ಯವಿಧಾನವು ಹೆಚ್ಚು ಸವಾಲಾಗಿತ್ತು. ನಮ್ಮ ಕಿಡ್ನಿ ಕಸಿ ಶಸ್ತ್ರ ಚಿಕಿತ್ಸೆಗೆ ಇತ್ತೀಚಿನ ತಂತ್ರಜ್ಞಾನ ಹಾಗೂ ಆಧುನಿಕ ತಂತ್ರಗಳನ್ನು ಬಳಸಿಕೊಳ್ಳುವ ಮೂಲಕ ರೋಗಿಗಳಿಗೆ ಉತ್ತಮ ಫಲಿತಾಂಶವನ್ನು ನೀಡಲು ಸಾಧ್ಯವಾಗಿದೆ.

ಈ ಮೈಲಿಗಲ್ಲು ಉತ್ಕೃಷ್ಟತೆಗೆ ನಮ್ಮ ಅಚಲ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ ಎಂದರು.

ಗ್ಲೆನಿಗಲ್ಸ್ ಬೆಂಗಳೂರಿನ ಮುಖ್ಯ ಮೂತ್ರಶಾಸ್ತ್ರಜ್ಞ ಮತ್ತು ಕಸಿ ಶಸ್ತ್ರಚಿಕಿತ್ಸಕ ಡಾ ನರೇಂದ್ರ ಮಾತನಾಡಿ, ಈ ಶಸ್ತ್ರ ಚಿಕಿತ್ಸೆಯಿಂದ ಬೆಂಗಳೂರು ಕರ್ನಾಟಕ ಮಾತ್ರವಲ್ಲದೇ ದೇಶಾದ್ಯಂತ ಬಹು ಅಂಗಾಗ ಕಸಿ ಶಸ್ತ್ರ ಚಿಕಿತ್ಸೆಯಲ್ಲಿ ಉನ್ನತ ಸ್ಥಾನಕ್ಕೇರಿದ್ದು, ಎಬಿಒ ಹೊಂದಿಕೆಯಾಗದ ಕಸಿ ಶಸ್ತ್ರ ಚಿಕಿತ್ಸೆಗಳು ವೈದ್ಯಕೀಯ ಹಾಗೂ ಶಸ್ತ್ರಚಿಕಿತ್ಸಾ ಕ್ಷೇತ್ರದಲ್ಲಿ ನಮ್ಮ ಆಸ್ಪತ್ರೆಯ ನಾಯಕತ್ವತೆಯನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಜೀವನದಲ್ಲಿ ಅತ್ಯಾಧುನಿಕ ಪರಿಹಾರಗಳನ್ನು ನೀಡಲು ನಮ್ಮ ಸಮರ್ಥತೆಯನ್ನು ಈ ಶಸ್ತ್ರ ಚಿಕಿತ್ಸೆಯು ಎತ್ತಿ ಹಿಡಿದಿದೆ. ನಮ್ಮ ನಿಖರವಾದ ಕಸಿ ಅರಿವಳಿಕೆ ತಜ್ಞರು ಮತ್ತು ಮೀಸಲಾದ ರಕ್ತನಿಧಿ ತಂಡವು, ರಕ್ತಸ್ರಾವದ ತೊಡಕುಗಳನ್ನು ನಿರ್ವಹಿಸುವಲ್ಲಿ ಮತ್ತು ರಕ್ತದ ಫೆರೆಸಿಸ್‌ನ್ನು ನಿರ್ವಹಿಸುವಲ್ಲಿನ ಪರಿಣತಿಯೊಂದಿಗೆ ಈ ನಿರ್ಣಾಯಕ ಹಂತಗಳಲ್ಲಿ ಅನಿವಾರ್ಯವಾದ ಪಾತ್ರವನ್ನು ವಹಿಸಿದೆ ಎಂದರು.

> ರಾಜ್ಯದ ನಂಬರ್ ಒನ್ ಬಹು ಅಂಗಾಂಗ ಕಸಿ ಶಸ್ತ್ರಚಿಕಿತ್ಸೆ ಗಂಭೀರವಾದ ಜವಾಬ್ದಾರಿಯಾಗಿದ್ದು, ಈ ಶಸ್ತ್ರಚಿಕಿತ್ಸೆಯನ್ನು ಈ ಕ್ಷೇತ್ರದಲ್ಲಿ ಒಂದು ಉದಾಹರಣೆಯಾಗಿ ಮುನ್ನಡೆಸುವುದೇ ನಮ್ಮ ಧ್ಯೇಯವಾಗಿದೆ. ಭಾರತೀಯ ರೋಗಿಗಳಿಗೆ ಕಸಿ ಶಸ್ತ್ರಚಿಕಿತ್ಸೆಯಲ್ಲಿನ ಅತ್ಯಾಧುನಿಕ ಪ್ರಗತಿಯನ್ನು, ಆರೈಕೆಯಲ್ಲಿ ಹೊಸ ಮಾನದಂಡವನ್ನು ನೀಡುವುದು ನಮ್ಮ ಉದ್ದೇಶವಾಗಿದೆ.
>
> **-ಬಿಜು ನಾಯರ್, ಕ್ಲಸ್ಟರ್ ಸಿಇಒ ಗ್ಲೆನಿಗಲ್ಸ್ ಬೆಂಗಳೂರು**

ಕಾಗಿನೆಲೆ ಮಹಾಸಂಸ್ಥಾನ ಕನಕ ಗುರು ಪೀಠದ ಜಗದ್ಗುರು ಶ್ರೀ ನಿರಂಜನಾ ನಂದಪುರಿ ಶ್ರೀಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕಾವೇರಿ ನಿವಾಸದಲ್ಲಿ ಭೇಟಿಯಾಗಿ ಚರ್ಚಿಸಿ ಆಶೀರ್ವದಿಸಿದರು.

Public Notice
ABB India Limited,
Registered and Corporate Office: Disha - 3rd Floor, Plot No. 5 & 6, 2nd Stage Peenya Industrial Area IV Peenya, Bengaluru – 560 058 Karnataka, India.

NOTICE is hereby given that the Certificate for the undermentioned securities of the company has been lost/misplaced and the holders of the said securities have applied to the company to issue duplicate certificate. Any person who has a claim in respect of the said securities should lodge such claim with the Company at its Registered Office within 21 days from this date, else the Company will proceed to issue duplicate Certificate without further intimation.

Name of Holders	Folio No.	Kind of Securities and face value	Certificate Number	No. of Shares	Distinctive Numbers
1. Shridhar P Iyer 2. Lakshminarayanapuram Ramanathan Krishnan	S0011297	equity shares of Face Value of Rs.10/- each.	160077	50	30353310 to 30353359

Place: Bengaluru
Date: 21/08/2024

Shridhar P Iyer
Lakshminarayanapuram Ramanathan Krishnan
Name of Shareholders

ತೀರ್ಪು ಕೊಡುವ ಮಾರ್ಗಸೂಚಿ ಪಾಲಿಸಲು ಸೂಚನೆ

2 ನಿಮಿಷದ ಸುಖಕ್ಕೆ ಸೋಲಬೇಡಿ ಕೊಲ್ಕತ್ತ ಹೈಕೋರ್ಟ್ ಆದೇಶ ರದ್ದು

ದೆಹಲಿ: ಅತ್ಯಾಚಾರ ಆರೋಪ ಪ್ರಕರಣವೊಂದರಲ್ಲಿ ಕೊಲ್ಕತ್ತ ಹೈ ಕೋರ್ಟ್ ನೀಡಿದ ಆದೇಶವನ್ನು ಮಂಗಳವಾರ ಸುಪ್ರೀಂ ಕೋರ್ಟ್ ರದ್ದುಗೊಳಿಸಿದೆ. 'ಹೆಣ್ಣುಮಕ್ಕಳು ಲೈಂಗಿಕ ವಾಂಛೆಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬೇಕು, 2 ನಿಮಿಷದ ಸುಖಕ್ಕಾಗಿ ಸೋಲಬೇಡಿ' ಎಂದು ಹೈ ಕೋರ್ಟ್ ನೀಡಿದ ಹೇಳಿಕೆಗೆ ಸುಪ್ರೀಂ ಅಸಮ್ಮತಿ ಸೂಚಿಸಿದೆ.

ಪ್ರೇಮ ಸಂಬಂಧ ಹೊಂದಿದ್ದ ಬಾಲಕಿಯ ಮೇ ಲೆ ಅತ್ಯಾಚಾರವೆಸಗಿದ ಆರೋಪಿಯನ್ನು ಪೋಕ್ಸೊ ಕಾಯಿದೆ ಅಡಿ ಬಂಧಿಸಲಾಗಿತ್ತು. ಆದರೆ ಕೊಲ್ಕತ್ತ ಹೈ ಕೋರ್ಟ್ ಆರೋಪಿಯನ್ನು ಖುಲಾಸೆಗೊಳಿಸಿ ಆದೇಶಿಸಿತ್ತು. ಈ ಬಗ್ಗೆ ಸ್ವಯಂ ಪ್ರೇರಿತ ವಿಚಾರಣೆ ಕೈಗೆತ್ತಿಕೊಂಡ ಸುಪ್ರೀಂ ನ್ಯಾಯಾಧೀಶ ಅಭಯ್ ಎಸ್ ಒಕಾ ಮತ್ತು ನ್ಯಾ. ಉಜ್ಜಲ್ ಭುಯನ್ ಅವರ ಪೀಠ ಈ ಆದೇಶವನ್ನು ರದ್ದುಗೊಳಿಸಿ ಆರೋಪಿ ಶಿಕ್ಷೆಯನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ. ಪೋಕ್ಸೊ ಕಾಯಿದೆಯನ್ನು ಯಾವ ರೀತಿ ಅನ್ವಯಿಸಬೇಕು ಹಾಗು ನ್ಯಾಯಾಧೀಶರು ಈ ಕಾಯಿದೆ ಅಡಿ ಯಾವ ರೀತಿ ತೀರ್ಪು ರಚಿಸಬೇಕು ಎಂಬ ಬಗ್ಗೆ ಸಮಗ್ರ ಮಾರ್ಗಸೂಚಿ ನೀಡಿದೆ. ಕಾನೂನು ಮತ್ತು ಮತ್ತು ಸಾಕ್ಷ್ಯದ ಆಧಾರದ ಮೇಲೆ ಪ್ರಕರಣವನ್ನು ನಿರ್ಧರಿಸಬೇಕು. ವೈಯಕ್ತಿಕ ಅಭಿಪ್ರಾಯ ಅನಗತ್ಯ. ನ್ಯಾಯಾಗ ತನಿಖೆಯ ಪ್ರಕ್ರಿಯೆಯನ್ನು ನ್ಯಾಯಾಧೀಶರು ಉಲ್ಲಂಘಿಸುವಂತಿಲ್ಲ ಎಂದು ಸುಪ್ರೀಂ ಆದೇಶದಲ್ಲಿ ತಿಳಿಸಿದೆ.

ಪ್ರಕರಣದ ಹಿನ್ನೆಲೆ: ಕಳೆದ ಅಕ್ಟೋಬರ್‌ನಲ್ಲಿ ಪ್ರೇಮ ಸಂಬಂಧ ಹೊಂದಿದ್ದ ಬಾಲಕಿಯ ಮೇಲೆ 25 ವರ್ಷದ ಆಕೆಯ ಪ್ರಿಯಕರ ಅತ್ಯಾಚಾರ ಎಸಗಿದ್ದಾನೆ ಎಂಬ ಆರೋಪ ಕೇಳಿ ಬಂದಿತ್ತು. ವಿಚಾರಣೆ ನಡೆಸಿದ ನ್ಯಾ, ಚಿತ್ತ ರಂಜನ್ ದಾಸ್ ಮತ್ತು ನ್ಯಾ. ಪಾರ್ಥ ಸಾರಥಿ ಸೆನ್ ಅವರ ಪೀಠ ಶಿಕ್ಷೆಗೆ ಗುರಿಯಾಗಿದ್ದ ಯುವಕನನ್ನ ಖುಲಾಸೆಗೊಳಿಸಿತ್ತು. ಕೊಲ್ಕತ್ತ ಹೈ ಕೋರ್ಟ್ ಬಾಲಕಿ ಮತ್ತು ಯುವಕ ಒಪ್ಪಿತ ಸಂಬಂಧದಲ್ಲಿದ್ದರು ಎಂದು ಹೇಳಿತ್ತು. ಹೆಣ್ಣು ಮಕ್ಕಳು ಲೈಂಗಿಕ ವಾಂಛೆಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬೇಕು 2 ನಿಮಿಷದ ಸುಖಕ್ಕೆ ಸೋಲಬಾರದು. ಲೈಂಗಿಕತೆ ಯುವಕ ಯುವತಿ ಇಬ್ಬರಲ್ಲೂ ಹರೆಯದಲ್ಲಿ ಸಾಮಾನ್ಯ ಎಂದಿತ್ತು.

ಸಾಹಿತ್ಯ ಸಮ್ಮೇಳನಕ್ಕೆ ಸಂಪೂರ್ಣ ಬೆಂಬಲ; ಶಾಲಿನಿ ರಜನೀಶ್

ಬೆಂಗಳೂರು: ಮಂಡ್ಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಾಡೋಜ ಡಾ.ಮಹೇಶ ಜೋಶಿಯವರು ಆಯೋಜಿಸಿದ 87ನೆ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಕರ್ನಾಟಕ ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್‌ರನ್ನು ಭೇಟಿಯಾದರು. ಬೇರೆ ರಾಜ್ಯದಿಂದ ಬಂದಿದ್ದರೂ ಸ್ಪಷ್ಟವಾದ ಕನ್ನಡವನ್ನು ಕಲಿತು ಕನ್ನಡದ ದಿನಪತ್ರಿಕೆಗಳಲ್ಲಿ ಲೇಖನ ಬರೆಯುವ ಮಟ್ಟಿಗೆ ಪರಿಣಿತಿಯನ್ನು ಪಡೆದಿರುವ ಮುಖ್ಯ ಕಾರ್ಯದರ್ಶಿಗಳ ಸಾಧನೆಯನ್ನು ಹಾಗೂ ಆಡಳಿತದಲ್ಲಿ ಕನ್ನಡ ವನ್ನು ಜಾರಿಗೆ ತರುವ ನಿಟ್ಟಿನಲ್ಲಿ ಅವರು ಮಾಡಿದ ಪ್ರಯತ್ನಗಳನ್ನೂ ಶ್ಲಾಘಿಸಿದರು. ಕಸಾಪ ಅಧ್ಯಕ್ಷರ ಶ್ಲಾಘನೆಗೆ ಸ್ಪಂದಿಸಿದ ಮುಖ್ಯ ಕಾರ್ಯದರ್ಶಿಗಳು, ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಚಟುವಟಿಕೆಗಳಿಗೂ ಸರಕಾರ ಸಂಪೂರ್ಣ ಬೆಂಬಲ ನೀಡುವುದು. ಮಂಡ್ಯದಲ್ಲಿ ಆಯೋಜಿತವಾಗಿರುವ 87ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಎಲ್ಲ ರೀತಿಯಿಂದಲೂ ಆಡಳಿತಾತ್ಮಕ ಬೆಂಬಲವನ್ನು ನೀಡಲಾಗುವುದು ಎಂದು ಭರವಸೆ ನೀಡಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕೋಶಾಧ್ಯಕ್ಷರಾದ ಬಿ.ಎಂ.ಪಟೇಲ್ ಪಾಂಡು, ಪ್ರಕಟಣೆ ವಿಭಾಗದ ಸಂಚಾಲಕ ಎನ್.ಎಸ್ ಶ್ರೀಧರ ಮೂರ್ತಿ ಇದ್ದರು.

happiest minds
The Mindful IT Company
Born Digital . Born Agile

ಹ್ಯಾಪಿಯೆಸ್ಟ್ ಮೈಂಡ್ಸ್ ಟೆಕ್ನಾಲಜಿಸ್ ಲಿಮಿಟೆಡ್
ನೋಂದಾಯಿತ ಕಛೇರಿ: 53/1–4, ಹೊಸೂರು ಮುಖ್ಯ ರಸ್ತೆ, ಮಡಿವಾಳ, ಬೆಂಗಳೂರು – 560 068, ಕರ್ನಾಟಕ, ಭಾರತ
ಕಂಪನಿಯ **CIN: L72900KA2011PLC057931**
ದೂರವಾಣಿ:+91 80 6196 0300, ಫ್ಯಾಕ್ಸ್: +91 80 6196 0700
ಇಮೇಲ್: investors@happiestminds.com; ವೆಬ್‌ಸೈಟ್: www.happiestminds.com

ಅಂಚೆ ಮತದಾನ ಮತ್ತು ರಿಮೋಟ್ ಇ-ವೋಟಿಂಗ್‌ನ ನೋಟೀಸು

1. ಕಾಲಕಾಲಕ್ಕೆ ತಿದ್ದುಪಡಿ ಆಗಿರಬಹುದಾದಂತೆ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 20 ಮತ್ತು 22ರೊಂದಿಗೆ ಓದಿದಂತೆ, ಕಂಪನಿಗಳ ಕಾಯಿದೆ, 2013ರ (ಇನ್ನು ಮುಂದೆ 'ಕಾಯಿದೆ' ಎಂದು ಉಲ್ಲೇಖಿಸಿದೆ) ಸೆಕ್ಷನ್ 108 ಮತ್ತು 110ಕ್ಕೆ ಅನುಸಾರವಾಗಿ; ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾದ 44ನೇ (ಲಿಸ್ಟಿಂಗ್ ಕಟ್ಟುಪಾಡುಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015, ("ಸೆಬಿ ಲಿಸ್ಟಿಂಗ್ ನಿಯಮಗಳು"); ಇನ್ಸ್‌ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ ಹೊರಡಿಸಿದ ಸಾಮಾನ್ಯ ಸಭೆಗಳ ಮೇಲಿನ ಕಾರ್ಯದರ್ಶಿ ಮಾನದಂಡಗಳು ('SS-2'); ಮತ್ತು 'ಕಾಯಿದೆ'ಯ ಇತರ ಅನ್ವಯವಾಗುವ ನಿಬಂಧನೆಗಳು, ನಿಯಮಗಳು, ಸುತ್ತೋಲೆಗಳು ಮತ್ತು ಅದರ ಅಡಿಯಲ್ಲಿ ಹೊರಡಿಸಲಾದ ಅಧಿಸೂಚನೆಗಳು (ಯಾವುದೇ ಶಾಸನಬದ್ಧ ಮಾರ್ಪಾಡು(ಗಳು) ಅಥವಾ ಅದರ ಮರು-ಅನುಷ್ಠಾನ(ಗಳು) ಪ್ರಸ್ತುತ ಜಾರಿಯಲ್ಲಿರುವಂತೆ ಮತ್ತು ಕಾಲಕಾಲಕ್ಕೆ ತಿದ್ದುಪಡಿ ಮಾಡಿದಂತೆ); ಇವುಗಳ ಅನುಸಾರ, 2024ರ ಆಗಸ್ಟ್ 20ರ ಮಂಗಳವಾರದ ಅಂಚೆ ಮತಪತ್ರ ನೋಟೀಸಿನಲ್ಲಿ ಅದರ ವಿವರಣಾತ್ಮಕ ಹೇಳಿಕೆಯೊಂದಿಗೆ ನಿಗದಿಪಡಿಸಿದಂತೆ, ಸದರಿ ವ್ಯವಹಾರಗಳಿಗೆ ಅಂಚೆ ಮತಪತ್ರದ ಮೂಲಕ ಎಂದರೆ ಎಲೆಕ್ಟ್ರಾನಿಕ್ ವಿಧಾನಗಳ ("ಇ-ವೋಟಿಂಗ್") ಮೂಲಕ ಕಂಪನಿಯು ತನ್ನ ಸದಸ್ಯರ ಅನುಮೋದನೆಯನ್ನು ಕೋರುತ್ತಿದೆ ಎಂದು ಈ ಮೂಲಕ ನೋಟೀಸು ನೀಡಲಾಗುತ್ತಿದೆ.
2. ಸದರಿ ನಿಬಂಧನೆಗಳು ಮತ್ತು ಎಂಸಿಎ ಸುತ್ತೋಲೆಗಳ ಅನುಸಾರ, ಕಂಪನಿಯು ಮಂಗಳವಾರ, 20ನೇ ಆಗಸ್ಟ್, 2024ರಂದು ಕೇವಲ ಈಮೇಲ್ ಮೂಲಕ ಅಂಚೆ ಮತದಾನದ ನೋಟೀಸನ್ನು, ಕಟಾಫ್ ದಿನಾಂಕವಾದ ಶುಕ್ರವಾರ, ಆಗಸ್ಟ್ 16, 2024ರಂದು ಯಾವ ಸದಸ್ಯರ ಈಮೇಲ್ ವಿಳಾಸಗಳು ಕಂಪನಿಯ ಆರ್‌ಟಿಎ ಆದ ಕೇಫಿನ್ ಟೆಕ್ನಾಲಜೀಸ್ ಲಿಮಿಟೆಡ್‌ನೊಂದಿಗೆ, ಅಥವಾ ಡಿಪಾಸಿಟರಿಯೊಂದಿಗೆ/ಗಳೊಂದಿಗೆ / ಡಿಪಾಸಿಟರಿ ಪಾರ್ಟಿಸಿಪೆಂಟರೊಂದಿಗೆ ನೋಂದಾವಣೆಗೊಂಡಿದ್ದವೋ, ಮತ್ತು ಯಾರ ಹೆಸರುಗಳು ಕಂಪನಿಯ ಸದಸ್ಯರ ರಿಜಿಸ್ಟರಿನಲ್ಲಿ/ ಪ್ರಯೋಜಿತ ಮಾಲಿಕರ ಪಟ್ಟಿಯಲ್ಲಿ ಕಂಡುಬಂದಿದ್ದವೋ ಅವರಿಗೆ ಕಳಿಸಿಕೊಟ್ಟಿದೆ. ಈ ನೋಟೀಸಿನ ಮುದ್ರಿತ ಪ್ರತಿಯನ್ನು ಕಂಪನಿಯು ಕಳಿಸಿಕೊಡುವುದಿಲ್ಲ, ಮತ್ತು ಸದಸ್ಯರ ಒಪ್ಪಿಗೆ ಅಥವಾ ನಿರಾಕರಣೆಯ ಸಂವಹನವು ರಿಮೋಟ್ ಈ-ವೋಟಿಂಗ್ ವ್ಯವಸ್ಥೆಯ ಮೂಲಕ ಮಾತ್ರವೇ ನಡೆಯಲಿದೆ.
3. ಕಂಪನಿಯ ವೆಬ್‌ಸೈಟಾದ www.happiestminds.com ನಲ್ಲಿ ಅಂಚೆ ಮತದಾನದ ನೋಟೀಸನ್ನು ಅಪ್‌ಲೋಡ್ ಮಾಡಲಾಗಿದೆ. ಶೇರು ವಿನಿಮಯ ಕೇಂದ್ರಗಳ, ಎಂದರೆ ಕ್ರಮವಾಗಿ ಬಾಂಬೆ ಸ್ಟಾಕ್ ಎಕ್ಸ್‌ಚೇಂಜ್ ಲಿಮಿಟೆಡ್ ಮತ್ತು ನ್ಯಾಶನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ https://www.bseindia.com/ ಮತ್ತು https://www.nseindia.com/ ವೆಬ್‌ಸೈಟ್‌ಗಳ ಮೂಲಕ ಕೂಡ ಈ ನೋಟೀಸನ್ನು ವೀಕ್ಷಿಸಬಹುದು. ಮತ್ತು ಆರ್‌ಟಿಎ ಯ ವೆಬ್‌ಸೈಟಾದ https://evoting.kfintech.com/ದಲ್ಲಿ ಕೂಡ ಇದು ಲಭ್ಯವಿದೆ.
4. ಇ-ಮತದಾನ ಸೌಲಭ್ಯವು ಬುಧವಾದ ಆಗಸ್ಟ್ 21, 2024ರಂದು ಬೆಳಿಗ್ಗೆ 9.00 ಭಾ.ಕಾ.ದಿಂದ ಶುಕ್ರವಾರ ಸೆಪ್ಟೆಂಬರ್ 20, 2024 ಸಂಜೆ 5.00 ಭಾ.ಕಾ.ವರೆಗೆ ಲಭ್ಯವಿರುತ್ತದೆ. ತದನಂತರ ಇ-ಮತದಾನ ಸೌಲಭ್ಯವನ್ನು ನಿಷ್ಕ್ರಿಯಗೊಳಿಸಲಾಗುತ್ತದೆ.
5. ಅಂಚೆ ಮತಪತ್ರ ಮತ್ತು ಇ-ಮತದಾನ ಪ್ರಕ್ರಿಯೆಯನ್ನು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸುವ ಸಲುವಾಗಿ ಕಂಪನಿಯು ವೃತ್ತಿಪರ ಕಂಪನಿ ಕಾರ್ಯದರ್ಶಿಗಳಾಗೂ, ವಿ. ಶ್ರೀಧರನ್ ಮತ್ತು ಅಸೋಸಿಯೇಟ್ಸ್, ಕಂಪನಿ ಕಾರ್ಯದರ್ಶಿಗಳು, ಬೆಂಗಳೂರು, ಇದರ ಪಾಲುದಾರರೂ ಆದ ಶ್ರೀ ವಿ. ಶ್ರೀಧರನ್, (FCS 2347; CP 833) ಮತ್ತು ಅವರ ಅನುಪಸ್ಥಿತಿಯಲ್ಲಿ ಶ್ರೀ ಪ್ರದೀಪ್ ಬಿ ಕುಲಕರ್ಣಿ, (FCS 7260; CP 7835), ಇವರನ್ನು ಸೂಕ್ಷ್ಮಪರಿಶೀಲಕರನ್ನಾಗಿ ನೇಮಿಸಿದೆ.
6. ರಿಮೋಟ್ ಇ-ಮತದಾನದ ಅಂತ್ಯದಿಂದ 2 (ಎರಡು) ಕೆಲಸದ ದಿನಗಳ ಒಳಗಾಗಿ ಅಂಚೆ ಮತದಾನದ ಫಲಿತಾಂಶಗಳನ್ನು ಘೋಷಿಸಲಾಗುವುದು. ಸದರಿ ಫಲಿತಾಂಶವನ್ನು ಸೂಕ್ಷ್ಮಪರಿಶೀಲಕರ ವರದಿಯ ಜೊತೆಯಲ್ಲಿ ಕಂಪನಿಯ ವೆಬ್‌ಸೈಟಾದ www.happiestminds.com ಹಾಗೂ https://evoting.kfintech.com/ ನ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಲಾಗುವುದು. ಮತ್ತು ಸೆಬಿ ಲಿಸ್ಟಿಂಗ್ ನಿಬಂಧನೆಗಳ ಅನುಸಾರ, ಕಂಪನಿಯ ಶೇರುಗಳು ಲಿಸ್ಟ್ ಆಗಿರುವ ಶೇರು ವಿನಿಮಯ ಕೇಂದ್ರಗಳಿಗೆ ಎಂದರೆ ಬಿಎಸ್‌ಇ ಲಿಮಿಟೆಡ್ (https://www.bseindia.co) ಹಾಗೂ ನ್ಯಾಶನಲ್ ಸ್ಟಾಕ್ ಎಕ್ಸ್‌ಚೇಂಜ್ ಲಿಮಿಟೆಡ್ (https://www.nseindia.com) ತಿಳಿಸಲಾಗುವುದು.
7. ನಿರ್ಣಯವು, ಅಗತ್ಯವಿರುವ ಬಹುಮತದೊಂದಿಗೆ ಅಂಗೀಕೃತವಾದಲ್ಲಿ, ಮತದಾನದ ಕೊನೆಯ ದಿನದಂದು ಎಂದರೆ ಸೆಪ್ಟೆಂಬರ್ 20, 2024ರಂದು ಪಾಸ್ ಆಗಿದೆ ಎಂದು ಪರಿಗಣಿಸಲಾಗುವುದು. ಅಂಚೆ ಮತದಾದನ ಮೂಲಕ ಸದಸ್ಯರಿಂದ ಒಪ್ಪಿಗೆ ಪಡೆದ ನಿರ್ಣಯವನ್ನು ಸರ್ವಸದಸ್ಯರ ಸಭೆಯಲ್ಲಿ ಒಪ್ಪಿಗೆ ಪಡೆದಂತೆಯೇ ಎಂದು ಪರಿಗಣಿಸಲಾಗುವುದು.
8. ಹೆಚ್ಚಿನ ವಿವರಗಳಿಗೆ, ದಯವಿಟ್ಟು ಅಂಚೆ ಮತದಾನದ ನೋಟೀಸಿನಲ್ಲಿರುವ ಟಿಪ್ಪಣಿಗಳನ್ನು ನೋಡಿ. ಅಂಚೆ ಮತದಾನದ ಸೌಲಭ್ಯದ ಕುರಿತಂತೆ ಸದಸ್ಯರಿಗೆ ಏನಾದರೂ ದೂರುಗಳಿದ್ದಲ್ಲಿ, ಅವರು ಶ್ರೀ ಉಮೇಶ್ ಪಾಂಡೆ, ಮ್ಯಾನೇಜರ್, ಕೇಫಿನ್ ಟೆಕ್ನಾಲಜೀಸ್ ಲಿಮಿಟೆಡ್, ಸೆಲೆನಿಯಮ್ ಟವರ್ ಬಿ, ಪ್ಲಾಟ್ 31 & 32, ಫೈನಾನ್ಷಿಯಲ್ ಡಿಸ್ಟ್ರಿಕ್ಟ್, ನಾನಾಕ್ರಮಗುಡ, ಸೆರಿಲಿಂಗಮ್‌ಪಲ್ಲಿ ಮಂಡಲ್, ಹೈದರಾಬಾದ್ 500032, ಈಮೇಲ್ einward.ris@kfintech.com, ನಿಃಶುಲ್ಕ ಸಂಖ್ಯೆ 1– 800–309–4001 ಇವರನ್ನು ಸಂಪರ್ಕಿಸಬಹುದು.

ಹ್ಯಾಪಿಯೆಸ್ಟ್ ಮೈಂಡ್ಸ್ ಟೆಕ್ನಾಲಜೀಸ್ ಲಿಮಿಟೆಡ್ ಪರವಾಗಿ
(ಸಹಿ/–)
ಸ್ಥಳ: ಬೆಂಗಳೂರು **ಪ್ರವೀಣ್ ಕುಮಾರ್ ದರ್ಶನಕರ್**
ದಿನಾಂಕ: ಆಗಸ್ಟ್ 20, 2024 ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಯನ್ಸ್ ಆಫೀಸರ್

11 ವರ್ಷದ ಹಿಂದೆ ನಡೆದ ಪ್ರಕರಣ ಸಂಬಂಧ ಹಸೀನಾ ವಿರುದ್ಧ ದೂರು

ಮತ್ತಷ್ಟು ಶೇಕ್ ಮಾಡುತ್ತಿರುವ ಪ್ರಕರಣಗಳು

ಢಾಕಾ: 2013ರ ಮೇ ತಿಂಗಳಲ್ಲಿ ಮುಸ್ಲಿಂ ಗುಂಪುಗಳು ನಡೆಸಿದ ರ‍್ಯಾಲಿಯನ್ನು ಹತ್ತಿಕ್ಕಿ ನರಮೇಧ ನಡೆಸಿದ ಆರೋಪದ ಮೇಲೆ ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಕ್ ಹಸೀನಾ ಹಾಗೂ 23 ಮಂದಿಯ ವಿರುದ್ಧ ಮಂಗಳವಾರ ಬಾಂಗ್ಲಾದೇಶ ಅಂತಾರಾಷ್ಟ್ರೀಯ ಅಪರಾಧಗಳ ನ್ಯಾಯಮಂಡಳಿಯಲ್ಲಿ ಮತ್ತೊಂದು ದೂರು ದಾಖಲಾಗಿದೆ.

ಹೆಫಾಜತ್-ಎ-ಇಸ್ಲಾಂ (ಶಿಕ್ಷಣ- ಕಾನೂನು) ವಿಭಾಗದ ಜಂಟಿ ಕಾರ್ಯದರ್ಶಿ ಮುಫ್ತಿ ಹರೂನ್ ಇಜಾಹರ್ ಪರವಾಗಿ ಸುಪ್ರೀಂ ಕೋರ್ಟ್ ವಕೀಲ ಘಾಜಿ ಎಂಎಚ್ ತಮೀಮ್ ಅವರು ದೂರು ದಾಖಲಿಸಿದ್ದಾರೆ ಎಂದು ದಿ ಡೈಲಿ ಸ್ಟಾರ್ ಪತ್ರಿಕೆ ವರದಿ ಮಾಡಿದೆ.

ನಾವು ದೂರು ಸ್ವೀಕರಿಸಿದ್ದು, ಮಂಗಳವಾರ ದಿಂದಲೇ ತನಿಖೆ ಆರಂಭಗೊಂಡಿದೆ ಎಂದು ತನಿಖಾ ತಂಡ (ಆಡಳಿತ) ವಿಭಾಗದ ಉಪ ನಿರ್ದೇಶಕ ಅತೌರ್ ರಹಮಾನ್ ತಿಳಿಸಿದ್ದಾರೆ ಎಂದು ಪತ್ರಿಕೆಯು ಉಲ್ಲೇಖಿಸಿದೆ. ಪ್ರಾಥಮಿಕ ಹಂತದ ತನಿಖೆ ಮುಕ್ತಾಯಗೊಂಡ ಬಳಿಕ, ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಲಾಗುವುದು. ನ್ಯಾಯಮಂಡಳಿಯನ್ನು ಪುನರ್ರಚಿಸಿ, ಆರೋಪಿಗಳ ವಿರುದ್ಧ ಆರೆಸ್ಟ್ ವಾರಂಟ್ ಹೊರಡಿಸಲಾಗುವುದು ಎಂದು ಅವರು ತಿಳಿಸಿದರು.

2013ರ ಮೇ 5ರಂದು ಮೊತಿಜಹೀಲ್ ಶಾಪ್ಲಾ ಛತ್ತರ್‌ನಲ್ಲಿ ನಡೆದ ಹೆಫಾಜತ್ -ಎ-ಇಸ್ಲಾಂ ರ‍್ಯಾಲಿಯನ್ನು ಹತ್ತಿಕ್ಕಿ ಸಾಮೂಹಿಕ ನರಮೇಧ ನಡೆಸಿದ ಆರೋಪವನ್ನು ಹಸೀನಾ ಹಾಗೂ 23 ಮಂದಿ ವಿರುದ್ಧ ಹೊರಿಸಲಾಗಿದೆ.

17 ವರ್ಷದ ಬಳಿಕ ಖಲೀದಾ ಜಿಯಾ ಬ್ಯಾಂಕ್ ಖಾತೆ ಸಕ್ರಿಯ: ಬಾಂಗ್ಲಾದೇಶದ ಮಾಜಿ ಪ್ರಧಾನಿ ಖಲೀದಾ ಜಿಯಾ ಅವರ ಬ್ಯಾಂಕ್ ಖಾತೆಗಳನ್ನು ತೆರಿಗೆ ಇಲಾಖೆ ಅಧಿಕಾರಿಗಳು 17 ವರ್ಷಗಳ ಬಳಿಕ ಸಕ್ರಿಯಗೊಳಿಸಿದ್ದಾರೆ. ರಾಷ್ಟ್ರೀಯ ಆದಾಯ ಮಂಡಳಿಯು (ಎನ್‌ಬಿಆರ್) ಈ ಬಗ್ಗೆ ಬ್ಯಾಂಕ್‌ನ ಅಧಿಕಾರಿಗಳಿಗೆ ಸೂಚನೆಯನ್ನು ನೀಡಿದೆ ಎಂದು ಡೈಲಿ ಸ್ಟಾರ್ ದೈನಿಕವು ವರದಿ ಮಾಡಿದೆ.

ಮಾಜಿ ಪ್ರಧಾನಿಯೂ ಆದ ಖಲೀದಾ ಜಿಯಾ ಅವರ ಬ್ಯಾಂಕ್ ಖಾತೆ ಸ್ಥಗಿತಗೊಳಿಸಲು ಎನ್‌ಬಿಆರ್‌ನ ಕೇಂದ್ರ ಕಣ್ಗಾವಲು ಘಟಕ 2007ರ ಆಗಸ್ಟ್‌ನಲ್ಲಿ ಬ್ಯಾಂಕ್‌ಗಳಿಗೆ ಸೂಚಿಸಿತ್ತು.

ಮೃತರ ಕುಟುಂಬಗಳ ನೆರವಿಗೆ ಪ್ರತಿಷ್ಠಾನ

ಢಾಕಾ: ವಿದ್ಯಾರ್ಥಿ ಸಂಘಟನೆಗಳು ಪ್ರತಿಭಟನೆ ನಡೆಸಿದ ಸಂದರ್ಭ ಉಂಟಾದ ಹಿಂಸಾಚಾರದಲ್ಲಿ ಮೃತಪಟ್ಟವರ ಕುಟುಂಬದ ಸದಸ್ಯರ ಯೋಗಕ್ಷೇಮ ನೋಡಿಕೊಳ್ಳಲು ಪ್ರತಿಷ್ಠಾನವೊಂದನ್ನು ಸ್ಥಾಪಿಸಲು ಬಾಂಗ್ಲಾದೇಶದ ಸರಕಾರ ತೀರ್ಮಾನಿಸಿದೆ. ಮುಖ್ಯ ಸಲಹೆಗಾರ ಪ್ರೊಫೆಸರ್ ಮೊಹಮ್ಮದ್ ಯೂನಸ್ ಅವರು ಪ್ರತಿಷ್ಠಾನದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುವರು. ಮಧ್ಯಂತರ ಸರಕಾರದ ಸಲಹೆಗಾರರು ವಿದ್ಯಾರ್ಥಿ ಸಂಘಟನೆಗಳ ಪ್ರತಿನಿಧಿಗಳು ದುರ್ಘಟನೆಯಲ್ಲಿ ಮೃತಪಟ್ಟ ಕುಟುಂಬಗಳ ಸದಸ್ಯರು ಈ ಪ್ರತಿಷ್ಠಾನದಲ್ಲಿ ಇರುತ್ತಾರೆ ಎಂದು ಯೂನಸ್ ಅವರ ಕಚೇರಿಯ ಪ್ರಕಟಣೆ ಮಂಗಳವಾರ ತಿಳಿಸಿದೆ.

ಶೇಕ್ ಗಡೀಪಾರಿಗೆ ಆಗ್ರಹ

ಢಾಕಾ: ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರನ್ನು ಗಡೀಪಾರು ಮಾಡುವಂತೆ ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಮಿರ್ಜಾ ಫಖ್ರುಲ್ ಇಸ್ಲಾಂ ಅಲಾಂಗಿರ್ ಅವರು ಭಾರತಕ್ಕೆ ಮನವಿ ಮಾಡಿದ್ದಾರೆ. ದೇಶದ ಕ್ರಾಂತಿಯನ್ನು ನಿಷ್ಫಲಗೊಳಿಸಲು ಶೇಖ್ ಹಸೀನಾ ಅವರು ಸಂಚು ಮಾಡುತ್ತಿದ್ದಾರೆ ಎಂದು ಅವರು ಆರೋಪಿಸಿದ್ದಾರೆ. ಕಾನೂನಾತ್ಮಕ ಮಾರ್ಗದ ಮೂಲಕ ಹಸೀನಾ ಅವರನ್ನು ಬಾಂಗ್ಲಾ ಸರಕಾರಕ್ಕೆ ಹಸ್ತಾಂತರಿಸಿ. ಅವರು ವಿಚಾರಣೆ ಎದುರಿಸಲಿ ಎಂದು ಫಖ್ರುಲ್ ಹೇಳಿರುವುದಾಗಿ ಸುದ್ದಿಸಂಸ್ಥೆಯೊಂದು ವರದಿ ಮಾಡಿದೆ.

ಬೆಂಗಳೂರು ಸಗಟು ದಿನಸಿ ಧಾರಣೆಗಳು

ದಿನಾಂಕ:20.08.2024

ಸಕ್ಕರೆ(50 ಕೆಜಿ)	
ಉತ್ತಮ	2010–2015
ಮಧ್ಯಮ	2000–2005
ಬೆಲ್ಲ(ಕ್ವಿಂ)	
ಅಚ್ಚು (ದಪ್ಪ)	4800–5100
ಅಚ್ಚು(ಸಣ್ಣ)	5000–5100
ಉಂಡೆ ಬೆಲ್ಲ (ಸಣ್ಣ)	4800–4900
ತೊಗರಿಬೇಳೆ (50 ಕೆಜಿ)	
ದೇಶಿ ಶಿವಲಿಂಗ್	8450–8500
ವಿದೇಶಿ	7900–8100
ಪಟ್ಕ ಸಾರ್ಟೆಕ್ಸ್	8000–8100
ರೆಗ್ಯುಲರ್	7700–7800
ಕಡ್ಲೆಬೇಳೆ(50 ಕೆಜಿ)	
ಲಕನ್	5300–5350
ತ್ರಿಶೂಲ್	5200–5250
ಮಹಾರಾಜ	4950–5000
ಅಕೋಲ	4850–4900
ಉದ್ದಿನ ಬೇಳೆ (50 ಕೆಜಿ)	
ಡಬಲ್ ಹಾರ್ಸಿ	7750–7800
ಹನುಮಾನ್	6350–6400
ತೆನಾಲಿ ಮಹಾರಾಜ	6200–6250
ಸೂರ್ಯಕಾಂತಿ ಎಣ್ಣೆ	
ಜೆಮಿನಿ 15ಕೆಜಿ	1740
ಜೆಮಿನಿ 10 ಪ್ಯಾಕ್	1110
ಸನ್‌ಪ್ಯೂರ್ 10 ಪ್ಯಾಕ್	1100
ಸನ್‌ಪ್ಯೂರ್ 15ಕೆಜಿ	1690
ಗೋಲ್ಡ್‌ವಿನ್ನರ್ 10 ಪ್ಯಾಕ್	1110
ಗೋಲ್ಡ್‌ವಿನ್ನರ್ 15 ಕೆಜಿ	1680
ಅಕ್ಕಿ	
ಸೋನಾ ಮಸೂರಿ ಹಳೇದು	6200–6500
ಸೋನಾ ಮಸೂರಿ ಹೊಸದು	5500–5700
ಸೋನಾ ಮಸೂರಿ ಸ್ಟೀಮ್ ಉತ್ತಮ	5300–5500
ಇಡ್ಲಿಕಾರ್	4000–4300
ಗೋಧಿ	
ಉತ್ತಮ	2200–2300
ಮಧ್ಯಮ	2000–2100
ಜೋಳ	
ಉತ್ತಮ	2500–2300
ಮಧ್ಯಮ	2000–2100
ಹುಣಸೆ ಹುಳಿ	
ಕರ್ಪುಳಿ	16000–23000
ಫ್ಲವರ್	8000–12000
ರೌಂಡ್	7000–15000
ಆಲೂಗಡ್ಡೆ 50 ಕೆಜಿ	
ಚಿಪ್ಸ್	1400–1800
ಮಧ್ಯಮ	1000–1300
ಈರುಳ್ಳಿ 50 ಕೆಜಿ	
ಹೊಸದು ದಪ್ಪ	1750–1900
ಮಧ್ಯಮ	1600–1700
ಗೊಲ್ಟಾ ಗೊಲ್ಟಿ	**1500–1400**
ಮೊಟ್ಟೆ	
100ಕ್ಕೆ	495

ವಿಶ್ವವಾಣಿ
ಆರಾಮ
@vishwavaninews
ಬೆಂಗಳೂರು
ಬುಧವಾರ
21 | 08 | 2024
ಅನುದಿನವೂ ವಿರಾಮಕ್ಕೆ ಒಂದು ನೆಪ

ವಾಹನ ಚಲಾಯಿಸುವಾಗ, ದೇಹ ದಣಿದರೆ ನಿದ್ರೆಯ ಸೆಳೆತ ಆರಂಭವಾಗುವುದು. ತೂಕಡಿಮೆ ಬಂದಾಗಿ ಡ್ರೈವ್ ಮಾಡುವುದು ಅತಿ ಅಪಾಯಕಾರಿ. ಇದನ್ನು ತಡೆಯಲು ಸೂಕ್ತ ಎಚ್ಚರಿಕೆ ವಹಿಸಬೇಕು.

ಎಚ್ಚರ! ಡ್ರೌಸಿ ಡ್ರೈವಿಂಗ್ ಮಾಡಬೇಡಿ!

• ಶ್ರೀಲಕ್ಷ್ಮಿ ಬೆಂಗಳೂರು

ಪ್ರಕೃತಿದತ್ತ ವರದಂತೆ, ನಮ್ಮ ದೇಹವು ಒಳ್ಳೆಯ ನಿದ್ರೆಯ ಮೂಲಕ ಆಯಾಸವನ್ನು ಪರಿಹರಿಸಿಕೊಂಡು ಪುನಶ್ಚೇತನಗೊಳ್ಳುವುದು. ದಿನನಿತ್ಯದ ಎಲ್ಲ ಕೆಲಸವೂ ನಿರಾಯಾಸವಾಗಿ ಆಗಬೇಕಾದರೆ ದಿನಾಂತ್ಯದಲ್ಲಿ ಒಳ್ಳೆಯ ನಿದ್ರೆ ಅತ್ಯವಶ್ಯಕ. ಮನುಷ್ಯನು ದೈಹಿಕವಾಗಿ ಹಾಗು ಮಾನಸಿಕವಾಗಿ ಅರೋಗ್ಯವಾಗಿರಲು ಉತ್ತಮ ಆಹಾರ ಹಾಗು ಗುಣಮಟ್ಟದ ನಿದ್ದೆ ಪ್ರಮುಖ.

ನಿದ್ರಾಹೀನತೆಯಿಂದ ನಮ್ಮ ದೇಹಕ್ಕಾಗುವ ದುಷ್ಪರಿಣಾಮಗಳು ಬಹಳಷ್ಟಿವೆ. ಆದರಿಲ್ಲಿ ನಾನು ಹೇಳ ಹೊರಟಿರುವುದು 'ಸ್ಲೀಪಿಂಗ್ ವೈಲ್ ಡ್ರೈವಿಂಗ್' ವಿಷಯದ ಬಗ್ಗೆ. ಒಂದು ಸಮೀಕ್ಷೆಯ ಪ್ರಕಾರ ಜಗತ್ತಿನಾದ್ಯಂತ ತೂಕಡಿಕೆಯ ಡ್ರೈವಿಂಗ್‌ನಿಂದಾಗಿ, ವಾರ್ಷಿಕವಾಗಿ ಸರಿ ಸುಮಾರು ಒಂದು ಲಕ್ಷ ರಸ್ತೆ ಅಪಘಾತಗಳು ಸಂಭವಿಸುತ್ತಿದೆ. ಡ್ರೌಸಿ ಡ್ರೈವಿಂಗ್ ಸಹ ಡ್ರಿಂಕ್ ಎಂಡ್ ಡ್ರೈವಿಂಗ್ ಅಷ್ಟೆ ಅಪಾಯಕವೆಂದು ಹೇಳಬಹುದು.

ಮನುಷ್ಯನು ತನ್ನ ಜೀವನದ ಮೂರನೇ ಒಂದು ಭಾಗವನ್ನು ನಿದ್ರೆಯಲ್ಲಿಯೇ ಕಳಿಯುತ್ತಾನೆ. ಪ್ರತಿ ನಿತ್ಯ ಏಳರಿಂದ ಎಂಟು ಗಂಟೆಗಳ ನಿದ್ದೆ ಅತ್ಯವಶ್ಯಕ. ದೇಹಕ್ಕೆ ನಿದ್ದೆ ಬೇಕಿದೆ ಎಂಬುದರ ಮೊದಲ ಸಿಗ್ನಲ್ ಆಕಳಿಕೆ ಹಾಗು ತೂಕಡಿಕೆ. ಮಿದುಳು ಸಕ್ರಿಯವಾಗಿ ಕೆಲಸ ಮಾಡುವುದು ನಾವು ಎಚ್ಚರದಿಂದಿರುವಾಗ ಮಾತ್ರ. ತೂಕಡಿಕೆಯ ಸಮಯದಲ್ಲಿ ಏಕಾಗ್ರತೆಯಿಂದ ಮಾಡುವ ಕೆಲಸಗಳನ್ನು ಮಾಡಲು ಮುಂದಾಗಬಾರದು. ಕಣ್ಣು, ಕಿವಿ, ಕೈ ಕಾಲುಗಳು ಎಲ್ಲವು ಸರಿಯಾಗಿ ಸಹಕರಿಸಿದಾಗಲಷ್ಟೇ ವಾಹನ ಚಲಾವಣೆ ಸಾಧ್ಯ. ಈ ಎಲ್ಲ ಅಂಗಾಂಗಗಳನ್ನು ನಿಯಂತ್ರಿಸುವ ಮಿದುಳು ನಿದ್ರಾ ಸ್ಥಿತಿಗೆ ಜಾರುವ ಸಮಯದಲ್ಲಿ ವಾಹನ ಚಲಾಯಿಸಲು ಮುಂದಾದರೆ ನಾವು ತಲುಪಬೇಕಾದ ಜಾಗ ಬೇರೆಯೇ ಆಗುವುದು.

'ಚಾಲಕನ ನಿಯಂತ್ರಣ ತಪ್ಪಿ ಅಪಘಾತ ಸಂಭವಿಸಿತು!' ಎಂಬ ಸುದ್ದಿಯನ್ನು ಆಗಾಗ ಕೇಳುತ್ತಲೇ ಇರುತ್ತೇವೆ. ಇಲ್ಲಿ ಚಾಲಕನ ನಿಯಂತ್ರಣ ಹೇಗೆ ತಪ್ಪಿತ್ತು? ಎಂಬುದರ ಬಗ್ಗೆ ವಿಚಾರಣೆ ಆದಾಗಲೂ ಸಹ ವಾಹನ ಪರಿಶೀಲನೆಗೊಳ್ಳುತ್ತದೆ, ಚಾಲಕ ಮಧ್ಯಪಾನ ಸೇವಿಸಿ ವಾಹನ ಚಲಾಯಿಸುತ್ತಿದ್ದನೆ? ಸಂಚಾರಿ ನಿಯಮಗಳನ್ನು ಪಾಲಿಸಿದ್ದಾನೆಯೇ? ಮಂಜು ಮುಸುಕಿದ ವಾತಾವರಣವಿತ್ತೆ? ಎಂಬುದರ ಬಗ್ಗೆ ತನಿಖೆ ನಡೆಯುವುದು ಹೊರತು ಚಾಲಕನ ತೂಕಡಿಕೆಯಿಂದ ಅಪಘಾತ ಸಂಭವಿಸಿರಬಹುದೇ? ಎಂದು ವಿಚಾರಣೆಗಳಲ್ಲಿ ಕೇಳಿ ಬರುವುದು ಕಡಿಮೆ. ಕುಡಿತದ ಮಂಪರಿನಿಂದ ಅಪಘಾತವಾದದ್ದು ಸಾಬೀತಾಗುವುದೇ ಹೊರತು ತೂಕಡಿಕೆಯ ಮಂಪರಿನಿಂದ ಅಪಘಾತವಾದದ್ದು ಸಾಬೀತಾಗುವುದು ವಿರಳ.

ರೈಲು ಚಾಲಕರು ನಿದ್ರೆ ಮಾಡುತ್ತಿದ್ದರೆ ಅಥವ ತೂಕಡಿಸುತ್ತಿದ್ದರೆ, ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಸಿಕೊಂಡು ಅವರನ್ನು ಎಚ್ಚರಿಸುವ ಸಾಧನವೊಂದನ್ನು ಇತ್ತೀಚೆಗಷ್ಟೆ ರೈಲ್ವೆ ಇಲಾಖೆ ಅಭಿವೃದ್ಧಿಪಡಿಸಿದೆ. ರೈಲಿನ ಲೋಕೋಪೈಲಟ್ ಕಣ್ಣು ರೆಪ್ಪೆ ಆಡಿಸುವುದನ್ನೇ ಈ ಸಾಧನ ಗಮನಿಸುತ್ತಿದ್ದು, ಒಂದು ವೇಳೆ ಕಣ್ಣು ಮುಚ್ಚಿದರೆ ಅಲಾರ್ಮ್ ಶಬ್ದ ಬಾರಿಸಲು ಶುರುಮಾಡುವುದು. ಇಂತಹ ತಂತ್ರಜ್ಞಾನ ಎಲ್ಲಾ ರಸ್ತೆ ವಾಹನಗಳಲ್ಲಿಯೂ ಬರುವುದು ಸೂಕ್ತ. ಅಮೆರಿಕ ಮೊದಲಾದ ಮುಂದುವರಿದ ದೇಶಗಳಲ್ಲಿ, ಹೊಸ ತಂತ್ರಜ್ಞಾನದ ಸ್ವಯಂ ಚಾಲಿತ ವಾಹನಗಳು ರಸ್ತೆಯಲ್ಲಿ ಓಡಾಡಲು ಆರಂಭಿಸಿವೆ; ನಮ್ಮ ದೇಶದಲ್ಲಿ ಅದಿನ್ನೂ ದೂರವಿದೆ. ವಿಮಾನದಲ್ಲಿ ಪೈಲಟ್ ಜೂತೆ ಕೋ-ಪೈಲಟ್ ಇರುವುದರಿಂದ ವಿಮಾನಯಾನ ಸುಗಮವಾಗುವುದು.

ವಾಹನದ ಕಿಟಕಿ ಬಳಿ ಕೂತು ಸಾಗುತ್ತಿರುವಾಗ ಸಣ್ಣನೆಯ ಗಾಳಿಯು ನಿದ್ರೆಯನ್ನು ಪ್ರಚೋದಿಸಬಹುದು. ಜತೆಗೆ, ಬಹುದೂರ ವಾಹನ ಚಲಾಯಿಸುವಾಗ, ವಾಹನದಲ್ಲಿರುವವರೆಲ್ಲರೂ ತೂಕಡಿಸಬಹುದು. ವಾಹನದ ಚಾಲಕ ಇದಕ್ಕೆ ಹೊರತಲ್ಲ. ತನಗೆ ನಿದ್ದೆ ಬರುತ್ತಿದೆ ಎಂಬುದು ತಿಳಿದಾಗ ಗಾಡಿಯನ್ನು ಓಡಿಸಲು ಮುಂದಾಗಬಾರದು. ಚಾಲಕ ವೃತ್ತಿಯಲ್ಲಿರುವವರು ಈ ತೂಕಡಿಕೆ ಸಮಯದ ವಾಹನ ಚಲಾವಣೆಯ ಕಷ್ಟವನ್ನು ಅರಿತಿರುತ್ತಾರೆ. ಬಸ್ ಚಾಲಕರು, ಕ್ಯಾಬ್ ಡ್ರೈವರ್ಸ್, ಟ್ರಕ್ ಡ್ರೈವರ್ಸ್... ಹೀಗೆ. ಸಹ ಪ್ರಯಾಣಿಗರಿದ್ದು ಚಾಲಕರ ತೂಕಡಿಕೆಯ ಅರಿವಾದರೆ, ಅವರನ್ನು ಎಚ್ಚರಿಸುವರು.

ಹೀಗೆ ಮಾಡಿ

ವಾಹನ ಚಲಿಸುವಾಗ, ತೂಕಡಿಕೆ ಬರುವಂತಾದರೆ, ಸುರಕ್ಷಾ ದೃಷ್ಟಿಯಿಂದ ಕೆಲವು ಮುನ್ನೆಚ್ಚರಿಕೆ ತೆಗೆದುಕೊಳ್ಳುವಂತೆ ತಜ್ಞರು ಸೂಚಿಸಿದ್ದಾರೆ.

- ದೂರ ವಾಹನ ಚಲಾವಣೆಯಲ್ಲಿ, ಬೆಳಕಿರುವ ಜಾಗದಲ್ಲಿ ವಾಹನ ನಿಲ್ಲಿಸಿ ಸುಮಾರು 20 ನಿಮಿಷ ವಿಶ್ರಾಂತಿ ಅಥವಾ ನಿದ್ರೆ ಮಾಡಬಹುದು. ಆಗ ತೂಕಡಿಕೆ ಕಡಿಮೆಯಾದೀತು.
- ಬೆಳಗಿನ ಜಾವ 1 ಗಂಟೆಯಿಂದ 6 ಗಂಟೆಯ ತನಕ ಡ್ರೈವಿಂಗ್ ತಪ್ಪಿಸಬಹುದು.
- ಕೆಲವು ಔಷಧಗಳ ಸೇವನೆಯಿಂದ ತೂಕಡಿಕೆ ಬರಬಹುದು. ಈ ಕುರಿತು ಗಮನ ಅಗತ್ಯ.
- ಮದ್ಯಪಾನ ಮಾಡಿ ವಾಹನ ಚಲಾಯಿಸಬಾರದು.
- ಕಾಫಿ, ಚಹಾ ಸೇವನೆಯಿಂದ ಕೆಲವು ನಿಮಿಷಗಳ ತೂಕಡಿಕೆ ಕಡಿಮೆಯಾಗಬಹುದು. ಆದರೆ, ಅದನ್ನೇ ನೆಚ್ಚಿಕೊಂಡು, ನಿದ್ರೆ ಬಿಟ್ಟು ವಾಹನ ಚಲಾಯಿಸಬಾರದು.
- ರಾತ್ರಿ ಡ್ರೈವಿಂಗ್ ಅಗತ್ಯ ಎನಿಸಿದರೆ, ಆ ಹಿಂದಿನ ದಿನ ನಿದ್ರೆ, ವಿಶ್ರಾಂತಿ ಪಡೆದಿರಬೇಕು.
- ಕಿಟಕಿ ತೆರೆದಿಟ್ಟುಕೊಂಡು ಡ್ರೈವ್ ಮಾಡಿದರೆ ತೂಕಡಿಕೆ ಬರುವುದಿಲ್ಲ ಎಂಬುದು ನಿಜವಲ್ಲ.
- ಸುರಕ್ಷಿತ ಡ್ರೈವಿಂಗ್‌ನ ಎಲ್ಲಾ ನಿಯಮಗಳನ್ನು ಪಾಲಿಸಬೇಕು.

ಕತ್ತಲಿನಲ್ಲಿ ಡ್ರೈವಿಂಗ್

ಆದರೆ ದೂರ ಪ್ರಯಾಣನ್ನು ಒಂಟಿಯಾಗಿ ಮಾಡಲು ಹೊರಟಾಗ ಡ್ರೈವಿಂಗ್ ಸೀಟ್ ನಿದ್ರೆ ಬಂದಾಗ ಹಾಟ್ ಸೀಟ್ ಆಗುವುದಂತೂ ನಿಜ. 'ಕತ್ತಲಾದ ಮೇಲೆ ಪ್ರಯಾಣ ಬೆಳೆಸುವುದು ಅಷ್ಟು ಸೂಕ್ತವಲ್ಲ' ಎಂಬ ಅಭಿಪ್ರಾಯದಲ್ಲಿ ಹುರುಳಿದೆ. ಅದರಲ್ಲೂ ನಡುರಾತ್ರಿಯ ಸಮಯದಲ್ಲಿ, ಬೆಳಗಿನ ಜಾವದಲ್ಲಿ ಡ್ರೈವ್ ಮಾಡುವಾಗ, ಅತಿಯಾದ ಎಚ್ಚರಿಕೆ ಅಗತ್ಯ. ರಾತ್ರಿ ಹೊತ್ತಿನಲ್ಲಿ ಹಗಲಿನಷ್ಟು ಬೆಳಕಿರುವುದಿಲ್ಲವಾದುದರಿಂದ, ರಸ್ತೆಯ ವಿಸಿಬಿಲಿಟಿ ತುಸು ಕಡಿಮೆ. ಜತೆಗೆ, ನಡುರಾತ್ರಿ ಕಳೆದಂತೆ, ಡ್ರೈವ್ ಮಾಡುವವರಿಗೆ, ಸಹಜವಾಗಿ ನಿದ್ರೆಯ ಎಳೆತ ಆರಂಭವಾಗುತ್ತದೆ. ಅದರಲ್ಲೂ ಬೆಳಗಿನ ಜಾವದಲ್ಲಿ, ದೇಹವು ಗಾಢ ನಿದ್ರೆ ಮಾಡುವ ಸಮಯಕ್ಕೆ ಹೊಂದಿಕೊಂಡಿರುವುದರಿಂದ, ಆ ಹೊತ್ತಿನ ಡ್ರೈವಿಂಗ್‌ನಲ್ಲಿ ಇನ್ನಷ್ಟು ಎಚ್ಚರ ವಹಿಸಬೇಕು. ಆದರೆ ಈಗಿನ ಪೀಳಿಗೆಯವರು ರೋಡ್ ಟ್ರಿಪ್, ಸೋಲೋ ಟ್ರಿಪ್ ಎಂಬ ಹೆಸರಿಟ್ಟುಕೊಂಡು ಸಮಯ, ಸಂದರ್ಭ ಏನನ್ನು ಲೆಕ್ಕಿಸದೆ ಪ್ರಯಾಣ ಬೆಳೆಸುತ್ತಾರೆ. ಜೋರಾಗಿ ಹಾಡು ಕೇಳುತ್ತಾ ಹೋದರೆ ನಿದ್ದೆ ಬಾರದು ಅಥವ ಯಾರ ಜೊತೆಯಾದರು ಮಾತನಾಡುತ್ತಿದ್ದರೆ ನಿದ್ದೆಗೆ ಜಾರುವುದಿಲ್ಲ, ಆಗಾಗ ಕಾಫಿ/ಟೀ ಕುಡಿದರೆ ನಿದ್ರೆಯನ್ನು ಗೆಲ್ಲಬಹುದು ಎಂಬುದಾಗಿ ಮಾಡುವ ಎಷ್ಟೋ ಲೆಕ್ಕಾಚಾರಗಳು ಕೆಲವೊಮ್ಮೆ ತಪ್ಪಾಗುವುದು. ನಿದ್ದೆ ಬರುವಾಗ ವಾಹನ ಚಲಾವಣೆಗೆ ಮುಂದಾಗುವುದು ಬೇಡ. ಸೇಫ್ ಡ್ರೈವಿಂಗ್ ನಿಮ್ಮದಾಗಲಿ.

ಯುವ ಕಾವ್ಯ

ನಾಡು ವೈನು ಆದರೇನು?

ಎಷ್ಟು ಮಳೆ ಬಿದ್ದರೇನು?
ಅದೆಷ್ಟು ಪ್ರವಾಹ ಹರಿದರೇನು?
ಕೊಚ್ಚಿ ಹೋಯಿತು ಸಾವಿರ ಮರ
ಹರಿದು ಸಾಗಿತು ಲಕ್ಷ ಲಕ್ಷ ಅರೆ

ಉಕ್ಕಿದ ಪ್ರವಾಹದಲಿ ತೇಲಿ ಬಂದ ಬಂಡೆ
ಮನೆಗೆ ಅಪ್ಪಳಿಸಿತು ಬಿತ್ತು ಗೋಡೆ
ಮನಕ್ಕೆ ಅಪ್ಪಳಿಸಿತು ಬಿತ್ತು ದೇಹ
ನೀರಲ್ಲಿ ಕೊಚ್ಚಿಹೋದ ಜೀವಕ್ಕೆ ಲೆಕ್ಕವುಂಟೆ?

ನಾಡು ವೈನು ಎಂದರು
ಕಾಡು ಚಂದ ಎಂದರು
ಎಷ್ಟು ವೈನಾಗಿದ್ದರೂ ಏನುಫಲ?
ಬೆಟ್ಟದ ಮುನಿಸು ತಗ್ಗಲಿಲ್ಲ

ಆದರೂ ಸಾಗಿದೆ ಬದುಕು
ನಾವೆ ಹಿಡಿದು ಸಾಗುವ ದಾರಿ
ಎಲ್ಲಿಗೆ ಈ ಪಯಣ ಗೊತ್ತು ಗುರಿ
ಇಲ್ಲದೆಯೂ ನಡೆದಿದೆ ಜೀವನ

• ಶಶಾಂಕ್ ಮುದೂರಿ

ಚಿತ್ರ: ವಿನಾಯಕ ಪ್ರಭು ವಾರಂಬಳ್ಳಿ

ನೂರು ಶಾಲೆ ನೂರು ಪುಸ್ತಕ!

• ಶಶಿಕಿರಣ್

ಮಕ್ಕಳಲ್ಲಿ ಓದುವ ಅಭ್ಯಾಸ ಬೆಳೆಸಲು ಹಲವರ ಸಹಕಾರ ಅಗತ್ಯ. ಮಕ್ಕಳಲ್ಲಿ ಓದುವ ಅಭಿರುಚಿಯನ್ನು ಬೆಳೆಸಬೇಕು, ಅದನ್ನು ಮಾಡಬೇಕಾದವರು ಪೋಷಕರು ಮತ್ತು ಮುಖ್ಯವಾಗಿ ಶಿಕ್ಷಕರು. ಪಠ್ಯ ವಿಷಯಗಳನ್ನು ಓದುವುದರ ಜತೆಗೇ, ಸಮಯ ಮತ್ತು ಅವಕಾಶ ನೋಡಿಕೊಂಡು, ಪಠ್ಯೇತರ ಪುಸ್ತಕಗಳನ್ನು ಓದಲು ಶಿಕ್ಷಕರು ಮಕ್ಕಳನ್ನು ಪ್ರೋತ್ಸಾಹಿಸಬೇಕು. ಇಂತಹ ಪಠ್ಯೇತರ ಪುಸ್ತಕಗಳು ಮಕ್ಕಳಿಗಾಗಿ ರಚಿಸಿದವುಗಳಾಗಿರಬೇಕು, ಮಕ್ಕಳ ಮನೋವಿಕಾಸಕ್ಕೆ ಪೂರಕವಾಗಿರಬೇಕು, ಮಕ್ಕಳಲ್ಲಿನ ಪ್ರತಿಭೆಗೆ ನೀರೆರೆಯುವಂತಿರಬೇಕು ಮತ್ತು ಮಕ್ಕಳಲ್ಲಿ ಉತ್ತಮ ಹವ್ಯಾಸಗಳನ್ನು ಬೆಳೆಸುವಂತಿರಬೇಕು.

ಮಕ್ಕಳ ಪುಸ್ತಕಗಳನ್ನು ಮಕ್ಕಳು ಓದುವಾಗ ಅವರ ಅಭಿರುಚಿ ಬೆಳೆಯುತ್ತದೆ, ಹವ್ಯಾಸವೂ ಬೆಳೆಯುತ್ತದೆ; ಮತ್ತು ಇದರ ಜತೆಯಲ್ಲೇ, ಇನ್ನೊಂದು ಪ್ರಮುಖ ಕೆಲಸವೂ ಆಗುತ್ತದೆ- ಅದೇನೆಂದರೆ, ಮಕ್ಕಳಲ್ಲಿ ಕೆಟ್ಟ ಹವ್ಯಾಸಗಳು ದೂರವಾಗುತ್ತವೆ! ಉತ್ತಮ ಹವ್ಯಾಸಗಳು ಬಲವಾಗಿ ಬೆಳೆದಾಗ, ಸಹಜವಾಗಿ ಕೆಟ್ಟ ಹವ್ಯಾಸಗಳು ಹಿನ್ನೆಲೆಗೆ ಸರಿಯುತ್ತವೆ. ಈ ದಿನಗಳಲ್ಲಿ ನಾನಾ ರೀತಿಯ ಅವಕಾಶ, ಆಮಿಷಗಳು ಮಕ್ಕಳನ್ನು ಆಕರ್ಷಿಸುತ್ತಿರುವಾಗ (ಉದಾ : ಮೊಬೈಲ್ ಗೇಮ್, ಇತರ ದುರಭ್ಯಾಸಗಳ ಆಮಿಷ) ಈ ನಿಟ್ಟಿನಲ್ಲೂ ಮಕ್ಕಳ ಪುಸ್ತಕದ ಮಹತ್ವವನ್ನು ಗುರುತಿಸಬೇಕು.

ಗುಣಮಟ್ಟದ ಪುಸ್ತಕ

ಕೆಲವು ಬಾರಿ, ಪೋಷಕರು ಮಕ್ಕಳಲ್ಲಿ ಓದುವ ಅಭಿರುಚಿ ಬೆಳೆಸಿದಾಗಲೂ, ಒಂದು ಕೊರತೆ ಕಾಣಿಸುತ್ತದೆ – ಅದೇನೆಂದರೆ, ಗುಣಮಟ್ಟದ ಪುಸ್ತಕಗಳ ಲಭ್ಯತೆ. ಈ ಕೊರತೆಯು ಗ್ರಾಮೀಣ ಪ್ರದೇಶಗಳಲ್ಲಿ, ದೂರದ ಊರುಗಳಲ್ಲಿ ಸಹಜ ಎನಿಸಿದೆ. ಗುಣಮಟ್ಟದ ಪುಸ್ತಕಗಳು ನಗರಗಳಲ್ಲಿ ಮುದ್ರಣಗೊಂಡರೂ, ಅವು ಮಕ್ಕಳಿಗೆ ತಲುಪುವ ಕೆಲಸವಾಗಬೇಕು. ಮಕ್ಕಳು ಓದುವ ಪುಸ್ತಕಗಳ ಕೊರತೆಯನ್ನು ನೀಗಿಸಲು ವಿವಿಧ ಸಂಸ್ಥೆಗಳು ಅಲ್ಲಲ್ಲಿ ಕೆಲಸ ಮಾಡುತ್ತಿವೆ. ಮಕ್ಕಳಿಗೆ ಪುಸ್ತಕ ತಲುಪಿಸುವ ಅಭಿಯಾನದ ಭಾಗವಾಗಿ, 'ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ' ಒಂದು ಅಪರೂಪದ ಯೋಜನೆಯನ್ನು ಜಾರಿಗೆ ತಂದಿದೆ. 'ನೂರು ಶಾಲೆಗೆ ನೂರು ಪುಸ್ತಕ' ಯೋಜನೆಯ ಅಡಿ, ಒಂದು ನೂರು ಮಕ್ಕಳ ಪುಸ್ತಕಗಳನ್ನು ನೂರು ಶಾಲೆಗಳಿಗೆ ತಲುಪಿಸುವ ಯೋಜನೆ ಇದು. ಈ ಹಿಂದಿನ ವರ್ಷಗಳಲ್ಲಿ, ರಾಜ್ಯದ ಎಂಟು ಜಿಲ್ಲೆಗಳ 800 ಶಾಲೆಗಳಿಗೆ ಈ ರೀತಿ ಪುಸ್ತಕಗಳನ್ನು ತಲುಪಿಸಲಾಗಿದೆ.2024ನೆಯ ಸಾಲಿನಲ್ಲಿ, ಚಿತ್ರದುರ್ಗ ಜಿಲ್ಲೆಯ 100 ಶಾಲೆಗಳಿಗೆ ಪುಸ್ತಕಗಳನ್ನು ತಲುಪಿಸುವ ಪ್ರಯತ್ನದ ಭಾಗವಾಗಿ, ಮಕ್ಕಳ ಪುಸ್ತಕಗಳನ್ನು ದಾನವಾಗಿ ನೀಡುವಂತೆ ಮನವಿ ಮಾಡಲಾಗಿದೆ. ಮಕ್ಕಳ ಪುಸ್ತಕಗಳನ್ನು ರಚಿಸಿದವರು, ಪ್ರಕಾಶಕರು, ಸಂಘ ಸಂಸ್ಥೆಗಳು, ಅಕಾಡೆಮಿಗಳು, ಸಾಹಿತ್ಯ ಪರಿಷತ್ತು ಮತ್ತು ದಾನಿಗಳಿಂದ ಮಕ್ಕಳ ಪುಸ್ತಕಗಳನ್ನು ದಾನವಾಗಿ ಸ್ವೀಕರಿಸಲಾಗುವುದು ಮತ್ತು ಅವುಗಳನ್ನು 100 ಶಾಲೆಗಳಿಗೆ ತಲುಪಿಸಲಾಗುವುದು ಎಂದು ಸಂಸ್ಥೆ ತಿಳಿಸಿದೆ. ಒಂದು ಶೀರ್ಷಿಕೆಯ 100 ಪ್ರತಿಗಳನ್ನು ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ, ಸಾಹಿತ್ಯ ಸುಗ್ಗಿ, ನಂ.40, 3ನೇ ಬ್ಲಾಕ್, 2ನೇ ಸ್ಟೇಜ್, ನಾಗರಭಾವಿ, ಬೆಂಗಳೂರು 560072 ಇಲ್ಲಿಗೆ ತಲುಪಿಸಬಹುದು. 9448753991 ಇವರನ್ನು ಸಂಪರ್ಕಿಸಿದರೆ, ಪುಸ್ತಕಗಳನ್ನು ಕೊಂಡೊಯ್ಯುವ ವ್ಯವಸ್ಥೆಯನ್ನೂ ಮಾಡಲಾಗುವುದು. ಶಾಲೆಗಳಿಗೆ 10,000 ಮಕ್ಕಳ ಪುಸ್ತಕಗಳನ್ನು ತಲುಪಿಸುವ ಈ ಅಭಿಯಾನವು, ಮಕ್ಕಳಲ್ಲಿ ಉತ್ತಮ ಹವ್ಯಾಸ ಬೆಳೆಸುವ ಕೆಲಸ ಮಾಡುವುದರಿಂದಾಗಿ, ಈ ಅಭಿಯಾನವು ಎಲ್ಲಾ ಪ್ರಜ್ಞಾವಂತರಿಂದ ಪ್ರೋತ್ಸಾಹ ಪಡೆಯುವ ಅರ್ಹತೆ ಹೊಂದಿದೆ.



ಕಾವೇರಿ ನದಿಗೆ ಅರ್ಪಣೆಗೊಂಡ ಕಾವ್ಯ!

ರಾಘವೇಂದ್ರ ಸ್ವಾಮಿಗಳ ಆರಾಧನೆಯ ಈ ಸಂದರ್ಭದಲ್ಲಿ, ಅವರ ಕುರಿತು ರಚನೆಗೊಂಡ ಕಾವ್ಯದ ಭಾಗವೊಂದು ಕಾವೇರಿ ನದಿಗೆ ಅರ್ಪಣೆಗೊಂಡ ಅಪರೂಪದ ವಿದ್ಯಮಾನದ ಸ್ಮರಣೆ ಇಲ್ಲಿದೆ.

• ಮನೋಹರ ಜೋಶಿ

ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅವರು ಪಯಣಿಸಿದ ದಾರಿ, ಸಾಧನ ಶಿಖರಕ್ಕೇರಿದ ರೀತಿ ಮುಂತಾದವುಗಳು ನಮ್ಮ ಜೀವನದ ದಾರಿಗೆ ಬೆಳಕಾಗುವ ದೀವಿಗೆಗಳೇ ಆಗಿವೆ. ಅಂತಹ ಅಪರೂಪದ ಸಾಧನೆಗಳ ದಿವ್ಯ ಚರಿತ್ರೆಗಳಲ್ಲಿ 'ಶ್ರೀ ರಾಘವೇಂದ್ರ ವಿಜಯ ಕಾವ್ಯ' ಪ್ರಮುಖವಾದ ಕಾವ್ಯಾತ್ಮಕ ಗ್ರಂಥವಾಗಿದೆ. ಕಾವ್ಯರೂಪದಲ್ಲಿರುವ 'ಶ್ರೀ ರಾಘವೇಂದ್ರ ವಿಜಯ'ದ ಗ್ರಂಥಕಾರರು, ನಾರಾಯಣಾಚಾರ್ಯರು.

ರಾಘವೇಂದ್ರ ಸ್ವಾಮಿಗಳವರ ಪೂರ್ವಾಶ್ರಮ ಹಾಗು ಯತ್ಯಾಶ್ರಮದ ಚಿತ್ರಣಗಳು, ತತ್ವಜ್ಞಾನ ಪ್ರಪಂಚದಲ್ಲಿ ಅವರು ಸಾಧಿಸಿರುವ ಮಹತ್ಕಾರ್ಯಗಳು,ತೀರ್ಥ ಕ್ಷೇತ್ರಗಳು ಸಂಚರಿಸುತ್ತ ಅವರು ನಿರ್ಮಿಸಸಿದ ಜ್ಞಾನ ಪ್ರಪಂಚದ ಆಳ ಅಗಲ ವಿಸ್ತಾರ ಹೀಗೆ ಅನೇಕ ವಿಷಯಗಳ ಸಂಗಮ 'ಶ್ರೀರಾಘವೇಂದ್ರ ವಿಜಯ' ಎಂಬ ಮಹಾಕಾವ್ಯ. ಕಲಿಯುಗದ ಕಲ್ಪತರು, ಕಾಮಧೇನು ಎಂದು ಹೆಸರಾದವರು ಶ್ರೀರಾಘವೇಂದ್ರಸ್ವಾಮಿಗಳು. ನುಡಿದಂತೆ ನಡೆದು, ಸತ್ಯಧರ್ಮದಿಂದ ನಡೆಯುವ ಸುಜೀವರಿಗೆ ಸಾಧನ ಮಾರ್ಗ ತೋರಿಸಿದ ರಾಜಗುರುಗಳು. ಮಳಖೇಡ ನಿವಾಸಿ ಶ್ರೀಜಯತೀರ್ಥರ 'ನ್ಯಾಯಸುಧೆ'ಗೆ 'ಪರಿಮಳ' ಎನ್ನುವ ಟೀಕಾ ರಚಿಸಿ ಪಂಡಿತವರ್ಗಕ್ಕೆ, ಮಹದುಪಕಾರಮಾಡಿದರು.

ಇಂತಹ ಮಹಾನುಭಾವರಾದ ಶ್ರೀರಾಘವೇಂದ್ರ ಸ್ವಾಮಿಗಳವರು ಮೈಸೂರು ಮಹಾರಾಜರ ಪ್ರಾರ್ಥನೆಯ ಮೇರೆಗೆ ಶ್ರೀ ರಂಗನನ್ನು ನಿತ್ಯ ಸೇವಿಸುವ ಕಾವೇರಿ ತಟದ ಶ್ರೀರಂಗಪಟ್ಟಣದಲ್ಲಿ ಆ ವರುಷ ಚಾತುರ್ಮಾಸ್ಯ ವ್ರತ ಸಂಕಲ್ಪಕ್ಕೆ ಕುಳಿತಿದ್ದರು. ಒಂದು ಮುಂಜಾನೆ ರಾಘವೇಂದ್ರ ಗುರುರಾಯರು ಕಾವೇರಿ ತಟದಲ್ಲಿ ಮಳಖೇಡ ಮಾಹಾಮುನಿ ಶ್ರೀಜಯತೀರ್ಥರು ರಚಿಸಿದ ನ್ಯಾಯಸುಧಾ ಪಾಠವನ್ನು ಶಿಷ್ಯರಿಗೆ ಹೇಳುತ್ತಿರುವಾಗ, ಅಲ್ಲಿಗೆ ಬಂದ ಗುರುರಾಯರ ಅಂತರಂಗದ ಶಿಷ್ಯರಾದ ನಾರಾಯಣಾಚಾರ್ಯರು ಬಂದರು. ಇವರು ಗುರುರಾಯರಿಗೆ ಪೂರ್ವಾಶ್ರಮದ ಸೋದರ ಅಳಿಯನ ಸಂಬಂಧ. ನಾರಾಯಣಾಚಾರ್ಯರು, ತಾವು ರಚಿಸಿದ 'ಶ್ರೀರಾಘವೇಂದ್ರ ವಿಜಯ' ಕಾವ್ಯವನ್ನು ಗುರುಗಳ ಸನ್ನಿಧಿಗೆ ಸಮರ್ಪಿಸಿದರು.

ಅದು 16 ಸರ್ಗದ ಕಾವ್ಯ. ಅದನ್ನು ಅವಲೋಕನೆ ಮಾಡಿದ ಗುರುರಾಯರು, ಹಿರಿಯರಾದ ಮಧ್ವಾಚಾರ್ಯರ ಜೀವನ ಚರಿತ್ರೆ 'ಸುಮಧ್ವ ವಿಜಯ' ಮಹಾ ಕಾವ್ಯವು ಸಹ 16 ಸರ್ಗಗಳನ್ನು ಹೊಂದಿರುವುದರಿಂದ, ತಮ್ಮ ಜೀವನ-ಚಿತ್ರಣ ತಿಳಿಸುವ ಕಾವ್ಯವು 16 ಸರ್ಗಗಳಿರುವುದ ಸಮಂಜಸವಲ್ಲ ಎಂದು ತಿಳಿದರು; ಮತ್ತು ತನ್ನ ಮೇಲೆ ರಚಿತಗೊಂಡ ಕಾವ್ಯದ 6 ಸರ್ಗಗಳನ್ನು ಬೇರ್ಪಡಿಸಿ ಕಾವೇರಿ ತಾಯಿಯ ಉಡಿಗೆ ಹಾಕಬೇಕೆಂದು ನಾರಾಯಣಾಚಾರ್ಯರಿಗೆ ಅಪ್ಪಣೆ ಮಾಡಿದರು.

ಗುರುಗಳ ಆದೇಶದಂತೆ 6 ಸರ್ಗಗಳನ್ನು ಬೇರ್ಪಡಿಸಿ, ನಾರಾಯಣಚಾರ್ಯರು ಅದೇ ಸ್ಥಳದಲ್ಲಿ ಕಾವೇರಿ ನದಿಗೆ ಅರ್ಪಿಸಿದರು. ಮುಂದೆ 'ಶ್ರೀ ರಾಘವೇಂದ್ರ ವಿಜಯ'ವು 10 ಸರ್ಗಗಳಿಂದ ಯುಕ್ತವಾಗಿ ಎಲ್ಲರಿಗೂ ದಾರಿದೀಪವಾಯಿತು.

ಮನದಲ್ಲಿ ಖಾಲಿ ಏಕಾಂತ

ಏನೇ ಆಗಲಿ ಮನಸು ಮುನಿಸುಗಳ ನಡುವೆ ಪ್ರೀತಿ ನಲುಗದಿರಲಿ.

• ಲಕ್ಷ್ಮೀಕಾಂತ್ ಎಲ್. ವಿ.

ಯಾಕೋ ಗೊತ್ತಿಲ್ಲ! ಈ ನಡುವೆ ಸೂರ್ಯಾಸ್ತಕ್ಕೂ ಮೊದಲಿನ ಕಳೆ ಇಲ್ಲದಂತಾಗಿದೆ. ಸಂಜೆಯ ಒಂದು ಕಪ್ ಚಹಾಕ್ಕೂ ಮೊದಲಿನ ರುಚಿಯಿಲ್ಲ; ಆಗಸದಿ ಹಾರುವ ಬಾನಾಡಿಗಳ ಕಲರವದಲ್ಲೂ ಸಹ ಕೊರತೆ ಎದ್ದು ಕಾಣುತ್ತಿದೆ. ಒಂಥರಾ ಬೇಸರ ಕಣೆ; ಎಲ್ಲವೂ ನೀರಸ ಸಂಜೆಗಳೇ ಆಗಿವೆ. ಒಮ್ಮೊಮ್ಮೆ ಕೊನೆಯಿಲ್ಲದಂತೆ ಹರಡಿರೋ ಚುಕ್ಕೆಗಳೆಲ್ಲ ಹಗಲಲ್ಲಿ ಬಿಟ್ಟೂ ಬಿಡದಂತೆ ಕಾಡುತ್ತಾ ಎಲ್ಲೆಡೆ ಹರಡಿದ ಆಕಾಶದ ನೀಲಿಯನ್ನು ನೋಡುತ್ತಾ ಮತ್ತೆ ಮೊದಲಿನಿಂದ ಬದುಕಬೇಕನಿಸ್ತಿದೆ. ಯಾರನ್ನೂ ಕೇಳದೇ ಕೇವಲ ನಾನು ಮಾತ್ರ ಅತೀ ಅನ್ನಿಸುವಂತಹ ಭಾವಗಳ ಜೊತೆ ಒಂದು ಘಳಿಗೆ ಕಳೆದುಹೋಗಬೇಕನಿಸ್ತಿದೆ. ತೀರಾ ಇಷ್ಟ ಪಡೋ ಅದೆಷ್ಟೋ ನೆನಪುಗಳು ಇರಿಸಿಕೊಂಡಿರೋ ಅದೇ ಜಾಗ ಮತ್ತೆ ಮತ್ತೆ ಕಾಡ್ತಿದೆ. ಹೌದು ಗೆಳತಿ, ಮನಸು ಮುನಿಸಿದಾಗ ಅನಿಸುವ ಮನಸಿನ ಯಾತನೆಗಳು, ಎಲ್ಲಾ ಖುಷಿಯ ಆಚೆಗೆ ನೆನಪುಗಳೆಲ್ಲ ಕಾಡುತ್ತಾ ಈ ಇಳಿಸಂಜೆಗೆ ಮತ್ತೆ ಮಂಡಿಯೂರಿ ನಿನ್ನ ಮನಸಿನ ಕುರಿತು ಒಂದಿಷ್ಟು ಮುನಿಸು ಆವರಿಸಿ ಸಂಜೆಯನ್ನು ನನಗೇ ಬಿಟ್ಟು ಎದ್ದು ಹೋದ ಮೇಲೂ ಅದೇಕೋ ಮತ್ತೆ ನಿನ್ನದೇ ಕನವರಿಕೆ.

ಗೆಳತಿ, ಬದುಕಲ್ಲಿ ಯಾವ ಭಾವುಕತೆಗಳಿಗೂ ಜಾಗ ಕೊಡದೆ ತನ್ನೊಳಗೆ ಯಾರನ್ನೂ ಬಿಟ್ಟುಕೊಳ್ಳದೇ ತನ್ನ ಪಾಡಿಗೆ ತಾನಿದ್ದಾಗಲೇ ಬದುಕಿನಲ್ಲಿ ಬಂದವಳು ನೀನು. ನನ್ನ ಅದೆಷ್ಟೋ ಕನಸುಗಳಿಗೆ ಬಣ್ಣ ತುಂಬಿದ್ದು, ಅವುಗಳನ್ನು ಮನಸಾರೆ ಮೆಚ್ಚಿಕೊಂಡು ಅಪ್ಪಿದ್ದು, ಅದೇ ಮರಳ ತೀರದಲ್ಲಿ ಸಂಜೆಗೆ ಜೊತೆಯಾಗಿದ್ದು ಈಗಲೂ ಹಸಿರಾಗಿಯೇ ಉಳಿದಿದೆ ಕಣೆ. ಸ್ನೇಹಕ್ಕೆ ಜೊತೆಯಿದ್ದು, ಬದುಕಿಗೆ ಜೊತೆಯಾಗ್ತೀಯ ಅಂತ ಕೇಳಿದಕ್ಕೆ ಹೌದು ಅನ್ನೋ ಅನಿವಾರ್ಯವೇನೂ ಇರಲಿಲ್ಲ; ಆದರೂ ಕೇಳದೇ ಕೆನ್ನೆ ಹಿಂಡೋವಷ್ಟು ಸಲುಗೆ ಪಡೆದಿದ್ದ ನಿನ್ನಲ್ಲಿ ಕಳೆದು ಹೋಗಿದ್ದೆ. ಅದಾಗಲೇ ನಿನ್ನ ಆ ಹೆಜ್ಜೆ ಗುರುತುಗಳಲ್ಲಿ ನಾ ಕಳೆದು ಹೋಗಿ ತುಂಬಾ ಕಾಲವೇ ಆಗಿತ್ತು. ಕಾಲ ಸರಿದಂತೆ ಅದ್ಯಾರ ದೃಷ್ಟಿ ನಮ್ಮಿಬ್ಬರ ಪ್ರೀತಿ ಮೇಲೆ ಬಿತ್ತೋ ಗೊತ್ತಿಲ್ಲ! ಅಮಾವಾಸ್ಯೆಯ ಕಾಡಿಗೆಯನ್ನು ಹುಣ್ಣಿಮೆಗೆ ಹಚ್ಚಿದಂತೆ ಒಲವನ್ನೆಲ್ಲಾ ಸುರಿದರೂ ಕಾಕದೃಷ್ಟಿ ಬಿಡಲೇ ಇಲ್ಲ. ದಿನಕ್ಕೆ ನಾಲ್ಕು ಬಾರಿ ಮಾತಾಡ್ತಿದ್ದ ನೀನು ವಾರಕ್ಕೊಮ್ಮೆಯೂ ಸಿಗದೇ ಕಾಯಿಸುವಾಗ ಮನದ ಮಹಲೊಳಗೆ ಬರೀ ಖಾಲಿ ಏಕಾಂತವೇ ಆವರಿಸಿತ್ತು. ಬದುಕಿನ ಜೊತೆ ಕಳೆದು ಹೋಗಿರೋ ನಿನ್ನ ಪ್ರೀತಿಯ ಮೇಲೆ ನನಗೆ ಮಾತ್ರ ನಂಬಿಕೆ ಅಪಾರ. ಆದರೆ ಕಡಲಲ್ಲೂ ಉಳಿಯಲಾಗದ ದಡದಲ್ಲೂ ನಿಲ್ಲಲಾಗದ ತಳಮಳ ಮಾತ್ರ ಬಿಟ್ಟಿಲ್ಲ ಕಣೆ. ನಗು ಮರೆತು ಹೋದ ಮೇಲೂ ಬಾನ ಚಂದಿರನನ್ನು ನೋಡಿ ಅಷ್ಟೇ ಚಂದದಿ ನಗುವ ಪ್ರೀತಿಯ ನಡುವೆ ಕಾಡೋ ನೋವುಗಳನ್ನು ಕೂಡಾ ಪ್ರೀತಿಸೋದನ್ನ ಕಲಿತಿದ್ದೀನಿ.

ಈಗೀಗಂತೂ ಎಲ್ಲಾ ಬೇಸರಗಳನ್ನೆಲ್ಲಾ ಮೂಟೆಕಟ್ಟಿ ಯಾರೂ ಇಲ್ಲದಿರೋ ಏಕಾಂತದಲ್ಲಿ ಜೋಪಾನ ಮಾಡಿರುವೆ. ಏಕೆಂದರೆ ಆ ಬೇಸರಗಳ ಸಣ್ಣ ಸುಳಿವು ಸಿಕ್ಕರೂ ಇಂದು ಸಿಗುವ ಸಂಜೆಯ ನಿನ್ನ ನಗುವಿಗೆ ರಜೆ ಸಿಗುವ ಆತಂಕ. ಅದೇಕೋ ಏನೋ ಅಂದಿನ ಅದೊಂದಿಷ್ಟು ಮುನಿಸುಗಳ ಮಧ್ಯೆ ಪ್ರೀತಿಯ ಮನಸೆಲ್ಲೋ ಮುದುಡಿ ಕುಳಿತು ಕಾರಣ ಹುಡುಕ ಹೊರಟವನಿಗೆ ನೀನು ಇನ್ನೂ ಗೊಂದಲವಾಗಿಯೇ ಉಳಿದುಬಿಟ್ಟಿರುವೆ. ಈ ನಡುವೆ ಬದುಕಿನ ಸಂಜೆಗಳು ಬೇಸರಿಸತೊಡಗಿರುವ ಸಂದರ್ಭದಲ್ಲಿ ನಿನ್ನ ನೆನಪುಗಳು ಸೂರ್ಯನ ಜೊತೆಗೇ ಮುಳುಗುತ್ತವೆ ಮತ್ತೆ ಉದಯಿಸುತ್ತವೆ. ಹೀಗಿದ್ದಾಗ ಬೆಳಿಗ್ಗೆಯಾದರೆ ಸಾಕೆಂದು ಸಂಭ್ರಮಿಸಲಾ? ಸಂಜೆಯಾಯಿತೆಂದು ಬೇಸರಿಸಲಾ? ಗೊಂದಲವಾಗಿದೆ.

ಈ ಎಲ್ಲಾ ಕನಸಾದರೂ ಕೂಡ ಒಲವು ಗೆಲುವಾಗಲಿ, ಎಂದಿಗೂ ಕವಲೊಡೆಯದಿರಲಿ, ನಿಲುವು ಮಾಸದಿರಲಿ, ನಿನ್ನ ನಗು ಮತ್ತೆ ಕೈ ತಾಕಲಿ ಅನ್ನೋ ಆಶಾಭಾವ ಜೀವಂತ ಕಣೆ. ನನಗೆ ಗೊತ್ತು ಹುಚ್ಚನ ಭಾಷೆ ಅರ್ಥವೇ ಆಗದಂತೆ ನಕ್ಕು ಸುಮ್ಮನಾಗಿರುತ್ತೀಯ. ಏನೇ ಆಗಲಿ ಮನಸು ಮುನಿಸುಗಳ ನಡುವೆ ಪ್ರೀತಿ ನಲುಗದಿರಲಿ ಕಣೆ.

ವಿಶ್ವವಾಣಿ
21.08.2024 ಬುಧವಾರ
vishwavani.news

ದಿನ ದರ್ಶಿಕೆ

ಶ್ರಾವಣ ಮಾಸ, ಕೃಷ್ಣ ಪಕ್ಷ, ಕೃಷ್ಣ ಪ್ರತಿಪದ ತಿಥಿ, ಶಟ್ಟಿಷಾ ನಕ್ಷತ್ರ, ಕೌಲವ ಕರಣ, ಅತಿಗಂಡ ಯೋಗ, ವರ್ಷಾ ಋತು, 1946 ಕ್ರೋಧಿನಾಮ ಸಂವತ್ಸರ, 2081 ವಿಕ್ರಮ ಶಕ ಸಂವತ್ಸರ,

ಮನೆಮದ್ದು

ನುಗ್ಗೆ ಸೊಪ್ಪಿನಲ್ಲಿ ಉರಿಯೂತ ವಿರೋಧಿ ಗುಣಗಳು ಸಮೃದ್ಧವಾಗಿರುವುದರಿಂದ, ಇದು ಉರಿಯೂತ ನಿವಾರಿಸಲು ಸಹಾಯಕವಾಗುತ್ತದೆ. ಇದರಿಂದ ಸಂಧಿವಾತದಂತಹ ತೀವ್ರ ಪರಿಸ್ಥಿತಿಗಳನ್ನು ನಿರ್ವಹಿಸಲು ಮತ್ತು ಹೃದಯದ ಆರೋಗ್ಯವನ್ನು ಬೆಂಬಲಿಸುವಲ್ಲಿ ಅತ್ಯುತ್ತಮ ಪಾತ್ರವಹಿಸುತ್ತದೆ.

ಸೌಂದರ್ಯ ಸೂತ್ರ

2 ಟೇಬಲ್ ಸ್ಪೂನ್ ಆಲೂಗಡ್ಡೆ ರಸವನ್ನು 1 ಚಮಚ ನಿಂಬೆ ರಸದೊಂದಿಗೆ ಸೇರಿಸಿ. ಮಿಶ್ರಣವನ್ನು ನಿಮ್ಮ ಮುಖಕ್ಕೆ ಹಚ್ಚಿ, ಇದನ್ನು 10-15 ನಿಮಿಷಗಳ ಕಾಲ ಬಿಟ್ಟು ನಂತರ ಉಗುರು ಬೆಚ್ಚಗಿನ ನೀರಿನಿಂದ ತೊಳೆಯಿರಿ. ಚರ್ಮವನ್ನು ಕಾಂತಿಯುತಗೊಳಿಸಲು ಸಹಾಯ ಮಾಡುತ್ತದೆ, ವಾರಕ್ಕೆರಡು ಬಾರಿ ಈ ರೀತಿ ಹಚ್ಚುತ್ತಾ ಹೋಗಿ.

ದಿನ ಭವಿಷ್ಯ

ಮೇಷ
ರಕ್ತದೊತ್ತಡವಿರುವವರು ತಮ್ಮ ರಕ್ತದೊತ್ತಡ ಕಡಿಮೆ ಮಾಡಲು, ಕೊಲೆಸ್ಟರಾಲ್ ನಿಯಂತ್ರಣದಲ್ಲಿರಿಸಲು ಕೆಂಪು ವೈನ್ ತೆಗೆದುಕೊಳ್ಳಬಹುದು.

ವೃಷಭ
ನಿಮ್ಮ ಕುಟುಂಬಕ್ಕೆ ಸೂಕ್ತ ಸಮಯ ನೀಡಿ. ನೀವು ಅವರ ಸಲುವಾಗಿ ಕಾಳಜಿ ವಹಿಸುತ್ತೀರೆಂದು ಅವರಿಗೆ ಅರ್ಥವಾಗಲಿ. ಅವರಿಗಾಗಿ ಸಮಯ ನೀಡಿ.

ಮಿಥುನ
ಇತರರೊಂದಿಗೆ ಸಂತೊಷವನ್ನು ಹಂಚಿಕೊಳ್ಳುವ ಮೂಲಕ ಆರೋಗ್ಯವು ಹೆಚ್ಚುತ್ತದೆ. ಇಂದು ನೀವು ಹಣದ ಬಗ್ಗೆ ವಿಶೇಷ ಗಮನ ಹರಿಸಬೇಕು.

ವೃಶ್ಚಿಕ
ದೈಹಿಕ ಆರೋಗ್ಯ ಸುಧಾರಿಸಲು ಸಮತೋಲಿತ ಆಹಾರ ತೆಗೆದುಕೊಳ್ಳಿ ಇಂದು ನಿಮ್ಮಿಂದ ನಿಮ್ಮವರು ಆರ್ಥಿಕ ಬೆಂಬಲ ಕೇಳಬಹುದು.

ಸಿಂಹ
ಸ್ನೇಹಿತರೊಂದಿಗಿನ ಸಂಜೆ ಆಹ್ಲಾದಕರವಾಗಿದ್ದರೂ ಆದರೆ ವಿಪರೀತವಾಗಿ ತಿನ್ನುವುದು ನಿಮ್ಮ ಮರು ದಿನದ ಮುಂಜಾನೆಗೆ ಆರೋಗ್ಯ ಕೆಡಬಹುದು.

ಕನ್ಯಾ
ನಿಮ್ಮ ದಿಟ್ಟ ಮತ್ತು ನಿರ್ಭಯ ಅಭಿಪ್ರಾಯಗಳು ನಿಮ್ಮ ಸ್ನೇಹಿತನ ಆತ್ಮಗೌರವವನ್ನು ಹಾನಿ ಮಾಡಬಹುದು.

ತುಲಾ
ದೈಹಿಕ, ಮಾನಸಿಕ ದೃಢತೆಗಾಗಿ ಧ್ಯಾನ, ಯೊಗ ಪ್ರಾರಂಭಿಸಿ. ಇಂದು ನೀವು ಸ್ನೇಹಿತರೊಂದಿಗೆ ಪಾರ್ಟಿಯಲ್ಲಿ ಸಾಕಷ್ಟು ಹಣ ಖರ್ಚಾಗಬಹುದು.

ವೃಶ್ಚಿಕ
ಇತರರನ್ನು ಟೀಕಿಸುವ ನಿಮ್ಮ ಅಭ್ಯಾಸದಿಂದಾಗಿ ಇಂದು ನೀವೇ ಕೆಲವು ಟೀಕೆಗಳನ್ನು ಎದುರಿಸುವ ಸಾಧ್ಯತೆ. ನಿಮ್ಮ ಹಾಸ್ಯ ಪ್ರಜ್ಞೆ ಜಾಗೃತ ಇರಲಿ.

ಧನು
ನಿಮ್ಮ ಅಪಾರ ವಿಶ್ವಾಸ ಮತ್ತು ಸುಲಭದ ಕೆಲಸದ ವೇಳಾಪಟ್ಟಿ ಇಂದು ವಿಶ್ರಾಂತಿಗೆ ಸಾಕಷ್ಟು ಸಮಯ ನೀಡುತ್ತದೆ.

ಮಕರ
ನಿಮ್ಮ ಬಗ್ಗೆ ನಿಮಗೇ ಉತ್ತಮ ಅಭಿಪ್ರಾಯ ಬರಲು ಕೆಲಸಗಳನ್ನು ಮಾಡಲು ಅದ್ಭುತ ದಿನ. ಇಂದು ನೀವು ಹೆಚ್ಚಿನ ಹಣ ಪಡೆಯುತ್ತೀರಿ.

ಕುಂಭ
ನಿಮ್ಮ ಮನಸ್ಸು ಒಳ್ಳೆಯ ವಿಷಯಗಳನ್ನು ಗ್ರಹಿಸುತ್ತದೆ. ನಿಮ್ಮ ಪೋಷಕರು ನೀಡಿದ ಬೆಂಬಲದಿಂದ ಹಣಕಾಸು

ಮೀನ
ನೀವು ಇಂದು ಒಳ್ಳೆಯ ಆರೋಗ್ಯ ಹೊಂದಿರುವುದರಿಂದ ಅದು ನಿಮಗೆ ಯಶಸ್ಸು ನೀಡುವ ಸಾಧ್ಯತೆ ಇದೆ. ಆದರೆ ನಿಮ್ಮ ಶಕ್ತಿ ನಾಶಪಡಿಸುವ ಎಲ್ಲವನ್ನೂ ತಪ್ಪಿಸಬೇಕು.

• ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 2006: ಭಾರತ ರತ್ನ, ಖ್ಯಾತ ಶೆಹನಾಯಿ ವಾದಕ ಉಸ್ತಾದ್ ಬಿಸ್ಮಿಲ್ಲಾ ಖಾನ್ ಅವರು ಕೊನೆಯುಸಿರೆಳೆದರು.
- 1911: ಖ್ಯಾತ ಚಿತ್ರ ಮೊನಾಲೀಸಾವನ್ನು ಕದ್ದಿದ್ದರು.
- 1972: ವನ್ಯಜೀವಿ ರಕ್ಷಣೆ ಕಾಯಿದೆ ಜಾರಿಗೆ ಬಂದಿತು.
- 1921: ಖ್ಯಾತ ಲೇಖಕ ದೇವರಕೊಂಡ ಬಾಲಗಂಗಾಧರ ತಿಲಕ್ ಅವರ ಹುಟ್ಟುಹಬ್ಬ

ಚಿತ್ರಸ್ಫೂರ್ತಿ



ಕೋಳಿ ಜಗಳ... ರಾಜಾಜಿನಗರದಲ್ಲಿ ಹಮ್ಮಿಕೊಂಡಿದ್ದ ನಮ್ಮ ಕುಂದಾಪುರ ಹಬ್ಬದಲ್ಲಿ ಕಂಡ ಕೋಳಿ ಜಗಳ

ಚಿತ್ರ ಕೃಪೆ: ಸುಧಾಕರ್ ದೇವರಾಜ್

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ನಮ್ಮ ನಡುವೆ ಇರುವ ಮಹಿಷಾಸುರರು

ವಿದ್ಯುನ್ಮಾಲಿ ಮತ್ತು ಮಾಲಿನಿ ರಾಕ್ಷಸ ದಂಪತಿಗೆ ಬಹುಕಾಲ ಮಕ್ಕಳಿರಲಿಲ್ಲ. ಹೇಗಾದರೂ ಪುತ್ರ ಪ್ರಾಪ್ತಿಯಾಗಲೇಬೇಕೆಂದು ನಿರ್ಧರಿಸಿದ ಮಾಲಿನಿ ತಪಸ್ಸನ್ನಾಚರಿಸಲು ನಿರ್ಧರಿಸುತ್ತಾಳೆ. ಕಾಡಿಗೆ ತೆರಳಿ ಮಹಿಷಿ ಅಂದರೆ ಎಮ್ಮೆಯ ರೂಪದಲ್ಲಿ ತಪಸ್ಸಿಗೆ ತೊಡಗುತ್ತಾಳೆ.

ಆಕೆಯ ಕಠೋರ ತಪಸ್ಸಿನಿಂದ ಹೊಮ್ಮುವ ಶಾಖ ಋಷಿಯೊಬ್ಬನ ತಪಸ್ಸಿಗೆ ಭಂಗ ತರುತ್ತದೆ. ಇದರಿಂದ ಕೋಪಾವಿಷ್ಠನಾದ ಋಷಿ ಜ್ಞಾನದೃಷ್ಟಿಯಿಂದ ಮಾಲಿನಿ ತಪಸ್ಸನ್ನಾಚರಿಸುವುದನ್ನು ತಿಳಿದುಕೊಳ್ಳುತ್ತಾನೆ. ಮಹಿಷಿಯ ರೂಪದಲ್ಲಿ ತಪಸ್ಸನ್ನಾಚರಿಸುತ್ತಿರುವುದರಿಂದ ನಿನ್ನ ಹೊಟ್ಟೆಯಲ್ಲಿ ಮಹಿಷ ಅಂದರೆ ಕೋಣವೇ ಜನ್ಮತಾಳಲಿ ಎಂದು ಶಪಿಸುತ್ತಾನೆ.

ಇದರ ಫಲವೇ ಮಹಿಷಾಸುರನ ಜನನ. ಮಹಿಷಾಸುರ ಬೆಳೆಯುತ್ತಿದ್ದ. ಒಮ್ಮೆ ವಿದ್ಯುನ್ಮಾಲಿ ದೇವೇಂದ್ರನ ಮೇಲೆ ಯುದ್ಧ ಸಾರುತ್ತಾನೆ. ಯುದ್ಧದಲ್ಲಿ ವಿದ್ಯುನ್ಮಾಲಿಯ ಸೇನೆ ಸೋತು, ಆತ ಸಾವನ್ನಪ್ಪುತ್ತಾನೆ. ಇದರ ಸೇಡು ತೀರಿಸಿಕೊಳ್ಳಲು ಬಾಲಕ ಮಹಿಷ ಹೊರಟಾಗ ಮಾಲಿನಿ ತಡೆದು, ತಪಸ್ಸನ್ನಾಚರಿಸಿ ಶಕ್ತಿ ಸಂಪಾದಿಸಿಕೊಳ್ಳುವಂತೆ ಮಹಿಷನಿಗೆ ಸೂಚಿಸುತ್ತಾಳೆ.

ಅದರಂತೆ ತಪಸ್ಸನ್ನಾಚರಿಸಿ ಸಿಂಹವನ್ನು ಪಳಗಿಸಬಲ್ಲ ಹೆಣ್ಣಿನ ಹೊರತಾಗಿ ಬೇರಾರಿಂದಲೂ ಸಾವು ಬಾರದಂತಹ ವರ ಪಡೆಯುತ್ತಾನೆ. ವರಬಲದಿಂದ ಕೊಬ್ಬಿದ ಮಹಿಷ ದೇವಾದಿ ದೇವತೆಗಳನ್ನು ಸೋಲಿಸುತ್ತಾರೆ. ದೇವತೆಗಳು ಯಥಾಪ್ರಕಾರ ತ್ರಿಮೂರ್ತಿಗಳ ಮೊರೆ ಹೋಗುತ್ತಾರೆ. ತ್ರಿಮೂರ್ತಿಗಳು ಆದಿಮಾಯೆಯನ್ನು ಸ್ತುತಿಸಲು ಸೂಚಿಸುತ್ತಾರೆ

ಸಿಂಹವಾಹಿನಿಯಾಗಿ ಪ್ರಕಟಗೊಳ್ಳುವ ಆದಿಮಾಯೆ ಮಹಿಷಾಸುರನನ್ನು ಕೊನೆಗಾಣಿಸುತ್ತಾಳೆ. ಅಲ್ಲಿಂದ ತರುವಾಯ ಆಕೆ, ಮಹಿಷಾಸುರಮರ್ದಿನಿಯಾಗಿ ಭಕ್ತರ ಹೃದಯಮಂದಿರದಲ್ಲಿ ನೆಲೆಸುತ್ತಾಳೆ.

ಈಕೆ- ಷೋಡಶಿ, ಅಂಬೆ, ಈಶ್ವರಿ, ಚಂಡಿ, ಕಾಳಿ, ಭಗವತೀ, ಮಹೇಶ್ವರಿ, ಮಹಾದೇವಿ, ತ್ರಿಪುರ ಸುಂದರಿ, ದುರ್ಗೆ ಮುಂತಾದ ಹಲವು ಹೆಸರುಗಳಿಂದ ಕರೆಯಲ್ಪಡುತ್ತಾಳೆ. ಚಾಮುಂಡಿ ಮಹಿಷಮಂಡಲವನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡು ಮಹಾಬಲ ಗಿರಿಯ ಮೇಲೆ ನೆಲೆಗೊಂಡಿದ್ದಾಳೆ. ಚಾಮುಂಡಿ ಬೆಟ್ಟವು ಸಮುದ್ರಮಟ್ಟಕ್ಕಿಂತ ಸುಮಾರು-3489 ಅಡಿ ಎತ್ತರದಲ್ಲಿದೆ.

ಮೈಸೂರಿನ ದೊಡ್ಡದೇವರಾಜ ಒಡೆಯರ್ ಅವರು ಬೆಟ್ಟವನ್ನೇರಲು ಬರುವ ಭಕ್ತಾದಿಗಳಿಗೆ ಅನುಕೂಲ ವಾಗಲೆಂದು 1101 ಮೆಟ್ಟಿಲುಗಳನ್ನು ಕಟ್ಟಿಸಿ, 700ನೇ ಮೆಟ್ಟಿಲ ಬಳಿ ಬೃಹತ್ ನಂದಿ ವಿಗ್ರಹವನ್ನು ಸ್ಥಾಪಿಸಿದ್ದಾರೆ. ಆಶ್ವಯುಜ ಶುಕ್ಲಪಕ್ಷದ ನವರಾತ್ರಿಯ ಸಮಯದಲ್ಲಿ ಭಾರತಾದ್ಯಂತ ಚಾಮುಂಡಿ ಆರಾಧನೆ ದುರ್ಗೆಯ ಹೆಸರಿನಲ್ಲಿ ಬಹಳ ವೈಭವಯುತವಾಗಿ ನಡೆಯುತ್ತದೆ.

ನವರಾತ್ರಿ ದಿನಗಳಲ್ಲಿ ಅಷ್ಟಲಕ್ಷ್ಮೀಯರ, ಅಷ್ಟ ದುರ್ಗೆಯರ ಆರಾಧನೆಯನ್ನು ಚಾಮುಂಡಿ ಬೆಟ್ಟದಲ್ಲಿರುವ ದೇಗುಲದಲ್ಲಿ ಮಾಡಲಾಗುತ್ತದೆ. ನಾವ ದಿನವೂ ದೇವಿಗೆ ವಿಶಿಷ್ಟವಾದ ಅಲಂಕಾರಗಳನ್ನು, ಉಡುಗೆ-ತೊಡುಗೆ, ಆಭರಣಗಳಿಂದ ಚಾಮುಂಡೇಶ್ವರಿಯನ್ನು ಸಿಂಗರಿಸಿ ಅವಳ ಮಹಿಮೆಯನ್ನು ಕೊಂಡಾಡುತ್ತಾರೆ. ಇದು ಚಾಮುಂಡೇಶ್ವರಿ ಮೈಸೂರಿನ ಪೂರ್ವದಲ್ಲಿ ಇರುವ ಬೆಟ್ಟದಲ್ಲಿ ನೆಲೆಸಿದ ಕಥೆ.

ಹೆಣ್ಣು ಮನಸ್ಸು ಮಾಡಿದರೆ ಸರ್ವ ಶಕ್ತಳಾಗಿ ತನ್ನ ಜೀವನದಲ್ಲಿ ಕಂಠಕವಾಗುವ ಎಂತಹ ದುರುಳರನ್ನೂ ಎದುರಿಸುವ ಮನೋ ಧೈರ್ಯವನ್ನು ಬೆಳೆಸಿಕೊಳ್ಳುತ್ತಾಳೆ. ಅವಳಿಗೆ ಅಂತಹ ಧೈರ್ಯವನ್ನು ತುಂಬುವ ತಂದೆ ತಾಯಿ ಮತ್ತು ಸಮಾಜದ ಅಗತ್ಯವಿದೆ. ಇಂದಿನ ದಿನಗಳಲ್ಲಿ ಹೆಣ್ಣು ಮಕ್ಕಳು ನಾನಾ ರೀತಿಯ ಶೋಷಣೆಗೆ ಒಳಗಾಗುತ್ತಿರುವುದನ್ನು ನೋಡುತ್ತಿದ್ದೇವೆ. ಇದಕ್ಕೆ ಮುಖ್ಯ ಕಾರಣ ಸಮಾಜದ ಪ್ರಕ್ಷುಬ್ಧ ಮನಸ್ಥಿತಿ ಮತ್ತು ಹೆಣ್ಣು ಮಕ್ಕಳನ್ನು ಗೌರವಯುತವಾಗಿ ನಡೆಸಿಕೊಳ್ಳಲು ಬಾರದೇ ಇರುವ ಆಧುನಿಕ ಮಹಿಷಾಸುರರು.

ಎಲ್ಲಕ್ಕಿಂತ ಮೊದಲು ತಂದೆ ತಾಯಿಗಳಾಗಿ ನಮ್ಮ ಮಕ್ಕಳಿಗೆ ಬದುಕಿನ ಸಂಸ್ಕಾರವನ್ನು ಹೇಳಿಕೊಡಬೇಕು. ಹೆಣ್ಣು ಮಕ್ಕಳನ್ನು ಗೌರವಿಸುವುದನ್ನು ಅವರನ್ನು ಒಳ್ಳೆಯ ರೀತಿಯಲ್ಲಿ ನಡೆಸಿಕೊಳ್ಳುವುದನ್ನು ನಮ್ಮ ಮಕ್ಕಳಿಗೆ ಹೇಳಿಕೊಡಬೇಕು. ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಸಂಸ್ಕಾರ ಮತ್ತು ಜೀವನದ ಮೌಲ್ಯವನ್ನು ಹೇಳಿಕೊಟ್ಟಾಗ ಅವರು ಮತ್ತೊಬ್ಬರನ್ನು ಸುಸಂಸ್ಕೃತರಾಗಿ ನಡೆಸಿಕೊಳ್ಳುತ್ತಾರೆ. ಎಲ್ಲಕ್ಕಿಂತ ಹೆಚ್ಚಾಗಿ ಎಂತಹದೇ ಸಮಯದಲ್ಲೂ ಕೂಡ ಆತ್ಮ ರಕ್ಷಣೆ ಮಾಡಿಕೊಳ್ಳುವಂತಹ ಯಾವುದಾದರೂ ಒಂದು ಕಲೆಯನ್ನು ನಮ್ಮ ಹೆಣ್ಣು ಮಕ್ಕಳಿಗೆ ಕಲಿಸಬೇಕು. ಆಪತ್ತಿನ ಸಮಯದಲ್ಲಿ ಇದು ಖಂಡಿತಾ ಅವರನ್ನು ಕಾಪಾಡುವುದರಲ್ಲಿ ಸಂಶಯವಿಲ್ಲ. ಬರಿ ವಿದ್ಯೆ ಇಂದು ಪ್ರಾಣ ಉಳಿಸುವುದಿಲ್ಲ. ಇನ್ನಾದರೂ ಹೆಣ್ಣು ಮಕ್ಕಳಿಗೆ ಪೂರಕವಾಗಿರುವ ಸುರಕ್ಷಿತ ಸಮಾಜ ನಿರ್ಮಿಸುವಲ್ಲಿ ನಾವೆಲ್ಲರೂ ಪಾಲ್ಗೊಳ್ಳೋಣ.

ಪದಬಂಧ



ಎಡದಿಂದ ಬಲಕ್ಕೆ

2. ಇದು ಅತಿ ತೀಕ್ಷ್ಣವಾದದ್ದು (3)
4. ಅಕ್ಕನ ಗಂಡನಿಂದ ತೊಡಗಿದ ಮನ್ಮಥ (3)
6. ಸರದ ಮಧ್ಯೆ ಸಿಲುಕಿದೆ ಆದರ (3)
7. ಕದನಕ್ಕೆ ಮತ್ತೊಂದು ಹೆಸರು (3)
9. ತಾಪ ನೀಡುವ ಸೂರ್ಯ (3)
11. ವಿಶ್ವದಲ್ಲೆಲ್ಲ ನಡೆಯುವ ಕಲಹ (3)
13. ಸೈನಿಕರ ಕಸರತ್ತು ಅಸ್ತವ್ಯಸ್ತವಾಗಿ ಬಂದಿದೆ (4)
14. ಒಳ್ಳೆಯ ನಡತೆ (4)
15. ಮುಸಲ್ಮಾನ ದೊರೆ (3)
17. ಪ್ರಕೃತಿಯ ಬಣ್ಣ (3)
19. ಗುಂಪು ಅಥವಾ ಆಧಾರ (3)
21. ಒಂದು ಬಗೆಯ ಬಳ್ಳಿ, ಹೂವು (3)
22. ಮರದ ಟಿಸಿಲು (3)
23. ಬಟ್ಟೆಗಳಿಗೆ ಮಾಡುವ ಹೆಣಿಗೆಯ ಅಲಂಕಾರ (3)

ಎಡದಿಂದ ಬಲಕ್ಕೆ

1. ದೇಹಕ್ಕೆ ಆದ ಸುಸ್ತು (3)
2. ಯಾಮ, ಜಾವ (3)
3. ರಸಾನುಭವಕ್ಕೆ ಉಂಟಾದ ಅಡ್ಡಿ (4)
4. ನಮ್ಮ ದೇಶದ ಹೆಸರು (3)
5. ಜನ ಮಾಡಿದ ಜೋಪಾನ (3)
8. ಮತ್ತೆ ಬರು ಎನ್ನುವುದನ್ನು ಹೀಗೆ ಹೇಳಿ (5)
10. ಬಗೆಬಗೆಯಲ್ಲಿ ಸೇವೆ ಮಾಡುವ ಆಳು (5)
11. ಕಚೇರಿಯಲ್ಲಿ ಜನರಿಗೆ ಕಂಡ ಸೇವಕ (3)
12. ಈಟಿಯೊಂದು ಅಸ್ತವ್ಯಸ್ತವಾಗಿದೆ (3)
16. ನಿಜವಾದುದು (4)
17. ಕರಾವಳಿಯ ಬ್ರಾಹ್ಮಣರಲ್ಲಿ ಒಂದು ಪಂಗಡ (3)
18. ಹಿಂದಿಯ ತಾಯಿಯೊಂದಿಗೆ ಬಂದಿರುವ ಮುಂಡಾಸು (3)
19. ದೀಪಗಳಿಂದ ಎತ್ತುವ ನೀರಾಜನ (3)
20. ಶಬ್ದ ಮಾಡುವ ಎಂದರ್ಥ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಮಹರ್ಷಿ 4. ಚಾಣಾಕ್ಷ 5. ಪೌರಾಣಿಕ 6. ಬರಲು 7. ರಿವಾಜು 9. ಸಂಕಟ 10. ಗಿರಾಕಿ 12. ಗೊಂದಲ 14. ಹಂಬಲ 16. ಇಣಚಿ 18. ಅನಂಗ 20. ಮಡಿವಂತ 21. ಶಕಟ 22. ಕಡಲು

ಮೇಲಿನಿಂದ ಕೆಳಕ್ಕೆ: 2. ಹತ್ತಿರ 3. ಆರಾಧಕ 4. ಚಾಕರಿ 6. ಬಡಗಿ 8. ವಾಗ್ವಾದ 11. ರಾವಣ 13. ಲವಂಗ 15. ಬಲವಂತ 17. ಚಿಮಟ 19. ನಂಜುಂಡ

• ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಭಾಷೆಗಿಂತ ನಗು ಮೊದಲು!

'ಅ ಡೇ ವಿಥೌಟ್ ಲೌಫ್ಟರ್ ಇಸ್ ಅ ಡೇ ವೇಸ್ಟೆಡ್' ಅಂತ ಚಾರ್ಲೀ ಚಾಪ್ಲಿನ್ ಹೇಳಿದ್ದಾರೆ. ಆದರೆ ಜಾಸ್ತಿ ನಕ್ಕರೆ, ಆಸ್ಪತ್ರೆಗೆ ಕರ್ಕೊಂಡು ಹೋಗುವುದು ಕನ್‌ಫರ್ಮ್ ಬಿಡಿ. ಹಾಗೇ, ಮನೆಯಲ್ಲಿ

ನಾಯಿ, ಬೆಕ್ಕು, ಹಸು ಏನಾದರೂ ಇದ್ದರೆ, ಅದು ನಿಮ್ಮನ್ನು ನೋಡಿ ಒಮ್ಮೊಮ್ಮೆ ನಗುತ್ತಿರುತ್ತದೆ. ಸರಿ ನಾವು ಮನುಷ್ಯರು ನಮಗೆ ನಾಗರೀಕತೆಯಿದೆ, ಹಾಗೇ ಹೀಗೇ ಇನ್ನೇನೋ ಇದೆ ಎಂಬ ದೊಡ್ಡದೊಡ್ಡ ಕೊಂಬನ್ನು ಹೊತ್ತು ಮೆರೆಯುತ್ತಿದ್ದೇವೆ. ನಮಗೆ ಭಾಷೆ ಬರುತ್ತೆ ಅದರ ಜತೆ ನಗುವೂ ಬರುತ್ತದೆ. ಆದರೆ ಎಂದಾದರೂ ಯೋಚಿಸಿದ್ದೀರಾ? ನಗು ಹೇಗೆ ಬೆಳೀತು, ಮನುಷ್ಯ ಮೊದಲು ನಗುವುದನ್ನು ಕಲಿತನೋ? ಮಾತಾಡುವುದನ್ನೋ? ಎಂಬ ಪ್ರಶ್ನೆ ಎದ್ದಿದ್ದರೆ. ಅದಕ್ಕೆ ಉತ್ತರ ಇಲ್ಲಿದೆ. ಲಕ್ಷಾಂತರ ವರ್ಷಗಳ ಹಿಂದೆಯೇ ನಗುವುದನ್ನು ಕಲಿತಿದ್ದಾರೆ. ಅದೂ ಭಾಷೆ ಬರುವುದಕ್ಕಿಂತ, ಇನ್ನೂ ನಮ್ಮ ಜತೆ ಪ್ರಾಣಿಗಳು ನಗುತ್ತವೆಯಲ್ಲ ಎಂದುಕೊಂಡರೆ, ಲಕ್ಷಾಂತರ ವರ್ಷಗಳಹಿಂದೆ ಜೀವ ವಿಕಾಸವಾಗುತ್ತಿರುವ ಸಮಯದಲ್ಲಿ ಹಲವಾರು ಪ್ರಾಣಿ, ಪಕ್ಷಿ ಮತ್ತು ಮನುಷ್ಯರು ಒಂದೇ ರೀತಿಯ ಜೀನ್‌ಗಳನ್ನು ಹಂಚಿಕೊಂಡಿದ್ದಕ್ಕೆ, ಈ ರೀತಿಯಾಗುತ್ತದೆ.

ಪುಸ್ತಕ ಲೋಕ

ಆ 86ನೇ ಹಳ್ಳಿ

'ಆ 86ನೇ ಹಳ್ಳಿ' ಬಾಳಾಸಾಹೇಬ ಲೋಕಾಪುರ ಅವರ ಅನುವಾದಿತ ಕಾದಂಬರಿಯಾಗಿದೆ. ಈ ಕೃತಿಯು ಇಂಗ್ಲಿಷ್ ಮೂಲದಾಗಿದ್ದು, ಸೇನ ದೇಸಾಯಿ ಗೋಪಾಲ್ ಲೇಖಕರಾಗಿದ್ದಾರೆ. ಕೃತಿ ಕುರಿತು ಬೆನ್ನುಡಿಯಲ್ಲಿ ಲೇಖಕರು ಹೀಗೆಹೇಳಿದ್ದಾರೆ: ಆ 86ನೇ ಹಳ್ಳಿ ಕೃತಿಯನ್ನು ಪತನಮುಖಿ ಕಾದಂಬರಿ ಎಂದು ಕರೆಯಬಹುದು. ಊರು ಮುಳುಗುತ್ತಿದೆ. ಜನ ದಿಕ್ಕೆಡಿಗಳಾಗುತ್ತಿದ್ದಾರೆ. ಅವರು ಕಟ್ಟಿಕೊಂಡ ಭೌತಿಕ



ಬದುಕು ಪತನಗೊಳ್ಳುತ್ತಿದೆ. ಮನೆ ಮಾರುಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಹೋರಾಟದಲ್ಲಿ ಮಕ್ಕಳು ಸಾವನ್ನಪ್ಪುತ್ತಿದ್ದಾರೆ. ಮಹಾಪೂರದಲ್ಲಿ ಅಮಾಯಕರು ಹೊಳೆ ಪಾಲಾಗುತ್ತಿದ್ದಾರೆ. ಹಳ್ಳಿಯ ಹೆಮ್ಮೆಯಾದ ವಾಡೆಯಲ್ಲಿ ನೀರು ನುಗ್ಗಿ ಅದು ತನ್ನ ಅದು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ. ಇದೆಲ್ಲವೂ ಪತನವೇ. ಇಲ್ಲಿ ರಾಜ ನಾಯಕ ಎನ್ನುವ ದೊಡ್ಡ ಮನೆತನದ ಸಭ್ಯನ ಒಂದು ಸಣ್ಣ ಪ್ರಮಾದದಿಂದ ಉಂಟಾಗುವ ಜಾರುವಿಕೆ ಅವನ ಸಾವಿನಿಂದ ಅಂತ್ಯವಾಗುತ್ತದೆ. ದಯಾ ಎಂಬ ಧೀರ ಮಹಿಳೆ ಜಾತ್ಯತೀತ ಮನೋಭಾವದ ತಾಯಿ ತನ್ನ ಗಂಡನಿಂದ ಸೂಳೆಯ ಹೊಟ್ಟೆಯಲ್ಲಿ ಹುಟ್ಟಿದ ಹೆಣ್ಣುಮಗುವನ್ನು ತನ್ನ ಮಗಳೆಂದು ಅಪ್ಪಿಕೊಳ್ಳುವ ತನ್ನ ಮಕ್ಕಳಾದ ರೋಹನ ಮತ್ತು ಜೈ ಅವರೊಂದಿಗೆ ಅವಳನ್ನು ಕೂಡಾ ಸರಿ ಸಮವಾಗಿ ಪ್ರೀತಿಸುವ ಮಹಾತಾಯಿಯ ಆದರ್ಶ ಓದುಗರ ಮನ ಗೆಲ್ಲುತ್ತದೆ. ಸಮರ ಚಂದ್ರನಂತಹ ಸಾಧಾರಣ ಸರಕಾರಿ ನೌಕರ ತನ್ನ ಹೋರಾಟ ಮತ್ತು ಜನಮುಖಿ ಧೋರಣೆಯಿಂದ ಎಂಎಲ್‌ಎ ಆಗಿ ಆಯ್ಕೆಯಾಗುವುದು ಕೂಡಾ ಆಶಾದಾಯಕವಾಗಿದೆ ಎಂಬುವುದನ್ನು ಈ ಪುಸ್ತಕದಲ್ಲಿ ನೋಡಬಹುದು.

ದಿನಕ್ಕೊಂದು ಪ್ರಶ್ನೆ

• ಎಲ್.ಪಿ.ಕುಲಕರ್ಣಿ, ಬಾದಾಮಿ

- ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಜಿಯೋಮ್ಯಾಗ್ನೆಟಿಸಂ ಎಲ್ಲಿದೆ?
- ಎ. ದೆಹಲಿ.
- ಬಿ. ಕೊಡೈಕೆನಾಲ್.
- ಸಿ. ಹಾಸನ.
- ಡಿ. ಮುಂಬೈ.

ಉತ್ತರ: ಡಿ. ಮುಂಬೈ.

ಮಾಹಿತಿ

ಕಾಂತೀಯ ಬಲಗಳನ್ನು ಅಳೆಯಲು ಬಳಸುವ ಸಾಧನವೇ ಮ್ಯಾಗ್ನಟೋಮೀಟರ್. ವಿಶೇಷವಾಗಿ ಭೂಮಿಯ ಕಾಂತೀಯತೆಯನ್ನು ಇದರಿಂದ ಅಳೆಯಲಾಗುತ್ತದೆ. ಮುಂಬೈ ಮೂಲದ 'ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಜಿಯೋಮ್ಯಾಗ್ನೆಟಿಸಂ'ನ ಭಾರತೀಯ ವಿಜ್ಞಾನಿಗಳು ಸ್ಥಳೀಯ ಓವರ್‌ಹೌಸರ್ ಮ್ಯಾಗ್ನೆಟೋಮೀಟರ್ (ಪ್ರಪಂಚದಾದ್ಯಂತ ಎಲ್ಲ ಮ್ಯಾಗ್ನೆಟಿಕ್ ವೀಕ್ಷಣಾಲಯಗಳಿಂದ ವ್ಯಾಪಕವಾಗಿ ಬಳಸಲಾಗುವ ಅತ್ಯಂತ ನಿಖರವಾದ ಮ್ಯಾಗ್ನೆಟೋಮೀಟರ್ಗಳಲ್ಲಿ ಒಂದಾಗಿದೆ) ಅನ್ನು ಅಭಿವೃದ್ಧಿಪಡಿಸಿದ್ದಾರೆ. ಇದು ಪ್ರಪಂಚದಾದ್ಯಂತ ಎಲ್ಲಾ ಮ್ಯಾಗ್ನೆಟಿಕ್ ವೀಕ್ಷಣಾಲಯಗಳಿಂದ ವ್ಯಾಪಕವಾಗಿ ಬಳಸಲಾಗುವ ಅತ್ಯಂತ ನಿಖರವಾದ ಮ್ಯಾಗ್ನೆಟೋಮೀಟರ್‌ಗಳಲ್ಲಿ ಒಂದಾಗಿದೆ. ಅಲಿಬಾಗ್ ಮ್ಯಾಗ್ನೆಟಿಕ್ ಅಬ್ಸರ್‌ವೇಟರಿಯಲ್ಲಿ (ಎಮ್.ಒ) ಸ್ಥಾಪಿಸಲಾದ ಸಂವೇದಕವು ವಾಣಿಜ್ಯ ಒವಿಎಚ್ ಮ್ಯಾಗ್ನೆಟೋಮೀಟರ್‌ಗಳ ಮೇಲೆ ಭಾರತದ ಅವಲಂಬನೆಯನ್ನು ಕಡಿಮೆ ಮಾಡುತ್ತದೆ. ಅವುಗಳನ್ನು ಇಲ್ಲಿಯವರೆಗೆ ಭಾರತ ಆಮದು ಮಾಡಿಕೊಳ್ಳುತ್ತಿತ್ತು.

ಮಾತನಾಡುವ ಬಳೆಗಾರನ ಬಳೆಗಳು

• ನಾರಾಯಣಸ್ವಾಮಿ ಸಿ.ಎಸ್

ಒಂದು ಸುಂದರ ಹಾಡಿನ ಸಾಲಿನಲ್ಲಿ ಇರುವ ಹಾಗೆ ಬಳೆಗಾರ ಚೆನ್ನಯ್ಯ ಬಾಗಿಲಿಗೆ ಬಂದಿಹನು ಒಳಗೆ ಬರಲಪ್ಪಣೆಯು ಇದೆಯೇ ಎಂದು ಕೇಳುವ ಹಾಡು ನಿಜಕ್ಕೂ ಮನಮುಟ್ಟುತ್ತದೆ. ಹೌದು ಹಲವಾರು ಜನ ಮಾಯವಾದ ಹಾಗೆ ನಮ್ಮ ಈ ಬಳೆಗಾರ ಸಹ ಮಾಯವಾಗಿದ್ದಾನೆ. ಆಷಾಢ ಮುಗಿದು ಶ್ರಾವಣ ಬಂತು ಎಂದರೆ ಹಬ್ಬಗಳ ಸಾಲು ಹಾಗಾಗಿ ಮನೆಯ ಹೆಣ್ಣು ಮಕ್ಕಳಿಗೆ ಬಳೆಯನ್ನು ತೊಟ್ಟಿಕೊಳ್ಳಲು ಹಣವನ್ನು ಕೊಡುತ್ತಿದ್ದರು. ಅಷ್ಟೇ ಅಲ್ಲ ನಿಜಕ್ಕೂ ಬಳೆ ಮಾರುವ ಮನೆಗೆ ಬಂದು ಬಳೆ ತೊಳಿಸುತ್ತಿದ್ದ. ಅದರಲ್ಲೂ ನಾನಿದ್ದ ಊರಿನಲ್ಲಿ ಒಬ್ಬ ಬಳೆ ಮಾರಲು ಬರುತ್ತಿದ್ದ ಅವನು ರಾಗದಲ್ಲಿ ಬಳೆಯನ್ನು ಕೂಗುತ್ತಿದ್ದ ರೀತಿಯೇ ಚಂದ ಬಳೆರಿ ಬಳೆ ಬಳೆ ಬಳೆರಿ ಬಳೆ ಬಳೆ ಅವನು ಕೂಗಲು ಶುರು ಮಾಡಿದ ಎಂದರೆ ಮನೆಯಲ್ಲಿದ್ದ ಹೆಣ್ಣು ಮಕ್ಕಳೆಲ್ಲ ಹೊರಗೆ ಬಂದು, ಅವನ ಬುಟ್ಟಿಯಲ್ಲಿ ಇದ್ದಂತಹ ಬಣ್ಣ ಬಣ್ಣದ ಆ ಬಳೆಗಳನ್ನು ನೋಡದೆ ಚಂದ. ಈಗಿನ ಹಾಗೆ ತೆಗೆದುಕೊಳ್ಳುತ್ತಿದ್ದೆವು. ನಿಜಕ್ಕೂ ಆಗ ಹಣಕ್ಕೆ ಬಡತನ ಇದ್ದರೂ ಆ ಚಿಕ್ಕಚಿಕ್ಕ ವಸ್ತುಗಳು ಬಹಳ ಸಂತೋಷವನ್ನು ಕೊಡುತ್ತಿದ್ದು. ಈಗ ಆನ್ಲೈನ್ನಲ್ಲಿ ಏನೇ ತೆಗೆದುಕೊಂಡು ಆ ಖುಷಿ ಸಿಗುವುದಿಲ್ಲ.

ಅದಕ್ಕಿಂತ ಹೆಚ್ಚಾಗಿ ಈ ಬಾಗಿನೆಗಳ ಜೊತೆ ಕೊಡುತ್ತಿದ್ದ ಆ ಬಳೆಗಳು ಹಾಗೂ ಅಲಂಕಾರಿಕ ವಸ್ತುಗಳ ಮೇಲೆ ಏನೋ ಒಂದು ರೀತಿಯ ವ್ಯಾಮೋಹ ಎಷ್ಟು ಚೆನ್ನಾಗಿದ್ದು ಕೊಟ್ಟರು ಗೊತ್ತಾ ಅಂತ ಮುಂದಿನ ಹಬ್ಬ ಬರುವವರೆಗೆ ಅದನ್ನು ಜೋಪಾನ ಮಾಡಿ ಹಾಕಿಕೊಳ್ಳುತ್ತಿದ್ದೆವು. ಈಗಿನ ಕಾಲಕ್ಕೆ ಆ ಗಾಜಿನ ಬಳೆಗಳು ಬಂಗಾರದ ಬಳೆಗಳಾಗಿ ಹೋಗಿದೆ. ಬಳಿಹಾಕಿಕೊಳ್ಳುವವರ ಸಂಖ್ಯೆಯೇ ಕಡಿಮೆ ಅದರ ಜೊತೆ ಬಳೆಗಾರನ ಮಾತು ಇಲ್ಲವೇ ಇಲ್ಲ. ಹಸಿರು ಗಾಜಿನ ಬಳೆಗಳೆ ಎನ್ನುವ ಹಾಗೆ ಆ ಕೈ ತುಂಬಾ ಬಳೆಗಳು ಇದ್ದಂತಹ ಕೈಗಳನ್ನು ನೋಡುವುದೇ ಚೆಂದ. ಮೊದಲ ಹಸಿರು, ಕೆಂಪು, ನೀಲಿ ಅಥವಾ ಮದುವೆ ಸಂದರ್ಭದಲ್ಲಿ ಕಪ್ಪು ಬಣ್ಣದ ಬಳೆಗಳು ನೋಡಲು ಸಿಗುತ್ತಿತ್ತು. ಆದರೆ ಈಗ ಮಾರುಕಟ್ಟೆಗೆ ವಿವಿಧ ರೀತಿಯ ಬಳೆಗಳು ಲಗ್ಗೆ ಇಟ್ಟಿದೆ.

ಬಳೆಯನ್ನು ಕೇವಲ ಅಂಗಡಿಯಿಂದ ತರುವುದು ಅಷ್ಟೇ ಅಲ್ಲ. ಆತ ಕೈಗೆ ಬಳೆ ತೊಡಿಸುತ್ತಿದ್ದ ಅವನು ತೋಡಿಸುತ್ತಿದ್ದ ರೀತಿಯೇ ಒಂದು ರೀತಿಯ ಬಲು ಸೊಬಗು. ಕಾರಣ ಕೈಯಲ್ಲಿ ತುಂಬಾ ದಿನ ಬಳೆ ಉಳಿಯಬೇಕು ಎಂದು ಕೈಗೆ ಎಷ್ಟು ಚಿಕ್ಕ ಬಳೆಯನ್ನು ತೋಡಿಸಲು ಸಾಧ್ಯವೊ ಅಷ್ಟು ಚಿಕ್ಕ ಬೆಳೆಯನ್ನು ತೊಡಿಸುತ್ತಿದ್ದ. ಅಷ್ಟೇ ಅಲ್ಲ ಆ ಬಣ್ಣಗಳನ್ನು ಹೊಂದಿಕೊಳ್ಳುವ ಹಾಗೆ ತೊಡಿಸುತ್ತಿದ್ದ ಆ ರೀತಿ ತುಂಬಾ ಚೆನ್ನಾಗಿತ್ತು ನಮ್ಮ ಸೀರೆಯ ಬಣ್ಣ ಯಾವುದು? ಯಾವ ಹಬ್ಬಕ್ಕೆ ಯಾವ ಸೀರೆಯನ್ನು ತೆಗೆದುಕೊಂಡಿರಿ ಎಂದು ಕೇಳಿ ಅದಕ್ಕೆ ತಕ್ಕ ಹಾಗೆ ಬಳೆಯನ್ನು ತೋಡಿಸುತ್ತಿದ್ದ. ಅಷ್ಟೇ ಅಲ್ಲ ಅವನೊಂದು ರೀತಿಯ ಪೋಸ್ಟ್‌ಮ್ಯಾನ್ ಎಂದರೆ ತಪ್ಪಾಗುವುದಿಲ್ಲ. ಕಾರಣ ನಮ್ಮ ಅಕ್ಕಪಕ್ಕದ ಊರಿನ ಎಲ್ಲ ವಿಷಯವನ್ನು ಹಾಗೆ ನಮ್ಮ ನೆಂಟರ ಮನೆಗೆ ಹೋಗಿದ್ದರೆ, ಅಲ್ಲಿಯ ವಿಷಯವನ್ನು ಸಹ ಬಂದು ಹೇಳುತ್ತಿದ್ದ. ಈಗ ತಾನೇ ಅಕ್ಕನ ಮನೆಗೆ ಹೋಗಿದ್ದೆ ಅಕ್ಕ ಬಳೆ ತೊಟ್ಟಿಕೊಂಡಿರುವ ವಿಷಯಗಳನ್ನು ಕೇಳುವಾಗ ನಮಗೆ ನಮ್ಮ ಸಂಬಂಧಿಕರ ನೆನಪಾಗುತ್ತಿತ್ತು. ಕೈ ತುಂಬಾ ಬಳೆಗಳು ಆ ಬಳೆಗಳನ್ನು ನೋಡಿದಾಗ ಕಣ್ಣುಗಳು ಆನಂದದಿಂದ ಅರಳುತ್ತಿತ್ತು. ಅದರ ಶಬ್ದ ಸಂಗೀತದ ಹಾಗೆ ಕೇಳುತ್ತಿತ್ತು. ನೋಡಿ, ತೊಟ್ಟಿಕೊಳ್ಳುವುದು ಗಾಜಿನ ಬಳಿಯಾದರೂ, ಹೆಣ್ಣು ಮಕ್ಕಳು ಹೇಗೆ ನಾಜೂಕಾಗಿ ಕೆಲಸ ಮಾಡಬೇಕು ಎಂದು ಗಾಜಿನ ಬಳೆಗಳು ನಮಗೆ ಹೇಳಿಕೊಡುತ್ತಿದ್ದ ದೊಡ್ಡ ಪಾಠ.

ಗಾಜಿನ ಬಳೆ ಮೇಲಾಗಿ ಶಬ್ದ ಹೆಚ್ಚು ಆದರೂ ಸಹ ಶಬ್ದ ಮಾಡದೆ ಒಡೆಯದೆ ಅದನ್ನು ಜೋಪಾನ ಮಾಡುವ ಒಂದು ರೀತಿಯ ದೊಡ್ಡ ಕೆಲಸ ಅಂದರೆ ತಪ್ಪಾಗುವುದಿಲ್ಲ. ನಮಗೆಲ್ಲ ಬಳೆಗಾರ ಬಂದಾಗ ಏನು ನಾವು ಬಳೆಗಳನ್ನು ಹಾಕಿಸಿಕೊಳ್ಳುತ್ತಿದ್ದೆವೊ ಅದೇ ಬಳೆಗಳು ಮತ್ತೆ ಬಳೆ ಬೇಕು ಎಂದರೆ ನಮಗೆ ಜಾತ್ರೆ ಬರಬೇಕಿತ್ತು ಅಥವಾ ಬಳೆಗಾರನೇ ಬರಬೇಕಿತ್ತು. ಇಲ್ಲವಾದರೆ ಅಪ್ಪ ಪೇಟೆಗೆ ಹೋದಾಗ ಬಳೆಗಳನ್ನ ತರುತ್ತಿದ್ದರು. ನಮಗೆ ಬಳೆಯನ್ನ ತೆಗೆದುಕೊಳ್ಳಿ ಎಂದು ಹಿರಿಯರು ನೀಡಿದ ಹಣದಿಂದ ಬಳೆಯ ಜೊತೆ ಟೇಪು ಹಣೆಯ ಬುಟ್ಟುಗಳು ಎಲ್ಲವನ್ನ ನನಗೆ ತಿಳಿದು ಮಟ್ಟಿಗೆ 10 ರುಪಾಯಿ ಡಜನ್‌ಗಳು ಬಳೆ ಸಿಗುತ್ತಿತ್ತು. ಆದರೆ ಈಗ ಗಾಜಿನ ಬಳೆಯ ಬೆಲೆಯೇ 500 ದಾಟಿದೆ ಎಂದರೆ ಆಶ್ಚರ್ಯವಾಗುತ್ತದೆ. ಹೌದು ಅದರ ಮೇಲೆ ಹರಳುಗಳು ಹಾಗೂ ವಿನ್ಯಾಸಗಳನ್ನು ಮಾಡಿರುವುದರಿಂದ ಗಾಜಿನ ಬೆಲೆಯೇ 500 ದಾಟಿದೆ ಎಂದರೆ ಏನು ಹೇಳಬೇಕು ತಿಳಿಯದು.

ಆದರೂ ಕೈ ತುಂಬಾ ಬಳೆಗಳನ್ನು ಹಾಕಿ ನಮ್ಮ ಸಂಸ್ಕೃತಿಯ ಉಡುಗೆಯನ್ನು ತೊಟ್ಟ ಹೆಣ್ಣು ಮಕ್ಕಳನ್ನು ನೋಡದೆ ಒಂದು ರೀತಿಯಾದಂತಹ ಆನಂದ. ಕೊನೆ ಪಕ್ಷ ಈ ಹಬ್ಬದ ದಿನದಲ್ಲಾದರೂ ನಮ್ಮ ಹೆಣ್ಣು ಮಕ್ಕಳು ಆ ರೀತಿ ಅಲಂಕರಿಸಿ ಓಡಾಡಲಿ ಎನ್ನುವ ಆಸೆ ಪ್ರತಿಯೊಬ್ಬ ಪೋಷಕರು. ಅದರಲ್ಲೂ ಅಜ್ಜ ಅಜ್ಜಿ ಇದ್ದರೆ ಆ ಹೆಣ್ಣು ಮಕ್ಕಳು ಈ ರೀತಿ ಅಲಂಕರಿಸಿದಾಗ ಅವರ ಖುಷಿಯ ಬೇರೆ. ನಮ್ಮ ಹಿಂದಿನ ಕಾಲದಲ್ಲಿ ಮದುವೆಯಾದ ಹೆಣ್ಣು ಮಗಳು ತಿಂಗಳವರೆಗೆ ಆ ಮದುವೆಯಾದ ಬಳೆಗಳನ್ನು ತೆಗೆಯುವ ಹಾಗೆ ಇರಲಿಲ್ಲ. ಆಕೆಗೆ ಕೈ ತುಂಬಾ ಬಳೆಗಳನ್ನು ತೋಡಿಸುತ್ತಿದ್ದರು. ಇದರ ಹಿಂದೆ ಒಂದು ವಿಷಯ ಇದೆ ಏನಪ್ಪಾ ಅಂದರೆ ಅವಳು ಆ ಮನೆಗೆ ಹೊಂದಿಕೊಳ್ಳಲು ಸಮಯ ಬೇಕು. ಹಾಗಾಗಿ ಅವಳಿಗೆ ಸಮಯ ಕೊಡಿ ಎನ್ನುವ ಒಂದು ಸಾಮಾಜಿಕ ತಿಳುವಳಿಕೆಯನ್ನು ಅದು ಹೇಳುತ್ತಾ ಹೋಗುತ್ತದೆ. ಅಷ್ಟೇ ಅಲ್ಲ ಅವರ ಮನೆಗೆ ಬರುವವರು ಸಹ ಆಕೆ ಮದುಮಗಳು ಎಂದು ತಿಳಿಯಲಿ ಎನ್ನುವ ಸಂಕೇತ ಈ ಬಳೆದ್ದಾಗಿತ್ತು.

ಹಾಗಾಗಿ ನಮ್ಮ ಹೆಣ್ಣು ಮಕ್ಕಳಿಗೆ ವಿಶೇಷವಾಗಿ ಋತುಮತಿಯಾದಾಗ, ಮದುವೆ ಸಂದರ್ಭ ಮತ್ತು ಸೀಮಂತದ ಸಮಯದಲ್ಲಿ ವಿಶೇಷವಾಗಿ ಆಕೆಗೆ ಬಳೆಯನ್ನು ತೊಡಿಸಲಾಗುತ್ತದೆ. ಅವಳಿಗೂ ಅವಳು ವಿಶೇಷ ಎಂದು ತಿಳಿಯಬೇಕು ಎಂಬುದು ಅದರ ಹಿಂದಿನ ಉದ್ದೇಶ. ಹಾಗಾಗಿ ಬಳೆ ಎಂದರೆ ಕೇವಲ ಬಳೆಯಲ್ಲ, ಅದರ ಹಿಂದೆ ಹಲವಾರು ಕಥೆಗಳಿದೆ ಹಾಗೂ ನಾವು ಬಳೆಗಳನ್ನು ಹಾಕುವುದರಿಂದ ನಮ್ಮ ಆರೋಗ್ಯ ವೃದ್ಧಿಯಾಗುತ್ತದೆ. ಹಾಗಾಗಿ ಯಾರೆಲ್ಲ ಈ ಸಂಪ್ರದಾಯವನ್ನು ಬಿಟ್ಟಿದ್ದೀರೋ ದಯವಿಟ್ಟು ಮತ್ತೆ ಬಳೆಗಳನ್ನು ಹಾಕಲು ಆರಂಭಿಸಿ ಹಾಗೂ ಯೋಚನೆ ಮಾಡಿ.

ಸಮಾಚಾರ ಸಣ್ಣದಲ್ಲ

ರಾಷ್ಟ್ರಮಟ್ಟಕ್ಕೆ ಕೊಡಗು ಹಾಕಿ ತಂಡ ಆಯ್ಕೆ

ಕುಶಾಲನಗರ: ಕೊಡಗು ಜಿಲ್ಲಾ ತಂಡವು ಬೆಂಗಳೂರಿನಲ್ಲಿ ಸೋಮವಾರ ನಡೆದ ರಾಜ್ಯ ಸರಕಾರಿ ನೌಕರರ ಕ್ರೀಡಾಕೂಟದ ಪುರುಷರ ಹಾಕಿ ಟೂರ್ನಿಯಲ್ಲಿ ಪ್ರಶಸ್ತಿ ತನ್ನದಾಗಿಸಿಕೊಂಡಿತು. ಈ ಮೂಲಕ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಯಿತು. ಶಾಂತಿನಗರದ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಕೊಡಗು ತಂಡವು ಬೀದರ್ ಜಿಲ್ಲಾ ತಂಡವನ್ನು 5-0 ಗೋಲುಗಳಿಂದ ಮಣಿಸಿತು. ವಿಜೇತ ತಂಡದ ಪರವಾಗಿ ಸತೀಶ್, ಶ್ರೀನಿವಾಸ್ ರೈ, ಪೂಣಚ್ಚ, ಜಾಗೃತ್, ಮಂಜುನಾಥ್ ತಲಾ ಒಂದೊಂದು ಗೋಲು ಗಳಿಸಿದರು. ಸೆಮಿಫೈನಲ್‌ನಲ್ಲಿ ಕೊಡಗು, ಬೆಂಗಳೂರು ನಗರ ತಂಡವನ್ನು 5-0 ಗೋಲುಗಳ ಅಂತರದಿಂದ ಮಣಿಸಿತು.

ಜಪಾನ್ ಓಪನ್: ಭಾರತಕ್ಕೆ ಸೋಲು

ಯೊಕೊಹಾಮ, ಜಪಾನ್: ಭಾರತದ ಅಶ್ಮಿತಾ ಚಲಿಹಾ ಮತ್ತು ಮಾಳವಿಕಾ ಬಾನ್ಸೊಡ್ ಅವರು ಮಂಗಳವಾರ ಆರಂಭವಾದ ಜಪಾನ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಮಹಿಳೆಯರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿಯೇ ಸೋತು ನಿರ್ಗಮಿಸಿದರು. ಅಶ್ಮಿತಾ ಅವರು 16-21, 12-21 ರಿಂದ ಚೈನಿಸ್ ತೈಪೆಯ ತೈ ಝು ಯಿಂಗ್ ವಿರುದ್ಧ ಮಣಿದರು. ಇನ್ನೊಂದು ಪಂದ್ಯದಲ್ಲಿ ಮಾಳವಿಕಾ ಅವರು 21-23, 19-21ರ ಗೇಮ್‌ಗಳಲ್ಲಿ ಉಕ್ರೇನ್‌ನ ಪೊಲಿನಾ ಬುಹರೊವಾ ವಿರುದ್ಧ ಸೋಲನುಭವಿಸಿದರು. ನಂತರದ ಪಂದ್ಯದಲ್ಲಿ ಭಾರತದ ಇನ್ನೊಬ್ಬ ಆಟಗಾರ್ತಿ ಆಕರ್ಷಿ ಕಶ್ಯಪ್ ಕೂಡ ನಿರಾಶೆ ಅನುಭವಿಸಿದರು. ಆಕರ್ಷಿ 13-21, 12-21ರಿಂದ ಕೊರಿಯಾದ ಕಿಮ್ ಗಾ ಯೂನ್ ವಿರುದ್ಧ ಪರಾಭವಗೊಂಡರು. ಮಿಶ್ರ ಡಬಲ್ಸ್‌ನಲ್ಲಿ ಭಾರತದ ಸತೀಶ್ ಕುಮಾರ್ ಕರುಣಕರನ್ ಮತ್ತು ಆದ್ಯಾ ವರಿಯಾತ್ ಅವರು ಮೊದಲ ಸುತ್ತಿನಲ್ಲಿ 10-21-, 18-21ರಿಂದ ಇಂಡೋನೇಷ್ಯಾದ ರೆಹಾನ್ ನೌಫಲ್ ಕುಶಾರ್ಜಾಂತೊ ಮತ್ತು ಲೀಸಾ ಆಯು ಕುಸುಮಾವತಿ ಜೋಡಿಯ ಎದುರು ಮಣಿದರು. ಈಚೆಗೆ ಪ್ಯಾರಿಸ್ ಒಲಿಂಪಿಕ್‌ನಲ್ಲಿ ಸ್ಪರ್ಧಿಸಿದ್ದ ಭಾರತದ ಬ್ಯಾಡ್ಮಿಂಟನ್ ಆಟಗಾರರು ಈ ಟೂರ್ನಿಯಲ್ಲಿ ಆಡುತ್ತಿಲ್ಲ. ವಿಶ್ರಾಂತಿ ಪಡೆದಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಒಂದೇ ಓವರ್‌ನಲ್ಲಿ 36 ರನ್ ಬಾರಿಸಿದ್ದ ಯುವಿ | ಆ ದಾಖಲೆ ಈಗ 39 ರನ್‌ಗೆ ಏರಿಕೆ

ಯುವರಾಜ್ ಸಿಂಗ್ ದಾಖಲೆ ಮುರಿದ ಡಾರಿಯಸ್ ವಿಸೆರ್

ಅಪಿಯಾ (ಸಮೊವಾ): ಟ್ವೆಂಟಿ-20 ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಸಮೊವಾದ ಬ್ಯಾಟರ್ ಡಾರಿಯಸ್ ವಿಸೆರ್ ನೂತನ ದಾಖಲೆ ಬರೆದಿದ್ದು, ಓವರ್‌ವೊಂದರಲ್ಲಿ 39 ರನ್ ಗಳಿಸುವ ಮೂಲಕ ಭಾರತದ ಮಾಜಿ ಬ್ಯಾಟರ್ ಯುವರಾಜ್ ಸಿಂಗ್ ಅವರ ಹೆಸರಲ್ಲಿದ್ದ ದಾಖಲೆಯನ್ನು ಮುರಿದಿದ್ದಾರೆ.

ಟ್ವೆಂಟಿ-20 ವಿಶ್ವಕಪ್ ಪೂರ್ವ ಏಷ್ಯಾ-ಪೆಸಿಫಿಕ್ ವಲಯದ ಅರ್ಹತಾ ಪಂದ್ಯದಲ್ಲಿ ವನೌಟು ವಿರುದ್ಧ ಸಮೊವಾದ 28 ವರ್ಷದ ಮಧ್ಯಮ ಕ್ರಮಾಂಕದ ಬಲಗೈ ಬ್ಯಾಟರ್ ವಿಸೆರ್, ಆರು ಸಿಕ್ಸರ್‌ಗಳನ್ನು ಸಿಡಿಸಿ ಅಬ್ಬರಿಸಿದ್ದಾರೆ.

ತಮ್ಮ ಮೂರನೇ ಟ್ವೆಂಟಿ-20 ಪಂದ್ಯದಲ್ಲೇ ವಿಸೆರ್, ಈ ಸಾಧನೆ ಮಾಡಿದ್ದಾರೆ. ಅಲ್ಲದೆ ಟ್ವೆಂಟಿ-20 ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಶತಕ ಗಳಿಸಿದ ಸಮೊವಾದ ಮೊದಲ ಬ್ಯಾಟರ್ ಎನಿಸಿದ್ದಾರೆ. ಕೇವಲ 62 ಎಸೆತಗಳಲ್ಲಿ ವಿಸೆರ್, 132 ರನ್ ಗಳಿಸುವ ಮೂಲಕ ಅಬ್ಬರಿಸಿದರು. ಇದರಲ್ಲಿ 14 ಸಿಕ್ಸರ್ ಹಾಗೂ ಐದು ಬೌಂಡರಿ ಒಳಗೊಂಡಿತ್ತು.

ವನೌಟು ತಂಡದ ನಲಿನ್ ನಿಪಿಕೊ ಅವರ ಓವರ್‌ನಲ್ಲಿ ವಿಸೆರ್ ಈ ಸಾಧನೆ ಮಾಡಿದ್ದಾರೆ. ಇದೇ ಮೊದಲ ಬಾರಿಗೆ ಟ್ವೆಂಟಿ-20 ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ 36ಕ್ಕೂ ಹೆಚ್ಚು ರನ್ ನೀಡಿದ ಅಪಖ್ಯಾತಿಗೆ ನಿಪಿಕೊ ಒಳಗಾಗಿದ್ದಾರೆ. ಅವರ ಓವರ್‌ನಲ್ಲಿ ಮೂರು ನೋಬಾಲ್ ಸಹ ಒಳಗೊಂಡಿತ್ತು.

ಮೊದಲು ಬ್ಯಾಟಿಂಗ್ ನಡೆಸಿದ ಸಮೊವಾ ವಿಸೆರ್ ಶತಕದ ಬಲದಿಂದ 174 ರನ್ ಗಳಿಸಿತು. ಗುರಿ ಬೆನ್ನಟ್ಟಿದ ವನೌಟು ಒಂಬತ್ತು ವಿಕೆಟ್ ನಷ್ಟಕ್ಕೆ 164 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಆ ಮೂಲಕ ಸಮೊವಾ 9 ರನ್ ಅಂತರದ ರೋಚಕ ಜಯ ಗಳಿಸಿತು. ಬೌಲಿಂಗ್‌ನಲ್ಲಿ ದುಬಾರಿ ಎನಿಸಿದರೂ ಆರಂಭಿಕ ಬ್ಯಾಟರ್ ನಿಪಿಕೊ, 52 ಎಸೆತಗಳಲ್ಲಿ 73 ರನ್ (6 ಬೌಂಡರಿ, 3 ಸಿಕ್ಸರ್) ಗಳಿಸುವ ಮೂಲಕ ದಿಟ್ಟ ಹೋರಾಟ ನೀಡಿದರು.

ಓವರ್ ಹೀಗಿತ್ತು: 6,6,6, 1(ನೋಬಾಲ್), 6, 0, 1 (ನೋಬಾಲ್), 7(ನೋಬಾಲ್ ಹಾಗೂ 6), 6

2007ರಲ್ಲಿ ಭಾರತದ ಮಾಜಿ ಆಟಗಾರ ಯುವರಾಜ್ ಸಿಂಗ್ ಅವರು ಇಂಗ್ಲೆಂಡ್‌ನ ಸ್ಟುವರ್ಟ್ ಬ್ರಾಡ್ ಓವರ್‌ವೊಂದರ ಎಲ್ಲ ಆರು ಎಸೆತಗಳಲ್ಲಿ ಆರು ಸಿಕ್ಸರ್‌ಗಳನ್ನು ಬಾರಿಸುವ ಮೂಲಕ ದಾಖಲೆ ಬರೆದಿದ್ದರು.

- **ಅಂತಾರಾಷ್ಟ್ರೀಯ ಟ್ವೆಂಟಿ-20 ಕ್ರಿಕೆಟ್‌ನಲ್ಲಿ ಒಂದು ಓವರ್‌ಗೆ ಅತಿ ಹೆಚ್ಚು ರನ್**
- **39 ರನ್: ಡಾರಿಯಸ್ ವಿಸೆರ್ (2024), 6,6,6, 1(ನೋಬಾಲ್), 6, 0, 1 (ನೋಬಾಲ್), 7(ನೋಬಾಲ್ ಹಾಗೂ ಸಿಕ್ಸ್), 6**
- **36 ರನ್: ಯುವರಾಜ್ ಸಿಂಗ್ (2007), 6,6,6,6,6,6**
- **36 ರನ್: ಕೀರಾನ್ ಪೊಲಾರ್ಡ್ (2021), 6,6,6,6,6,6**
- **36 ರನ್: ರೋಹಿತ್ ಶರ್ಮಾ/ರಿಂಕು ಸಿಂಗ್ (2024), 5 (ನೋಬಾಲ್), 6, 6,1, 6,6,6**
- **36 ರನ್: ದಿಪೇಂದ್ರ ಸಿಂಗ್ (2024), 6,6,6,6,6,6**
- **36 ರನ್: ನಿಕೋಲಸ್ ಪೂರನ್ (2024), 6, 5 (ನೋಬಾಲ್), 5 (ವೈಡ್), 0, 4 (ಲೆಗ್ ಬೈ), 4, 6, 6**
- **2007ರಲ್ಲಿ ಸ್ಟುವರ್ಟ್ ಬ್ರಾಡ್, 2021ರಲ್ಲಿ ಅಕಿಲ ಧನಂಜಯ, 2024ರಲ್ಲಿ ಕರೀಂ ಜನ್ನತ್, 2024ರಲ್ಲಿ ಕಮ್ರಾನ್ ಖಾನ್ ಮತ್ತು 2024ರಲ್ಲಿ ಅಜ್ಮತುಲ್ಲ ಒಮರ್ಝೈರ್ ಓವರ್‌ವೊಂದರಲ್ಲಿ 36 ರನ್ ಬಿಟ್ಟುಕೊಟ್ಟಿದ್ದರು.**
- **ಒಟ್ಟಾರೆಯಾಗಿ ಟ್ವೆಂಟಿ-20 ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ನಾಲ್ಕನೇ ಸಲ ತಂಡವೊಂದರ ಬ್ಯಾಟರ್, ಓವರ್‌ವೊಂದರಲ್ಲಿ ಆರು ಸಿಕ್ಸರ್‌ಗಳನ್ನು ಸಿಡಿಸಿದ ನಿದರ್ಶನ ದಾಖಲಾಯಿತು. ಅಲ್ಲದೆ ಆರನೇ ಸಲ ತಂಡವೊಂದು ಓವರ್‌ವೊಂದರಲ್ಲಿ 36 ಅಥವಾ ಅದಕ್ಕಿಂತಲೂ ಹೆಚ್ಚು ರನ್ ಗಳಿಸಿದ ದಾಖಲೆ ಬರೆದಿದೆ.**

ನಿಗದಿತ ತೂಕಕ್ಕಿಂತ ಹೆಚ್ಚಿದ್ದರೆ, ನಿಯಮ ಉಲ್ಲಂಘನೆ!

ದೇಹತೂಕ ಪಾಲನೆ ಕ್ರೀಡಾಳುಗಳ ಹೊಣೆ

ದೆಹಲಿ: ಕುಸ್ತಿಯಲ್ಲಿ ದೇಹತೂಕ ನಿರ್ವಹಣೆಯ ನಿಯಮಗಳು ಸ್ಪಷ್ಟವಾಗಿವೆ. ಅವು ಎಲ್ಲ ಸ್ಪರ್ಧಿಗಳಿಗೂ ಒಂದೇ ಆಗಿವೆ. ನಿಗದಿತ ತೂಕಕ್ಕಿಂತ ಹೆಚ್ಚಿದ್ದರೆ ಅದು ನಿಯಮದ ಉಲ್ಲಂಘನೆಯಾಗುತ್ತದೆ. ಮಹಿಳಾ ಕುಸ್ತಿಪಟುಗಳು ತೂಕಪರೀಕ್ಷೆಗೆ ಹಾಜರಾಗುವ ಸಂದರ್ಭದಲ್ಲಿ ಧರಿಸುವ ಸಿಂಗ್ಲೆಟ್ ತೂಕವನ್ನೂ ಪರಿಗಣಿಸುವುದಿಲ್ಲ. ಆದ್ದರಿಂದ ತಮ್ಮ ನಿಗದಿತ ತೂಕದ ವ್ಯಾಪ್ತಿಯೊಳಗೆ ಇರಬೇಕಾಗಿರುವುದು ಕ್ರೀಡಾಪಟುಗಳ ಹೊಣೆ ಎಂದು ಕ್ರೀಡಾ ಮಧ್ಯಸ್ಥಿಕೆ ನ್ಯಾಯಮಂಡಳಿ (ಸಿಎಎಸ್) ಸ್ಪಷ್ಟಪಡಿಸಿದೆ.

ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ಮಹಿಳೆಯರ 50 ಕೆ.ಜಿ. ಫ್ರೀಸ್ಟೈಲ್ ಕುಸ್ತಿ ವಿಭಾಗದಲ್ಲಿ 100 ಗ್ರಾಮ್ ಹೆಚ್ಚು ದೇಹತೂಕವಿದ್ದ ಕಾರಣಕ್ಕೆ ವಿನೇಶ್ ಫೋಗಟ್ ಫೈನಲ್ ಬೌಟ್‌ನಿಂದ ಅನರ್ಹಗೊಂಡಿದ್ದರು. ಅವರು ಫೈನಲ್ ತಲುಪಿದ ಕಾರಣಕ್ಕಾಗಿ ಬೆಳ್ಳಿ ಪದಕ ನೀಡಬೇಕು ಎಂದು ಸಿಎಎಸ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ್ದ ಮಂಡಳಿಯು ಮೇಲ್ಮನವಿಯನ್ನು ತಿರಸ್ಕರಿಸಿತ್ತು. ಇದರಿಂದಾಗಿ ವಿನೇಶ್ ಖಾಲಿ ಕೈಯಲ್ಲಿ ಸ್ವದೇಶಕ್ಕೆ ಮರಳಿದರು.

ವಿನೇಶ್ ಪ್ರಕರಣದ ತೀರ್ಪಿನ ವರದಿಯನ್ನು ಸಿಎಎಸ್ ಸೋಮವಾರ ಪ್ರಕಟಿಸಿದೆ.

ಅವರ (ವಿನೇಶ್) ದೇಹತೂಕದಲ್ಲಿ 100 ಗ್ರಾಂ ಹೆಚ್ಚು ಇರುವುದರ ಸಾಕ್ಷ್ಯಾಧಾರಗಳು ಇದ್ದವು. ಪ್ರಕರಣದ ವಿಚಾರಣೆ ಸಂದರ್ಭದಲ್ಲಿ ಅವುಗಳನ್ನೂ ಪರಿಶೀಲಿಸಲಾಗಿದೆ. ಅವರ ಪ್ರಕರಣದಲ್ಲಿ ದಾಖಲಾಗಿರುವ 100 ಗ್ರಾಂ ಸಣ್ಣ ಪ್ರಮಾಣವೆನಿಸಿದರೂ ನಿಗದಿಗಿಂತ ಹೆಚ್ಚುವರಿಯಾಗಿದೆ. ನೀರಿನ ಸೇವನೆ ಮತ್ತು ನೀರಿನ ಧಾರಣದ ಕಾರಣಗಳಿರಬಹುದು. ಅದರಲ್ಲೂ ಋತುಚಕ್ರದ ಪೂರ್ವದ ಹಂತದಲ್ಲಿ ಆಗಿರಬಹುದು ಎಂದು ಸಿಎಎಸ್ ಉಲ್ಲೇಖಿಸಿದೆ.



ವಿನೇಶ್ ಅವರು ಪ್ಯಾರಿಸ್ ಒಲಿಂಪಿಕ್ಸ್ ಸೆಮಿಫೈನಲ್‌ನಲ್ಲಿ ಕ್ಯೂಬಾದ ಯುಸ್ನೈಲಿಸ್ ಗುಜ್ಮನ್ ಲೋಪೆಜ್ ವಿರುದ್ಧ ಜಯಿಸಿದ್ದರು.

ಇ-ಸ್ಪೋರ್ಟ್ಸ್ ಪಂದ್ಯಾವಳಿಗೆ ಚಿಂತನೆ

ದೆಹಲಿ: ಜಗತ್ತಿನಾದ್ಯಂತ ಇ- ಸ್ಪೋರ್ಟ್ಸ್ ಪ್ರಚಾರ ಮಾಡುವ ಉದ್ದೇಶದಿಂದ, ಮೊದಲ ಆವೃತ್ತಿಯ ಒಲಿಂಪಿಕ್ಸ್ ಇ- ಸ್ಪೋರ್ಟ್ಸ್ ಪಂದ್ಯಾವಳಿ ಆಯೋಜನೆ ಮಾಡಲು ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿ(ಐಒಸಿ) ಸೌದಿ ಅರೇಬಿಯಾದ ರಾಷ್ಟ್ರೀಯ ಒಲಿಂಪಿಕ್ ಸಮತಿಯ ಜೊತೆ ಕೈ ಜೋಡಿಸಿದೆ.

ಇ- ಸ್ಪೋರ್ಟ್ಸ್ ಕ್ರೀಡೆಯನ್ನು ಉತ್ತೇಜಿಸುವ ದೃಷ್ಟಿಯಿಂದ ಕ್ರಮ ತೆಗೆದುಕೊಳ್ಳುವಂತೆ ಒಲಿಂಪಿಕ್ಸ್ ಎಕ್ಸ್‌ಕ್ಲ್ಯೂಸಿವ್ ಬೋರ್ಡ್ ನಿರ್ಧಾರ ಮಾಡಿದ ನಂತರ ಇ- ಸ್ಪೋರ್ಟ್ಸ್ ಕಡೆಗೆ ಐಒಸಿ ಒಲವು ತೋರಿಸಿದೆ.

ಯುಎನ್‌ಐವಿ ಸ್ಪೋರ್ಟ್ಸ್‌ನೆಕ್‌ನ ಸ್ಥಾಪಕ ಹಾಗೂ ಫೆಡರೇಶನ್ ಆಫ್ ಇ- ಸ್ಪೋರ್ಟ್ಸ್ ಅಸೋಸಿಯೇಶನ್ಸ್ ಇಂಡಿಯಾ(ಎಫ್‌ಇಎಐ) ಸದಸ್ಯರಾದ ಅಭಿಷೇಕ್ ಐಸ್ವಾರ್ ಪ್ರತಿಕ್ರಿಯಿಸಿ, ಇಂದು ಜಗತ್ತಿನ ಎಲ್ಲ ದೇಶಗಳು ಇ- ಸ್ಪೋರ್ಟ್ಸ್‌ನಲ್ಲಿ ಒಲಿಂಪಿಕ್ ಪದಕ ಗೆಲ್ಲುವ ಅವಕಾಶಕ್ಕಾಗಿ ಕಾಯುತ್ತಿವೆ. ಇದು ಉದ್ಯಮದಲ್ಲಿ ಮಹತ್ತರ ಬದಲಾವಣೆಗೆ ಕಾರಣವಾಗಲಿದೆ ಎಂದು ತಿಳಿಸಿದರು.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತವು ಉತ್ತಮ ಪ್ರದರ್ಶನ ನೀಡಿದ್ದು, ಈ ಕ್ಷೇತ್ರದಲ್ಲಿನ ಬೆಳವಣಿಗೆಯು ಜಗತ್ತಿನಲ್ಲಿ ನಮ್ಮ ದೇಶದ ಪ್ರಭಾವವನ್ನು ಹೆಚ್ಚು ಮಾಡಲಿದೆ ಎಂದರು.

2021 ಹಾಗೂ 2022ರ ನಡುವೆ ಇ- ಸ್ಪೋರ್ಟ್ಸ್ ಆಟಗಾರರ ಸಂಖ್ಯೆಯು ನಾಲ್ಕು ಪಟ್ಟು ಹೆಚ್ಚಾಗಿದೆ. 2027ರ ವೇಳೆಗೆ 15 ಲಕ್ಷಕ್ಕೆ ತಲುಪಲಿದೆ ಎಂದು ತಿಳಿಸಿದರು.

ಆಗಸ್ಟ್ 28ರಿಂದ ಶುರುವಾಗಲಿರುವ ಪ್ಯಾರಾಲಿಂಪಿಕ್ಸ್ | ಈ ಬಾರಿ 25 ಪದಕ ಗೆಲ್ಲುವ ಗುರಿ

ಪ್ಯಾರಾಲಿಂಪಿಕ್ಸ್: ಕ್ರೀಡಾಳುಗಳ ಜತೆ ಪ್ರಧಾನಿ ಸಂವಾದ

ದೆಹಲಿ: ಇದೇ ತಿಂಗಳು 28ರಿಂದ ಪ್ಯಾರಿಸ್‌ನಲ್ಲಿ ಪ್ರಾರಂಭವಾಗಲಿರುವ ಪ್ಯಾರಾಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಈ ಬಾರಿ ಭಾರತದಿಂದ ದಾಖಲೆಯ 84 ಮಂದಿ ಪ್ಯಾರಾ ಕ್ರೀಡಾಪಟುಗಳು ಸ್ಪರ್ಧಿಸಲಿದ್ದಾರೆ. ಕಳೆದ ಶುಕ್ರವಾರ ಭಾರತ ಪ್ಯಾರಾಲಿಂಪಿಕ್ ಸಮಿತಿ ಮತ್ತು ಭಾರತ ಕ್ರೀಡಾ ಪ್ರಾಧಿಕಾರ ಎಲ್ಲ ಕ್ರೀಡಾಪಟುಗಳಿಗೆ ಅದ್ದೂರಿ ಬೀಳ್ಕೊಡುಗೆ ನೀಡಿತ್ತು. ಇದೀಗ ಪ್ರಧಾನಿ ನರೇಂದ್ರ ಮೋದಿ ಅವರು ಭಾರತದ ಕ್ರೀಡಾಪಟುಗಳಿಗೆ ಶುಭ ಹಾರೈಸಿದ್ದಾರೆ. ಜತೆಗೆ ಆತ್ಮ ವಿಶ್ವಾಸ ತುಂಬಿದ್ದಾರೆ.

ಸೋಮವಾರ ರಾತ್ರಿ ನಡೆದಿದ್ದ ವರ್ಚುವಲ್ ಸಂವಾದದಲ್ಲಿ ಮೋದಿ ಅವರು ಅಥ್ಲೀಟ್‌ಗಳ ಜತೆ ಸಂವಾದ ನಡೆಸಿದ್ದರು. ಇದೇ ವೇಳೆ ಹಲವು ಕ್ರೀಡಾಪಟುಗಳು ತಮ್ಮ ತಯಾರಿಯ ಬಗ್ಗೆ ಮತ್ತು ಈ ಬಾರಿ ಪದಕ ಗೆಲ್ಲುವ ವಿಶ್ವಾಸವನ್ನು ಮೋದಿ ಜತೆ ಹಂಚಿಕೊಂಡರು. ಕಳೆದ ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದ ಜಾವೆಲಿನ್ ಥ್ರೋವರ್ ಸುಮಿತ್ ಅಂಟಿಲ್ ಈ ಬಾರಿಯೂ ಚಿನ್ನ ಗೆಲ್ಲುವುದಾಗಿ ಮೋದಿಗೆ ಭರವಸೆ ನೀಡಿದರು. ಸುಮಿತ್ ಅಂಟಿಲ್ ಪ್ಯಾರಾಲಿಂಪಿಕ್ಸ್ ಉದ್ಘಾಟನ ಸಮಾರಂಭದಲ್ಲಿ ಶಾಟ್ಪುಟರ್ ಭಾಗ್ಯಶ್ರೀ ಜಾಧವ್ ಅವರೊಂದಿಗೆ ಭಾರತದ ಧ್ವಜಧಾರಿಯಾಗಿ ಕಾಣಿಸಿಕೊಳ್ಳಲಿದ್ದಾರೆ.

ಕಳೆದ ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ 19 ಪದಕ ಗೆದ್ದ ಭಾರತ, ಈ ಬಾರಿ 25 ಪದಕ ಗೆಲ್ಲುವ ಗುರಿಯೊಂದಿಗೆ ಪ್ಯಾರಿಸ್‌ಗೆ ಪ್ರಯಾಣ ಬೆಳೆಸಿದೆ. ಈ ಬಾರಿ ದಾಖಲೆಯ 84 ಮಂದಿ ಪ್ಯಾರಾ ಕ್ರೀಡಾಪಟುಗಳು ವಿವಿಧ 12 ಕ್ರೀಡೆಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಕಳೆದ ಬಾರಿ 24 ಮಂದಿ ಸ್ಪರ್ಧಿಸಿದ್ದರು.

ಭಾರತದ ಸ್ಪರ್ಧೆಗಳು: ಆರ್ಚರಿ, ಅಥ್ಲೆಟಿಕ್ಸ್, ಬ್ಯಾಡ್ಮಿಂಟನ್, ಕೆನೊಯಿಂಗ್, ಸೈಕ್ಲಿಂಗ್, ಅಂಧರ ಜುಡೊ, ಪವರ್‌ಲಿಫ್ಟಿಂಗ್, ರೋಯಿಂಗ್, ಶೂಟಿಂಗ್, ಈಜು, ಟೇಬಲ್ ಟೆನಿಸ್ ಮತ್ತು ಟೇಕ್ವಾಂಡೊ ಕ್ರೀಡೆಗಳಲ್ಲಿ ಸ್ಪರ್ಧಿಸಲಿದ್ದಾರೆ. ದೇಶದ ಅಥ್ಲೀಟ್‌ಗಳು ಈ ಬಾರಿಯೂ ಉತ್ತಮ ಪ್ರದರ್ಶನ ನೀಡುವ ಮೂಲಕ ದೇಶದ ಕೀರ್ತಿ ಪತಾಕೆಯನ್ನು ಹಾರಿಸುವ ವಿಶ್ವಾಸ ನನಗಿದೆ ಎಂದು ಭಾರತ ಪ್ಯಾರಾಲಿಂಪಿಕ್ ಸಮಿತಿ ಅಧ್ಯಕ್ಷ ದೇವೇಂದ್ರ ಝಜಾರಿಯಾ ವಿಶ್ವಾಸ ವ್ಯಕ್ತಪಡಿಸಿದರು. ಕಳೆದ ವರ್ಷ ಹಾಂಗ್‌ಝೌನ ಪ್ಯಾರಾ ಏಷ್ಯನ್ ಗೇಮ್ಸ್‌ನಲ್ಲೂ ಭಾರತದ ಪ್ಯಾರಾಲಿಂಪಿಕ್ಸ್ ತಂಡ 111 ಪದಕಗಳನ್ನು ಜಯಿಸಿ, ಉತ್ತಮ ಸಾಧನೆ ಮೆರೆದಿತ್ತು. ಹೀಗಾಗಿ ಈ ಬಾರಿ ಹೆಚ್ಚಿನ ನಿರೀಕ್ಷೆ ಇರಿಸಲಾಗಿದೆ.

ಒತ್ತಡಕ್ಕೆ ಒಳಗಾಗಬೇಡಿ

ಅಥ್ಲೀಟ್‌ಗಳ ಜತೆ ಮುಕ್ತವಾಗಿ ಮಾತನಾಡಿದ ಮೋದಿ, ಯಾವುದೇ ಒತ್ತಡಕ್ಕೊಳಗಾಗದಂತೆ ನೋಡಿಕೊಳ್ಳಿ ಎಂದು ಸಲಹೆ ನೀಡಿದರು. ನಿಮ್ಮ ಪಯಣ ನಿಮಗೆ ಮಾತ್ರವಲ್ಲ, ಇಡೀ ದೇಶಕ್ಕೆ ಮುಖ್ಯವಾದದ್ದು. ನೀವು ಮಾಡಿದ ಸಾಧನೆಯಿಂದ ಭಾರತೀಯರು ಹೆಮ್ಮೆ ಪಡುತ್ತಾರೆ. ಇಡೀ ದೇಶವೇ ನಿಮ್ಮ ಬೆಂಬಲಕ್ಕಿದೆ. 140 ಕೋಟಿ ಭಾರತೀಯರ ಆಶೀರ್ವಾದ ನಿಮ್ಮ ಮೇಲಿದೆ. ನಿಮ್ಮ ಇಷ್ಟು ವರ್ಷದ ಪರಿಶ್ರಮಕ್ಕೆ ಪ್ಯಾರಿಸ್‌ನಲ್ಲಿ ಉತ್ತಮ ಪ್ರತಿಫಲ ಸಿಗುವಂತಾಗಲಿ ಎಂದು ಮೋದಿ ಹಾರೈಸಿದ್ದಾರೆ.

ರಿಷಿಯ ರುದ್ರ ಗರುಡ ಪುರಾಣ

ಈ ಹಿಂದೆ ರಾಮನ ಅವತಾರ ತಾಳಿದ್ದ ರಿಷಿ ಈಗ ಗರುಡ ಪುರಾಣ ಹೇಳಲು ಬಂದಿದ್ದಾರೆ. ಟ್ರೇಲರ್‌ನಲ್ಲಿ ಮನಗೆದ್ದಿರುವ ಗರುಣಪುರಾಣ ತೆರೆಗೆ ಸಿದ್ಧವಾಗಿದೆ. ಹ್ಯಾಟ್ರಿಕ್ ಹೀರೊ ಶಿವರಾಜಕುಮಾರ್ ಚಿತ್ರದ ಟ್ರೇಲರ್

ಬಿಡುಗಡೆ ಮಾಡಿ ಶುಭಕೋರಿದರು. ಪೌರಾಣಿಕ ಮತ್ತು ಐತಿಹಾಸಿಕ ಉಪಕಥೆಗಳನ್ನು ಆಧರಿಸಿ ಚಿತ್ರದ ಕಥೆ ಹೆಣೆಯಲಾಗಿದೆ. ಒಂದು ನಿಗೂಢತೆಯನ್ನು ಭೇದಿಸಲು ನಾಯಕ ಗರುಡನಂತೆ ಅವತಾರ ತಾಳಿ ದುಷ್ಟರ ಸಂಹಾರ ಮಾಡುವ ಕಥೆ ಇಲ್ಲಿದೆ ಎಂಬುದು ಟ್ರೇಲರ್‌ನಲ್ಲಿ ಸ್ಪಷ್ಟವಾಗುತ್ತದೆ.

ನಂದೀಶ್ ಚಿತ್ರದ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ರಿಷಿ, ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ಅಭಿನಯಿಸಿದ್ದು, ಪ್ರಿಯಾಂಕಾ ಕುಮಾರ್ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ವಿನೋದ್ ಆಳ್ವಾ ಪ್ರಮುಖ ಪಾತ್ರ ನಿರ್ವಹಿಸಿದ್ದಾರೆ. ಕೆ.ಎಸ್. ಶ್ರೀಧರ್, ಗಿರೀಶ್ ಶಿವಣ್ಣ, ಶಿವರಾಜ ಕೆ.ಆರ್ ಪೇಟೆ ಮುಂತಾದವರು ತಾರಾಗಣದಲ್ಲಿದ್ದಾರೆ.

ನಮ್ಮ ಸುತ್ತಮುತ್ತ ನಡೆಯುವ ಅನೇಕ ಸಮಸ್ಯೆಗಳನ್ನಿಟ್ಟುಕೊಂಡು ನಂದೀಶ್ ಈ ಚಿತ್ರದ ಕಥೆ ಮಾಡಿದ್ದಾರೆ. ಪುನೀತ್ ರಾಜಕುಮಾರ್ ಅವರ ನಿರ್ಮಾಣದ ಕವಲು ದಾರಿ ಚಿತ್ರದ ನಂತರ ನಾನು ಈ ಚಿತ್ರದಲ್ಲಿ ಪೊಲೀಸ್ ಅಧಿಕಾರಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಇಲ್ಲಿ ನಾನು ರುದ್ರ ಪಾತ್ರದಲ್ಲಿ ಕಾಣಿಸಿಕೊಂಡಿರುವುದಾಗಿ ರಿಷಿ ಹೇಳಿದರು. ಚಿತ್ರಕ್ಕೆ ರಘು ನಿಡುವಳ್ಳಿ ಸಂಭಾಷಣೆ ಬರೆದಿದ್ದಾರೆ. ಕೆಪಿ ಸಂಗೀತ ನಿರ್ದೇಶನ, ಸಂದೀಪ್ ಕುಮಾರ್ ಛಾಯಾಗ್ರಹಣ ಚಿತ್ರಕ್ಕಿದೆ. ಅಶ್ವಿನಿ ಆರ್ಟ್ಸ್ ಲಾಂಛನದಲ್ಲಿ ಅಶ್ವಿನಿ ಲೋಹಿತ್ ಚಿತ್ರ ನಿರ್ಮಾಣ ಮಾಡಿದ್ದಾರೆ.

ಶೂಟಿಂಗ್ ಮುಗಿಸಿದ ಸಂಜು ವೆಡ್ಸ್ ಗೀತಾ 2

ಈ ಚಿತ್ರದಲ್ಲಿ ಅಪರೂಪದ ಪ್ರೇಮಕಥೆಯಿದ್ದು, ಇಂದಿನ ಟ್ರೆಂಡ್‌ಗೆ ಹೊಂದುವಂತೆ ಹೆಣೆಯಲಾಗಿದೆ. ಅದನ್ನು ಹೋರಾಟದ ಹಿನ್ನೆಲೆಯಲ್ಲಿ ಕಟ್ಟಿಕೊಡಲಾಗಿದೆ. ಜತೆಗೆ ಒಂದು ಸರ್‌ಪ್ರೈಸ್ ಕೂಡ ಇದೆ. ಅದನ್ನು ತೆರೆಯಲ್ಲಿಯೇ ನೋಡಬೇಕು.
-ನಾಗಶೇಖರ್ ನಿರ್ದೇಶಕ

ಈ ಹಿಂದೆ ತೆರೆಗೆ ಬಂದ ಸಂಜು ವೆಡ್ಸ್ ಗೀತಾ ಭರ್ಜರಿ ಯಶಸ್ಸು ಕಂಡಿತು, ಈ ಯಶಸ್ಸಿನ ಖುಷಿಯಲ್ಲಿಯೇ ನಿರ್ದೇಶಕ ನಾಗಶೇಖರ್ ಸಂಜವೆಡ್ಸ್ ಗೀತಾ 2 ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಸದ್ಯ ಈ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದೆ. ನಾಯಕಿ ರಚಿತಾರಾಮ್ ಡ್ರಾಯಿಂಗ್ ಬೋರ್ಡ್ ಮೇಲೆ ಚಿತ್ರ ಬಿಡಿಸುತ್ತಿರುವ ದೃಶ್ಯದೊಂದಿಗೆ ಚಿತ್ರೀಕರಣ ಮುಗಿಸಲಾಯಿತು, ಜತೆಗೆ ಕುಂಬಳಕಾಯಿ ಒಡೆಯಲಾಯಿತು. ನಾಗಶೇಖರ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿರುವ ಈ ಚಿತ್ರದಲ್ಲಿ ಸಂಜು ಹಾಗೂ ಗೀತಾರ ನವೀನ ಪ್ರೇಮಕಥೆಯನ್ನು ರೇಷ್ಮೆ ಬೆಳೆಯುವ ರೈತರ ಹೋರಾಟದ ಹಿನ್ನೆಲೆಯಲ್ಲಿ ಕಟ್ಟಿಕೊಡಲಾಗುತ್ತಿದೆ. ಶ್ರೀನಗರ ಕಿಟ್ಟಿ ನಾಯಕನಾಗಿ ನಟಿಸಿದ್ದು, ನಾಯಕಿಯಾಗಿ ರಮ್ಯಾ ಬದಲು ರಚಿತಾರಾಮ್ ಬಣ್ಣಹಚ್ಚಿದ್ದಾರೆ. ಸಾಧು ಕೋಕಿಲ, ರಂಗಾಯಣ ರಘು, ತಬಲಾನಾಣಿ, ಮೂಗು ಸುರೇಶ್ ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ವಿಶೇಷ ಪಾತ್ರದಲ್ಲಿ ನಟ ಚೇತನ್ ಚಂದ್ರ, ರಾಗಿಣಿ ದ್ವಿವೇದಿ ಕಾಣಿಸಿಕೊಂಡಿದ್ದಾರೆ.

ಸಿನಿಮಾದ ಶೂಟಿಂಗ್ ಕಂಪ್ಲೀಟ್ ಆಗಿದೆ. ಸದ್ಯದಲ್ಲಿಯೇ ಹಾಡುಗಳ ಮೂಲಕ ನಿಮ್ಮ ಮುಂದೆ ಬರುತ್ತೇವೆ. ನಾನು ಈ ಚಿತ್ರದಲ್ಲಿ ರೇಷ್ಮೆ ಬೆಳೆಗಾರನಾಗಿ ಕಾಣಿಸಿಕೊಂಡಿದ್ದೇನೆ ಎಂದು ಕಿಟ್ಟಿ ತಮ್ಮ ಪಾತ್ರದ ಬಗ್ಗೆ ಹೇಳಿದರು. ಸಂಜು ವೆಡ್ಸ್ ಗೀತಾ ಒಂದು ಸುಂದರ ದೃಶ್ಯಕಾವ್ಯವಾಗಿದೆ. ಚಿತ್ರದ ಪ್ರತಿ ದೃಶ್ಯಗಳು ಮನಮೋಹಕವಾಗಿ ಮೂಡಿಬಂದಿದೆ ಎಂದು ರಚಿತಾ ಸಂತಸದಿಂದ ನುಡಿದರು.

ಶಿಡ್ಲಘಟ್ಟ, ಸ್ವಿಟ್ಜರ್‌ಲ್ಯಾಂಡ್, ಬೆಂಗಳೂರು ಸುತ್ತಮುತ್ತ ಸುಮಾರು ಎಂಬತ್ತು ದಿನಗಳ ಕಾಲ ಆರು ಹಂತಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ. ಚಿತ್ರದಲ್ಲಿ ಐದು ಸುಮಧುರ ಹಾಡುಗಳಿದ್ದು, ಸೋನು ನಿಗಂ, ಶ್ರೇಯಾ ಘೋಷಾಲ್, ಮಂಗ್ಲಿ ದನಿಯಾಗಿದ್ದಾರೆ. ಶ್ರೀಧರ ವಿ. ಸಂಭ್ರಮ್ ಸಂಗೀತ ಸಂಯೋಜಿಸಿದ್ದಾರೆ. ಸತ್ಯ ಹೆಗ್ಡೆ ಛಾಯಾಗ್ರಹಣ, ಡಿಫರೆಂಟ್ ಡ್ಯಾನಿ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಪವಿತ್ರ ಇಂಟರ್ ನ್ಯಾಷನಲ್ ಮೂವೀ ಮೇಕರ್ಸ್ ಬ್ಯಾನರ್‌ನಲ್ಲಿ ಛಲವಾದಿ ಕುಮಾರ್ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ.

ಕಳೆದ ಆಗಸ್ಟ್‌ನಲ್ಲಿ ಶೂಟಿಂಗ್ ಆರಂಭವಾಗಿತ್ತು, ಈ ಆಗಸ್ಟ್‌ನಲ್ಲಿ ಪೂರ್ಣಗೊಂಡಿದೆ. ಚಿತ್ರದಲ್ಲಿ ಒಳ್ಳೆಯ ಕಥೆ ಇದೆ. ಅದನ್ನು ತಾಂತ್ರಿಕತೆಯ ಮೂಲಕ ಎಲ್ಲರ ಮನಕ್ಕೆ ಮುಟ್ಟುವಂತೆ ತೆರೆಯಲ್ಲಿ ಕಟ್ಟಿಕೊಡಲಾಗುತ್ತಿದೆ. ಹಾಸನ, ಹಾವೇರಿ ಹೀಗೆ ಬೇರೆ ಬೇರೆ ಊರುಗಳಲ್ಲಿ ನಮ್ಮ ಚಿತ್ರದ ಮೂರು ಹಾಡುಗಳನ್ನು ರಿಲೀಸ್ ಮಾಡುವ ಯೋಜನೆ ಇದೆ.
-ಛಲವಾದಿ ಕುಮಾರ್ ನಿರ್ಮಾಪಕ

ಮಹಿಪತಿದಾಸರ ಮಧುರಗಾನ

ಕನ್ನಡ ಸಾಹಿತ್ಯಕ್ಕೆ ದಾಸರ ಕೊಡುಗೆ ಅಪಾರ, ಅಂತಹ ಮಹನೀಯರ ಮಹಿಮೆಯನ್ನು ಚಿತ್ರಗಳ ಮೂಲಕ ಜನರಿಗೆ ಪರಿಚಯಿಸುವ ಕೆಲಸವನ್ನು ನಿರ್ದೇಶಕ ಮಧುಸೂದನ್ ಹವಾಲ್ದಾರ್ ಮಾಡುತ್ತಿದ್ದಾರೆ. ಕರ್ನಾಟಕದ ಮತ್ತೊಬ್ಬ ಶ್ರೇಷ್ಠ ಹರಿದಾಸರಾದ ಮಹಿಪತಿ ದಾಸರ ಜೀವನಾಧಾರಿತ ಕಾಖಂಡಕಿ ಶ್ರೀ ಮಹಿಪತಿದಾಸರು ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ನಟ ವಿಜಯಾನಂದ, ಮಹಿಪತಿದಾಸರ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಮಹಿಪತಿದಾಸರ ವಿರಚಿತ ಹನ್ನೊಂದು ಹಾಡುಗಳು ಈ ಚಿತ್ರದಲ್ಲಿದ್ದು, ಮಧುಸೂದನ್ ಹವಾಲ್ದಾರ್, ಅನಂತ ಕುಲಕರ್ಣಿ, ರಾಯಚೂರು ಶೇಷಗಿರಿದಾಸ್ ಹಾಗೂ ವಿ.ವಿ. ಪ್ರಸನ್ನ ಚಿತ್ರದ ಗೀತೆಗೆ ದನಿಯಾಗಿದ್ದಾರೆ. ನನಗೆ ನಟನಾಗಬೇಕು ಎಂಬ ಆಸೆಯಿತ್ತು. ದಾಸರ ಅನುಗ್ರಹದಿಂದ ನಾನು ಮಹಿಪತಿದಾಸರ ಪಾತ್ರದಲ್ಲಿ ನಟಿಸಿದ್ದೇನೆ ಎಂದು ನಟ ವಿಜಯಾನಂದ ಸಂತಸ ವ್ಯಕ್ತಪಡಿಸಿದರು.

ಜಗನ್ನಾಥದಾಸರು ಚಿತ್ರದಿಂದ ಶ್ರೇಷ್ಠ ಹರಿದಾಸರ ಚಿತ್ರಗಳನ್ನು ನಿರ್ದೇಶಿಸುತ್ತಾ ಬಂದಿದ್ದೇನೆ. ಪ್ರಸ್ತುತ ಕಾಖಂಡಕಿ ಶ್ರೀಮಹಿಪತಿದಾಸರು ಚಿತ್ರವನ್ನು ನಿರ್ದೇಶಿಸುವುದರೊಂದಿಗೆ ಸಂಗೀತ ಸಂಯೋಜಿಸಿದ್ದೇನೆ. ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದ್ದು ಸದ್ಯದಲ್ಲಿಯೇ ಬಿಡುಗಡೆಯಾಗಲಿದೆ ಎಂದು ನಿರ್ದೇಶಕ ಮಧುಸೂದನ್ ಹವಾಲ್ದಾರ್ ತಿಳಿಸಿದರು. ರಾಮಾಂಬುಜ ಮೂವೀಸ್ ಬ್ಯಾನರ್‌ನಲ್ಲಿ ಈ ಚಿತ್ರ ನಿರ್ಮಾಣವಾಗಿದೆ. ಉತ್ತರ ಕರ್ನಾಟಕ ಭಾಗದಲ್ಲಿ ಬಹುತೇಕ ಚಿತ್ರೀಕರಣ ನಡೆಸಲಾಗಿದೆ.

ಕಡಲ ಕಿನಾರೆಯಲ್ಲಿ ಕಲ್ಜಿಗ

ಕರಾವಳಿ ಸೊಗಡಿನ ಕಲ್ಜಿಗ ತೆರೆಗೆ ಬರಲು ಸಿದ್ಧವಾಗಿದೆ. ಗಿರ್ಗಿಟ್, ಸರ್ಕಸ್, ಗಮ್ಜಾಲ್ ಚಿತ್ರಗಳಲ್ಲಿ ಸಹಾಯಕರಾಗಿ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದ ಸುಮನ್ ಸುವರ್ಣ ಕಲ್ಜಿಗ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಕಡಲ ಕಿನಾರೆಯಲ್ಲಿ ನಡೆಯುವ ಕಥೆ ಚಿತ್ರದಲ್ಲಿದ್ದು, ಕರಾವಳಿ ಭಾಗದ ಕಲಾವಿದರೇ ಚಿತ್ರದಲ್ಲಿ ಅಭಿನಯಿಸಿರುವುದು ವಿಶೇಷ. ಕಲ್ಜಿಗ ಚಿತ್ರದ ಟ್ರೇಲರ್ ರಿಲೀಸ್ ಆಗಿದ್ದು ಕುತೂಹಲ ಹೆಚ್ಚಿಸಿದೆ. ಕಡಲತಡಿಯಲ್ಲಿ ಜೀವನ ಸಾಗಿಸುತ್ತಿರುವ ಬಡ ಕುಟುಂಬ, ಆ ಕುಟುಂಬದ ಮೇಲೆ ದ್ವೇಷಕಾರುವ ಪ್ರಭಾವಿಗಳು, ನಾಯಕ ದುರುಳರಿಂದ ತನ್ನ ಕುಟುಂಬವನ್ನು ಹೇಗೆ ರಕ್ಷಿಸಕೊಳ್ಳುತ್ತಾನೆ ಎಂಬುದನ್ನು ಆ್ಯಕ್ಷನ್, ಥ್ರಿಲ್ಲರ್ ಅಂಶಗಳನ್ನು ಬೆರೆಸಿ ರೋಚಕವಾಗಿ ಕಟ್ಟಿಕೊಡಲಾಗಿದೆ.

ಅರ್ಜುನ್ ಕಾಪಿಕಾಡ್ ನಾಯಕನಾಗಿ ನಟಿಸಿದ್ದು, ಸುಶ್ಮಿತಾ ಭಟ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಖ್ಯಾತ ಸಂಗೀತ ನಿರ್ದೇಶಕ ಹಂಸಲೇಖ ಈ ಚಿತ್ರಕ್ಕೆ ಸಾಹಿತ್ಯ ರಚಿಸುವ ಜತೆಗೆ ಸಂಗೀತ ಸಂಯೋಜಿಸಿದ್ದಾರೆ. ಸಚಿನ್ ಶೆಟ್ಟಿ ಛಾಯಾಗ್ರಹಣ, ಪ್ರಸಾದ್.ಕೆ.ಶೆಟ್ಟಿ ಹಿನ್ನೆಲೆ ಸಂಗೀತ, ಯಶ್ವಿನ್.ಕೆ.ಶೆಟ್ಟಿಗಾರ್ ಸಂಕಲನ ಈ ಚಿತ್ರಕ್ಕಿದೆ. ಹಿಮಾನಿ ಫಿಲಂಸ್ ಬ್ಯಾನರಿನಲ್ಲಿ ಚಿತ್ರ ನಿರ್ಮಾಣಗೊಂಡಿದ್ದು, ಎ.ಕೆ.ಶರತ್ ಕುಮಾರ್ ಬಂಡವಾಳ ಹೂಡಿದ್ದಾರೆ. ಚಿತ್ರೀಕರಣದ ಜತೆಗೆ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಮುಗಿಸಿರುವ ಕಲ್ಜಿಗ, ಸೆಪ್ಟೆಂಬರ್ 13 ರಂದು ರಾಜ್ಯಾದ್ಯಂತ ತೆರೆಗೆ ಬರಲಿದೆ.